Bennett & Coleman
THE TIMES OF INDIA
ಮಂಗಳವಾರ,23 ಜೂನ್ 2026 | ಪುಟಗಳು: 13 | ಬೆಲೆ: ₹ 5.00
www.vijaykarnataka.com
c
ಸಂಪುಟ: 27 | ಸಂಚಿಕೆ: 173

VK ವಿಜಯ ಕರ್ನಾಟಕ

ಬೆಂಗಳೂರು | ಮೈಸೂರು | ಶಿವಮೊಗ್ಗ | ಮಂಗಳೂರು | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA

ಫಿಫಾ ವಿಶ್ವಕಪ್: ಸಾರ್ವಕಾಲಿಕ ಅತ್ಯಧಿಕ ಗೋಲ್, ಜರ್ಮನಿಯ ಕ್ಲೋಸ್ ದಾಖಲೆ ಮುರಿದ ಮೆಸ್ಸಿ P09

ನಟಿಗೆ ಲೈಂಗಿಕ ಕಿರುಕುಳ ಆರೋಪ: ಮಲಯಾಳಂ ನಟ ದಿಲೀಪ್ ಖುಲಾಸೆ ಪ್ರಶ್ನಿಸಿ ಕೇರಳ ಸರಕಾರ ಹೈಕೋರ್ಟ್‌ಗೆ ಅರ್ಜಿ

ಟಿಎಂಸಿ ಅಧ್ಯಕ್ಷಸ್ಥಾನದಿಂದ 'ದೀದಿ' ಔಟ್: ಪಕ್ಷದ ಬಂಡಾಯ ಸಂಸದರು, ಶಾಸಕರ ಗುಂಪು ನಿರ್ಣಯ

Bennett & Coleman THE TIMES OF INDIA
ಸಂಪಾದಕೀಯ EDITORIAL

ತಬರ ಸೃಷ್ಟಿಯಾಗದಿರಲಿ

ದಾಖಲೆಗಳಿಗಾಗಿ ಹಿರಿಯರನ್ನು ಅಲೆದಾಡಿಸಬೇಡಿ

ರಾಜ್ಯ ಸರಕಾರದ ಬೊಕ್ಕಸಕ್ಕೆ ಹೊರೆಯಾಗುತ್ತಿದ್ದ ನಕಲಿ ಫಲಾನುಭವಿಗಳ ಹಾವಳಿಯನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ಆಯುಕ್ತಾಲಯ ಕೈಗೊಂಡಿರುವ ಕ್ರಮ ಸ್ವಾಗತಾರ್ಹ. ರಾಜ್ಯದಲ್ಲಿ ಸುಮಾರು 83 ಲಕ್ಷ ಮಂದಿ ವಿವಿಧ ಪಿಂಚಣಿ ಯೋಜನೆಗಳಡಿ ಮಾಸಾಶನ ಪಡೆಯುತ್ತಿದ್ದು, ಇದಕ್ಕಾಗಿ ಪ್ರತಿ ತಿಂಗಳು ಸರಕಾರ 840 ಕೋಟಿ ರೂಪಾಯಿ ವೆಚ್ಚ ಮಾಡುತ್ತಿದೆ. ಇಂಥ ಬೃಹತ್ ಮೊತ್ತದ ಸಾರ್ವಜನಿಕ ಹಣ ಸೋರಿಕೆಯಾಗದಂತೆ ನೋಡಿಕೊಳ್ಳುವುದು ಮತ್ತು ನಿಜವಾದ ಅರ್ಹರಿಗೆ ತಲುಪುವಂತೆ ಮಾಡುವುದು ಸರಕಾರದ ಮೂಲಭೂತ ಜವಾಬ್ದಾರಿ. ಈ ನಿಟ್ಟಿನಲ್ಲಿ ಇ-ಆಡಳಿತ ಇಲಾಖೆಯ 'ಕುಟುಂಬ ದತ್ತಾಂಶ' ಮತ್ತು 'ಸಂಯೋಜನೆ' ಆ್ಯಪ್ ಮೂಲಕ ನಡೆಸಿದ ತನಿಖೆಯಲ್ಲಿ 18.45 ಲಕ್ಷ ಮಂದಿ ಅನರ್ಹರು ಪತ್ತೆಯಾಗಿರುವುದು ಗಮನಿಸಬೇಕಾದಂಥ ಅಂಶ.

ಇಂಥ ಪಿಂಚಣಿಗಳ ಹಿಂದೆ ನಡೆಯುತ್ತಿದ್ದ ಅಕ್ರಮಗಳನ್ನು ನಿರ್ಲಕ್ಷಿಸುವಂತಿಲ್ಲ. 45 ವರ್ಷದವರೇ ವೃದ್ಧಾಪ್ಯ ವೇತನ ಪಡೆಯುತ್ತಿರುವುದು, ಆದಾಯ ತೆರಿಗೆ ಪಾವತಿದಾರರು ಬಡವರ ಯೋಜನೆಯಲ್ಲಿ ಪಿಂಚಣಿ ಕಬಳಿಸುತ್ತಿದ್ದ ಪ್ರಕರಣಗಳು ಸಾಮಾಜಿಕ ಅಪರಾಧಗಳೇ ಸರಿ. ಇಂಥ ಅನರ್ಹರನ್ನು ಕಠಿಣವಾಗಿ ನಿಯಂತ್ರಿಸಬೇಕು. ಆದರೆ, ಈ 'ಫಿಲ್ಟರ್' ಪ್ರಕ್ರಿಯೆಯಲ್ಲಿ ನಿಜವಾದ ಅರ್ಹರು ಬಲಿಪಶುವಾಗದಂತೆ ಎಚ್ಚರ ವಹಿಸಬೇಕಾದದ್ದೂ ಕೂಡ ಅತ್ಯಗತ್ಯ. ಈಗ ತಡೆಹಿಡಿಯಲಾದ 18.45 ಲಕ್ಷ ಪಿಂಚಣಿದಾರರು ತಹಸೀಲ್ದಾರ್ ಕಚೇರಿಗಳಿಗೆ ಅಲೆದಾಡಿ ದಾಖಲೆಗಳನ್ನು ಸಲ್ಲಿಸಬೇಕು ಎನ್ನುವ ನಿಯಮ, ವೃದ್ಧಾಪ್ಯದ ಅಂಚಿನಲ್ಲಿರುವವರಿಗೆ ಅಗ್ನಿಪರೀಕ್ಷೆಯಾಗಿ ಪರಿಣಮಿಸಲೂಬಹುದು.

ಪಿಂಚಣಿ ಬಯಸುವವರಲ್ಲಿ ಬಹುತೇಕರು ಕೃಷಿ ಕಾರ್ಮಿಕರು, ಅಸಂಘಟಿತ ವಲಯದವರು ಮತ್ತು ನಿಜಕ್ಕೂ ಆರ್ಥಿಕ ಸಂಕಷ್ಟದಲ್ಲಿರುವ ಹಿರಿಯ ನಾಗರಿಕರು. ಇವರಿಗೆ ಆನ್‌ಲೈನ್ ದಾಖಲೆ, ಆಧಾರ್ ಪ್ರತಿ, ಆದಾಯ ಪ್ರಮಾಣ ಪತ್ರಗಳನ್ನು ಜೋಡಿಸಿ ತಹಸೀಲ್ದಾರ್ ಕಚೇರಿಗಳಿಗೆ ಅಲೆಯುವುದು ಅಸಾಧ್ಯದ ಮಾತು. ಇಲಾಖೆಯ ತಾಂತ್ರಿಕ ದೋಷಗಳಿಂದ ಅಥವಾ ಗ್ರಾಮ ಆಡಳಿತ ಅಧಿಕಾರಿಗಳ ಭೌತಿಕ ಪರಿಶೀಲನೆಯಲ್ಲಿನ ಸಣ್ಣಪುಟ್ಟ ತಪ್ಪುಗಳಿಂದಾಗಿ ಅರ್ಹ ಫಲಾನುಭವಿಯೊಬ್ಬ ಪಿಂಚಣಿಯಿಂದ ವಂಚಿತನಾದರೆ, ಅದು ಆತನಿಗೆ ಬದುಕುವ ದಾರಿಯನ್ನೇ ಮುಚ್ಚಿದಂತೆ. ಸರಕಾರದ ಈ ಕ್ರಮ ಇನ್ನೊಂದು 'ತಬರನ ಕತೆ'ಗೆ ನಾಂದಿ ಹಾಡಬಾರದು.

ಅನರ್ಹರನ್ನು ಪತ್ತೆ ಹಚ್ಚುವ ಪ್ರಕ್ರಿಯೆ ಬಿಗಿಯಾಗಿರಲಿ, ಅದರಲ್ಲಿ ಯಾವುದೇ ಕಾರಣಕ್ಕೂ ರಾಜಿ ಬೇಡ. ಆದರೆ, ಆ ಪ್ರಕ್ರಿಯೆ ಸುಸೂತ್ರವಾಗಿರಲಿ ಎನ್ನುವುದಷ್ಟೇ ಕಳಕಳಿ. ಹಿರಿಯ ನಾಗರಿಕರನ್ನು ದಾಖಲೆಯ ನೆಪದಲ್ಲಿ ಕಚೇರಿಗಳಿಗೆ ಅಲೆದಾಡಿಸುವ ಬದಲು, ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಅಥವಾ 'ಸುವಿಧಾ ಕೇಂದ್ರ'ಗಳಲ್ಲಿ ವಿಶೇಷ ಶಿಬಿರಗಳನ್ನು ಆಯೋಜಿಸಿ ಸ್ಥಳದಲ್ಲೇ ದಾಖಲೆಗಳನ್ನು ದೃಢೀಕರಿಸುವ ವ್ಯವಸ್ಥೆ ಮಾಡಬೇಕು. ಕೆಲವು ವಾರಗಳ ಗಡುವು ನೀಡಿ ಅರ್ಹರನ್ನು ಕಚೇರಿಯ ಕ್ಯೂನಲ್ಲಿ ನಿಲ್ಲಿಸುವುದು ದಕ್ಷ ಆಡಳಿತದ ಲಕ್ಷಣವೂ ಅಲ್ಲ.

ಅರ್ಹರ ಕೈಗೆ ಪಿಂಚಣಿ ಹಣ ತಲುಪಿಸುವುದು ಸರಕಾರದ ಗುರಿಯಾಗಬೇಕು, ಆ ಪ್ರಕ್ರಿಯೆ ತೊಂದರೆ ಮುಕ್ತವಾಗಿರಬೇಕು. ನಕಲಿಗಳನ್ನು ತೆಗೆದುಹಾಕುವ ಆತುರದಲ್ಲಿ ಅರ್ಹ ಫಲಾನುಭವಿಗಳನ್ನು ಸಂತ್ರಸ್ತರನ್ನಾಗಿಸಬಾರದು. ಸುಧಾರಣೆಗಳು ಜನರ ಬದುಕನ್ನು ಸುಗಮ ಗೊಳಿಸಬೇಕೇ ಹೊರತು, ಸಂಕಷ್ಟಕ್ಕೆ ದೂಡಬಾರದು. ಸರಕಾರ ಈ ಎಚ್ಚರದಿಂದ ಹೆಜ್ಜೆ ಇಡಲಿ.

ಮಧುರಾನುಭೂತಿ

ನಿಮ್ಮ ಕಪಾಟಿನಲ್ಲೂ ಇರಬಹುದು ವಿಸ್ಮಯ

ಈ ಭೂಮಿಯ ಮೇಲೆ ಎಷ್ಟೆಲ್ಲ ವಿಸ್ಮಯಗಳಿವೆ. ಅವುಗಳನ್ನು ನೋಡಲು ಎಲ್ಲಾದರೊಂದು ಆರಂಭಕ್ಕೆ ನಾವೇ ನಾಂದಿ ಹಾಡಬೇಕು. 'ದಿ ಕ್ರಾನಿಕಲ್ಸ್ ಆಫ್ ನಾರ್ನಿಯಾ' ಎಂಬ ಚಿತ್ರದಲ್ಲಿ, ಆ ಆರಂಭವು ಹಳೆಯ ಕಪಾಟಿನಿಂದ ಪ್ರಾರಂಭವಾಗುತ್ತದೆ. ಮಕ್ಕಳು ಅದರಲ್ಲಿ ಪ್ರವೇಶಿಸಿದಾಗ, ಅವರು ನಾರ್ನಿಯಾ ಜಗತ್ತಿಗೆ ಬರುತ್ತಾರೆ. ಅಲ್ಲಿ ಹಿಮಾವೃತವಾದ ಕಾಡುಗಳು, ಮಾತನಾಡುವ ಪ್ರಾಣಿಗಳು, ನಿಗೂಢ ಜೀವಿಗಳು, ಸಿಂಹ ಮತ್ತು ಮಾಟಗಾತಿ ಅವರಿಗಾಗಿ ಕಾಯುತ್ತಿರುತ್ತಾರೆ. ನಂತರದ ಚಿತ್ರದಲ್ಲಿ, ಆ ಕಪಾಟು ಎರಡು ಲೋಕಗಳ

ನಡುವಿನ ಸೇತುವೆಯಾಗಿ ಕಾರ್ಯನಿರ್ವಹಿಸುತ್ತದೆ.

ಕಪಾಟುಗಳು ನಮ್ಮ ಜೀವನದಲ್ಲಿ ತಮ್ಮದೇ ಆದ ಚಮತ್ಕಾರ ಪ್ರದರ್ಶಿಸುತ್ತವೆ. ಅವು ಮತ್ತೊಂದು ಜಗತ್ತಿಗೆ ಬಾಗಿಲುತೆರೆಯದಿರಬಹುದು. ಆದರೆ, ಖಂಡಿತವಾಗಿಯೂ ಮತ್ತೊಂದು ಸಮಯಕ್ಕೆ ಬಾಗಿಲು ತೆರೆಯುತ್ತವೆ. ಅದರಲ್ಲಿನ ಹಳೆಯ ಬಟ್ಟೆಗಳ ಮಡಿಕೆಗಳ ಒಳಗೆ ಹಳೆಯ ಕಾಲಗಳು ಲಾಕ್ ಆಗಿರುತ್ತವೆ. ಮದುವೆ ಸೂಟ್, ಟ್ರೆಂಡ್ ಮುಗಿದುಹೋದ ಪ್ಯಾಂಟ್ ಮತ್ತು ಶರ್ಟ್, ಪ್ರೀತಿಪಾತ್ರರು ಉಡುಗೊರೆಯಾಗಿ ನೀಡಿದ ಸೀರೆ, ಹಲವು ವರ್ಷ ಮುಟ್ಟದೆ ಉಳಿದ ವಸ್ತುಗಳು ಸಿಗುತ್ತವೆ. ಅವು ಈಗಲೂ ಅತ್ಯಂತ ಅಮೂಲ್ಯವೆಂದು ತೋರುತ್ತದೆ. ಅವುಗಳಲ್ಲಿ ನೆನಪುಗಳ ಸುರುಳಿಯಿದೆ.

ಕಪಾಟು ಕೂಡ ವಿಭಿನ್ನತೆಗಳೊಂದಿಗೆ ರೂಪುಗೊಂಡ ಸಮಾಜದಂತೆ. ನೀವು ಅದರಲ್ಲಿ ಅಗ್ಗದ ಮತ್ತು ದುಬಾರಿ, ನೆಚ್ಚಿನ ಮತ್ತು ಮೆಚ್ಚದಿರುವ, ಹೊಸ ಮತ್ತು ಹಳೆಯ ಎಲ್ಲ ರೀತಿಯ ಬಟ್ಟೆಗಳು, ವಸ್ತುಗಳು ಇರುತ್ತವೆ. ಎಲ್ಲದಕ್ಕೂ ಯಾವಾಗಲೂ ಸ್ಥಳಾವಕಾಶ ಇದ್ದೇ ಇರುತ್ತದೆ. ಆದರೆ, ಅವುಗಳ ಕ್ರಮಬದ್ಧತೆ ಕಾಪಾಡಿಕೊಳ್ಳುವುದು ಅತ್ಯಗತ್ಯ. ಕಪಾಟಿನಲ್ಲಿ ಈ ಕ್ರಮವನ್ನು ಸ್ವಚ್ಛತೆಯ ಮೂಲಕ ಸಾಧಿಸಲಾಗುತ್ತದೆ. ಹಾಗೆ ಮಾಡುವುದರಲ್ಲಿ ಒಂದು ಸಂತೋಷವಿದೆ. ಅವರವರ ಇಷ್ಟದಂತೆ ಬಟ್ಟೆಗಳನ್ನು ಜೋಡಿಸುವುದರಿಂದ ಕದಡಿದ ಮನಸ್ಸನ್ನು ಸ್ಥಿರಗೊಳಿಸಲು ಹಾಗೂ ಗೊಂದಲಮಯ ಆಲೋಚನೆಗಳನ್ನು ನಿಯಂತ್ರಣಕ್ಕೆ ತರಲು ಸಾಧ್ಯವಾಗುತ್ತದೆ.

ಸಾಮಾನ್ಯವಾಗಿ ನಾವು ಇಷ್ಟಪಡುವ ವಸ್ತುಗಳನ್ನಷ್ಟೇ ಶಾಶ್ವತವಾಗಿ ಇಟ್ಟುಕೊಳ್ಳಲು ಬಯಸುತ್ತೇವೆ. ಅಂಥ ವಸ್ತುಗಳೇ ಕಪಾಟಿನಲ್ಲಿ ಸ್ಥಾನ ಪಡೆಯುತ್ತವೆ. ಅಗತ್ಯವಿರುವ ಯಾರಿಗಾದರೂ ಇನ್ನು ಮುಂದೆ ಧರಿಸದ ಬಟ್ಟೆಗಳನ್ನು ನೀಡುವುದರೊಂದಿಗೆ ಔದಾರ್ಯದ ಮನೋಭಾವ ಮೈ ತಳೆಯುವುದೂ ಇಲ್ಲಿಯೇ. ಇದರಿಂದ ಕಪಾಟಿನಲ್ಲಿ ಅಷ್ಟೇ ಅಲ್ಲ, ಮನಸ್ಸಿನಲ್ಲಿಯೂ ಒಂದಿಷ್ಟು ಸ್ಥಳಾವಕಾಶ ಸೃಷ್ಟಿಯಾಗುತ್ತದೆ.

ಕಪಾಟಿನ ಬಾಗಿಲುಗಳನ್ನು ತೆರೆಯುವವರೆಗೂ ಒಳಗೇನಿದೆ ಎಂದು ನಾರ್ನಿಯಾದ ಪುಟ್ಟ ಹುಡುಗಿ ಲೂಸಿಗೆ ತಿಳಿದಿರಲಿಲ್ಲ, ಹಾಗೆಯೇ ನಿಮ್ಮ ಜೀವನದ ಎಷ್ಟು ಅದ್ಭುತ ಕತೆಗಳು ಕಪಾಟಿನಲ್ಲಿ ಲಾಕ್ ಆಗಿವೆ ಎಂಬುದು ನಿಮಗೂ ತಿಳಿದಿರಲಿಕ್ಕಿಲ್ಲ. ವಿರಾಮ ತೆಗೆದುಕೊಂಡು ಒಮ್ಮೆ ಕಪಾಟಿನೊಳಗೆ ನೋಡಿ, ಏನಾದರೊಂದು ವಿಸ್ಮಯ ನಿಮಗಾಗಿ ಕಾಯುತ್ತಿರಬಹುದು.

ಕಂಪ್ಯೂಟರ್‌ನಿಂದ ಶುರುವಾದ ಡಿಜಿಟಲ್ ಆಡಳಿತವು 'ಎಐ' ಸಚಿವಾಲಯ, ಎಐ 'ಸಚಿವ' ವ್ಯವಸ್ಥೆವರೆಗೆ ಬಂದು ಮುಟ್ಟಿದೆ. ಭಾರತದ ಆಡಳಿತ ವ್ಯವಸ್ಥೆ ಹೊಸ ತಿರುವಿನಲ್ಲಿದೆ ಎಂಬ ಮುನ್ಸೂಚನೆ ಭಾಗವಾಗಿ ಕೇರಳ, ತಮಿಳುನಾಡು ರಾಜ್ಯಗಳು 'ಎಐ'ಗೆ ಪ್ರತ್ಯೇಕ ಸಚಿವಾಲಯ ಆರಂಭಿಸಿವೆ. ಭವಿಷ್ಯದ ಸರಕಾರಗಳನ್ನು ಮಾನವರು ಮಾತ್ರ ನಡೆಸುವರೇ ಅಥವಾ ಮಾನವರು ಮತ್ತು ಕೃತಕ ಬುದ್ಧಿಮತ್ತೆ ಸೇರಿ ನಡೆಸುವರೇ ಎಂದು ಅಚ್ಚರಿಪಡುವ ಕಾಲವಿದು. ಕರ್ನಾಟಕವೂ ಎಐ ಸಚಿವರನ್ನು ಕಾಣುವುದೇ? ಇದೂ ಒಂದು ಕುತೂಹಲ.

ಬಂದರೋ! AI ಮಿನಿಸ್ಟರ್!

ವಿಕ ಫೋಕಸ್

ತಮಿಳುನಾಡು, ಕೇರಳ ಆಯ್ತು... ನಮ್ಮಲ್ಲೂ ಬರುವರೇ ಕೃತಕ ಬುದ್ಧಿಮತ್ತೆ ಸಚಿವರು?

● ಪ್ರಮೋದ ಹರಿಕಾಂತ

ಒಂದು ಕಾಲದಲ್ಲಿ ಕಂಪ್ಯೂಟರ್ ಎಂದರೆ ಕೆಲವೇ ಕಚೇರಿಗಳಲ್ಲಿದ್ದ ಯಂತ್ರವಾಗಿತ್ತು. ನಂತರ ಇಂಟರ್ನೆಟ್ ಹಾಜರಿ ಹಾಕಿತು. ಸರಕಾರಗಳು ಮಾಹಿತಿ ತಂತ್ರಜ್ಞಾನ (ಐಟಿ) ಇಲಾಖೆಗಳನ್ನು ರಚಿಸಿದವು. ಇಂದು ಡಿಜಿಟಲ್ ಸೇವೆಗಳಿಲ್ಲದೆ ಸರಕಾರದ ಕೆಲಸವೇ ನಡೆಯದ ಸ್ಥಿತಿ ನಿರ್ಮಾಣವಾಗಿದೆ. ಈಗ ಅದೇ ರೀತಿಯ ಮತ್ತೊಂದು ಬದಲಾವಣೆಯ ಮುನ್ಸೂಚನೆಯಾಗಿ 'ಎಐ' (ಕೃತಕ ಬುದ್ಧಿಮತ್ತೆ) ಆಡಳಿತಕ್ಕೆ ಕಾಲಿರಿಸಿದೆ. ಕಳೆದ ತಿಂಗಳು ಎರಡು ರಾಜ್ಯಗಳ ಸಚಿವ ಸಂಪುಟದಲ್ಲಿ 'ಎಐ'ಗೂ ಜಾಗ ನೀಡಲಾಗಿದೆ.

ಈ ಬೆಳವಣಿಗೆ ಕೇವಲ ಹೊಸ ಸಚಿವಾಲಯ ಸೃಷ್ಟಿ ಅಷ್ಟೇ ಅಲ್ಲ. ಸರಕಾರಗಳು ಕೃತಕ ಬುದ್ಧಿಮತ್ತೆಯನ್ನು ಭವಿಷ್ಯದ ಮೂಲ ಸೌಕರ್ಯವಾಗಿ ಪರಿಗಣಿಸಲು ಆರಂಭಿಸಿದ ಸಂಕೇತ. 'ಎಐ' ಸಚಿವಾಲಯ ಎಂದರೆ ಸಚಿವರ ಕೆಲಸವನ್ನು 'ಎಐ' ಮಾಡುತ್ತದೆಯೇ? 'ಎಐ'ಗೆ ಸಚಿವ ದರ್ಜೆ ಮಾನ್ಯತೆಯ ಸೌಲಭ್ಯ ಸಿಗುತ್ತದೆಯೇ? ಅದಕ್ಕೊಂದು ಮಂತ್ರಿ ನಿವಾಸ, ಗೂಟದ ಕಾರು, ಬೆಂಗಾವಲುಪಡೆ, ಪಿಎ ಇರುವರೇ? ರೊಬಾಟ್‌ಗಳು ಬಂದು ಸಾರ್ವಜನಿಕ ಅಹವಾಲು ಸ್ವೀಕರಿಸುತ್ತವೆಯೇ? ಸದ್ಯಕ್ಕೆ ಭಾರತದಲ್ಲಿ 'ಎಐ' ಸಚಿವಾಲಯ ಅಂದರೆ ಅದಲ್ಲ.

ಸಚಿವರ ಕುರ್ಚಿಯಲ್ಲಿ ಇನ್ನೂ ಮನುಷ್ಯರೇ ಕುಳಿತಿದ್ದಾರೆ. ಕಡತಗಳಿಗೆ ಸಹಿ ಹಾಕುವುದು, ನೀತಿಗಳನ್ನು ರೂಪಿಸುವುದು, ನಿರ್ಧಾರಗಳನ್ನು ತೆಗೆದುಕೊಳ್ಳುವುದು ಎಲ್ಲವೂ ಮಾನವರ ಕೈಯಲ್ಲಿಯೇ ಇದೆ. ಐಟಿ, ಬಿಟಿ ರೀತಿ 'ಎಐ' ವ್ಯವಸ್ಥೆಯನ್ನು ಆಡಳಿತ ಮತ್ತು ಅಭಿವೃದ್ಧಿಯಲ್ಲಿ ಬಳಸಿಕೊಳ್ಳುವುದು, ಉದ್ಯಮದಲ್ಲಿ ಹೊಸ ಅವಕಾಶಗಳನ್ನು ಸೃಷ್ಟಿಸುವುದು ಈ ಸಚಿವಾಲಯದ ಮುಖ್ಯ ಉದ್ದೇಶ. ಕೇರಳ ಮತ್ತು ತಮಿಳುನಾಡು ರಾಜ್ಯಗಳು ಈ ರೀತಿ 'ಎಐ' ಸಚಿವಾಲಯ ಆರಂಭಿಸುವ ಮೂಲಕ ಭಾರತದ ತಂತ್ರಜ್ಞಾನ ಕ್ಷೇತ್ರದ ಗಮನಸೆಳೆದಿದೆ.

ಎಐ ಮಿನಿಸ್ಟ್ರಿ ಅಪ್ಪಿಕೊಂಡ ಮೊದಲ ರಾಜ್ಯ ಕೇರಳ

ಭಾರದಲ್ಲಿ ಮೊದಲ 'ಎಐ' ಸಚಿವಾಲಯ ರಚನೆ ಆಗಿರುವುದು ಕೇರಳ ರಾಜ್ಯದಲ್ಲಿ,

ಪಿ.ಕೆ. ಕುಂಞಲಿಕುಟ್ಟಿ 'ಎಐ' ಸಚಿವಾಲಯದ ಮೊದಲ ಸಚಿವ. ಕೈಗಾರಿಕೆ, ವಾಣಿಜ್ಯ ಮತ್ತು ಮಾಹಿತಿ ತಂತ್ರಜ್ಞಾನ ಸಚಿವರಾಗಿರುವ ಪಿ.ಕೆ. ಕುಂಞಲಿಕುಟ್ಟಿ ಅವರಿಗೆ 'ಎಐ' ಸಚಿವಾಲಯದ ಹೆಚ್ಚುವರಿ ಜವಾಬ್ದಾರಿ ವಹಿಸಲಾಗಿದೆ. ಸಾಂಪ್ರದಾಯಿಕ ಕ್ಷೇತ್ರಗಳಾದ ಗಣಿಗಾರಿಕೆ, ಭೂವಿಜ್ಞಾನ, ಕೈಮಗ್ಗ ಮತ್ತು ಜವಳಿ ಉದ್ಯಮಗಳಲ್ಲಿ ಎಐ ತಂತ್ರಜ್ಞಾನವನ್ನು ಅಳವಡಿಸಿ ಪ್ರಗತಿ ಸಾಧಿಸುವುದು. 'ಎಐ' ಆಧಾರಿತ ನವೋದ್ಯಮಗಳಿಗೆ ವಿಶೇಷ ಪ್ರೋತ್ಸಾಹ ನೀಡಿ ಕೇರಳವನ್ನು ಹೂಡಿಕೆದಾರ ಸ್ನೇಹಿ ರಾಜ್ಯವನ್ನಾಗಿ ಮಾಡುವುದು ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಜಾಗತಿಕ ಮಟ್ಟದ ಸ್ಪರ್ಧೆ ಎದುರಿಸಲು ಆಡಳಿತ ವ್ಯವಸ್ಥೆಯನ್ನು ಡಿಜಿಟಲೀಕರಣಗೊಳಿಸುವುದು ಇದರ ಉದ್ದೇಶ.

ತಮಿಳುನಾಡಿನಲ್ಲಿಯೂ ಸಂಪುಟಕ್ಕೆ ಎಐ ಸ್ಪರ್ಶ

ಕೇರಳದ ಬೆನ್ನಿಗೆ ತಮಿಳುನಾಡಿನಲ್ಲಿಯೂ ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್

ಅವರ ನೇತೃತ್ವದ ಸರಕಾರವೂ ಎಐ ಸಚಿವಾಲಯ ಆರಂಭಿಸಿದೆ. ಸಚಿವ **ಆರ್. ಕುಮಾರ್**ಗೆ 'ಕೃತಕ ಬುದ್ಧಿಮತ್ತೆ, ಮಾಹಿತಿ ತಂತ್ರಜ್ಞಾನ ಮತ್ತು ಡಿಜಿಟಲ್ ಸೇವೆಗಳ ಸಚಿವಾಲಯ' ಹೊಣೆ ನೀಡಲಾಗಿದೆ. ಇಲ್ಲಿ ಹಳೆಯ ಐಟಿ ಇಲಾಖೆಯನ್ನು ಮರುನಾಮಕರಣ ಮಾಡಿ 'ಎಐ' ಅನ್ನು ಪ್ರಮುಖ ಆದ್ಯತೆಯನ್ನಾಗಿ ಜೋಡಿಸಲಾಗಿದೆ. ಸಾರ್ವಜನಿಕ ಸೇವೆಗಳು, ಆಡಳಿತಾತ್ಮಕ ನಿರ್ಧಾರಗಳು ಮತ್ತು ಇಲಾಖೆಗಳ ಸಮನ್ವಯಕ್ಕೆ ಕೃತಕ ಬುದ್ಧಿಮತ್ತೆಯನ್ನು ವೇಗವರ್ಧಕವಾಗಿ ಬಳಸುವುದು ಇದರ ಉದ್ದೇಶ.

ಎಐ ಸಚಿವಾಲಯ ಹೇಗೆ ಕೆಲಸ ಮಾಡುತ್ತೆ?

ಇದುವರೆಗೆ 'ಎಐ' ಎಂಬುದು ಮಾಹಿತಿ ತಂತ್ರಜ್ಞಾನ ಇಲಾಖೆಯ ಒಂದು ಭಾಗವಾಗಿತ್ತು. ಕೇರಳ ಮತ್ತು ತಮಿಳುನಾಡು ಅದನ್ನು ಪ್ರತ್ಯೇಕ ನೀತಿ ಕ್ಷೇತ್ರವಾಗಿ ಪರಿಗಣಿಸುವ ಮೂಲಕ ದೇಶದಲ್ಲಿ ಹೊಸ ಆಡಳಿತ ವ್ಯವಸ್ಥೆಗೆ ಮುನ್ನುಡಿ ಬರೆದಿವೆ. ಕೃಷಿ, ಶಿಕ್ಷಣ, ಆರೋಗ್ಯ, ಕೈಗಾರಿಕೆಯಂತೆ 'ಎಐ' ಕೂಡ ಸರಕಾರದ ಸ್ವತಂತ್ರ ಗಮನಕ್ಕೆ ಅರ್ಹವಾದ ವಿಷಯ ಎಂದು ಈ ರಾಜ್ಯಗಳು ಪರಿಗಣಿಸಿವೆ.

ಅಸಲಿಗೆ 'ಎಐ' ಕೇವಲ ಸಾಫ್ಟ್‌ವೇರ್ ಉದ್ಯಮದ ವಿಷಯವಲ್ಲ. ಅದು ರಾಷ್ಟ್ರೀಯ ಅಭಿವೃದ್ಧಿ ನೀತಿಯ ಭಾಗವಾಗಿದೆ. ಈ ಹೊಸ ಸಚಿವಾಲಯ ರಸ್ತೆ ನಿರ್ಮಿಸುವುದಿಲ್ಲ, ಶಾಲೆಗಳನ್ನು ನಡೆಸುವುದಿಲ್ಲ, ಆಸ್ಪತ್ರೆಗಳನ್ನು ಕಟ್ಟುವುದಿಲ್ಲ. ಆದರೆ, ಆ ಎಲ್ಲ ಇಲಾಖೆಗಳನ್ನು ಬದಲಾಯಿಸುವ ಸಾಮರ್ಥ್ಯವನ್ನು 'ಎಐ' ಸಚಿವಾಲಯ ಹೊಂದಿವೆ. ಉದಾಹರಣೆಗೆ, ಕೃಷಿ ಇಲಾಖೆ ರೈತರಿಗೆ ಸಲಹೆ ನೀಡುತ್ತದೆ. 'ಎಐ' ಲಕ್ಷಾಂತರ ಹವಾಮಾನ ದಾಖಲೆಗಳು, ಮಣ್ಣಿನ ಗುಣಮಟ್ಟ ಮತ್ತು ಮಾರುಕಟ್ಟೆ ಬೆಲೆಗಳನ್ನು ವಿಶ್ಲೇಷಿಸಿ ರೈತರಿಗೆ ಹೆಚ್ಚು ನಿಖರ ಸಲಹೆ ನೀಡಬಹುದು. ಆರೋಗ್ಯ ಇಲಾಖೆ ಆಸ್ಪತ್ರೆಗಳನ್ನು ನಿರ್ವಹಿಸುತ್ತದೆ. ಡಾಕ್ಟರ್‌ಗಳಿಗೆ 'ಎಐ' ವೈದ್ಯಕೀಯ ಚಿತ್ರಗಳ ವಿಶ್ಲೇಷಣೆಯಲ್ಲಿ ನೆರವಾಗಬಹುದು. ಒಟ್ಟಿನಲ್ಲಿ ಎಐ ಸಚಿವಾಲಯ ಒಂದು ಇಲಾಖೆಯನ್ನು ನಿರ್ವಹಿಸುವುದಿಲ್ಲ, ಹಲವಾರು ಇಲಾಖೆಗಳಿಗೆ ತಂತ್ರಜ್ಞಾನ ಬೆಂಬಲ ಒದಗಿಸಲಿದೆ.

ಎಐ ಕಚೇರಿ ಸಾಧ್ಯವೇ?

ಎಐ ಸಚಿವಾಲಯ ರಚನೆಯಾದ ಮಾತ್ರಕ್ಕೆ ಪೂರ್ಣ ಕಚೇರಿ ಎಐ ಆಧಾರಿತವೇ, ರೊಬಾಟ್‌ಗಳೇ ಕಚೇರಿ ಕೆಲಸ ಮಾಡುತ್ತವೆಯೇ ಎಂದು ಕೇಳಿದರೆ; ಇಲ್ಲ! ಕೇರಳ ಮತ್ತು ತಮಿಳುನಾಡು ಸರಕಾರಗಳು ಈ ಬಗ್ಗೆ ಯಾವುದೇ ಮಾಹಿತಿ ಪ್ರಕಟಿಸಿಲ್ಲ. ಎಐ ಸಚಿವಾಲಯ ಆರಂಭವಾದ ನಂತರ ಎಷ್ಟು ಹಣ ಉಳಿತಾಯವಾಗಿದೆ ಅಥವಾ ಎಷ್ಟು ಸಿಬ್ಬಂದಿ ಕಡಿಮೆಯಾಗಿದೆ ಎಂಬುದು ಸ್ಪಷ್ಟವಿಲ್ಲ. ಆದರೆ, ಎಐ ಬಳಕೆ ಹೆಚ್ಚಿದಂತೆ ಕಡತ ವಿಲೇವಾರಿ, ದತ್ತಾಂಶ ವಿಶ್ಲೇಷಣೆ ಮತ್ತು ಸಾರ್ವಜನಿಕ ಸೇವೆಗಳ ವೇಗ ಹೆಚ್ಚಾಗುವ ನಿರೀಕ್ಷೆ ಇದೆ. ಭವಿಷ್ಯದಲ್ಲಿ ಆಡಳಿತ ವೆಚ್ಚವನ್ನು ಕಡಿಮೆ ಮಾಡುವ ಸಾಮರ್ಥ್ಯವೂ ಇದಕ್ಕಿದೆ. ಸದ್ಯ ಕೇರಳ ಮತ್ತು ತಮಿಳುನಾಡಿನ ಹೊಸ ಸಚಿವಾಲಯಗಳು ಗುರಿಯನ್ನು ಎಷ್ಟರ ಮಟ್ಟಿಗೆ ಸಾಧಿಸುತ್ತವೆ ಎಂಬುದು ಆಡಳಿತ ವಲಯದ ಕುತೂಹಲ.

2017ರಲ್ಲಿ ಮೊದಲ ಸಚಿವ

ವಾಸ್ತವದಲ್ಲಿ ಎಐ ಇತ್ತೀಚೆಗೆ ಹೆಚ್ಚು ಪ್ರಚಾರಕ್ಕೆ ಬಂದಿದ್ದರೂ ಅದಕ್ಕೆ 2017ರಲ್ಲಿಯೇ ಆಡಳಿತಾತ್ಮಕ ಮಾನ್ಯತೆ ಸಿಕ್ಕಿದೆ. ಯುನೈಟೆಡ್ ಅರಬ್

ಎಮಿರೇಟ್ಸ್ 2017ರಲ್ಲಿ 'ಎಐ'ಗೆ ವಿಶೇಷ ಸಚಿವ ಹುದ್ದೆ ಸೃಷ್ಟಿಸಿ ಗಮನ ಸೆಳೆದಿತ್ತು. **ಒಮರ್ ಸುಲ್ತಾನ್** ಅವರು 'ಎಐ' ಸಚಿವಾಲಯದ ಜಗತ್ತಿನ ಮೊದಲ ಸಚಿವ ಆಗಿದ್ದಾರೆ. ರಾಷ್ಟ್ರೀಯ ಎಐ ನೀತಿ ರೂಪಿಸುವುದು, ಸರಕಾರಿ ಸೇವೆಗಳಲ್ಲಿ ಎಐ ಅಳವಡಿಕೆ, ಎಐ ಕ್ಷೇತ್ರದಲ್ಲಿ ಹೂಡಿಕೆ ಆಕರ್ಷಣೆ ಹೀಗೆ ಆಡಳಿತದಲ್ಲಿ 'ಎಐ' ಸಕ್ರಿಯಗೊಳಿಸುವುದು ಸಚಿವಾಲಯದ ಉದ್ದೇಶ. ಆದರೆ, ಬಹುತೇಕ ದೇಶಗಳಲ್ಲಿ 'ಎಐ' ಇನ್ನೂ ವಿಜ್ಞಾನ, ಡಿಜಿಟಲ್ ಅಥವಾ ತಂತ್ರಜ್ಞಾನ ಸಚಿವಾಲಯಗಳ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಪ್ರತ್ಯೇಕ 'ಎಐ' ಸಚಿವ ಖಾತೆಗಳನ್ನು ರಚಿಸಿರುವ ಆಡಳಿತ ವ್ಯವಸ್ಥೆಗಳು ಸದ್ಯ ಅಪರೂಪ.

ಕರ್ನಾಟಕದಲ್ಲಿಯೂ ಎಐ 'ಖಾತೆ' ತೆರೆಯಲಿ...

ಭಾರತ ಸರಕಾರವೂ ಸೇರಿ ಬೇರೆ ರಾಜ್ಯಗಳು 'ಎಐ' ಅನ್ನು ಐಟಿ ಇಲಾಖೆಯೊಳಗಿನ ಯೋಜನೆಯಾಗಿ ರೂಪಿಸಿಕೊಂಡಿವೆ. ಅದಕ್ಕಾಗಿ ಪ್ರತ್ಯೇಕ ಸಚಿವಾಲಯ ಮಾಡುವ ಆಲೋಚನೆಗೆ ಇನ್ನೂ ಹಲವು ರಾಜ್ಯಗಳು ಇಳಿದಿಲ್ಲ. ಆದರೆ, ಎಐ ಈಗ ಕಡೆಗಣಿಸುವ ವಿಚಾರವೇ ಅಲ್ಲ, ಹಲವರಿಗೆ ಈಗ ಅದು ಬದುಕಿನ ಭಾಗ. ಪ್ರಸ್ತುತ ಕರ್ನಾಟಕದಲ್ಲಿ ಇನ್ನೊಂದು ಹಂತದ ಸಚಿವ ಸಂಪುಟ ವಿಸ್ತರಣೆ ಇದೆ. ಹೇಳಿಕೇಳಿ, ಇದು ಐಟಿ ನೆಲ. ಎಐ ಬಳಕೆಯಲ್ಲಿಯೂ, ಕಲಿಕೆಯಲ್ಲಿಯೂ ಬೆಂಗಳೂರು ಈಗ ಮುಂಚೂಣಿ ಎಂಬ ಖ್ಯಾತಿಗೂ ಪಾತ್ರವಾಗಿದೆ. ಐಟಿ ಖಾತೆಯೊಳಗೆ ಎಐ ಸೇರಿಸುವುದಕ್ಕಿಂತ, ಇಲ್ಲಿಯೂ ಪ್ರತ್ಯೇಕವಾಗಿ 'ಎಐ ಸಚಿವಾಲಯ' ನಿರ್ಮಿಸಿದರೆ ತಾಂತ್ರಿಕವಾಗಿ ರಾಜ್ಯಕ್ಕೆ ಇನ್ನಷ್ಟು ಹೊಳಪು ಸಿಗುತ್ತಿತ್ತು. ನೂತನ ಸರಕಾರ ಪ್ರಾಯೋಗಿಕವಾಗಿ ಇಂಥ ಹೆಜ್ಜೆ ಇಡಬಾರದೇಕೆ?

ಎಐ ಮಿನಿಸ್ಟರ್ ಆಗಿಬಿಟ್ಟರೆ...?

'ಎಐ' ಸಚಿವಾಲಯ ಆದಂತೆ ಸಚಿವರೇ 'ಎಐ' ಆದರೆ ಏನಾಗಬಹುದು? ಅದೂ ಆಗಿದೆ. ಯುರೋಪಿನ ಸಣ್ಣ ದೇಶವಾದ ಅಲ್ಬೇನಿಯಾದಲ್ಲಿ ಮಿನಿಸ್ಟರ್ 'ಎಐ' ಇದೆ. ಅಲ್ಲಿನ ಸರಕಾರ ದಿಯೆಲ್ಲಾ ಎಂಬ 'ಎಐ' ಆಧಾರಿತ ವರ್ಚುವಲ್ ಸಚಿವೆಯನ್ನು ಪರಿಚಯಿಸಿದೆ. ಈ ಸಚಿವೆ ನೋಡುವುದಕ್ಕೂ ಸುಂದರವಾಗಿದ್ದಾರೆ. ದಿಯೆಲ್ಲಾ ಎಂದರೆ ಅಲ್ಬೇನಿಯನ್ ಭಾಷೆಯಲ್ಲಿ 'ಸೂರ್ಯ' ಎಂದರ್ಥ. ಇದು ಯಾವುದೇ ರಕ್ತ- ಮಾಂಸದ ಮನುಷ್ಯನಲ್ಲ. ಬದಲಿಗೆ ಕೋಡಿಂಗ್, ಪಿಕ್ಸೆಲ್ಸ್ ಮತ್ತು ಕೃತಕ ಬುದ್ಧಿಮತ್ತೆಯಿಂದ ಸೃಷ್ಟಿಸಲಾದ ಒಂದು ಡಿಜಿಟಲ್ ವ್ಯವಸ್ಥೆ. ಈ ಎಐ ಮಂತ್ರಿಯು ಸಂಸತ್ತಿನಲ್ಲಿ ಸಾಂಪ್ರದಾಯಿಕ ಅಲ್ಬೇನಿಯನ್ ಉಡುಪಿನಲ್ಲಿ ಕಾಣಿಸಿಕೊಂಡು ಭಾಷಣ ಕೂಡ ಮಾಡಿದೆ ಎಂದು ವರದಿಯಾಗಿದೆ.

ಅಲ್ಬೇನಿಯಾ ದೇಶವು ಸಾರ್ವಜನಿಕ ಆಡಳಿತ ಮತ್ತು ಟೆಂಡರ್‌ಗಳಲ್ಲಿ ತೀವ್ರ ಭ್ರಷ್ಟಾಚಾರದ ಸಮಸ್ಯೆ ಎದುರಿಸುತ್ತಿದೆ. ಮಿನಿಸ್ಟರ್ ಎಐ ದಿಯೆಲ್ಲಾ ಸಾರ್ವಜನಿಕ ಟೆಂಡರ್‌ಗಳ ಉಸ್ತುವಾರಿ ನೋಡಿಕೊಳ್ಳುತ್ತದೆ. ಸರಕಾರಿ ಟೆಂಡರನ್ನು ಖಾಸಗಿಯವರಿಗೆ ನೀಡುವಾಗ ಪರಿಶೀಲಿಸಿ ಯೋಗ್ಯರಿಗೆ ಹಂಚುತ್ತದೆ. ಮನುಷ್ಯರು ಟೆಂಡರ್ ಪ್ರಕ್ರಿಯೆಯಲ್ಲಿದ್ದರೆ ಲಂಚ ಪಡೆಯುವ, ಬೆದರಿಕೆ ಹಾಕುವ ಅಥವಾ ತಮ್ಮವರಿಗೆ ಅನುಕೂಲ ಮಾಡಿಕೊಡುವ ಸಾಧ್ಯತೆ ಇರುತ್ತದೆ. ಎಐಗೆ ಯಾವುದೇ ಆಸೆ-ಆಮಿಷ ಇಲ್ಲದಿರುವುದರಿಂದ ಟೆಂಡರ್ ಪ್ರಕ್ರಿಯೆ ಭ್ರಷ್ಟಾಚಾರ ಮುಕ್ತವಾಗಿರುತ್ತದೆ ಎಂಬುದು ಅಲ್ಲಿನ ಸರಕಾರದ ವಿಶ್ವಾಸ.

ಈ ದಿಯೆಲ್ಲಾ ಸಚಿವ ಸಂಪುಟ ಸಭೆಗಳಲ್ಲಿ ಭಾಗವಹಿಸಿ ನಿರ್ಧಾರ ತೆಗೆದುಕೊಳ್ಳುವುದಿಲ್ಲ. ಕಾನೂನು ಜಾರಿಗೊಳಿಸುವ ಅಧಿಕಾರವೂ ಅದಕ್ಕಿಲ್ಲ. ಅಂತಿಮ ಅಧಿಕಾರ ಮಾನವ ಅಧಿಕಾರಿಗಳು ಮತ್ತು ಚುನಾಯಿತ ಸರಕಾರದ ಕೈಯಲ್ಲೇ ಇರುತ್ತದೆ. ದಿಯೆಲ್ಲಾ ಕೇವಲ ದತ್ತಾಂಶ ವಿಶ್ಲೇಷಣೆ ಮತ್ತು ಮೇಲ್ವಿಚಾರಣೆಗೆ ನೆರವಾಗುವ ಎಐ ಸಾಧನವಾಗಿದೆ. ನಾಗರಿಕರು ಧ್ವನಿ ಸಂದೇಶಗಳ ಮೂಲಕ ತಮಗೆ ಬೇಕಾದ ಸರಕಾರಿ ದಾಖಲೆಗಳು ಅಥವಾ ಸೇವೆಗಳನ್ನು ಈ ಎಐ ಮಂತ್ರಿಯ ಮೂಲಕ ಸುಲಭವಾಗಿ ಪಡೆಯಬಹುದು.

'ಎಐ' ಮಿನಿಸ್ಟರ್ ಗಮನಸೆಳೆದರೂ, ಕಂಪ್ಯೂಟರ್ ಕೋಡನ್ನು ಮಂತ್ರಿ ಮಾಡುವುದು ಕಾನೂನುಬಾಹಿರ ಎನ್ನುವ ವಿರೋಧವೂ ಅಲ್ಲಿ ವ್ಯಕ್ತವಾಗಿದೆ. ಎಐ ಮಂತ್ರಿ ತಪ್ಪು ನಿರ್ಧಾರ ತೆಗೆದುಕೊಂಡರೆ, ಹಗರಣ ನಡೆದರೆ ಪೊಲೀಸರು ಯಾರನ್ನು ಬಂಧಿಸಬೇಕು? ಯಾರಿಗೆ ಶಿಕ್ಷೆ ಕೊಡಬೇಕು? ಕಂಪ್ಯೂಟರನ್ನು ಜೈಲಿಗೆ ಹಾಕಲು ಆಗುವುದೇ?

pramod.harikant@timesofindia.com

ವಿಕ ತಗೋ ಕನ್ನಡ

ರುಮಾಲಿ, ಬಗಲಿ

ಇವು ಚೋರವಿದ್ಯೆಯ ಪಾರಿಭಾಷಿಕ ಪದಗಳು! ಕಳ್ಳತನಕ್ಕೆ ಕನ್ನಗಳ್ಳನು ಮನೆಯ ಗೋಡೆಯಲ್ಲಿ ಕನ್ನಗತ್ತಿಯಿಂದ ರಂಧ್ರಕೊರೆದು ಒಳನುಗ್ಗುತ್ತಾನೆ. ಇದಕ್ಕೆ ಮನೆಯನ್ನು ಪರೀಕ್ಷಿಸಿ, ತನಗೆ ಸೂಕ್ತವಾದ ಸ್ಥಳವನ್ನು ಆರಿಸಿಕೊಳ್ಳುತ್ತಾನೆ. ನುಗ್ಗಿದಷ್ಟೇ ಸುಲಭವಾಗಿ, ಸಿಕ್ಕಿಹಾಕಿಕೊಳ್ಳದೆ ಹೊರಬರುವುದು ಆತನ ಮುಖ್ಯ ಉದ್ದೇಶವಾಗಿರುತ್ತದೆ. ಕನ್ನಕೊರೆಯಲು ಅಂಗರಚನಾಶಾಸ್ತ್ರದ ತಿಳಿವಳಿಕೆ ಬೇಕು. ''ಮನೆಯ ಚಾವಣಿಯಲ್ಲಿ ತಲೆಗೆ ಸುತ್ತುವ ಬಟ್ಟೆಯಷ್ಟು ವ್ಯಾಸದ ರಂಧ್ರ ಕೊರೆದರೆ, ಆತನ ದೇಹವು ತೂರಿ ಒಳಗಿಳಿಯಬಹುದು. ಇದನ್ನು ''ರುಮಾಲಿ ಪದ್ಧತಿ'' ಎಂದು ಕರೆಯುತ್ತಾರೆ. ('ರುಮಾಲು' ಪದಕ್ಕೆ ಬೇರೆಯ ಅರ್ಥಗಳು ಇವೆ. ರುಮಾಲಿ ರೋಟಿಯೂ ಇದೆ)

''ಬಾಗಿಲಿನ/ ಕಿಟಕಿಯ ಹತ್ತಿರ ಗೋಡೆ ಕೊರೆ''ದು ಒಳಸೇರುವುದಕ್ಕೆ 'ಬಗಲಿಪದ್ಧತಿ' ಎಂದು ಕರೆಯುತ್ತಾರೆ. ಬಗಲು ಎಂದರೆ 'ಕಂಕುಳು' - ಅದು ತೂರುವಷ್ಟು ಕನ್ನ ಕೊರೆಯುವುದು ಬಗಲಿ ಪದ್ಧತಿ. ಈಚೆಗೆ ಕಳ್ಳನೊಬ್ಬ ರಂಧ್ರದಲ್ಲಿ ಸಿಕ್ಕಿಹಾಕಿಕೊಂಡಿದ್ದ ಘಟನೆ ವರದಿಯಾಗಿತ್ತು. **- ಜಿ.ವಿ. ಅರುಣ**

- ಪದ ಸೂಚಿಸಿದವರು: ಕೇಶವ ಸಕಲೇಶಪುರ

ಬತ್ತಳಿಕೆ



ವಿಕ ಜೋಕ್ FALLS

ಡಾಕ್ಟರ್: ನೀವು ಪೇಶೆಂಟನ್ನು ಒಂದು ಗಂಟೆ ಮೊದಲೇ ಕರೆತಂದಿರುತ್ತಿದ್ದರೆ, ಏನೋ ಪ್ರಯತ್ನ ಮಾಡಿ ಅವನನ್ನು ಉಳಿಸಬಹುದಿತ್ತು.

ಸಂಗ್ಯಾ: ಅರರೆ! ಅವನಿಗೆ ಆ್ಯಕ್ಸಿಡೆಂಟ್ ಆಗಿದ್ದು 10 ನಿಮಿಷದ ಹಿಂದಷ್ಟೇ!

ಕೃತಕ ಬುದ್ಧಿಮತ್ತೆ ಕ್ರಾಂತಿ, ಭಾರತ ಈಗ ನಿಂತಿತೆಲ್ಲಿ?

ಟೆಕ್ ಪೋಸ್ಟ್

ಮಧು ವೈ. ಎನ್.

ಇತ್ತೀಚಿನ ಕೆಲವು ಜಾಗತಿಕ ಘಟನೆಗಳು ನನ್ನಲ್ಲಿ ಹಲವು ಕಠಿಣ ಪ್ರಶ್ನೆಗಳನ್ನು ಹುಟ್ಟುಹಾಕಿವೆ. ಈ ತನಕ ಕೇವಲ 'ಕಾಳುಮೆಣಸಿನಂಥ' ಒಂದು ವಾಣಿಜ್ಯ ಉತ್ಪಾದನೆಯಾಗಿದ್ದ ಸಾಫ್ಟ್‌ವೇರ್, ಈಗ ದಿಢೀರನೆ ರಾಷ್ಟ್ರೀಯತೆಗೆ ಥಳುಕು ಹಾಕಿಕೊಂಡು ಜಾಗತಿಕ ಅಸ್ತ್ರವಾಗಿ ರೂಪಾಂತರಗೊಂಡಿರುವುದು ಕಳವಳಕಾರಿಯಾಗಿದೆ. ಇದು ನಿದ್ದೆಯಲ್ಲಿರುವವರೆಲ್ಲರನ್ನೂ ಬಡಿದೆಚ್ಚರಿಸಬೇಕಿದೆ.

ಘಟನೆ- 1

ಅಮೆರಿಕ- ಇರಾನ್ ಯುದ್ಧ. ಒಬ್ಬ ದೈತ್ಯ ಅವನ ಅರ್ಧದಷ್ಟಿರುವ ಕುಬ್ಜನ ಮೇಲೆ ಮುಗಿಬಿದ್ದಾಗ ಕುಬ್ಜ ಏನು ಮಾಡಬಹುದು? ನೇರವಾಗಿ ಸೋಲೊಪ್ಪಿಕೊಳ್ಳಬಹುದು ಅಥವಾ ಶತಾಯಗತಾಯ ಹೋರಾಡಿ ವೀರಮರಣವನ್ನಪ್ಪಬಹುದು. ಇರಾನ್ ಈ ಎರಡಕ್ಕೂ ಮಿಗಿಲಾಗಿ ತನ್ನ ಮೇಲೆ ಬಿದ್ದವನ ಗಂಟಲಿನ ನರ ಹಿಡಿದುಕೊಂಡಿತು. ಅದೇ ಹರ್ಮುಜ್ ಜಲಸಂಧಿ. ಅಮೆರಿಕ ಉಸಿರುಗಟ್ಟಿ ವಿಲವಿಲನೆ ಒದ್ದಾಡಿ ಕೊನೆಗೆ ತಾನೇ ಮುಂದೆ ಬಂದು 'ನನ್ನ ಕುತ್ತಿಗೆ ಬಿಡೋ ಮಾರಾಯ, ಒಂದು ಒಪ್ಪಂದ ಮಾಡಿಕೊಳ್ಳೋಣ' ಎಂದು ಪುಸಲಾಯಿಸಿ ಈಗ ಯುದ್ಧ ಅಂತ್ಯಗೊಂಡಿದೆ. ಇನ್ನೂ ವಿಶೇಷವಾಗಿ- ಇರಾನ್‌ಗೆ ಕೆಲವೇ ವರುಷಗಳಲ್ಲಿ ತನ್ನನ್ನು ಪುನಃ ಕಟ್ಟಿಕೊಳ್ಳಲು ಅದರ ಬಳಿ ಅಗಾಧವಾದ ತೈಲಸಂಪತ್ತಿದೆ.

ಘಟನೆ- 2

ಎಐ ಬಂದ ಆರಂಭಿಕ ವರುಷಗಳಲ್ಲಿ ಅಮೆರಿಕ ಎನ್‌ವಿಡಿಯಾಗೆ ನೀವು ಚೀನಾಕ್ಕೆ ಜಿಪಿಯುಗಳನ್ನು ರಫ್ತು ಮಾಡಕೂಡದು ಎಂದು ನಿಷೇಧ ಹೇರಿತ್ತು. ಇವನು ಉತ್ಪಾದಕ, ಅವನು ಗ್ರಾಹಕ- ಇದರ ನಡುವೆ ಸರಕಾರಕ್ಕೇನು ಕೆಲಸ? ಅದೂ ಮುಕ್ತ ಮಾರುಕಟ್ಟೆಯ ಹರಿಕಾರನಿಂದ! ಆದರೆ, ಚೀನಾ ತನ್ನ ನೆರೆದೇಶಗಳ ಮೂಲಕ, 'ಶೆಲ್ ಕಂಪನಿ'ಗಳ (ಕಾಗದದ ಮೇಲಷ್ಟೇ ಇರುವ ಕಂಪನಿಗಳು) ಮೂಲಕ ಅಮೆರಿಕದ ಜಿಪಿಯುಗಳನ್ನು ಕದ್ದುಮುಚ್ಚಿ ತರಿಸಿಕೊಂಡಿತು. ಕೇವಲ 6 ತಿಂಗಳ ಅವಧಿಯಲ್ಲಿ ಅಮೆರಿಕದ ಎಐ ಮಾಡೆಲ್‌ಗಳಿಗೆ ಸಮನಾದ ಮಾಡೆಲ್‌ಗಳನ್ನು ತಯಾರಿಸಿತು. ಅಷ್ಟೇ ಅಲ್ಲದೆ, ಅವನ್ನು ಮುಕ್ತ ತಂತ್ರಜ್ಞಾನವನ್ನಾಗಿಸಿತು ಸಹ.

ಘಟನೆ-3

ಇದು ಮೇಲಿನವುಗಳಿಗಿಂತ ಹೆಚ್ಚು ಅಪಾಯದ ಕರೆಗಂಟೆ ಒತ್ತುತ್ತಿರುವ ಘಟನೆ. ಮೊನ್ನೆ ಮೊನ್ನೆ ಅಮೆರಿಕ ಸರಕಾರ ಆಂಥ್ರೊಪಿಕ್ ಬಿಡುಗಡೆ ಮಾಡಿದ ಲೇಟೆಸ್ಟ್ ಅಂಡ್ ಗ್ರೇಟೆಸ್ಟ್ ಮಾಡೆಲ್‌ಗಳಾದ ಫೇಬಲ್ ಮತ್ತು ಮಿಥೋಸ್‌ಗಳನ್ನು ಅಮೆರಿಕ ಪ್ರಜೆಗಳ ಹೊರತು ಬೇರಾರೂ ಬಳಸುವಂತಿಲ್ಲವೆಂದು ನಿಷೇಧಿಸಿಬಿಟ್ಟಿತು. ಕೊಟ್ಟ ಕಾರಣ: ರಾಷ್ಟ್ರೀಯ ಭದ್ರತೆ.

ಕೇಕ್‌ನಲ್ಲಿ ಒಂದರ ಮೇಲೊಂದು ಬ್ರೆಡ್ಡು, ಕ್ರೀಮುಗಳಿರುವಂತೆ ಎಐ ಪ್ರಪಂಚದಲ್ಲಿ ಐದು ಪದರಗಳಿವೆ: ವಿದ್ಯುತ್, ಚಿಪ್, ಡೇಟಾಸೆಂಟರ್, ಮಾಡೆಲ್ ಮತ್ತು ಅಪ್ಲಿಕೇಶನ್. ನಂದನ್ ನಿಲೇಕಣಿಯೂ ಸೇರಿದಂತೆ ಎಲ್ಲರೂ ಈ ತನಕ ಹೇಳ್ತಿದ್ದೇನೆಂದರೆ ''ನೋಡಿ ನಾವು ಅಮೆರಿಕ ಮತ್ತು ಚೀನಾವನ್ನು ಚಿಪ್ ಮತ್ತು ಮಾಡೆಲ್‌ಗಳ ಸ್ಪರ್ಧೆಯಲ್ಲಿ ಬೆನ್ನತ್ತಲಾಗಲ್ಲ, ಆ ಟ್ರೈನು ಆಗಲೇ ಪಾಸಾಗಿಬಿಟ್ಟಿದೆ, ಇನ್ನೇನಿದ್ದರೂ ನಾವು ಅಪ್ಲಿಕೇಶನ್ ಪದರದಲ್ಲಿ ಗುದ್ದಾಡಬೇಕು, ಜಯಿಸಬೇಕು,'' ಎಂದು. ಅಂದರೆ, ನಾವು ಎಐ ಬಳಸಿಕೊಂಡು ಅದರ ಸುತ್ತಮುತ್ತ ಆಪ್‌ಗಳನ್ನು ತಯಾರಿಸುವುದು. ಯಾಕೆಂದರೆ, ಈ ವಲಯದಲ್ಲಿ ಕೌಶಲವಿರುವ ಸಾಕಷ್ಟು ಎಂಜಿನಿಯರ್‌ಗಳು ನಮ್ಮಲ್ಲಿದ್ದಾರೆ.

ಲೆಕ್ಕಾಚಾರ ಇಷ್ಟು ಸರಳವಾಗಿದ್ದಲ್ಲಿ ಎಷ್ಟು ಚೆನ್ನಾಗಿರುತ್ತಿತ್ತು! ಆದರೆ, ನಮ್ಮ 'ಇಂಡಿಯಾ ಎಐ ಮಿಷನ್' ಓಡುತ್ತಿರುವುದು, ನಮ್ಮ ಸ್ಥಳೀಯ ಭಾಷೆಗಳಿಗಾಗಿ ಹುಟ್ಟಿಕೊಂಡ 'ದೇಶಿ ಮಾಡೆಲ್'ಗಳು ತಯಾರಾಗುತ್ತಿರುವುದು, ಇಲ್ಲಿನ ಸ್ಟಾರ್ಟ್‌ಅಪ್‌ಗಳ ಎಐ ಆಪ್‌ಗಳು- ಎಲ್ಲವೂ ಓಡುತ್ತಿರುವುದು ಅಮೆರಿಕ ಚಿಪ್‌ಗಳ ಮೇಲೆ ಅಥವಾ ಅಮೆರಿಕ ಮಾಡೆಲ್‌ಗಳನ್ನು ಬಳಸಿ.

ಒಂದು ವೇಳೆ ನಾಳೆ ನಾವು ಅಮೆರಿಕ ಅಧಿಪತಿಗೆ ಅಂಡು ತೋರಿಸಿದ್ದಲ್ಲಿ, ಅಧಿಪತಿಯ ಕೆಂಗಣ್ಣಿಗೆ ಗುರಿಯಾದಲ್ಲಿ, ಈ ಅಧಿಪತಿ ಏಕಾಏಕಿ ನಮಗೂ ಚಿಪ್‌ಗಳನ್ನು ಬ್ಯಾನ್ ಮಾಡಿಬಿಡಬಹುದು. ನಾಳೆಯಿಂದ ಈ ದೇಶಕ್ಕೆ ಚಾಟ್‌ಜಿಪಿಟಿ, ಕ್ಲಾಡ್, ಜೆಮಿನಿ ಎಲ್ಲವೂ ಬಂದ್ ಎಂದು ಆದೇಶ ಹೊರಡಿಸಬಹುದು. ಹಾಗಾದಾಗ, ಇವುಗಳನ್ನು ನಂಬಿಕೊಂಡು ಇವುಗಳ ಎಪಿಐ ಬಳಸಿಕೊಂಡು ಆ್ಯಪ್ ತಯಾರಿಸಿದ್ದ ಸ್ಟಾರ್ಟ್‌ಅಪ್‌ಗಳು, ಸಾಫ್ಟ್‌ವೇರ್ ನಿರ್ಮಾತೃಗಳು ಎಲ್ಲಿ ಹೋಗಬೇಕು? ಈ ಆ್ಯಪ್‌ಗಳನ್ನು ಬಳಸಿ ಜೀವನ ಬದಲಾಯಿಸಿಕೊಂಡಿದ್ದ ಅಂತಿಮ ಗ್ರಾಹಕ ಎಲ್ಲಿ ಹೋಗಬೇಕು? ಇವರು ಯುರೇನಿಯಂ ಅನ್ನು ಬಾಂಬ್ ತಯಾರಿಕೆಗೆ ಬಳಸುತ್ತಾರೆಂದು ನಮ್ಮ ಯುರೇನಿಯಂ ಮೇಲೆ ಕಣ್ಣು ಬಿದ್ದರೆ ನಾವು ವಿದ್ಯುತ್ತಿಗಾಗಿ ಎಲ್ಲಿಹೋಗಬೇಕು? ನಮ್ಮ ಡೇಟಾಸೆಂಟರ್‌ಗಳ ಗತಿ ಏನಾಗಬೇಕು?

ಇವು ಭಾರತೀಯರಾದ ನಾವೆಲ್ಲರೂ... ಹಿರಿಯ-ಕಿರಿಯ, ಅಧಿಕಾರಿ- ಸಿರಿವಂತ, ರಾಷ್ಟ್ರವಾದಿ-ಮಾನವತಾವಾದಿ, ಎಲ್ಲರೂ ಕುಳಿತು ಕೇಳಿಕೊಳ್ಳಬೇಕಾದ, ಯೋಚಿಸಬೇಕಾದ ಕಠಿಣ ಪ್ರಶ್ನೆಗಳು... ಹೇಗೆ ಇರಾನ್‌ನಂತೆ ನಮ್ಮ ಬಳಿ ಹರ್ಮುಜ್ ಜಲಸಂಧಿ ಇಲ್ಲವೋ, ಹೇಗೆ ತೈಲದಂಥ ನೈಸರ್ಗಿಕ ಸಂಪತ್ತು ಇಲ್ಲವೋ ಹಾಗೆ ನಮ್ಮ ಬಳಿ ವಿಜ್ಞಾನ, ತಂತ್ರಜ್ಞಾನದ ಸಂಪತ್ತುಗಳೂ ಸ್ವಾವಲಂಬಿ ಮಟ್ಟಿಗೆ ಇರದಿರುವುದು ಕಹಿಸತ್ಯ ಮತ್ತು ದುರಂತ.

ಹಾಗಾದರೆ ನಮ್ಮ ಸಂಪತ್ತೇನು?: ನನಗೆ ಹೊಳೆಯುತ್ತಿರುವ ಒಂದೇ ಉತ್ತರ- ಮಾನವ ಸಂಪನ್ಮೂಲ. ಜಗತ್ತಿನ ಒಟ್ಟು ಚಿಪ್ ಡಿಸೈನರ್‌ಗಳಲ್ಲಿ 5ನೇ 1 ಭಾಗದಷ್ಟು ನಮ್ಮವರೇ ಇದ್ದಾರೆ. ಜಗತ್ತಿನ ಅರ್ಧದಷ್ಟು ಎಐ ಡೆವಲಪರ್‌ಗಳ ಸರಪಳಿಯಲ್ಲಿ ಭಾರತೀಯರ ಪಾತ್ರವಿದೆ. ಅಮೆರಿಕ ನಿಷೇಧ ಹೇರಿರುವ ಆ ಅತ್ಯಾಧುನಿಕ ಮಾಡೆಲ್‌ಗಳನ್ನು ಕಟ್ಟಿದವರೂ ನಮ್ಮವರೇ. ಇಂದಿನ ಎಐ ಕ್ರಾಂತಿಗೆ ಮೂಲಕಾರಣವಾದ "Attention Is All You Need" ಎಂಬ ಜಗತ್ಪ್ರಸಿದ್ಧ ಸಂಶೋಧನಾ ಲೇಖನ ಬರೆದವರಲ್ಲಿ ಪ್ರಮುಖನಾದ ಆಶಿಶ್ ವಾಸ್ವಾನಿ ಕೂಡ ಭಾರತೀಯನೇ. ಎಐ ಇಂಡಸ್ಟ್ರಿಯಲ್ಲಿರುವ ಬಹುತೇಕ ಸಿಇಒಗಳು, ತಂತ್ರಜ್ಞರು ಭಾರತೀಯರೇ. ಆದರೆ, ಇವರೆಲ್ಲರೂ ಇಲ್ಲಿ ಕಲಿತು ಅಮೆರಿಕಕ್ಕಾಗಿ ದುಡಿಯುತ್ತಿದ್ದಾರೆ.

ಇಲ್ಲಿ ಎರಡು ಸಮಸ್ಯೆಗಳಿವೆ. ಒಂದು ಇಲ್ಲಿ ಪೋಷಿಸಿದ ಸಂಪನ್ಮೂಲ ಬೇರೆ ದೇಶಕ್ಕೆ ಸೋರಿಹೋಗುತ್ತಿರುವುದು. ಇನ್ನೊಂದು ಸೂಕ್ತ ಪೋಷಣೆಯಿಲ್ಲದೇ ಇರುವ ಸಂಪನ್ಮೂಲವೂ ಸೊರಗುತ್ತಿರುವುದು. ಸೋರಿಹೋಗುತ್ತಿರುವುದಕ್ಕೆ ಒಂದಷ್ಟು ರಾಷ್ಟ್ರಾಭಿಮಾನದ ಪ್ರೇರಣೆ ಬೇಕಿರುತ್ತದೆ. ಅದಕ್ಕೂ ಮಿಗಿಲಾಗಿ ಪ್ರಯೋಗ ಮತ್ತು ಅವಿಷ್ಕಾರಗಳನ್ನು ಉತ್ತೇಜಿಸುವ, ಪ್ರಾಮಾಣಿಕ ವಿಫಲತೆಗಳನ್ನೂ ಒಪ್ಪಿಕೊಳ್ಳುವ ಮುಕ್ತ ವಾತಾವರಣ ಇಲ್ಲಿ ಸೃಷ್ಟಿಯಾಗಬೇಕು; ಸಾಧನೆಗೆ ತಕ್ಕ ಪ್ರತಿಫಲವೂ ಸಿಗಬೇಕು.

ಇನ್ನೊಂದೆಡೆ, ಉಳಿದ ಸಂಪನ್ಮೂಲವನ್ನು ಪೋಷಿಸದಿದ್ದರೆ ಅದು ಕಳೆಯಾಗಿಬಿಡುತ್ತದೆ. ದುರದೃಷ್ಟವಶಾತ್, ನಮ್ಮ ವ್ಯವಸ್ಥೆ ಜನಸಾಮಾನ್ಯರ ಜೀವವನ್ನು 'ಡಿಸ್ಪೋಸೆಬಲ್' (ಬಿಸಾಡಬಹುದಾದ ವಸ್ತು) ಮಟ್ಟಕ್ಕೆ ಇಳಿಸಿಬಿಟ್ಟಿದೆ. ಭವಿಷ್ಯದ ಅದ್ಭುತ ವಿಜ್ಞಾನಿಯಾಗಬಲ್ಲ ಕೃಷಿಕನ- ಕಾರ್ಮಿಕನ ಮಗ-ಮಗಳು ರಸ್ತೆಯ ಹೊಂಡಕ್ಕೆ ಬಿದ್ದು ಸತ್ತರೂ ನಮಗೆ ಲೆಕ್ಕವಿಲ್ಲ, ಮಾನವ ಸಂಪನ್ಮೂಲದ ನಿಜವಾದ ಮೌಲ್ಯ ನಮಗಿನ್ನೂ ಅರ್ಥವಾಗಿಲ್ಲ.

ಈ ಮನಸ್ಥಿತಿ ಬದಲಾಗಬೇಕು. ನಮ್ಮ ರಾಷ್ಟ್ರವಾದ ಕೇವಲ ಪಾಕಿಸ್ತಾನವನ್ನು ಕ್ರಿಕೆಟ್‌ನಲ್ಲಿ ಬಗ್ಗುಬಡಿಯುವುದಕ್ಕಷ್ಟೇ ಸೀಮಿತವಾಗಬಾರದು; ಬದಲಿಗೆ ಇಲ್ಲಿನ ಪ್ರತಿ ನಾಗರಿಕನೂ ಯಾವುದೋ ಒಂದರಲ್ಲಿ ಪ್ರತಿಭಾವಂತನಾಗಬೇಕು, ಅದನ್ನು ದೇಶಕ್ಕಾಗಿ ಬಳಸಬೇಕು. ಅಂಥ ಪ್ರತಿಭೆಗಳು ಈ ನೆಲದಲ್ಲಿ ಬುಗಬುಗನೆ ಉಕ್ಕುವಂತೆ, ಬೆಳೆಯುವಂತೆ ಸರಕಾರ ಮತ್ತು ಸಮಾಜ ನಿರಂತರವಾಗಿ ಫಲವತ್ತಾದ ಮಣ್ಣು, ಗೊಬ್ಬರ, ನೀರು ಒದಗಿಸುತ್ತಿರಬೇಕು.

(ಲೇಖಕರು: ವಿಜ್ಞಾನ ಪರಿಣತರು)

ಇರಾನ್ ತೈಲದ ಮೇಲಿನ ಅಮೆರಿಕ ನಿರ್ಬಂಧ ತಾತ್ಕಾಲಿಕ ತೆರವು

ಶಾಂತಿ ಮಾತುಕತೆ ಹೊತ್ತಲ್ಲಿ ಅಮೆರಿಕ ಘೋಷಣೆ | ಭಾರತಕ್ಕೆ ವರವಾಗುವ ಸಾಧ್ಯತೆ

ವಾಷಿಂಗ್ಟನ್: ಮಹತ್ವದ ಬೆಳವಣಿಗೆಯಲ್ಲಿ ಶಾಂತಿ ಒಪ್ಪಂದ ಅನುಷ್ಠಾನಕ್ಕೆ ಸ್ವಿಟ್ಜರ್ಲೆಂಡ್‌ನಲ್ಲಿ ಮಾತುಕತೆ ನಡೆಯುತ್ತಿರುವ ಹೊತ್ತಿನಲ್ಲೇ ಇರಾನ್ ತೈಲದ ಮೇಲಿನ ನಿರ್ಬಂಧಗಳನ್ನು ಅಮೆರಿಕ ತೆರವುಗೊಳಿಸಿದೆ.

ಇರಾನ್‌ನ ತೈಲ ಹಾಗೂ ತೈಲ ಉತ್ಪನ್ನಗಳ ಮೇಲಿನ ದಿಗ್ಬಂಧನ ತೆರವು ಮಾಡಲಾಗಿದೆ. ಮುಂದಿನ 60 ದಿನಗಳ ಕಾಲ ತೈಲ ಮಾರಾಟಕ್ಕೆ ಸಂಪೂರ್ಣ ಅನುಮತಿ ನೀಡಲಾಗಿದೆ. ತೈಲ ಉತ್ಪನ್ನಗಳ ಸಾಗಣೆಗೂ ಅನುಮತಿಸಲಾಗಿದೆ ಎಂದು ಅಮೆರಿಕ ಖಜಾನೆ ಕಾರ್ಯದರ್ಶಿ ಸ್ಕಾಟ್ ಬೆಸೆಂಟ್ ತಿಳಿಸಿದ್ದಾರೆ.

''ಸ್ವಿಟ್ಜರ್ಲೆಂಡ್‌ನಲ್ಲಿ ನಡೆಯುತ್ತಿರುವ ಮಾತುಕತೆಗಳು ಧನಾತ್ಮಕ ದಿಕ್ಕಿನಲ್ಲಿ ಸಾಗಿವೆ. ಹರ್ಮುಜ್ ಜಲಸಂಧಿಯನ್ನು ಸಂಪೂರ್ಣ ಮುಕ್ತಗೊಳಿಸಲು ಇರಾನ್ ಒಪ್ಪಿಕೊಂಡಿದೆ. ಪರಮಾಣು ಕಾರ್ಯಕ್ರಮ ಕುರಿತು ಅಂತಾರಾಷ್ಟ್ರೀಯ ಪರಮಾಣು ಸಂಸ್ಥೆಯ ಕಣ್ಗಾವಲು, ಪರಿಶೀಲನೆಗೆ ಸಮ್ಮತಿಸಿದೆ. ಪ್ರತಿಯಾಗಿ ಮುಂದಿನ 60 ದಿನಗಳ ವರೆಗೆ ಇರಾನ್ ತೈಲ ಮಾರಾಟಕ್ಕೆ ತಾತ್ಕಾಲಿಕವಾಗಿ ಅನುಮತಿ ನೀಡಲಾಗಿದೆ,'' ಎಂದು ಬೆಸೆಂಟ್ ಹೇಳಿದ್ದಾರೆ.

ಭಾರತ ನಿರಾಳ: ಇರಾನ್ ತೈಲದ ಮೇಲಿನ ಅಮೆರಿಕ ನಿರ್ಬಂಧ ತೆರವು ಭಾರತಕ್ಕೆ ವರವಾಗಲಿದೆ. ಇಂಧನ ಮೂಲಗಳನ್ನು ವೈವಿಧ್ಯಮಯಗೊಳಿಸಿದ್ದ ಭಾರತಕ್ಕೆ, ಇರಾನ್ ತೈಲ ಮತ್ತೊಂದು ಮೂಲವಾಗಿ ಲಭಿಸಲಿದೆ. ದೂರದ ವೆನಿಜುವೆಲಾ, ಅರ್ಜೆಂಟೀನಾ, ಅಮೆರಿಕ ಬದಲಿಗೆ ಸಮೀಪದ ಇರಾನ್‌ನಿಂದ ತೈಲ ಖರೀದಿ ಸುಲಭವಾಗಲಿದೆ. ಕಡಿಮೆ ಬೆಲೆಯಲ್ಲಿ ಸಿಗುವ ಇಂಧನ ಖರೀದಿಸಲು ನಿರ್ಧರಿಸಿರುವ ಭಾರತದ ಹಾದಿಗೆ ಇರಾನಿಯನ್ ತೈಲ ವರದಾನವಾಗಲಿದೆ.

ಅಬ್ಬಾಸ್ ಅರಾಘಚಿ

ನಿರ್ಬಂಧಿತ ಸ್ವತ್ತುಗಳ ಬಿಡುಗಡೆ ಬಳಿಕ ಲಭ್ಯವಾಗುವ ಆದಾಯವನ್ನು ಇರಾನ್ ಹೇಗೆ ಬಳಸಿಕೊಳ್ಳಲಿದೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಭಯೋತ್ಪಾದನಾ ಕೃತ್ಯಗಳಿಗೆ ಬಳಸದಂತೆ ಎಚ್ಚರಿಕೆ ವಹಿಸಬೇಕು. ಶಸ್ತ್ರಾಸ್ತ್ರ ಖರೀದಿಗೆ ಉಪಯೋಗಿಸದಂತೆ ಚೌಕಟ್ಟು ರೂಪಿಸಬೇಕು. ಉದ್ದೇಶಿತ ಯೋಜನೆಗೆ ಒಂದು ವ್ಯವಸ್ಥೆಯನ್ನು ರೂಪಿಸುವುದು ನಮ್ಮ ಉದ್ದೇಶವಾಗಿದೆ.
- ಜೆ.ಡಿ.ವ್ಯಾನ್ಸ್ ಅಮೆರಿಕ ಉಪಾಧ್ಯಕ್ಷ

ಮೊದಲ ಸುತ್ತಿನ ಸಭೆ ಅಂತ್ಯ

'ಇಸ್ಲಾಮಾಬಾದ್ ತಿಳಿವಳಿಕೆ ಒಪ್ಪಂದ'ದ 14 ಅಂಶಗಳ ಅನುಷ್ಠಾನ ಸಂಬಂಧ ಅಮೆರಿಕ-ಇರಾನ್ ನಡುವೆ ನಡೆದ ಮೊದಲ ಸುತ್ತಿನ ಸಭೆ ಸೋಮವಾರ ಅಂತ್ಯಗೊಂಡಿದೆ. ಕತಾರ್, ಪಾಕಿಸ್ತಾನ ಮಧ್ಯಸ್ಥಿಕೆಯಲ್ಲಿ ಒಪ್ಪಂದದ ಅಂಶಗಳಲ್ಲಿ ಸಹಮತ ರೂಪಿಸಲು ಉಭಯ ದೇಶಗಳ ನಡುವೆ ವಿವಿಧ ಆಯಾಮಗಳಲ್ಲಿ ಮಾತುಕತೆ ನಡೆಯಿತು.

ರಾಜತಾಂತ್ರಿಕ ಅಧಿಕಾರಿಗಳು, ರಾಜತಂತ್ರಜ್ಞ ಪರಿಣತರು ಒಪ್ಪಂದದ ತಾಂತ್ರಿಕ ಅಂಶಗಳ, ಸಮಸ್ಯೆಗಳ ಕುರಿತು ಸವಿಸ್ತಾರವಾಗಿ ಪರಿಶೀಲಿಸಿದರು. ಲೆಬನಾನ್-ಇಸ್ರೇಲ್ ಸಂಘರ್ಷಕ್ಕೆ ಅಂತ್ಯ, ಮಧ್ಯಪ್ರಾಚ್ಯ, ಪಶ್ಚಿಮ ಏಷ್ಯಾದಲ್ಲಿ ಪ್ರಾದೇಶಿಕ ಸ್ಥಿರತೆ ರೂಪಿಸುವ ಗುರಿಯೊಂದಿಗೆ ಮಾತುಕತೆ ನಡೆಸಲಾಯಿತು.

ಪ್ರಾದೇಶಿಕ ಸ್ಥಿರತೆ ಕಾಯ್ದುಕೊಳ್ಳಲು ಮಧ್ಯಪ್ರಾಚ್ಯ ಬಿಕ್ಕಟ್ಟು ಉಲ್ಬಣಿಸದಂತೆ ಎಚ್ಚರಿಕೆ ವಹಿಸಬೇಕು ಎಂದು ನಿರ್ಧರಿಸಿದ ಭಯ ದೇಶಗಳು, ಕದನ ವಿರಾಮ ಒಪ್ಪಂದ ಜಾರಿಗೆ ಕಾರ್ಯ ವಿಧಾನ ರೂಪಿಸುವ ಕುರಿತು ಉಭಯ ದೇಶಗಳು ಒಪ್ಪಿಕೊಂಡವು.

ಮಾತುಕತೆ ವೇಳೆ ಹರ್ಮುಜ್ ಜಲಮಾರ್ಗ ಮುಚ್ಚಿರುವ ಕುರಿತು ಕಳವಳ ವ್ಯಕ್ತವಾಯಿತು. ಮುಂದಿನ ಹಂತದ ಮಾತುಕತೆಯಲ್ಲಿ ಜಲಸಂಧಿಯನ್ನು ಸಂಚಾರಕ್ಕೆ ಮುಕ್ತಗೊಳಿಸುವ ಕುರಿತು ಮಾತುಕತೆ ನಡೆಸಲು ನಿರ್ಧರಿಸಲಾಗಿದೆ. ''ಹರ್ಮುಜ್ ಮೇಲಿನ ನಿರ್ಬಂಧವನ್ನು ಇರಾನ್ ತೆರವು ಮಾಡಬೇಕು. ಜಲಮಾರ್ಗ ಸಂಚಾರಕ್ಕೆ ಪೂರ್ಣ ಮುಕ್ತವಾದಲ್ಲಿ ಮಾತುಕತೆಯಲ್ಲಿ ಉತ್ತಮ ಪ್ರಗತಿ ಸಾಧಿಸಿದಂತಾಗುತ್ತದೆ,'' ಎಂದು ಅಮೆರಿಕ ರಾಜತಾಂತ್ರಿಕ ನಿಯೋಗ ಅಭಿಪ್ರಾಯಪಟ್ಟಿದೆ. ಇರಾನ್ ಪರಮಾಣು ಕಾರ್ಯಕ್ರಮ ವಿಷಯವಾಗಿ ಭವಿಷ್ಯದ ಮಾತುಕತೆಗೆ ರಾಜಕೀಯ ಹಾಗೂ ತಾಂತ್ರಿಕ ಚೌಕಟ್ಟು ರೂಪಿಸಲು ನಿರ್ಧರಿಸಲಾಗಿದೆ.

ಪರಿಷತ್ ಚುನಾವಣೆ ಮಹಾಯುತಿಗೆ 16 ಸ್ಥಾನ

ಮುಂಬಯಿ: ವಿಧಾನ ಪರಿಷತ್‌ಗೆ ನಡೆದ ಚುನಾವಣೆಯಲ್ಲಿ ಆಡಳಿತಾರೂಢ ಮಹಾಯುತಿ ಭರ್ಜರಿ ಗೆಲುವು ಸಾಧಿಸಿದೆ. 17 ಸ್ಥಾನಗಳ ಪೈಕಿ 16ರಲ್ಲಿ ಗೆಲುವು ಸಾಧಿಸಿದರೆ, ಒಂದರಲ್ಲಿ ಬಿಜೆಪಿ ಬಂಡಾಯ ಅಭ್ಯರ್ಥಿ ಜಯ ಗಳಿಸಿದ್ದಾರೆ.

ಜೂನ್ 18ರಂದು 17 ಸ್ಥಾನಗಳಿಗೆ ಚುನಾವಣೆ ನಡೆದಿತ್ತು. ಮತದಾನಕ್ಕೂ ಮುನ್ನವೇ 6 ಮಂದಿ ಅವಿರೋಧ ಆಯ್ಕೆಯಾಗಿದ್ದರು. ಉಳಿದ 11 ಸ್ಥಾನಗಳಿಗೆ ಅಂದು ಮತದಾನ ನಡೆದಿತ್ತು. ಅದರ ಫಲಿತಾಂಶ ಸೋಮವಾರ ಪ್ರಕಟವಾಗಿದ್ದು, ಮಹಾಯುತಿ ಮೈತ್ರಿಕೂಟ ಅಭೂತಪೂರ್ವ ಜಯ ಸಾಧಿಸಿದೆ. ಮೈತ್ರಿಕೂಟದ ದೊಡ್ಡ ಪಕ್ಷವಾಗಿರುವ ಬಿಜೆಪಿಗೆ 11 ಸ್ಥಾನಗಳು ಸಿಕ್ಕಿವೆ. ಏಕನಾಥ್ ಶಿಂಧೆ ಬಣದ ಶಿವಸೇನೆ ಮತ್ತು ಅಜಿತ್ ಪವಾರ್ ಬಣದ ಎನ್‌ಸಿಪಿ ತಲಾ 2 ಸ್ಥಾನಗಳಲ್ಲಿ ಗೆಲುವು ಸಾಧಿಸಿವೆ. ಈ ಎರಡೂ ಸ್ಥಾನಗಳ ಅಭ್ಯರ್ಥಿಗಳು ಅವಿರೋಧ ಆಯ್ಕೆಯಾಗಿದ್ದಾರೆ. ಬಿಜೆಪಿಯ ಇಬ್ಬರು ಅಭ್ಯರ್ಥಿಗಳು ಅವಿರೋಧ ಆಯ್ಕೆಗೊಂಡಿದ್ದಾರೆ. ಅಚ್ಚರಿಯ ಫಲಿತಾಂಶದಲ್ಲಿ ಏಕನಾಥ್ ಶಿಂಧೆ ಬಣದ ಶಿವಸೇನೆಗೆ ಬಿಜೆಪಿ ಬಂಡಾಯ ಅಭ್ಯರ್ಥಿ ಗೋಕುಲ್ ಗೀತೆ ಗೆಲುವಿನ ಮೂಲಕ ಶಾಕ್ ನೀಡಿದ್ದಾರೆ. ನಾಸಿಕ್ ಕ್ಷೇತ್ರದಿಂದ ಅವರು ಕಣಕ್ಕಿಳಿದ್ದರು. ಎದುರಾಳಿಯಾಗಿ ಶಿವಸೇನಾದಿಂದ ನರೇಂದ್ರ ದರಡೆ ಸ್ಪರ್ಧಿಸಿದ್ದರು. ಗೋಕುಲ್ ಗೀತೆ 357 ಮತ ಪಡೆದರೆ, ದರಡೆ ಅವರು 248 ಮತಗಳನ್ನು ಗಳಿಸಿದರು. ಈ ಮೂಲಕ ಗೀತೆ 109 ಮತಗಳಿಂದ ಗೆಲುವು ಸಾಧಿಸಿದರು. ಪ್ರತಿಪಕ್ಷಗಳಾದ ಉದ್ಧವ್ ಠಾಕ್ರೆ ಬಣದ ಶಿವಸೇನೆ, ಶರದ್ ಪವಾರ್ ಬಣದ ಎನ್‌ಸಿಪಿ ಒಂದೂ ಸ್ಥಾನ ಪಡೆಯದೆ ಆಘಾತ ಅನುಭವಿಸಿವೆ.

ಅಧ್ಯಕ್ಷ ಸ್ಥಾನದಿಂದ ದೀದಿ ಔಟ್

ಆರೂಪ್ ರಾಯ್‌ಗೆ ತೃಣಮೂಲ ಕಾಂಗ್ರೆಸ್ ಮುನ್ನಡೆಸುವ ನೇತೃತ್ವ

30 ಹೊಸ ಸದಸ್ಯರ ರಾಷ್ಟ್ರೀಯ ಕಾರ್ಯಕಾರಿ ಸಮಿತಿ ರಚನೆ

ಕೋಲ್ಕೊತಾ: ಟಿಎಂಸಿಯ ಬಂಡಾಯ ಸಂಸದರು ಹಾಗೂ ಶಾಸಕರ ಗುಂಪು ಸೋಮವಾರ ಸಭೆ ಸೇರಿ ಮಹತ್ವದ ನಿರ್ಣಯಗಳನ್ನು ತೆಗೆದುಕೊಂಡಿದೆ. ಒಂದೆಡೆ, ಬಿಜೆಪಿ ಸರಕಾರವು ತನ್ನ ಮೊದಲ ಬಜೆಟ್ ಮಂಡಿಸುತ್ತಿದ್ದರೆ, ಮತ್ತೊಂ ದೆಡೆ, ಟಿಎಂಸಿಯಲ್ಲಿ ಮಮತಾ ಬ್ಯಾನರ್ಜಿ ಅವರನ್ನು ಪಕ್ಷದ ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸಲು ಅವರದ್ದೇ ಪಕ್ಷದ ಮುಖಂಡರು ಮುಂದಾದರು.

ನ್ಯೂ ಟೌನ್ ಪ್ರದೇಶದ ಪಂಚತಾರಾ ಹೋಟೆಲ್‌ನಲ್ಲಿ ಬಂಡಾಯ ಗುಂಪಿನ ನಾಯಕ ರಿತಬ್ರತಾ ಬ್ಯಾನರ್ಜಿ ನೇತೃತ್ವದಲ್ಲಿ ಸಭೆ ಸೇರಿದ 500 ಮಂದಿ ಟಿಎಂಸಿ ಮುಖಂಡರು (ಶಾಸಕರು, ಜಿಲ್ಲಾಧ್ಯಕ್ಷರು, ಪಾಲಿಕೆ ಸದಸ್ಯರು) ಹೊಸ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯನ್ನು ರಚಿಸಿದರು. ಬಳಿಕ ತಮ್ಮ ನೇತೃತ್ವದ ಬಂಡಾಯ ಪಡೆಯೇ 'ನೈಜ ಟಿಎಂಸಿ' ಎಂಬ ನಿರ್ಣಯ ಕೈಗೊಂಡರು. ಅದನ್ನು ಲಿಖಿತವಾಗಿ ಅಂಗೀಕರಿಸಿ, ಚುನಾವಣಾ ಆಯೋಗಕ್ಕೆ ಸಲ್ಲಿಸುವ ಸಿದ್ಧತೆ ನಡೆಸಿದರು.

ಬಳಿಕ ಸಮಿತಿಯು ಟಿಎಂಸಿ ಅಧ್ಯಕ್ಷ ಸ್ಥಾನದಿಂದ ಮಮತಾ ಬ್ಯಾನರ್ಜಿ ಅವರನ್ನು ಕಿತ್ತೊಗೆದು, ಆ ಸ್ಥಾನಕ್ಕೆ ಶಾಸಕ ಆರುಪ್ ರಾಯ್ ಅವರನ್ನು ಧ್ವನಿಮತದ ಮೂಲಕ ಆಯ್ಕೆ ಮಾಡಿತು. ಒಂದು ಕಾಲದಲ್ಲಿ ಮಮತಾ ಆಪ್ತರಾಗಿದ್ದ ಫಿರ್ಹಾದ್ ಹಕೀಂ, ಆರೂಪ್ ಬಿಸ್ವಾಸ್, ರತಿನ್ ಘೋಷ್, ಸಬೀನಾ ಯಾಸ್ಮಿನ್ ಅವರನ್ನು ಟಿಎಂಸಿಯ ಹೊಸ ಉಪಾಧ್ಯಕ್ಷರಾಗಿ ಆಯ್ಕೆ ಮಾಡಲಾಯಿತು.

ಬಂಡಾಯ ಪಡೆಯ ನಾಯಕ ರಿತಬ್ರತಾ ಬ್ಯಾನರ್ಜಿ, ಜಾವೇದ್ ಖಾನ್ ಹಾಗೂ ಸಂದೀಪನ್ ಸಾಹಾ ಅವರನ್ನು ಪ್ರಧಾನ ಕಾರ್ಯದರ್ಶಿಗಳಾಗಿ ನೇಮಿಸಲಾಯಿತು. ಅಖ್ರುಜ್ಜಾಮನ್ ಅನ್ಸಾರಿ ಅವರು ಖಜಾಂಚಿಯಾಗಿ ನೇಮಕಗೊಂಡರು.

ಒಂದು ಮಮತಾ ಬ್ಯಾನರ್ಜಿ ಅವರು ತಮ್ಮೊಂದಿಗೆ ಸೇರಲು ಬಯಸಿದರೆ ಅವರಿಗೆ ವಿಶೇಷ ಸಲಹೆಗಾರರು ಎಂಬ ಸ್ಥಾನವನ್ನು ನೀಡುವುದಾಗಿ ಸಮಿತಿಯು ನಿರ್ಣಯ ಕೈಗೊಂಡಿತು.

ಅನಿಲ ಸ್ಥಾವರ ಸ್ಫೋಟ: 13 ಬಲಿ

ತಾಂತ್ರಿಕ ಸಮಸ್ಯೆಯಿಂದ ದುರಂತ ಎಂದ ಪೊಲೀಸರು

ದೋಹಾ: ಕತಾರ್‌ನ ರಾಸ್ ಲಫಾನ್ ದ್ರವೀಕೃತ ನೈಸರ್ಗಿಕ ಅನಿಲ (ಎಲ್‌ಎನ್‌ಜಿ) ಸ್ಥಾವರದಲ್ಲಿ ಸಂಭವಿಸಿರುವ ಸ್ಫೋಟದಲ್ಲಿ ಹಲವು ಭಾರತೀಯರು ಸೇರಿ 13 ಕಾರ್ಮಿಕರು ದುರ್ಮರಣಕ್ಕೀಡಾಗಿದ್ದಾರೆ. ದುರ್ಘಟನೆಯಲ್ಲಿ 66 ಸಿಬ್ಬಂದಿ ಗಾಯಗೊಂಡಿದ್ದಾರೆ.

ರಾಸ್ ಲಫಾನ್ ಎಲ್‌ಎನ್‌ಜಿ ಘಟಕದಲ್ಲಿ ಅವಘಡ

ಬರ್ಜನ್ ಅನಿಲ ಪೂರೈಕೆ ಘಟಕದಲ್ಲಿ ಉಂಟಾದ ತಾಂತ್ರಿಕ ಸಮಸ್ಯೆಯಿಂದ ಸ್ಫೋಟ ಸಂಭವಿಸಿದೆ. ಸ್ಫೋಟದ ತೀವ್ರತೆಗೆ ಸಮೀಪದಲ್ಲಿದ್ದ ವಸತಿ ಪ್ರದೇಶದ ಮನೆಗಳ ಕಿಟಕಿ ಗಾಜುಗಳು ಪುಡಿಪುಡಿಯಾಗಿವೆ.

ಪಶ್ಚಿಮ ಏಷ್ಯಾ ಸಂಘರ್ಷದ ಸುಳಿಯಲ್ಲಿ ಇರಾನ್ ಕ್ಷಿಪಣಿ, ಡ್ರೋನ್ ದಾಳಿಗೆ ಸಿಲುಕಿ ಜರ್ಜರಿತಗೊಂಡಿದ್ದ ರಾಸ್ ಲಫಾನ್ ಎಲ್‌ಪಿಜಿ ಸ್ಥಾವರ, ಉತ್ಪಾದನಾ ಕಾರ್ಯಾಚರಣೆಯನ್ನು ನಿಧಾನವಾಗಿ ಆರಂಭಿಸಿತ್ತು. ಸಂಘರ್ಷದ ವೇಳೆ ಸ್ಥಗಿತಗೊಂಡಿದ್ದ ಘಟಕಗಳನ್ನು ಪೂರ್ಣ ಪ್ರಮಾಣದಲ್ಲಿ ಪುನರ್ ಆರಂಭಿಸುವ ಪ್ರಯತ್ನ ನಡೆಯುತ್ತಿದ್ದ ವೇಳೆ ಸ್ಫೋಟ ಸಂಭವಿಸಿದೆ. ''ಸ್ಫೋಟದಿಂದ ಅನಿಲ ಉತ್ಪಾದನಾ ಸ್ಥಾವರಕ್ಕೆ ಯಾವುದೇ ರೀತಿಯಲ್ಲಿ ಹಾನಿಯಾಗಿಲ್ಲ, ಉತ್ಪಾದನಾ ಸಾಮರ್ಥ್ಯದ ಮೇಲೂ ಯಾವುದೇ ಪರಿಣಾಮ ಬೀರಿಲ್ಲ, ಪರಿಸರ ವ್ಯವಸ್ಥೆಗೂ ಯಾವುದೇ ಅಪಾಯ ಉಂಟಾಗಿಲ್ಲ,'' ಎಂದು ಕತಾರ್ ಇಂಧನ ಸಚಿವಾಲಯ ಮಾಹಿತಿ ನೀಡಿದೆ.

ರಾಸ್ ಲಫಾನ್ ಎಲ್‌ಎನ್‌ಜಿ ಘಟಕ ವಾರ್ಷಿಕವಾಗಿ 77 ದಶಲಕ್ಷ ಮೆಟ್ರಿಕ್ ಟನ್ ಅನಿಲ ಉತ್ಪಾದನೆ ಮಾಡುತ್ತದೆ. ಜಾಗತಿಕ ಪೂರೈಕೆಯ ಶೇ.20ರಷ್ಟು ಎಲ್‌ಪಿಜಿ ಉತ್ಪಾದಿಸಲಾಗುತ್ತಿದೆ. ಗಲ್ಫ್ ರಾಷ್ಟ್ರಗಳಲ್ಲೇ ಭಾರತ, ಚೀನಾ, ದಕ್ಷಿಣ ಏಷ್ಯಾ ದೇಶಗಳು ಸೇರಿದಂತೆ ಯುರೋಪ್‌ನ ಹಲವು ರಾಷ್ಟ್ರಗಳಿಗೆ ರಫ್ತು ಮಾಡಲಾಗುತ್ತಿದೆ.

ಪಶ್ಚಿಮ ಬಂಗಾಳ ಬಿಜೆಪಿ ಸರಕಾರದ ಮೊದಲ ಬಜೆಟ್

ಕೋಲ್ಕೊತಾ: ಸುವೇಂದು ಅಧಿಕಾರಿ ನೇತೃತ್ವದ ಬಿಜೆಪಿ ಸರಕಾರ ಪಶ್ಚಿಮ ಬಂಗಾಳದಲ್ಲಿ ಮೊದಲ ಬಜೆಟ್ ಮಂಡನೆಯಾಗಿದೆ. ಪದವೀಧರ ನಿರುದ್ಯೋಗಿಗಳಿಗೆ ಮಾಸಿಕ ಹಣ, ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ, ಯುವತಿಯರ ವಿದ್ಯಾಭ್ಯಾಸಕ್ಕಾಗಿ 50 ಸಾವಿರ ರೂ.ಗಳ ಸಹಾಯಧನ ಘೋಷಣೆ ಮಾಡಿರುವುದು ಪಶ್ಚಿಮ ಬಂಗಾಳದ ಆಯವ್ಯಯದ ಮುಖ್ಯಾಂಶವಾಗಿದೆ. ಮಂಗಳವಾರ ಮಂಡಿಸಿದ ಬಜೆಟ್‌ನಲ್ಲಿ ಪದವೀಧರ ನಿರುದ್ಯೋಗಿ ಯುವಕರಿಗೆ ಮಾಸಿಕ 3 ಸಾವಿರ ರೂ. ನೀಡುವುದಾಗಿ ಘೋಷಿಸಿದ್ದಾರೆ. ಹಣಕಾಸು ಸಚಿವ ಸ್ವಪನ್ ದಾಸ್‌ಗುಪ್ತಾ ಮಂಡಿಸಿದ ಆಯವ್ಯಯದಲ್ಲಿ 'ಭರವಸೆ ಯೋಜನೆ'ಯಲ್ಲಿ ಈ ಗ್ಯಾರಂಟಿಗಳನ್ನು ನೀಡಿದ್ದಾರೆ. ಇನ್ನು ಪದವೀಧರರಲ್ಲದ ಯುವಕರಿಗೆ ಮಾಸಿಕ 2 ಸಾವಿರ ರೂ, ನೀಡುವುದಾಗಿ ತಿಳಿಸಿದ್ದಾರೆ. ಮಹಿಳೆಯರ ಉಚಿತ ಪ್ರಯಾಣಕ್ಕಾಗಿ 550 ಕೋಟಿ ರೂ. ಅನುದಾನ ಒದಗಿಸಲಾಗಿದೆ. ಅನ್ನಪೂರ್ಣ ಯೋಜನೆಯಡಿಯಲ್ಲಿ ಮಹಿಳೆಯರ ಆರ್ಥಿಕ ಸ್ವಾತಂತ್ರ್ಯ ಬೆಂಬಲಿಸಲು 36 ಸಾವಿರ ಕೋಟಿ ರೂ.ಗಳನ್ನು ಮೀಸಲಿಡಲಾಗಿದೆ.

ಶಿಂಧೆ ಬಣಕ್ಕೆ ಉದ್ಧವ್ ಸಂಸದರು ಜಂಪ್

ಆಪರೇಷನ್ ಟೈಗರ್ ಯಶಸ್ವಿ | ಶಿವಸೇನೆ ಮತ್ತೊಮ್ಮೆ ವಿಭಜನೆ

ಮುಂಬಯಿ: ಮಹಾರಾಷ್ಟ್ರದಲ್ಲಿ ಶಿವಸೇನೆ (ಉದ್ಧವ್ ಬಣ) ಮತ್ತೊಮ್ಮೆ ವಿಭಜನೆಗೊಂಡಿದೆ. ಪಕ್ಷದ ನಾಯಕತ್ವದ ವಿರುದ್ಧ ಬಂಡಾಯ ಸಾರಿದ್ದ ಆರು ಸಂಸದರು ಸೋಮವಾರ ಡಿಸಿಎಂ ಏಕನಾಥ್ ಶಿಂಧೆ ನೇತೃತ್ವದ ಶಿವಸೇನೆಗೆ ಸೇರ್ಪಡೆಯಾಗಿದ್ದಾರೆ.

''ಆಪರೇಷನ್ ಟೈಗರ್' ಯಶಸ್ವಿಯಾಗಿದೆ. ಅಗತ್ಯವಿರುವ ಎಲ್ಲಾ ಕಾನೂನು ಪ್ರಕ್ರಿಯೆ ಪೂರ್ಣಗೊಳಿಸಲಾಗಿದೆ. ಆರು ಸಂಸದರು ನಮ್ಮ ಬಣ ಸೇರಿದ್ದಾರೆ,'' ಎಂದು ಏಕನಾಥ್ ಶಿಂಧೆ ತಿಳಿಸಿದರು. ಮುಂಬಯಿನ ವೈ.ಬಿ. ಚವ್ಹಾಣ್ ಕೇಂದ್ರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಉದ್ಧವ್ ಬಣದ ಬಂಡಾಯ ಸಂಸದರಾದ ಸಂಜಯ್ ಜಾಧವ್, ಭೌಸಾಹೇಬ್ ವಾಕ್‌ಚೌರೆ, ಸಂಜಯ್ ದೇಶಮುಖ್, ನಾಗೇಶ್ ಪಾಟೀಲ್ ಆಸ್ತೀಕರ್, ಓಂರಾಜೆ ನಿಂಬಾಳ್ಕರ್, ಸಂಜಯ್ ದೀನಾ ಪಾಟೀಲ್ ಅವರು ಶಿಂಧೆ ನೇತೃತ್ವದ ಶಿವಸೇನೆ ಸೇರ್ಪಡೆಯಾದರು. 9 ಸಂಸದರನ್ನು ಹೊಂದಿದ್ದ ಉದ್ಧವ್ ಬಣದ ಸಂಖ್ಯಾ ಬಲ ಮೂರಕ್ಕೆ ಕುಸಿದಿದೆ. 7 ಸಂಸದರಿದ್ದ ಶಿಂಧೆ ಬಣದ ಬಲ 13ಕ್ಕೆ ಏರಿಕೆಯಾಗಿದೆ.

ಬಾಳಾ ಸಾಹೇಬ್ ಠಾಕ್ರೆ ಸಿದ್ಧಾಂತ ಗಾಳಿಗೆ ತೂರಿ ಅಧಿಕಾರಕ್ಕಾಗಿ ಕಾಂಗ್ರೆಸ್ ಜತೆ ಮೈತ್ರಿ ಮಾಡಿಕೊಂಡ ಉದ್ಧವ್ ಠಾಕ್ರೆ ನಿರ್ಧಾರ ಶಿವಸೇವೆ (ಉದ್ಧವ್ ಬಣ) ಅವನತಿಗೆ ಕಾರಣವಾಗಿದೆ.
- ದೇವೇಂದ್ರ ಫಡ್ನವಿಸ್ ಮಹಾರಾಷ್ಟ್ರ ಸಿಎಂ

''ಉದ್ಧವ್ ಬಣದಿಂದ ದೂರವಾಗಿರುವ ಆರು ಸಂಸದರು ನಮ್ಮ ಬಣದಲ್ಲಿ ಗುರುತಿಸಿಕೊಳ್ಳಲು ನಿರ್ಧರಿಸಿದ್ದಾರೆ. ನಮ್ಮ ಬಣ ಸೇರುವ ಕುರಿತು ಲೋಕಸಭೆ ಸ್ಪೀಕರ್ ಓಂ ಬಿರ್ಲಾಗೆ ಮನವಿ ಪತ್ರ ಸಲ್ಲಿಸಿದ್ದಾರೆ. ಸ್ಪೀಕರ್ ಕಚೇರಿ ಔಪಚಾರಿಕ ಘೋಷಣೆ ಮಾಡಬೇಕಿದೆ,'' ಎಂದು ಏಕನಾಥ್ ಶಿಂಧೆ ತಿಳಿಸಿದರು.

146 ವರ್ಷಗಳಲ್ಲೇ ಒಣಒಣ ಜೂನ್!

ಹೊಸದಿಲ್ಲಿ: ಈ ಬಾರಿ ಜೂನ್‌ನಲ್ಲಿ ಮುಂಗಾರು ಮಳೆಯ ಪ್ರಮಾಣವು ನಿರೀಕ್ಷಿತ ಮಟ್ಟದಲ್ಲಿ ಸುರಿದಿಲ್ಲ. ಭಾರತೀಯ ಹವಾಮಾನ ಇಲಾಖೆ ಪ್ರಕಾರ, ಜೂನ್ 4 ರಿಂದ ಜೂನ್ 22ರ ನಡುವೆ ಕೇವಲ 53.1 ಮಿ.ಮೀ ಮಾತ್ರ ಮಳೆಯಾಗಿದೆ. ಇದು ಕಳೆದ 146 ವರ್ಷಗಳಲ್ಲೇ ಅತ್ಯಂತ ಕನಿಷ್ಠ ಪ್ರಮಾಣವಾಗಿದ್ದು, ಅತ್ಯಂತ ಶುಷ್ಕ ಜೂನ್ ತಿಂಗಳನ್ನು ದೇಶದ ಜನರು ಎದುರಿಸಿದ್ದಾರೆ. ಅಂದಾಜು ಶೇ.46ರಷ್ಟು ಮಳೆಯ ಪ್ರಮಾಣದ ಕೊರತೆ ಉಂಟಾಗಿದೆ. ವಾಡಿಕೆಯಂತೆ ಜೂನ್‌ನಲ್ಲಿ 97.6 ಎಂಎಂ ಮಳೆ ಆಗುತ್ತಿತ್ತು.

ಜೂನ್‌ನಲ್ಲಿ ಮುಂಗಾರು ಮಳೆ ಕೈಕೊಟ್ಟಿದ್ದರಿಂದ ಬೇಸಿಗೆಯ ಶಾಖವು ಮುಂದುವರಿದಿದ್ದು, ಮಹಾರಾಷ್ಟ್ರದಲ್ಲಿ ಗರಿಷ್ಠ ಪ್ರಮಾಣದಲ್ಲಿ ಮುಂಗಾರು ಕೊರತೆ ಎದುರಾಗಿದೆ. ಅಲ್ಲಿ ಶೇ. 85ರಷ್ಟು ಮುಂಗಾರು ಕೊರತೆಯುಂಟಾಗಿದೆ. ಗುಜರಾತ್‌ನಲ್ಲಿ ಶೇ.84ರಷ್ಟು, ಛತ್ತೀಸ್‌ಗಢದಲ್ಲಿ ಶೇ.71ರಷ್ಟು ಹಾಗೂ ಮಹಾರಾಷ್ಟ್ರದಲ್ಲಿ ಶೇ.58ರಷ್ಟು ಮುಂಗಾರು ಕೊರತೆಯಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ದೇಶದಲ್ಲೇ ಅತಿಹೆಚ್ಚು ಮಳೆ ಬೀಳುವ ಮೇಘಾಲಯದ ಕೇಂದ್ರ ಭಾಗದಲ್ಲೂ ಕೂಡ ಮುಂಗಾರು ಕೊರತೆ ಉಂಟಾಗಿದೆ. ಶೇ.81ರಷ್ಟು ಮಳೆಯ ಕೊರತೆಯು ರಾಜ್ಯವನ್ನು ಬಾಧಿಸಿದೆ ಎಂದು ಇಲಾಖೆ ತಿಳಿಸಿದೆ.

ನೀರಿಗಾಗಿ ಯುದ್ಧಕ್ಕೆ ಸಿದ್ಧ ಎಂದ ಪಾಕ್

ಕರಾಚಿ: ಪಾಕಿಸ್ತಾನದಲ್ಲಿ ದಿನದಿಂದ ದಿನಕ್ಕೆ ನೀರಿನ ಬಿಕ್ಕಟ್ಟು ತೀವ್ರಗೊಳ್ಳುತ್ತಿದೆ. ಬರಗಾಲದ ಆತಂಕದಲ್ಲಿರುವ ನೆರೆ ರಾಷ್ಟ್ರವು, ಭಾರತವು ಸಿಂಧೂ ನದಿ ನೀರಿನ ಹರಿವು ನಿಲ್ಲಿಸಿರುವುದರಿಂದ ಮತ್ತಷ್ಟು ಹತಾಶಗೊಂಡಿದೆ. ''ಸಿಂಧೂ ನದಿ ನೀರು ಹಂಚಿಕೆ ಒಪ್ಪಂದಕ್ಕೆ ಸಂಬಂಧಿಸಿದಂತೆ ನಮ್ಮ ದೇಶದ ಜಲ ಭದ್ರತೆಗೆ ಧಕ್ಕೆಯಾದರೆ ಭಾರತದ ವಿರುದ್ಧ ಯುದ್ಧ ಸಾರಲು ಹಿಂಜರಿಯುವುದಿಲ್ಲ,'' ಎಂದು ಪಾಕಿಸ್ತಾನದ ರಕ್ಷಣಾ ಸಚಿವ ಖ್ವಾಜಾ ಆಸಿಫ್ ಅವರು ಭಾರತದ ವಿರುದ್ಧ ಗುಡುಗಿದ್ದಾರೆ.



ಆಸಿಫ್ ಬೆದರಿಕೆ ಹಾಕಿದ್ದಾರೆ. ಖಾಸಗಿ ವಾಹಿನಿಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಮಾತನಾಡಿದ ಖ್ವಾಜಾ ಆಸಿಫ್, ''ನೀರು ಎನ್ನುವುದು ನಮ್ಮ ರಾಷ್ಟ್ರೀಯ ಭದ್ರತೆಯ ಪ್ರಮುಖ ಭಾಗವಾಗಿದೆ. ಯಾವಾಗ ನಮ್ಮ ರಾಷ್ಟ್ರೀಯ ಭದ್ರತೆಗೆ ಆತಂಕ ಎದುರಾಗುತ್ತದೆಯೋ, ಆ ಕ್ಷಣದಲ್ಲೇ ನಾವು ಭಾರತದ ವಿರುದ್ಧ ಯುದ್ಧ ಸಾರಲು ಸಿದ್ಧರಾಗುತ್ತೇವೆ. ಭಾರತವು ಅತ್ಯಂತ ವೇಗವಾಗಿ ಪಾಕಿಸ್ತಾನಕ್ಕೆ ಹರಿಯುವ ನೀರನ್ನು ತಡೆಯಲು ಮುಂದಾಗುತ್ತಿದೆ ಎಂಬ ಪ್ರಬಲ ಪುರಾವೆಗಳು ಸಿಕ್ಕರೆ ಖಂಡಿತವಾಗಿಯೂ ನಾವು ಯುದ್ಧದ ಹಾದಿ ಹಿಡಿಯಲಿದ್ದೇವೆ,'' ಎಂದು ಗುಡುಗಿದ್ದಾರೆ. ಭಾರತವು ನೀರನ್ನೇ ಅಸ್ತ್ರವನ್ನಾಗಿ ಬಳಸಿಕೊಳ್ಳುತ್ತಿದೆ ಮತ್ತು ಚೆನಾಬ್ ನದಿಯ ನೀರಿನ ಹರಿವನ್ನು ನಿಯಂತ್ರಿಸುತ್ತಿದೆ ಎಂದು ಅವರು ಆರೋಪಿಸಿದ್ದಾರೆ.

ಬ್ರಿಟನ್ ಪ್ರಧಾನಿ ಪದತ್ಯಾಗ

ಕುಸಿದ ಜನಪ್ರಿಯತೆ, ಪಕ್ಷದೊಳಗಿನ ಒತ್ತಡ ರಾಜೀನಾಮೆ ನಿರ್ಧಾರಕ್ಕೆ ಕಾರಣ

ಲಂಡನ್: ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಘೋಷಣೆ ಮಾಡಿದ್ದಾರೆ. ಕುಸಿದ ಜನಪ್ರಿಯತೆ, ಪಕ್ಷದ ಒಳಗಡೆ ಹೆಚ್ಚಿದ ಆಂತರಿಕ ಒತ್ತಡದಿಂದ ಲೇಬರ್ ಪಕ್ಷದ ನಾಯಕತ್ವ ಹುದ್ದೆಯಿಂದ ಕೆಳಗಿಳಿಯುವುದಾಗಿ ಸೋಮವಾರ ಪ್ರಕಟಿಸಿದ್ದಾರೆ.

ಕಳೆದ ಎರಡು ವರ್ಷಗಳಿಂದ ಬ್ರಿಟನ್ ಪ್ರಧಾನಿಯಾಗಿ ಆಡಳಿತ ನಡೆಸುತ್ತಿದ್ದ 63 ವರ್ಷದ ಕೀರ್ ಸ್ಟಾರ್ಮರ್, ''ಲೇಬರ್ ಪಕ್ಷ ಮುಂದಿನ ಪ್ರಧಾನಿಯನ್ನು ಆಯ್ಕೆ ಮಾಡುವ ತನಕ ಅಧಿಕಾರದಲ್ಲಿ ಮುಂದುವರಿಯುವೆ. ಸುಗಮ ಅಧಿಕಾರ ಹಸ್ತಾಂತರಕ್ಕೆ ಅಗತ್ಯ ಕ್ರಮ ಕೈಗೊಳ್ಳುವೆ. ಹೊಸ ಸರಕಾರಕ್ಕೆ ಸಂಪೂರ್ಣ ಬೆಂಬಲ ನೀಡುವೆ,'' ಎಂದು ತಿಳಿಸಿದರು.

ಪ್ರಧಾನಿ ಕಾರ್ಯಾಲಯ ಹಾಗೂ ಅಧಿಕೃತ ನಿವಾಸವಾದ ಲಂಡನ್‌ನ 'ನಂ.10, ಡೌನಿಂಗ್ ಸ್ಟ್ರೀಟ್'ನಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಕೀರ್ ಸ್ಟಾರ್ಮರ್, ''ನನ್ನ ದೇಶವನ್ನು ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯಲು ಪ್ರತಿ ಹಂತದಲ್ಲೂ ಕಠಿಣ ನಿರ್ಧಾರ ಕೈಗೊಂಡಿರುವೆ. ನಾನು ತೆಗೆದುಕೊಂಡ ಪ್ರತಿಯೊಂದೂ ತೀರ್ಮಾನವೂ ದೇಶ ಮೊದಲು ಎಂಬ ನಿಲುವು ಹೊಂದಿತ್ತು,'' ಎಂದು ತಿಳಿಸಿದರು.

ಇದಕ್ಕೂ ಮೊದಲು ಬ್ರಿಟನ್ ದೊರೆ 3ನೇ ಚಾರ್ಲ್ಸ್ ಭೇಟಿಯಾಗಿ ರಾಜೀನಾಮೆ ನೀಡುತ್ತಿರುವ ವಿಷಯ ಕುರಿತು ಮಾಹಿತಿ ನೀಡಿದರು.

ಬರ್ನ್‌ಹ್ಯಾಮ್ ಹೊಸ ಪ್ರಧಾನಿ?



ಲೇಬರ್ ಪಕ್ಷದ ನಾಯಕನ ಆಯ್ಕೆ ಪ್ರಕ್ರಿಯೆ ಜುಲೈ 9ರಿಂದ ಆರಂಭವಾಗಲಿದೆ. ಸೆಪ್ಟೆಂಬರ್ ತಿಂಗಳಲ್ಲಿ ಹೊಸ ಪ್ರಧಾನಿಯ ಆಯ್ಕೆ ನಡೆಯಲಿದೆ. ಸೆಪ್ಟೆಂಬರ್‌ನಲ್ಲಿ ನಡೆಯಲಿರುವ ಸಂಸತ್ ಅಧಿವೇಶನಕ್ಕೂ ಮೊದಲು ಪ್ರಧಾನಿ ಆಯ್ಕೆ ಮಾಡಲಾಗುವುದು ಎಂದು ಲೇಬರ್ ಪಕ್ಷ ಮಾಹಿತಿ ನೀಡಿದೆ. ಕಳೆದ ತಿಂಗಳು ಲೇಬರ್ ಪಕ್ಷದ ನಾಯಕತ್ವ ಚುನಾವಣೆಯಲ್ಲಿ ಮ್ಯಾಂಚೆಸ್ಟರ್ ಮಾಜಿ ಮೇಯರ್ ಆ್ಯಂಡಿ ಬರ್ನ್‌ಹ್ಯಾಮ್ ಅವರು ಕೀರ್ ಸ್ಟಾರ್ಮರ್ ಅವರನ್ನು ಹಿಂದಿಕ್ಕಿದ್ದರು. ಸಂಸತ್ ಸದಸ್ಯ ಸ್ಥಾನಕ್ಕೆ ನಡೆದ ವಿಶೇಷ ಚುನಾವಣೆಯಲ್ಲಿ ಬರ್ನ್‌ಹ್ಯಾಮ್ ಜಯ ಗಳಿಸಿದ ಬಳಿಕ ಸ್ಟಾರ್ಮರ್ ಪದತ್ಯಾಗಕ್ಕೆ ಒತ್ತಡ ಹೆಚ್ಚಾಗಿತ್ತು. ಬರ್ನ್‌ಹ್ಯಾಮ್ ಅವರು ಲೇಬರ್ ಪಕ್ಷದ ನಾಯಕರಾಗಿ, ಹೊಸ ಪ್ರಧಾನಿಯಾಗಿ ನೇಮಕವಾಗುವ ಸಂಭವವಿದೆ.

10 ವರ್ಷ, ಆರು ಪ್ರಧಾನಿಗಳು

ಕೀರ್ ಸ್ಟಾರ್ಮರ್ ರಾಜೀನಾಮೆಯೊಂದಿಗೆ ಕಳೆದ 10 ವರ್ಷದಲ್ಲಿ ಬ್ರಿಟನ್‌ನಲ್ಲಿ 6 ಪ್ರಧಾನಿಗಳು ಅವಧಿಗೂ ಮೊದಲೇ ರಾಜೀನಾಮೆ ನೀಡಿದ್ದಾರೆ. ಲೇಬರ್ ಪಕ್ಷಕ್ಕೂ ಮೊದಲು ಅಧಿಕಾರದಲ್ಲಿದ್ದ ಕನ್ಸರ್ವೇಟಿವ್ ಪಕ್ಷ 10 ವರ್ಷದ ಆಡಳಿತದಲ್ಲಿ ಐವರು ಪ್ರಧಾನಿ ಕಂಡಿತು. 2024ರಲ್ಲಿ ಕನ್ಸರ್ವೇಟಿವ್ ಪಕ್ಷವನ್ನು ಸೋಲಿಸಿ ಅಧಿಕಾರಕ್ಕೆ ಬಂದ ಲೇಬರ್ ಪಕ್ಷ ಎರಡು ವರ್ಷ ಮುಗಿಯುವಷ್ಟರಲ್ಲಿ ಮೊದಲ ಪ್ರಧಾನಿ ಪದತ್ಯಾಗ ಮಾಡಿದ್ದಾರೆ.

1. **ಡೇವಿಡ್ ಕ್ಯಾಮರೂನ್:** ಬ್ರೆಕ್ಸಿಟ್ ಪರ ಜನಾಭಿಪ್ರಾಯ ಮೂಡಿಸುವಲ್ಲಿ ವಿಫಲವಾದ ಕಾರಣ 2016ರಲ್ಲಿ ರಾಜೀನಾಮೆ ನೀಡಿದರು.
2. **ಥೆರೆಸಾ ಮೆ:** ಕ್ಯಾಮರೂನ್ ಉತ್ತರಾಧಿಕಾರಿಯಾಗಿ ಬಂದ ಥೆರೆಸಾ ಮೆ ಅವರ ಮೂರು ವರ್ಷದ ಆಡಳಿತ 2019ರಲ್ಲಿ ಕೊನೆಗೊಂಡಿತು.
3. **ಬೋರಿಸ್ ಜಾನ್ಸನ್:** 2019ರಲ್ಲಿ ಪ್ರಧಾನಿಯಾದ ಬೋರಿಸ್ ಜಾನ್ಸನ್ ಅವರು ಅವಧಿಗೂ ಮೊದಲೇ 2022ರಲ್ಲಿ ಪದತ್ಯಾಗ ಮಾಡಿದರು.
4. **ಲಿಜ್ ಟ್ರಸ್:** ಬೋರಿಸ್ ಜಾನ್ಸನ್ ಸ್ಥಾನದಲ್ಲಿ 2022ರಲ್ಲಿ ಪ್ರಧಾನಿ ಹುದ್ದೆಗೇರಿದ ಲಿಜ್ ಟ್ರಸ್ ಆಡಳಿತ ಅವಧಿ 50 ದಿನಗಳಿಗೆ ಅಂತ್ಯವಾಯಿತು.
5. **ರಿಷಿ ಸುನಕ್:** ಭಾರತೀಯ ಮೂಲದ ರಿಷಿ ಸುನಕ್ ಅವರು 2022ರ ಅಕ್ಟೋಬರ್‌ನಿಂದ 2024ರ ಜುಲೈ 5ರವರೆಗೆ ಪ್ರಧಾನಿ ಸ್ಥಾನದಲ್ಲಿದ್ದರು.
6. **ಕೀರ್ ಸ್ಟಾರ್ಮರ್:** 2024ರಲ್ಲಿ ಲೇಬರ್ ಪಕ್ಷವನ್ನು ಅಧಿಕಾರಕ್ಕೆ ತಂದಿದ್ದ ಕೀರ್ ಸ್ಟಾರ್ಮರ್ 2024ರ ಜುಲೈನಲ್ಲಿ ಪ್ರಧಾನಿ ಹುದ್ದೆ ಅಲಂಕರಿಸಿದ್ದರು. 2026ರ ಜೂನ್ 22ರಂದು ರಾಜೀನಾಮೆ ಪ್ರಕಟಿಸಿದ್ದಾರೆ.

ಲಯಕ್ಕೆ ಮರಳಿದ ಷೇರುಪೇಟೆ

ಮುಂಬಯಿ: 60 ದಿನಗಳಲ್ಲಿ ಶಾಂತಿ ಒಪ್ಪಂದದ ಅಂಶಗಳನ್ನು ಹಂತಹಂತವಾಗಿ ಜಾರಿಗೊಳಿಸಲು ಅಮೆರಿಕ ಹಾಗೂ ಇರಾನ್ ಒಪ್ಪಿಗೆ ಸೂಚಿಸಿದ ಬೆನ್ನಲ್ಲೇ ಸೋಮವಾರ ದೇಶದ ಷೇರು ಮಾರುಕಟ್ಟೆಯಲ್ಲಿ ಲವಲವಿಕೆ ಕಂಡುಬಂದಿದೆ. ಮುಂಬಯಿ ಷೇರುಪೇಟೆ ಸೂಚ್ಯಂಕ 'ಸೆನ್ಸೆಕ್ಸ್' 291 ಅಂಕ ಏರಿಕೆ ಕಾಣುವ ಮೂಲಕ 77,094 ಅಂಕಗಳೊಂದಿಗೆ ದಿನದ ವಹಿವಾಟು ಮುಗಿಸಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ 'ನಿಫ್ಟಿ' ಕೂಡ 89 ಅಂಕಗಳ ಏರಿಕೆ ಕಂಡು 24,102 ಪಾಯಿಂಟ್‌ಗಳಿಗೆ ವಹಿವಾಟು ಅಂತ್ಯಗೊಳಿಸಿತು.

ಜಾಗತಿಕ ಮಾರುಕಟ್ಟೆಯಲ್ಲಿ ತೈಲ ಬೆಲೆ ಇಳಿಕೆ, ಒಪ್ಪಂದದ ನಂತರದ ಸಕಾರಾತ್ಮಕ ಬೆಳವಣಿಗೆಗಳಿಂದಾಗಿ ಮಾರುಕಟ್ಟೆಯು ಸಕಾರಾತ್ಮಕ ಬೆಳವಣಿಗೆ ಕಂಡಿದೆ ಎಂದೇ ವಿಶ್ಲೇಷಿಸಲಾಗಿದೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಹೆಚ್ಚಿನ ಹೂಡಿಕೆ ಮಾಡುತ್ತಿರುವುದು ಕೂಡ ಒಳ್ಳೆಯ ಬೆಳವಣಿಗೆಯಾಗಿದೆ. ಶುಕ್ರವಾರದ ವಹಿವಾಟಿನಲ್ಲಿ ಷೇರುಗಳ ಮೌಲ್ಯದಲ್ಲಿ ಭಾರಿ ಕುಸಿತ ಉಂಟಾಗಿತ್ತು. ಇದರಿಂದಾಗಿ ಹೂಡಿಕೆದಾರರು ಆತಂಕಗೊಂಡಿದ್ದರು.

ಸೋಮವಾರದ ವಹಿವಾಟಿನಲ್ಲಿ ಟೆಕ್ ಮಹೀಂದ್ರಾ, ಸನ್ ಫಾರ್ಮಾ, ರಿಲಯನ್ಸ್ ಇಂಡಸ್ಟ್ರೀಸ್, ಇನ್ಫೋಸಿಸ್, ಭಾರತ್ ಎಲೆಕ್ಟ್ರಾನಿಕ್ಸ್ ಷೇರುಗಳ ಮೌಲ್ಯ ಏರಿಕೆಯಾಯಿತು. ಐಪಿಒಗೆ ಅರ್ಜಿ ಸಲ್ಲಿಸಿದ ಹಿನ್ನೆಲೆಯಲ್ಲಿ ರಿಲಯನ್ಸ್ ಇಂಡಸ್ಟ್ರೀಸ್ ಷೇರುಗಳ ಮೌಲ್ಯದಲ್ಲಿ ಶೇ.1.16ರಷ್ಟು ಏರಿಕೆಯಾಗಿದೆ.

ತೈಲ ಬೆಲೆ 80 ಡಾಲರ್‌ಗಿಂತ ಕಡಿಮೆ: ಜಾಗತಿಕ ಕಚ್ಚಾತೈಲದ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆಯು 80 ಡಾಲರ್‌ಗಿಂತ ಕಡಿಮೆಯಾಗಿರುವುದು ಕೂಡ ಒಳ್ಳೆಯ ಸಂಗತಿಯಾಗಿದೆ. ಒಂದು ಬ್ಯಾರೆಲ್ ಕಚ್ಚಾತೈಲದ ಬೆಲೆಯಲ್ಲಿ ಶೇ.1.66ರಷ್ಟು ಕುಸಿತವಾಗಿದ್ದು, ಬ್ಯಾರೆಲ್‌ಗೆ ಈಗ 79.23 ಡಾಲರ್ ಆಗಿದೆ.

ರೂಪಾಯಿ ಮೌಲ್ಯ ಕುಸಿತ: ಡಾಲರ್ ಎದುರು ರೂಪಾಯಿ ಮೌಲ್ಯವು 34 ಪೈಸೆ ಕುಸಿದಿದ್ದು, 94.67 ರೂ.ಗೆ ತಲುಪಿದೆ. ಶಾಂತಿ ಒಪ್ಪಂದದ ಬಳಿಕ ಡಾಲರ್ ಬಲಿಷ್ಠವಾಗುತ್ತಿರುವುದರಿಂದಾಗಿ ರೂಪಾಯಿಯ ಅಪಮೌಲ್ಯವಾಗುತ್ತಿದೆ ಎಂದು ಹೇಳಲಾಗುತ್ತಿದೆ.

ಚಿನ್ನದ ಬೆಲೆ ಏರಿಕೆ: ಬೆಂಗಳೂರಿನಲ್ಲಿ ಸೋಮವಾರ ಚಿನ್ನದ ಬೆಲೆಯಲ್ಲಿ ಏರಿಕೆಯಾಗಿದೆ. 24 ಕ್ಯಾರೆಟ್‌ನ 1 ಗ್ರಾಂ ಚಿನ್ನದ ದರದಲ್ಲಿ 43 ರೂ. ಜಾಸ್ತಿಯಾಗಿದ್ದು, 1 ಗ್ರಾಂ ಬೆಲೆ 14,651 ರೂ. ಆಗಿದೆ. ಇನ್ನು, 22 ಕ್ಯಾರೆಟ್‌ನ 1 ಗ್ರಾಂ ಚಿನ್ನದ ಧಾರಣೆಯಲ್ಲಿ 40 ರೂ. ಜಾಸ್ತಿಯಾಗಿದ್ದು, 13,430 ರೂ. ಆಗಿದೆ. ಬೆಳ್ಳಿಯ ಬೆಲೆಯಲ್ಲಿ ಯಾವುದೇ ಬದಲಾವಣೆ ಆಗಿಲ್ಲ, ಒಂದು ಕೆ.ಜಿ ಬೆಳ್ಳಿ ಧಾರಣೆಯು 2.5 ಲಕ್ಷ ರೂ. ಇದೆ.

ಜೂನ್ 23

ವಿಕ ಈ ದಿನ ವಿಶೇಷ

ಅಂತಾರಾಷ್ಟ್ರೀಯ ಒಲಿಂಪಿಕ್ ದಿನ

1894ರಲ್ಲಿ ಅಂತಾರಾಷ್ಟ್ರೀಯ ಒಲಿಂಪಿಕ್ ಸಮಿತಿ ಸ್ಥಾಪನೆ ಮತ್ತು ಆಧುನಿಕ ಒಲಿಂಪಿಕ್ ಕ್ರೀಡಾಕೂಟದ ಪುನರುಜ್ಜೀವನದ ಸ್ಮರಣಾರ್ಥವಾಗಿ ಪ್ರತಿ ಜೂನ್ 23ರಂದು ಅಂತಾರಾಷ್ಟ್ರೀಯ ಒಲಿಂಪಿಕ್ ದಿನವನ್ನು ಆಚರಿಸಲಾಗುತ್ತದೆ. ಜಾಗತಿಕ ಆಚರಣೆಯು ಕ್ರೀಡಾಕೂಟಗಳು ಮತ್ತು ಸಮುದಾಯ ಓಟಗಳ ಮೂಲಕ ದೈಹಿಕ ಚಟುವಟಿಕೆ ಮತ್ತು ಒಲಿಂಪಿಕ್ ಮೌಲ್ಯಗಳನ್ನು ಹಾಗೂ ಶ್ರೇಷ್ಠತೆ, ಸ್ನೇಹ ಮತ್ತು ಗೌರವವನ್ನು ಉತ್ತೇಜಿಸುತ್ತದೆ. ಮೊದಲ ಬಾರಿಗೆ 1948ರ ಜೂನ್ 23ರಂದು ಆಚರಿಸಲಾಯಿತು.

ಜನುಮ ದಿನ
ಹಂಸಲೇಖ

- ಗಂಗರಾಜು ಹೆಸರಿನ ಇವರು ಮುಂದೆ ಕನ್ನಡ ಸಿನಿಲೋಕದ ನಾದಬ್ರಹ್ಮ ಎಂದೇ ಹೆಸರು ಗಳಿಸಿದ 'ಹಂಸಲೇಖ'ರಾದರು. 1951ರ ಜೂನ್ 23ರಂದು ಮೈಸೂರಿನಲ್ಲಿ ಜನಿಸಿದರು. 1980ರಲ್ಲಿ ಬಿಡುಗಡೆಯಾದ 'ಪ್ರೇಮಲೋಕ' ಸಿನಿಮಾದಿಂದ ಹೆಚ್ಚು ಜನಪ್ರಿಯರಾದ ಇವರು, ಹಲವು ಸಿನಿಮಾಗಳಿಗೆ ಸಂಗೀತ ನೀಡಿ ಕನ್ನಡಿಗರ ಮನೆಮಾತಾಗಿದ್ದಾರೆ.

ರಿಲಯನ್ಸ್ ರೀಟೇಲ್‌ಗಳಲ್ಲಿ ಎಐ ಚಾಲಿತ ಸೇವೆ

ಮುಂಬಯಿ: ರಿಲಯನ್ಸ್ ರೀಟೇಲ್ ಬೆಳವಣಿಗೆಯ ಹೊಸ ಪರ್ವ ಪ್ರವೇಶಿಸಿದ್ದು, ತಂತ್ರಜ್ಞಾನ ಮತ್ತು ಕೃತಕ ಬುದ್ಧಿಮತ್ತೆ ನೆರವಿನಿಂದ ದೇಶಾದ್ಯಂತ ಉತ್ತಮವಾಗಿ ಸೇವೆ ಒದಗಿಸುವುದಕ್ಕೆ ಸಾಧ್ಯವಾಗುತ್ತಿದೆ ಎಂದು ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಅಧ್ಯಕ್ಷ ಮುಕೇಶ್ ಅಂಬಾನಿ ಹೇಳಿದರು.



ಆರ್‌ಐಎಲ್ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಅವರು, ''2006ನೇ ಇಸವಿಯಲ್ಲಿ ಹೈದರಾಬಾದ್‌ನಲ್ಲಿ 'ರಿಲಯನ್ಸ್ ಫ್ರೆಶ್'ನೊಂದಿಗೆ ಆರಂಭವಾದ ರಿಲಯನ್ಸ್ ರೀಟೇಲ್ ಪ್ರಯಾಣವು ಈಗ ಭಾರತದ ಅತಿದೊಡ್ಡ ರೀಟೇಲರ್ ಆಗಿ ಮುಂದುವರಿದಿದೆ. ಜಾಗತಿಕ ಟಾಪ್ 50 ರೀಟೇಲರ್‌ಗಳ ಪೈಕಿ ರಿಲಯನ್ಸ್ ರೀಟೇಲ್ ಒಂದಾಗಿದೆ. ಈಗ ಕಂಪನಿಯ ಮಳಿಗೆಗಳ ಸಂಖ್ಯೆ 20,000 ದಾಟಿದೆ. ಭಾರತೀಯ ಗ್ರಾಹಕರನ್ನು ಕಂಪನಿಯು ಆಳವಾಗಿ ಅರ್ಥ ಮಾಡಿಕೊಂಡಿದೆ. ರಿಲಯನ್ಸ್ ರೀಟೇಲ್ ತಂತ್ರಜ್ಞಾನ, ಎಐ ಹಾಗೂ ಗ್ರಾಹಕರ ದತ್ತಾಂಶವನ್ನು ಬಳಸಿಕೊಂಡು ವ್ಯವಹಾರವನ್ನು ಇನ್ನೂ ಹೆಚ್ಚು ದಕ್ಷವಾಗಿ ನಡೆಸಲಿದೆ. ಅಲ್ಲದೆ ಮತ್ತಷ್ಟು ಉತ್ತಮ ಉತ್ಪನ್ನ ಮತ್ತು ಸೇವೆಗಳನ್ನು ಭಾರತೀಯ ಕುಟುಂಬಗಳಿಗೆ ಒದಗಿಸಲಿದೆ,'' ಎಂದು ವಿವರಿಸಿದರು.

''ಇಂದಿನ ಗ್ರಾಹಕರು ಸಾಂಪ್ರದಾಯಿಕವಾಗಿ ಮಳಿಗೆಗಳಿಂದ ಖರೀದಿ ಮಾಡುವುದರಿಂದ ಸ್ಮಾರ್ಟ್‌ಫೋನ್‌ಗೆ ಬದಲಾಗಿದ್ದಾರೆ. ಆಯಾ ಸಮಯಕ್ಕೆ ಖರೀದಿ ಎಂಬ ನಿಲುವು ಹೊಂದಿದ್ದಾರೆ. ಸೀಮಿತ ಆಯ್ಕೆಯಿಂದ ವಿವಿಧ ವಿಭಾಗಗಳ ವಸ್ತುಗಳ ಖರೀದಿಗೆ ವ್ಯಾಪಕವಾಗಿ ವಿಸ್ತರಣೆ ಆಗಿದೆ. ಈ ಬದಲಾವಣೆಯ ಮುಂಚೂಣಿಯಲ್ಲಿ ರಿಲಯನ್ಸ್ ರೀಟೇಲ್ ಇದೆ. ಭಾರತೀಯ ಗ್ರಾಹಕರ ವಿಶ್ವಾಸ- ನಂಬಿಕೆ ರಿಲಯನ್ಸ್ ರೀಟೇಲ್ ಮೇಲಿದೆ,'' ಮುಕೇಶ್ ಅಂಬಾನಿ ಹೇಳಿದರು.

ಮಲಬಾರ್ ಗೋಲ್ಡ್‌ನ 25ನೇ ಶೋರೂಂ ಉದ್ಘಾಟನೆ

ಬೆಂಗಳೂರು: ವಿಶ್ವದ ಅತಿದೊಡ್ಡ ಆಭರಣ ಬ್ರ್ಯಾಂಡ್‌ಗಳಲ್ಲಿ ಒಂದಾಗಿರುವ ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್‌ನ ಹೊಸ ಶೋರೂಂ ಬೆಂಗಳೂರಿನ ಆರ್.ಟಿ. ನಗರದಲ್ಲಿ ಉದ್ಘಾಟನೆಯಾಗಿದೆ. ಇದು ಬೆಂಗಳೂರಿನಲ್ಲಿ ಸಂಸ್ಥೆಯ 25ನೇ ಹಾಗೂ ಕರ್ನಾಟಕ ಮತ್ತು ಗೋವಾ ವಲಯದಲ್ಲಿ 49ನೇ ಶೋರೂಂ ಆಗಿದೆ.

ಹೊಸ ಶೋರೂಂ ಅನ್ನು ಗ್ರಾಹಕರಿಗೆ ವಿಶಾಲ ಶ್ರೇಣಿಯ ಮತ್ತು ಪ್ರೀಮಿಯಂ ಆಭರಣ ಖರೀದಿ ಅನುಭವವನ್ನು ನೀಡುವ ಉದ್ದೇಶದಿಂದ ವಿನ್ಯಾಸಗೊಳಿಸಲಾಗಿದೆ. ಆಧುನಿಕ ಒಳಾಂಗಣ ವಿನ್ಯಾಸ, ಸಂಘಟಿತ ಉತ್ಪನ್ನ ಪ್ರದರ್ಶನ ಹಾಗೂ ವೈಯಕ್ತಿಕ ಗ್ರಾಹಕ ಸೇವೆಯನ್ನು ಒಳಗೊಂಡಿರುವ ಈ ಶೋರೂಂ, ವಿವಿಧ ವಿಭಾಗಗಳು ಮತ್ತು ಬೆಲೆ ಶ್ರೇಣಿಗಳಲ್ಲಿ ಲಭ್ಯವಿರುವ ವೈವಿಧ್ಯಮಯ ಆಭರಣ ಸಂಗ್ರಹವನ್ನು ಒಂದೇ ಸೂರಿನಡಿ ಒದಗಿಸುತ್ತದೆ. ಚಿನ್ನ, ವಜ್ರ, ಪ್ಲಾಟಿನಂ, ಅಮೂಲ್ಯ ರತ್ನಗಳು ಹಾಗೂ ಬೆಳ್ಳಿ ಆಭರಣಗಳ ವಿಶಾಲ ಸಂಗ್ರಹವಿದ್ದು, ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್‌ನ ವಿಶೇಷ ಸಿಗ್ನೇಚರ್ ಕಲೆಕ್ಷನ್‌ಗಳೂ ಲಭ್ಯವಿವೆ.

ಈ ಸಂದರ್ಭದಲ್ಲಿ ಮಾತನಾಡಿದ ಮಲಬಾರ್ ಗ್ರೂಪ್ ಅಧ್ಯಕ್ಷ ಎಂ.ಪಿ. ಅಹಮ್ಮದ್ ಅವರು, ''ಬೆಂಗಳೂರು ನಮ್ಮ ಅತ್ಯಂತ ಪ್ರಮುಖ ಮಾರುಕಟ್ಟೆಗಳಲ್ಲಿ ಒಂದಾಗಿದೆ. ಆರ್.ಟಿ. ನಗರ ಶೋರೂಂ ಉದ್ಘಾಟನೆಯು ಗ್ರಾಹಕರಿಗೆ ಹೆಚ್ಚಿನ ಆಯ್ಕೆಗಳು, ಪ್ರೀಮಿಯಂ ಖರೀದಿ ವಾತಾವರಣ ಹಾಗೂ ವಿಶ್ವಾಸದ ಮೇಲೆ ನಿರ್ಮಿತ ಸೇವೆಯನ್ನು ಒದಗಿಸುವ ನಮ್ಮ ನಿರಂತರ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ. ವಸತಿ ಮತ್ತು ವಾಣಿಜ್ಯ ಪ್ರದೇಶಗಳಲ್ಲಿ ಗ್ರಾಹಕರಿಗೆ ಇನ್ನಷ್ಟು ಸುಲಭವಾಗಿ ನಮ್ಮ ಸೇವೆಗಳನ್ನು ತಲುಪಿಸುವತ್ತ ನಾವು ಗಮನ ಹರಿಸಿದ್ದೇವೆ,'' ಎಂದು ಹೇಳಿದರು.

ಶೋರೂಂ ಅನ್ನು ನಟಿ ಶ್ರೀನಿಧಿ ಶೆಟ್ಟಿ ಉದ್ಘಾಟಿಸಿದರು. ಮಲಬಾರ್ ಗ್ರೂಪ್‌ನ ಕರ್ನಾಟಕ ಪ್ರಾದೇಶಿಕ ಮುಖ್ಯಸ್ಥ ಫಿಲ್ಸರ್ ಬಾಬು, ಸಂಸ್ಥೆಯ ಆಡಳಿತ ಮಂಡಳಿ ಸದಸ್ಯರು, ಗ್ರಾಹಕರು, ಆಹ್ವಾನಿತ ಅತಿಥಿಗಳು ಉಪಸ್ಥಿತರಿದ್ದರು.

ಎಐ ಪ್ರತಿಭೆಗಳ ಹಬ್ ಬೆಂಗಳೂರು

ಪುಣೆ, ಹೈದರಾಬಾದ್, ಮುಂಬಯಿ, ಚೆನ್ನೈಗಳಲ್ಲಿ ಕೃತಕ ಬುದ್ಧಿಮತ್ತೆ ಹವಾ

ಬೆಂಗಳೂರು ಎಕನಾಮಿಕ್ ಟೈಮ್ಸ್

ಬೆಂಗಳೂರು, ಪುಣೆ, ಹೈದರಾಬಾದ್, ಮುಂಬಯಿ ಹಾಗೂ ಚೆನ್ನೈ ನಗರಗಳು ದೇಶದ ಕೃತಕ ಬುದ್ಧಿಮತ್ತೆ (ಎಐ)ಯ ಪ್ರತಿಭಾ ಕೇಂದ್ರಗಳಾಗಿ ರೂಪುಗೊಂಡಿವೆ. ಈ ನಗರಗಳು ದೇಶದ ಒಟ್ಟು ಎಐ ಕಾರ್ಯಪಡೆಯಲ್ಲಿ ಮೂರನೇ ಒಂದಕ್ಕಿಂತ ಹೆಚ್ಚು ಪಾಲನ್ನು ಹೊಂದಿವೆ. ಅದರಲ್ಲಿಯೂ ಬೆಂಗಳೂರು ಕೃತಕ ಬುದ್ಧಿಮತ್ತೆ ಕೌಶಲ ಕಲಿಯುವವರ ಪ್ರಮುಖ ನೆಲೆಯಾಗಿದೆ.

ಎಐ ಮೆಟ್ರೊ ನಗರಗಳಾಚೆಯೂ ತನ್ನ ಬಾಹುಗಳನ್ನು ವಿಸ್ತರಿಸುತ್ತಿದೆ. ಇತ್ತೀಚಿನ ಟ್ರೆಂಡ್ ಪ್ರಕಾರ, ಎಐ ಕಲಿಯುವವರಲ್ಲಿ ಐವರಲ್ಲಿ ಒಬ್ಬರು ಲಖನೌ, ಪಟನಾ, ಜೈಪುರ, ಇಂದೋರ್, ನಾಗಪುರ, ಚೆಂಗಲ್ಪಟ್ಟು ಮತ್ತು ಕೊಯಮತ್ತೂರಿನಂತಹ 2ನೇ ಶ್ರೇಣಿಯ ನಗರಗಳಿಂದ ಬಂದವರಾಗಿದ್ದಾರೆ.

ದೇಶಾದ್ಯಂತ 11,444 ಎಐ ಕಲಿಯುವವರ ಅಧ್ಯಯನವನ್ನು ಆಧರಿಸಿ ಸ್ಕೇಲರ್ ಇಂಡಿಯಾ ಎಂಬ ಸಂಸ್ಥೆಯು 'ಎಐ ವರ್ಕ್‌ಫೋರ್ಸ್ ರಿಪೋರ್ಟ್ 2026' ಅನ್ನು ಸಿದ್ಧಪಡಿಸಿದೆ. ಎಐ ಕಲಿತವರಲ್ಲಿ ಹೆಚ್ಚಿನ ಮಂದಿ ಗೂಗಲ್, ಮೈಕ್ರೊಸಾಫ್ಟ್ , ಆ್ಯಪಲ್ ಮತ್ತು ಎನ್ವಿಡಿಯಾ ಕಂಪನಿಗಳಲ್ಲಿ ಉದ್ಯೋಗಾವಕಾಶ ಪಡೆದಿದ್ದಾರೆ ಎಂದೂ ವರದಿ ತಿಳಿಸಿದೆ. ವಿವಿಧ ಉದ್ಯೋಗ ವಲಯಗಳಲ್ಲಿ ಎಐ ಆಧಾರಿತ ಕೌಶಲ್ಯ ವೃದ್ಧಿಗೆ ಬೇಡಿಕೆ ಹೆಚ್ಚುತ್ತಿರುವ ನಡುವೆಯೇ ಈ ವರದಿ ಬಂದಿದೆ.

''ನಾವು ಯಾವ ಎಐ ಕೋರ್ಸ್ ಸೇರಬೇಕು, ಅವುಗಳಿಂದ ಏನು ಕಲಿಯಬಹುದು ಎಂದು ಕೇಳುವವರ ಸಂಖ್ಯೆ ಭಾರಿ ಪ್ರಮಾಣದಲ್ಲಿ ಹೆಚ್ಚಾಗಿದೆ. ಕಳೆದ 6 ರಿಂದ 9 ತಿಂಗಳುಗಳಲ್ಲಿ 'ಎಐ ಕೋರ್ಸ್' ನಂತಹ ಕೀವರ್ಡ್‌ಗಳಿಗಾಗಿ ಗೂಗಲ್ ಸರ್ಚ್‌ಗಳು ಸುಮಾರು ಐದರಿಂದ ಹತ್ತು ಪಟ್ಟು ಹೆಚ್ಚಾಗಿವೆ,'' ಎಂದು ಸ್ಕೇಲರ್‌ನ ಸಹ-ಸಂಸ್ಥಾಪಕ ಅಭಿಮನ್ಯು ಸಕ್ಸೇನಾ ತಿಳಿಸಿದ್ದಾರೆ.

ಹೆಣ್ಮಕ್ಕಳೇ ಸ್ಟ್ರಾಂಗು ಗುರು: ಎಐ ಈಗ ಕೇವಲ ಎಂಜಿನಿಯರಿಂಗ್ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿಲ್ಲ. ಎಐ-ಸಕ್ರಿಯಗೊಳಿಸಿದ ಉದ್ಯೋಗಗಳಲ್ಲಿ ಅರ್ಧಕ್ಕಿಂತ ಹೆಚ್ಚು ಉದ್ಯೋಗಾವಕಾಶಗಳು ನಾಯಕತ್ವ , ಕನ್ಸಲ್ಟಿಂಗ್, ಮಾನವ ಸಂಪನ್ಮೂಲ ಮತ್ತು ದತ್ತಾಂಶದಂತಹ ಕ್ಷೇತ್ರಗಳಲ್ಲಿ ಹರಡಿಕೊಂಡಿವೆ. ಈ ಬದಲಾವಣೆಯಿಂದ ಮಹಿಳಾ ಉದ್ಯೋಗಿಗಳು ಅತಿ ಹೆಚ್ಚು ಲಾಭ ಪಡೆಯುತ್ತಿದ್ದಾರೆ. ಎಐ ಪಾತ್ರಗಳಿಗೆ ಸ್ಥಳಾಂತರಗೊಂಡ ನಂತರ ಮಹಿಳೆಯರ ವೇತನದಲ್ಲಿ ಸರಾಸರಿ ಶೇ.145ರಷ್ಟು ಹೆಚ್ಚಳವಾಗಿದೆ ಎಂದೂ ವರದಿ ತಿಳಿಸಿದೆ.

ಎಐ ಕಲಿಕೆಯು ನಾಯಕತ್ವದ ಹುದ್ದೆಗಳನ್ನು ತಲುಪುವ ಹಾದಿಯನ್ನು ವೇಗಗೊಳಿಸುತ್ತಿದೆ. ಕೌಶಲವೃದ್ಧಿಯ ನಂತರ ನಾಲ್ಕರಲ್ಲಿ ಒಬ್ಬರು ಹೆಚ್ಚು ವೇತನ ಪಡೆಯುವ ನಾಯಕತ್ವದ ಹುದ್ದೆಗಳನ್ನು ಪಡೆಯುತ್ತಿದ್ದಾರೆ. ಎಂಜಿನಿಯರಿಂಗ್ ಕ್ಷೇತ್ರದಲ್ಲಿ ಎಐ ಕೌಶಲ ಪಡೆದವರ ನಾಯಕತ್ವದ ಹುದ್ದೆಗಳ ವೇತನವು ವರ್ಷಕ್ಕೆ ಸರಾಸರಿ 33 ಲಕ್ಷ ರೂ.ಗಳಷ್ಟು ಏರಿಕೆಯಾಗಿದೆ ಎಂದೂ ವರದಿ ತಿಳಿಸಿದೆ.

Bennett & Coleman
THE TIMES OF INDIA
www.vijaykarnataka.com
ಸಂಪುಟ: 27 | ಸಂಚಿಕೆ: 173
ಮಂಗಳವಾರ,23 ಜೂನ್ 2026 | ಪುಟಗಳು: 13 | ಬೆಲೆ: ₹ 5.00
c
VK
ವಿಜಯ ಕರ್ನಾಟಕ
ಬೆಂಗಳೂರು | ಮೈಸೂರು | ಶಿವಮೊಗ್ಗ | ಮಂಗಳೂರು | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA

ಕಾಲ್ತುಳಿತ ಪ್ರಕರಣ: ವರ್ಚುವಲ್ ಆಗಿ ಕೋರ್ಟ್ ವಿಚಾರಣೆಗೆ ಹಾಜರಾದ ನಟ ಅಲ್ಲು ಅರ್ಜುನ್

ಬೆಂಗಳೂರು ದರ: ₹13,430 1 ಗ್ರಾಂ ದರ 22 ಕ್ಯಾರೆಟ್ (ಆಭರಣ ಚಿನ್ನ) | ₹14,651 1 ಗ್ರಾಂ ದರ 24 ಕ್ಯಾರೆಟ್ (ಗಟ್ಟಿ ಚಿನ್ನ) | ₹2,50,000 1 ಕೆಜಿ ಬೆಳ್ಳಿ ದರ (ಜಿಎಸ್‌ಟಿ ಪ್ರತ್ಯೇಕ)

ದೇಗುಲದ ಹಣ ಅನ್ಯ ಉದ್ದೇಶಕ್ಕೆ ಬಳಕೆ ನಿಲ್ಲಿಸಿದ ಟಿವಿಕೆ ಸರಕಾರ, ಸ್ಟಾಲಿನ್‌ಗೆ ವಿಜಯ್ ಟಾಂಗ್

JEEVITH EDUCATION TRUST(R)
JEEVITH PU COLLEGE
NEET | JEE ACADEMY
Recognised by the Government of Karnataka, Dept. of School Education (Pre-University)
RESIDENTIAL | DAY-BOARDING YELAHANKA, BENGALURU - 64
ADMISSIONS OPEN 2026-27
COLLEGE CODE AN1051
DR. EREGOWDA GB M.Sc. Ph.D., (State, National & International Awardee) CHAIRMAN & PRINCIPAL
BDK Complex, 2nd Floor, Opp. to Anjaneya Statue, Yelahanka Old Town Circle, Yelahanka, Bangalore - 560 064
COURSES OFFERED:
SCIENCE PCMB | PCMC NEET | JEE | K-CET coaching
COMMERCE CEBA CEBA + CA | CLAT coaching
LONG TERM NEET COACHING
CLASSES STARTS FROM 29TH, JUNE
NEET RESULTS SUCCESS RATE

YEAR	SUCCESS RATE
2025	36.5%
2024	51.7%
2023	50.0%

JEEVITH NEET | JEE ACADEMY
JEEVITH PU COLLEGE
www.jeevithneetacademy.com Jeevitheducationtrust@gmail.com 6363089532 / 9844316387 / 6360591641 / 9036790639



ವಿಕ ಹೊಂಗಿರಣ

ಸಮಾಜವು ಸತ್ಯದಿಂದ ದೂರ ಸರಿದಷ್ಟೂ, ಸತ್ಯವಂತರ ಬಗ್ಗೆ ಜನರ ದ್ವೇಷ ಹೆಚ್ಚುತ್ತಾ ಹೋಗುತ್ತದೆ.
- ಜಾರ್ಜ್ ಆರ್‌ವೆಲ್

SBI The banker to every Indian
ನಾವು ಕೇವಲ ಒಂದು ಕರೆ ದೂರದಲ್ಲಿದ್ದೇವೆ!
- ಖಾತೆ ಬ್ಯಾಲೆನ್ಸ್
- ಖಾತೆ ಸ್ಟೇಟ್ಮೆಂಟ್
- ಚೆಕ್ ಪುಸ್ತಕ ನೀಡಿಕೆ
- ಬಡ್ಡಿ ಪ್ರಮಾಣಪತ್ರ, ಗೃಹ ಸಾಲ/ ಶಿಕ್ಷಣ ಸಾಲ ಮತ್ತು ಇನ್ನೂ ಹಲವು...
ಈಗಲೇ ಅರ್ಜಿ ಸಲ್ಲಿಸಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ
*ಷರತ್ತುಗಳು ಅನ್ವಯಿಸುತ್ತವೆ
BANKING AS EASY AS 1-2-3-4
1800 1234 1800 2100

Vencobb
ಫಾರಂ ಧಾರಣೆ ಮಾರಾಟದ ಪ್ರತಿ ಕೆಜಿಗೆ ಸಲಹೆಯ ಬೆಲೆ ₹114/- ಕೋಲಾರ 112/- ತುಮಕೂರು 112/-
ರೀಟೇಲ್ ಮಾರಾಟದ ದರ ಪ್ರತಿ ಕೆಜಿಗೆ ಬೆಲೆ ₹154/- ಕೋಲಾರ 152/- ತುಮಕೂರು 152/-
ವಿಥ್ ಸ್ಕಿನ್ ₹217/- ಕೋಲಾರ 214/- ತುಮಕೂರು 214/-
ವಿಥೌಟ್ ಸ್ಕಿನ್ ₹248/- ಕೋಲಾರ 245/- ತುಮಕೂರು 245/-
ಗ್ರಾಹಕರಿಗೋಸ್ಕರ ನೀಡಲಾಗಿದೆ

ಸರಕಾರಿ ನೌಕರರಿಗೆ ನಗದು ರಹಿತ ಆರೋಗ್ಯ ತಪಾಸಣೆ

ಬೆಂಗಳೂರು: ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆಗೆ ಒಳಪಟ್ಟ, 40 ವರ್ಷ ವಯಸ್ಸು ದಾಟಿದ ಸರಕಾರಿ ನೌಕರರು ವಾರ್ಷಿಕ ವೈದ್ಯಕೀಯ ತಪಾಸಣೆ ಯೋಜನೆಯಡಿ ವರ್ಷದಲ್ಲಿ ಒಂದು ಬಾರಿ ನಗದು ರಹಿತ ವೈದ್ಯಕೀಯ ತಪಾಸಣೆ ಸೌಲಭ್ಯ ಪಡೆಯಲು ಅವಕಾಶ ಕಲ್ಪಿಸಿ ಆರೋಗ್ಯ ಇಲಾಖೆ ಆದೇಶ ಹೊರಡಿಸಿದೆ.

ರಕ್ತದೊತ್ತಡ, ಮಧುಮೇಹ ಸೇರಿ ಸಾಮಾನ್ಯ ಪರೀಕ್ಷೆ, ನೇತ್ರ ತಪಾಸಣೆ, ಹೃದಯ, ಶ್ವಾಸಕೋಶ, ಕರುಳು, ಕಿಡ್ನಿ, ದಂತ ಸೇರಿ ಅಗತ್ಯ ಪರೀಕ್ಷೆಗಳು, ಇಎನ್‌ಟಿ, ಕ್ಯಾನ್ಸರ್ ಸೇರಿ ಅಗತ್ಯ ಪರೀಕ್ಷೆ ಮಾಡಿಸಿಕೊಳ್ಳಬಹುದಾಗಿದೆ.

ಸರಕಾರಿ ಆಸ್ಪತ್ರೆ (ಸ್ವಾಯತ್ತ ವೈದ್ಯಕೀಯ ಸಂಸ್ಥೆಗಳು ಸೇರಿದಂತೆ), ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆಯಡಿ ನೋಂದಣಿಯಾದ ಖಾಸಗಿ ಆಸ್ಪತ್ರೆಗಳಲ್ಲಿ ಮಾತ್ರ ತಪಾಸಣೆ ಮಾಡಿಸಿಕೊಳ್ಳಬೇಕಿದ್ದು, ಒಂದೇ ಸಂಸ್ಥೆಯಲ್ಲಿ ಒಂದೇ ಕ್ಲೇಮ್‌ನಲ್ಲಿ ಪರೀಕ್ಷೆಗೆ ಒಳಪಡಬೇಕು. ಇದಕ್ಕಾಗಿ ಸರಕಾರ ನಿಗದಿಪಡಿಸಿರುವ ವಾರ್ಷಿಕ ವೈದ್ಯಕೀಯ ದರ (ಪುರುಷರಿಗೆ 2 ಸಾವಿರ/ ಮಹಿಳೆಯರಿಗೆ 2,200 ರೂ.) ಮಿತಿಗೊಳಪಟ್ಟು ಮಂಜೂರಾತಿ ನೀಡುವಂತೆ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ಗೆ ಸೂಚಿಸಲಾಗಿದೆ.

ರೈತರೇ ಆತಂಕ ಬೇಡ, ಮಳೆ ಕಡಿಮೆಯಾದ್ರೆ ಇದೆ ಪರ್ಯಾಯ ಬೆಳೆ ಸ್ಕೀಂ

ವಿಮೆ, ತೇವಾಂಶ ಸಂರಕ್ಷಣೆ ಕಡ್ಡಾಯ | ಕೃಷಿ ಇಲಾಖೆಯ ಮಾಸ್ಟರ್ ಪ್ಲಾನ್ ರೆಡಿ

ಎಲ್‌ನಿನೊ ಎದುರಿಸೋಣ

■ **ವಿಕ ಸುದ್ದಿಲೋಕ** ಬೆಂಗಳೂರು

ಎಲ್‌ನಿನೊ ಪ್ರಭಾವದಿಂದಾಗಿ ಈ ಬಾರಿ ರಾಜ್ಯಾದ್ಯಂತ ಮುಂಗಾರು ಮಳೆ ಗಣನೀಯವಾಗಿ ಇಳಿಕೆಯಾಗಲಿದೆ ಎಂಬ ಹವಾಮಾನ ಇಲಾಖೆಯ ಮುನ್ಸೂಚನೆ ಬೆನ್ನಲ್ಲೇ ರೈತರಲ್ಲಿ ಆತಂಕ ಶುರುವಾಗಿದೆ. ಆದರೆ, ಮಳೆ ಕೈಕೊಟ್ಟರೆ ಕಂಗೆಡಬೇಕಿಲ್ಲ. ಕೃಷಿ ಇಲಾಖೆಯು ತಜ್ಞರ ಸಲಹೆ ಮೇರೆಗೆ ಬರಗಾಲ ಎದುರಿಸಲು ಅತ್ಯಂತ ವೈಜ್ಞಾನಿಕವಾದ 'ತುರ್ತು ಕಾರ್ಯಯೋಜನೆ' (ಆ್ಯಕ್ಷನ್ ಪ್ಲಾನ್) ಸಿದ್ಧಪಡಿಸಿದ್ದು, ರೈತರಲ್ಲಿ ಜಾಗೃತಿ ಮೂಡಿಸಲು ಸಜ್ಜಾಗಿದೆ.

ಒಂದು ವೇಳೆ ವಾರ ಅಥವಾ ಎರಡು ವಾರಗಳ ಕಾಲ ಮಳೆ ಬಾರದಿದ್ದರೆ ಏನು ಮಾಡಬೇಕು? ಯಾವ ಜಿಲ್ಲೆಗೆ ಯಾವ ಬೆಳೆ ಸೂಕ್ತ? ಬರ ನಿರೋಧಕ ತಳಿಗಳು ಯಾವುವು? ಎಂಬ ಬಗ್ಗೆ ಇಲಾಖೆಯು ಸಮಗ್ರ ವರದಿ ತಯಾರಿಸಿದೆ. ಈ ಮಾಹಿತಿಯನ್ನು ಕರ್ನಾಟಕ ಕೃಷಿ ವಿಕಾಸ ಕೇಂದ್ರಗಳು ಹಾಗೂ ರೈತ ಸಂಪರ್ಕ ಕೇಂದ್ರಗಳ ಮೂಲಕ ಹೋಬಳಿ ಮಟ್ಟದವರೆಗೂ ತಲುಪಿಸಲು ಅಧಿಕಾರಿಗಳು ಮಗ್ನರಾಗಿದ್ದಾರೆ.

ರಸಗೊಬ್ಬರಗಳ ದ್ರಾವಣ, ಹಸಿಗೊಬ್ಬರ ಹಾಕಿ

ಶಿಫಾರಸು ಮಾಡಿದ ಪ್ರಮಾಣದಲ್ಲಿ ಎನ್‌ಪಿಕೆ ರಸಗೊಬ್ಬರ ಬಳಸಬೇಕು. ಮಧ್ಯಂತರ ಬರ ಪರಿಸ್ಥಿತಿಯಲ್ಲಿ ಹಾಗೂ ಮಳೆಯ ನಂತರ ಬೆಳೆ ಚೇತರಿಕೆಗೆ ಯೂರಿಯಾ, ಡಿಎಪಿ ದ್ರಾವಣಗಳನ್ನು ಸಿಂಪಡಿಸುವಂತೆ ಸಲಹೆ ನೀಡಿದೆ. ಬೆಳೆ ಸಾಲುಗಳ ನಡುವೆ ಕೃಷಿ ತ್ಯಾಜ್ಯ (ಹಸಿ ಗೊಬ್ಬರ) ಬಳಸಬೇಕು. ಸಾವಯವ ಗೊಬ್ಬರ ಅಥವಾ ನೀರನ್ನು ಹೀರಿಕೊಳ್ಳುವ ಕೃಷಿ ರಾಸಾಯನಿಕಗಳಾದ ಹೈಡ್ರೋಜೆಲ್ ಬಳಕೆಯಿಂದ ಹೊಲದಲ್ಲಿ ತೇವಾಂಶ ಲಭ್ಯತೆ ಹೆಚ್ಚುತ್ತದೆ. ಹೊಲದಲ್ಲೇ ತೇವಾಂಶ ಸಂರಕ್ಷಣೆ ಕ್ರಮಗಳನ್ನು ಅನುಸರಿಸಬೇಕು.

ಕೃಷಿಕರೇ, ಮರೆಯದಿರಿ !

- ಹತ್ತಿ, ಕಡಲೆಕಾಯಿಯಂತಹ ಬೆಳೆಗಳನ್ನು, ಅದರಲ್ಲೂ ವಿಶೇಷವಾಗಿ ಆಳ ಕಡಿಮೆ ಇರುವ ಮಣ್ಣಿನಲ್ಲಿ ಒಣ ಬಿತ್ತನೆ ಮಾಡಲೇಬೇಡಿ.
- ಹೊಲದ ಬದು ನಿರ್ಮಾಣ, ವಿಭಾಗೀಯ ಬದು ಹಾಗೂ ಸಂರಕ್ಷಣಾ ಕಾಲುವೆ ನಿರ್ಮಿಸಿ ಬೀಳುವ ಪ್ರತಿ ಹನಿ ನೀರನ್ನು ಹೊಲದಲ್ಲೇ ಹಿಂಗಿಸಬೇಕು.
- ಹವಾಮಾನ ವೈಪರೀತ್ಯದ ನಷ್ಟದಿಂದ ಪಾರಾಗಲು ಕಡ್ಡಾಯವಾಗಿ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯ ಲಾಭ ಪಡೆಯಬೇಕು.

ಸಾಧ್ಯವಾದಲ್ಲಿ ಬೆಳೆಗಳ ಪ್ರಮುಖ ಬೆಳವಣಿಗೆಯ ಹಂತಗಳಲ್ಲಿ ಜೀವರಕ್ಷಕ ನೀರಾವರಿಯನ್ನು ತುಂತುರು ಅಥವಾ ಹನಿ ನೀರಾವರಿ ಮೂಲಕ ಒದಗಿಸಬೇಕು.

ಮಳೆ ಆಧಾರಿತ ಬೆಳೆಗಳನ್ನು ಕೆಂಪು ಮಣ್ಣಿನಲ್ಲಿ ಒಟ್ಟು 50-60 ಮಿ.ಮೀ. ಹಾಗೂ ಕಪ್ಪು ಮಣ್ಣಿನಲ್ಲಿ 60-70 ಮಿ.ಮೀ. ಮಳೆ ಬಂದ ನಂತರವೇ ಬಿತ್ತನೆ ಮಾಡಬೇಕು.

ಎಲ್‌ನಿನೊ ಭಾಯೆ »06

ಕಡಿಮೆ ನೀರಿನ ಬೆಳೆಗಳು

- ಜೋಳ, ರಾಗಿ, ಸಜ್ಜೆಯಂತಹ ಧಾನ್ಯಗಳು
- ಊದಲು, ನವಣೆ, ಸಾಮೆ, ಬರಗು, ಹಾರಕದಂತಹ ಸಿರಿಧಾನ್ಯಗಳು
- ಹೆಸರು, ಉದ್ದು ಸೋಯಾಬೀನ್, ಹುರುಳಿ, ಅಲಸಂದೆ ಕಾಳುಗಳು
- ಕಡಲೆ, ಸೂರ್ಯಕಾಂತಿ, ಎಳ್ಳು, ಹರಳೆ, ಹತ್ತಿಯಂತಹ ಎಣ್ಣೆಕಾಳು/ವಾಣಿಜ್ಯ ಬೆಳೆಗಳು

ವಿಕ ಆಶಯ

ಎಲ್ ನಿನೊ ಬರದ ಕುರಿತು ಕೇಂದ್ರ ಹಾಗೂ ರಾಜ್ಯ ಸರಕಾರಗಳು ಎಚ್ಚರಿಸುತ್ತಲೇ ಇವೆ. ಮಳೆ ಕಡಿಮೆಯಾದರೆ ಆಹಾರ ಉತ್ಪಾದನೆ ಸಹಜವಾಗಿ ಕಡಿಮೆಯಾಗುತ್ತದೆ. ಹಾಗಾಗಿ, ಈ ಸವಾಲು ಕೇವಲ ಅನ್ನದಾತರದಲ್ಲ, ಇದನ್ನು ಸಮಾಜವೂ ಎದುರಿಸಬೇಕು ಹಾಗೂ ಅವರ ಸವಾಲಿಗೆ ಕಣ್ಣು-ಕಿವಿಯಾಗಬೇಕಿದೆ. ರೈತರು ಕೂಡ ಮಳೆ ಕಡಿಮೆ ಇದೆ ಎಂದು ಕೈಚೆಲ್ಲಿ ಕೂರಬಾರದು. ಬದಲಿಗೆ, ಹವಾಮಾನದ ಬದಲಾವಣೆಗೆ ತಕ್ಕಂತೆ ಬೆಳೆ ಮತ್ತು ತಳಿಗಳನ್ನು ಬದಲಾಯಿಸುವುದೊಂದೇ ಬರದಿಂದ ಪಾರಾಗಲು ಇರುವ ಏಕೈಕ ಮಾರ್ಗ. ಈ ನಿಟ್ಟಿನಲ್ಲಿ ಕೃಷಿ ಇಲಾಖೆ,ಕೃಷಿ ವಿಜ್ಞಾನ ಕೇಂದ್ರಗಳು ಕೂಡ ರೈತರಿಗೆ ಸಲಹೆ ನೀಡಿವೆ. ಇದನ್ನು ಪಾಲಿಸಬೇಕಿದೆ.

ಬಿಡದಿ ಟೌನ್‌ಶಿಪ್ ವಿವಾದ

ಎಚ್‌ಡಿಕೆ-ಡಿಕೆಶಿ ಮಧ್ಯೆ ಸವಾಲ್ ಜವಾಬ್

■ **ವಿಕ ಸುದ್ದಿಲೋಕ** ಬೆಂಗಳೂರು

ಬಿಡದಿ ಟೌನ್‌ಶಿಪ್ ಯೋಜನೆ ವಿಚಾರದಲ್ಲಿ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹಾಗೂ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನಡುವೆ ಸವಾಲ್-ಜವಾಬ್ ನಡೆದಿದೆ.

'ಅಸಲಿ ರೈತರ' ವಿಚಾರದಲ್ಲಿ ಬಹಿರಂಗ ಚರ್ಚೆಗೆ ಬರುವಂತೆ ಕುಮಾರಸ್ವಾಮಿ ನೀಡಿದ ಸವಾಲಿಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ 'ಸೈ' ಎಂದಿದ್ದು, ಜೂನ್ 26ರಂದು ವಿಧಾನಸೌಧದ ತಮ್ಮ ಕೊಠಡಿಗೆ ಬರುವಂತೆ ಆಹ್ವಾನ ನೀಡಿದ್ದಾರೆ. ಮುಖ್ಯಮಂತ್ರಿಗಳ ಈ ಆಹ್ವಾನಕ್ಕೆ ಪ್ರತಿಯಾಗಿ ಪತ್ರ ಬರೆದಿರುವ ಕುಮಾರಸ್ವಾಮಿ, ''ವಿಧಾನಸೌಧದಲ್ಲಿ ಸಂತ್ರಸ್ತ ರೈತರನ್ನು ಹೊರಗಿಟ್ಟು ಸಭೆ ನಡೆಸುವುದು ಸರಿಯಲ್ಲ, ಹಾಗಾಗಿ, ಬಿಡದಿ ಅಥವಾ ಬಾಧಿತ ಪ್ರದೇಶ ಭೈರಮಂಗಲದ ಯಾವುದಾದರೂ ಸೂಕ್ತ ಸಾರ್ವಜನಿಕ ಸ್ಥಳದಲ್ಲಿ ಸಭೆ ಕರೆಯಿರಿ,'' ಎಂದು ಸಲಹೆ ನೀಡಿದ್ದಾರೆ. ಸೋಮವಾರ ಇಬ್ಬರ ನಡುವೆ ಮೂರು ಸುತ್ತಿನ ಸವಾಲ್-ಜವಾಬ್ ನಡೆದಿದೆ.

ಬಿಡದಿ ಟೌನ್‌ಶಿಪ್ ಯೋಜನೆ ವಿಚಾರದಲ್ಲಿ ಬಹಿರಂಗ ಚರ್ಚೆಗೆ ಬರುವಂತೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಬೆಳಗ್ಗೆ ಸುದ್ದಿಗೋಷ್ಠಿಯಲ್ಲಿ ಸಿಎಂ ಡಿ.ಕೆ.ಶಿವಕುಮಾರ್‌ಗೆ ಸವಾಲು ಹಾಕಿದ್ದರು. ಈ ಸವಾಲನ್ನು ಸ್ವೀಕರಿಸಿ ಕುಮಾರಸ್ವಾಮಿ ಅವರಿಗೆ ಪತ್ರ ಬರೆದ ಮುಖ್ಯಮಂತ್ರಿಗಳು, ''ಜೂನ್ 26 ಶುಕ್ರವಾರ ಬೆಳಗ್ಗೆ 11 ಗಂಟೆಗೆ ವಿಧಾನಸೌಧದ ನನ್ನ ಕಚೇರಿಗೆ ಬನ್ನಿ,'' ಎಂದು ಆಹ್ವಾನ ನೀಡಿದರು. ''ತಾವೇ ಆರಂಭಿಸಿದ ಬಿಡದಿ ಟೌನ್‌ಶಿಪ್ ಯೋಜನೆಗೆ ಸಂಬಂಧಿಸಿದಂತೆ ತಮ್ಮೊಂದಿಗೆ ಚರ್ಚಿಸಲು ಉತ್ಸುಕನಾಗಿದ್ದೇನೆ. ತಾವು ಮತ್ತು ತಮ್ಮ ತಂಡದ ಐವರು ಪ್ರತಿನಿಧಿಗಳೊಂದಿಗೆ ವಿಧಾನಸೌಧದ ನನ್ನ ಕಚೇರಿಗೆ ಆಗಮಿಸಬೇಕು,'' ಎಂದು ಸಿಎಂ ಪತ್ರದಲ್ಲಿ ಕೋರಿದ್ದರು.

ಮುಖ್ಯಮಂತ್ರಿಗಳ ಈ ಆಹ್ವಾನಕ್ಕೆ ತಕ್ಷಣವೇ ಪ್ರತ್ಯುತ್ತರ ಬರೆದಿರುವ ಕುಮಾರಸ್ವಾಮಿ ಅವರು, ''ಬಿಡದಿ ಅಥವಾ ಭೈರಮಂಗಲದ ಸೂಕ್ತ ಸಾರ್ವಜನಿಕ ಸ್ಥಳದಲ್ಲಿ ಸಭೆ ನಡೆಯಲಿ. ಟೌನ್‌ಶಿಪ್ ಯೋಜನೆಯಿಂದ ಸಂಕಷ್ಟಕ್ಕೀಡಾಗಿರುವ ರೈತರು, ಗ್ರಾಮಸ್ಥರು, ಕೃಷಿ ಕಾರ್ಮಿಕರು, ರೈತ ಮಹಿಳೆಯರು, ಸಣ್ಣ ವ್ಯಾಪಾರಸ್ಥರು ಸೇರಿ ಎಲ್ಲರ ಸಮ್ಮುಖದಲ್ಲಿ ಮುಕ್ತವಾಗಿ ಚರ್ಚಿಸಿದರೆ, ಪರಿಹಾರ ಕಂಡುಕೊಳ್ಳಲು ಅವಕಾಶವಾಗುತ್ತದೆ. ವಿಧಾನಸೌಧದಲ್ಲಿ ಬಾಧಿತ ರೈತರು ಮತ್ತು ಗ್ರಾಮಸ್ಥರನ್ನು ಹೊರಗಿಟ್ಟು ಸಭೆ ನಡೆಸಿ ಪ್ರಯೋಜನವಿಲ್ಲ,'' ಎಂದು ಹೇಳಿದ್ದಾರೆ. ''ತಾವು ನಿಗದಿಪಡಿಸಿರುವ ಜೂನ್ 26 ರಂದು ನನಗೆ ಪೂರ್ವ ನಿಗದಿತ ಕಾರ್ಯಕ್ರಮಗಳು ಇರುವುದರಿಂದ, ಜೂನ್ 27 ರಂದು ಈ ಸಭೆ ಕರೆಯಿರಿ. ಸಾರ್ವಜನಿಕ ಸ್ಥಳದಲ್ಲಿ ನಡೆಯುವ ಈ ಸಭೆಗೆ ಯೋಜನೆಯಿಂದ ಬಾಧಿತರಾಗುವ ಜನರನ್ನೂ ಆಹ್ವಾನಿಸಬೇಕು'' ಎಂದು ಸಿಎಂಗೆ ಪತ್ರದಲ್ಲಿ ಕುಮಾರಸ್ವಾಮಿ ಮನವಿ ಮಾಡಿದ್ದಾರೆ.

- ಬಹಿರಂಗ ಚರ್ಚೆಗೆ ಬನ್ನಿ ಎಂದು ಡಿಕೆಶಿಗೆ ಎಚ್‌ಡಿಕೆ ಸವಾಲ್
- ಆಯ್ತು, ಜೂನ್ 26ಕ್ಕೆ ವಿಧಾನಸೌಧಕ್ಕೆ ಬನ್ನಿ ಸಿಎಂ ಆಹ್ವಾನ
- ವಿಧಾನಸೌಧಕ್ಕೆ ಬರಲ್ಲ, ಭೈರಮಂಗಲಕ್ಕೇ ಬನ್ನಿ: ಎಚ್‌ಡಿಕೆ



ಮಾವಿಗೆ ಬೇಕು ಬೆಂಬಲ ಬೆಲೆ

ಮಾವಿಗೆ ಬೆಂಬಲ ಬೆಲೆ ನೀಡಲು ಒತ್ತಾಯಿಸಿ ನಾನಾ ಸಂಘಟನೆಗಳು ಸೋಮವಾರ ಕರೆ ನೀಡಿದ್ದ ಕೋಲಾರ ಜಿಲ್ಲೆ ಬಂದ್‌ಗೆ ಶ್ರೀನಿವಾಸಪುರದಲ್ಲಿ ವ್ಯಾಪಕ ಪ್ರತಿಕ್ರಿಯೆ ಕಂಡುಬಂದಿತು. ಜಿಲ್ಲಾ ಕೇಂದ್ರ ಕೋಲಾರದ ಬಸ್ ನಿಲ್ದಾಣ ವೃತ್ತದಲ್ಲಿ ಜೆಡಿಎಸ್ ಹಾಗೂ ರೈತ ಸಂಘದ ಕಾರ್ಯಕರ್ತರು ರಸ್ತೆಯಲ್ಲೇ ಮಾವಿನ ಹಣ್ಣು ಸುರಿದು ಸರಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಕೃಷ್ಣಾದಲ್ಲಷ್ಟೇ ಮುಖ್ಯಮಂತ್ರಿ ಭೇಟಿ

ಬೆಂಗಳೂರು: ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇನ್ನು ಮುಂದೆ ಗೃಹ ಕಚೇರಿ ಕೃಷ್ಣಾದಲ್ಲಿ ಸಾರ್ವಜನಿಕರನ್ನು ಭೇಟಿಯಾಗಲಿದ್ದಾರೆ.

ಶಾಸಕರು, ಪಕ್ಷದ ಮುಖಂಡರು, ಕಾರ್ಯಕರ್ತರು ಹಾಗೂ ಸಾರ್ವಜನಿಕರು ಸೇರಿದಂತೆ ಎಲ್ಲರನ್ನೂ ಇನ್ನುಮುಂದೆ ಕೃಷ್ಣಾದಲ್ಲಿ ಮಾತ್ರ ಭೇಟಿ ಮಾಡುವುದಾಗಿ ಸಿಎಂ ಸ್ಪಷ್ಟಪಡಿಸಿದ್ದಾರೆ. ''ಸದಾಶಿವನಗರದ ಖಾಸಗಿ ನಿವಾಸದಲ್ಲಿ ಯಾರನ್ನೂ ಭೇಟಿ ಮಾಡುವುದಿಲ್ಲ, ಯಾರೊಬ್ಬರೂ ಅಲ್ಲಿಗೆ ಬರುವ ತೊಂದರೆ ತೆಗೆದುಕೊಳ್ಳಬೇಡಿ ಹಾಗೂ ಅನ್ಯಥಾ ಭಾವಿಸಬೇಡಿ,'' ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉತ್ತರ ಪ್ರದೇಶದ ಲಖನೌ ಕೋಚಿಂಗ್ ಸೆಂಟರ್‌ನಲ್ಲಿ ದುರಂತ

15 ವಿದ್ಯಾರ್ಥಿಗಳು ಸಜೀವ ದಹನ

ಲಖನೌ: ಉತ್ತರ ಪ್ರದೇಶದ ಲಖನೌದಲ್ಲಿರುವ ಅಲಿಗಂಜ್ ಪ್ರದೇಶದ ವಾಣಿಜ್ಯ ಕಟ್ಟಡದಲ್ಲಿ ಸೋಮವಾರ ಸಂಭವಿಸಿದ ಭಾರಿ ಅಗ್ನಿ ಅವಘಡದಲ್ಲಿ 15 ವಿದ್ಯಾರ್ಥಿಗಳು ಮೃತಪಟ್ಟಿದ್ದಾರೆ. 7 ಮಂದಿ ಗಾಯಗೊಂಡಿದ್ದಾರೆ.

ಅಲಿಗಂಜ್ ಪ್ರದೇಶದ ಉಷಾ ಮೆಹ್ತಾ ಮಾರ್ಗದಲ್ಲಿದ್ದ ಮೂರು ಅಂತಸ್ತಿನ ವಾಣಿಜ್ಯ ಕಟ್ಟಡದಲ್ಲಿ ದುರಂತ ಸಂಭವಿಸಿದೆ. ಮೊದಲ ಮಹಡಿಯಲ್ಲಿದ್ದ ಗೇಮಿಂಗ್ ಸಾಫ್ಟ್‌ವೇರ್ ಅಭಿವೃದ್ಧಿ, ಅನಿಮೇಷನ್ ತರಬೇತಿ ಕೇಂದ್ರದಲ್ಲಿ ಮಧ್ಯಾಹ್ನ 3 ಗಂಟೆಗೆ ಇದ್ದಕ್ಕಿದ್ದಂತೆ ಬೆಂಕಿ ಕಾಣಿಸಿಕೊಂಡಿತು. ಕ್ಷಣಾರ್ಧದಲ್ಲಿ ಬೆಂಕಿ ಇಡೀ ಕಟ್ಟಡಕ್ಕೆ ಕೆನ್ನಾಲಗೆ ಚಾಚಿತು. ಇಡೀ ಪ್ರದೇಶವು ದಟ್ಟ ಹೊಗೆಯಿಂದ ತುಂಬಿತು. ಕಟ್ಟಡದಲ್ಲಿದ್ದ ಕೆಲವರು ಹೊರಗೆ ಜಿಗಿದು ಜೀವ ಉಳಿಸಿಕೊಳ್ಳಲು ಯತ್ನಿಸಿದರೆ, ಮತ್ತೆ ಕೆಲವರು ಉಸಿರುಕಟ್ಟಿ ಮೃತಪಟ್ಟಿದ್ದಾರೆ.

ಸ್ಥಳಕ್ಕೆ ದೌಡಾಯಿಸಿದ ಅಗ್ನಿ ಶಾಮಕ ದಳ, ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್, ನಾಗರಿಕ ರಕ್ಷಣಾ ಪಡೆ ಸಿಬ್ಬಂದಿ ಬಹು ಪ್ರಯಾಸದ ನಂತರ ಬೆಂಕಿಯನ್ನು ನಿಯಂತ್ರಣಕ್ಕೆ ತಂದರು. ಕಟ್ಟಡದೊಳಗೆ ಪ್ರವೇಶಿಸಿದ ರಕ್ಷಣಾ ಸಿಬ್ಬಂದಿ, ಬೆಂಕಿಯ ಕೆನ್ನಾಲಿಗೆಗೆ ಸಿಲುಕಿ ಮೃತಪಟ್ಟಿದ್ದ ವಿದ್ಯಾರ್ಥಿಗಳ ಮೃತದೇಹ ಹೊರತೆಗೆದರು.

ಲಖನೌನ ಅಲಿಗಂಜ್ ಪ್ರದೇಶದಲ್ಲಿ ಸೋಮವಾರ ಅಗ್ನಿ ಅವಘಡಕ್ಕೆ ತುತ್ತಾದ ಕಟ್ಟಡದಿಂದ ಸಂತ್ರಸ್ತರನ್ನು ರಕ್ಷಿಸಲು ಮತ್ತು ಬೆಂಕಿ ನಂದಿಸಲು ಅಗ್ನಿಶಾಮಕ ಸಿಬ್ಬಂದಿ ಕಾರ್ಯಾಚರಣೆ ನಡೆಸಿದರು.

ಸ್ಥಳೀಯ ಆಡಳಿತ ಗಾಯಾಳು ವಿದ್ಯಾರ್ಥಿಗಳನ್ನು ಸಮೀಪದ ಆಸ್ಪತ್ರೆಗೆ ಸಾಗಿಸಿತು.

ಅಗ್ನಿ ಅವಘಡಕ್ಕೆ ನೈಜ ಕಾರಣ ತಿಳಿದು ಬಂದಿಲ್ಲ. ಅಗ್ನಿ ಸುರಕ್ಷತಾ ಕ್ರಮಗಳ ಕೊರತೆಯಿಂದ ಬೆಂಕಿ ಕ್ಷಣಾರ್ಧದಲ್ಲೇ ಇಡೀ ಕಟ್ಟಡಕ್ಕೆ ಆವರಿಸಿದೆ ಎಂದು ವರದಿಯಾಗಿದೆ. ಘಟನಾ ಸ್ಥಳಕ್ಕೆ ಧಾವಿಸಿ ಪರಿಶೀಲಿಸಿದ ಯೋಗಿ ಆದಿತ್ಯನಾಥ್, ಸಮಗ್ರ ತನಿಖೆಗಾಗಿ ವಿಶೇಷ ತನಿಖಾ ತಂಡ ರಚಿಸಿದ್ದಾರೆ.

ಕಣ್ಣೀರಲ್ಲೇ ಕರಗಿದ ಹೃದಯಗಳು...

ಬೆಂಕಿಯ ಕೆನ್ನಾಲಗೆಗೆ ಸಿಲುಕಿದ ಕಟ್ಟಡದಿಂದ ಕೇಳಿಬರುತ್ತಿದ್ದ ಚೀರಾಟ ಕೇಳಿ, ಪೋಷಕರು ತಮ್ಮ ಮಕ್ಕಳನ್ನು ಉಳಿಸಿಕೊಳ್ಳಲು ಪ್ರಾಣದ ಹಂಗನ್ನೂ ತೊರೆದು ಒಳ ಹೋಗಲು ಪ್ರಯತ್ನಿಸುತ್ತಿದ್ದರು. ಆದರೆ ಪೊಲೀಸರು ಇದಕ್ಕೆ ಅನುಮತಿಸದ ಕಾರಣ ಅಲ್ಲೇ ಕಣ್ಣೀರು ಹಾಕುತ್ತಾ ಅಳುತ್ತಿದ್ದ ದೃಶ್ಯ ಕರುಳು ಹಿಂಡುವಂತಿತ್ತು. ದಟ್ಟ ಹೊಗೆಯಲ್ಲಿ ಸಿಲುಕಿ ದಿಕ್ಕು ಕಾಣದಾದ ವಿದ್ಯಾರ್ಥಿಗಳು ತಮ್ಮನ್ನು ರಕ್ಷಿಸುವಂತೆ ತಂದೆ-ತಾಯಿಗೆ ಸತತವಾಗಿ ಫೋನ್ ಮಾಡುತ್ತಿದ್ದರೆ, ಅಸಹಾಯಕ ಪೋಷಕರು ಕೈಯಲ್ಲಿ ಫೋನ್ ಹಿಡಿದು ಮಾತನಾಡುತ್ತಲೇ, ಕಟ್ಟಡದತ್ತ ದಿಟ್ಟಿಸುತ್ತಾ ರೋದಿಸುತ್ತಿದ್ದ ದೃಶ್ಯವು ಮನಕಲಕುವಂತಿತ್ತು. ಕೆಲವು ಮಹಿಳೆಯರಾದರೆ, ನಮ್ಮ ಮಕ್ಕಳ ಬಳಿಗೆ ಹೋಗಲು ನಮ್ಮನ್ನು ಬಿಡಿ ಎಂದು ಪೊಲೀಸರ ಬಳಿ ಗೋಗರೆಯುತ್ತಿದ್ದರು.

ನೀಟ್ ಪರೀಕ್ಷೆಗೆ ವಿಳಂಬ: ಬಿಕೆಎಚ್ ತೀವ್ರ ವಿಷಾದ

ಬೆಂಗಳೂರು: ನಗರದ ಅರಮನೆ ಮೈದಾನದಲ್ಲಿ ಭಾನುವಾರ ಕೆಪಿಸಿಸಿ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸುವ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಸಂಚಾರ ದಟ್ಟಣೆ ಉಂಟಾಗಿ, ಹಲವು ವಿದ್ಯಾರ್ಥಿಗಳು ನೀಟ್ ಪರೀಕ್ಷೆಗೆ ಹಾಜರಾಗಲು ಸಾಧ್ಯವಾಗದ ಬಗ್ಗೆ ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ವಿಷಾದ ವ್ಯಕ್ತಪಡಿಸಿದ್ದಾರೆ.



ಅಧ್ಯಕ್ಷರಾಗಿ ಪದಗ್ರಹಣದ ಬಳಿಕ ಅಧಿಕೃತವಾಗಿ ಪಕ್ಷದ ಕಚೇರಿಯಲ್ಲಿ ಕೆಲಸ ಆರಂಭಿಸಿದ ಹರಿಪ್ರಸಾದ್ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ''ಪರೀಕ್ಷೆ ಮಿಸ್ ಮಾಡಿಕೊಂಡಿರುವ ವಿದ್ಯಾರ್ಥಿಗಳಿಗೆ ಮುಂದಿನ ಪರೀಕ್ಷೆ ಬರೆಯಲು ಅಗತ್ಯವಾದ ಎಲ್ಲ ಸಹಾಯ ಮಾಡುತ್ತೇವೆ,'' ಎಂದು ತಿಳಿಸಿದ್ದಾರೆ.

''ಕಾರ್ಯಕ್ರಮದಿಂದ ತೊಂದರೆ ಅನುಭವಿಸಿರುವ ವಿದ್ಯಾರ್ಥಿಗಳನ್ನು ಭೇಟಿ ಮಾಡಲು ನಮ್ಮ ತಂಡ ಪ್ರಯತ್ನ ಮಾಡುತ್ತಿದ್ದು, ಅವರಿಗೆ ಆಗಿರುವ ನಷ್ಟ ಭರಿಸಲು ಸಿದ್ಧರಿದ್ದೇವೆ. ಆದರೆ, ಬಿಜೆಪಿಯವರು ಈ ವಿಚಾರದಲ್ಲಿ ಕೆಲವು ವಿದ್ಯಾರ್ಥಿಗಳಿಂದ ಸುಳ್ಳು ಹೇಳಿಸಿರುವ ಸಾಧ್ಯತೆಗಳಿವೆ,'' ಎಂದು ಸಂಶಯ ವ್ಯಕ್ತಪಡಿಸಿದರು.

ಸಾಂಪ್ರದಾಯಿಕ ಕೋರ್ಸ್‌ಗಳಿಗೆ ವಿದ್ಯಾರ್ಥಿಗಳ ಬೈಬೈ | ಎಸ್ಸೆಸ್ಸೆಲ್ಸಿ ಬಳಿಕ ಐಟಿಐ, ಡಿಪ್ಲೊಮಾದತ್ತ ಚಿತ್ತ

ಪಿಯು ಸೀಟು ಈ ಬಾರಿಯೂ ಖಾಲಿ ಖಾಲಿ?

■ **ವಿಕ ಸುದ್ದಿಲೋಕ** ಬೆಂಗಳೂರು

ರಾಜ್ಯದ ಸರಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ದಾಖಲಾತಿ ಹೆಚ್ಚಳಕ್ಕೆ ಶಿಕ್ಷಣ ಇಲಾಖೆ ಮನೆ ಮನೆಗೆ ತೆರಳಿ ಎಷ್ಟೇ ಕಸರತ್ತು ನಡೆಸಿದರೂ, ನಿಗದಿತ ಗುರಿ ತಲುಪುವ ಕನಸು ಮಾತ್ರ ಇನ್ನೂ ಈಡೇರಿಲ್ಲ. 2026-27ನೇ ಸಾಲಿನ ಶೈಕ್ಷಣಿಕ ವರ್ಷ ಆರಂಭವಾಗಿ ಅರ್ಧ ತಿಂಗಳು ಕಳೆದರೂ, ಪ್ರಥಮ ಪಿಯು ಸೀಟುಗಳು ಖಾಲಿ ಬಿದ್ದಿರುವುದು ಇಲಾಖೆಗೆ ತಲೆನೋವಾಗಿ ಪರಿಣಮಿಸಿದೆ.

ಪ್ರಸಕ್ತ ವರ್ಷ 2.5 ಲಕ್ಷ ದಾಖಲಾತಿಯ ದೊಡ್ಡ ಗುರಿ ಹೊಂದಲಾಗಿತ್ತು. ಆದರೆ ಪ್ರಸ್ತುತ ದಾಖಲಾಗಿರುವುದು ಕೇವಲ 1.7 ಲಕ್ಷ ವಿದ್ಯಾರ್ಥಿಗಳು ಮಾತ್ರ. ಅಚ್ಚರಿಯ ಸಂಗತಿಯೆಂದರೆ, ಈ ಬಾರಿ ದಾಖಲಾದವರಲ್ಲಿ ಸರಕಾರಿ ಪ್ರೌಢಶಾಲೆಗಳಿಂದ ಬಂದವರು 99,028 ವಿದ್ಯಾರ್ಥಿಗಳಾದರೆ, ಖಾಸಗಿ ಶಾಲೆಗಳಿಂದ ಸರಕಾರಿ ಕಾಲೇಜುಗಳತ್ತ ಮುಖ ಮಾಡಿದವರು 65,852 ವಿದ್ಯಾರ್ಥಿಗಳು. ಸದ್ಯ ಕೊಡಗು (ಶೇ.97) ಮತ್ತು ಮೈಸೂರು (ಶೇ.93) ಜಿಲ್ಲೆಗಳು ಉತ್ತಮ ಸಾಧನೆ ತೋರಿದ್ದರೆ, ಬೀದರ್ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ದಾಖಲಾತಿ ಪ್ರಮಾಣ ಕೇವಲ ಶೇ. 13 ರಿಂದ 27ರ ಒಳಗೆ ಉಸಿರಾಡುತ್ತಿದೆ! »05

ಪ್ರಸಕ್ತ ಶೈಕ್ಷಣಿಕ ವರ್ಷದ ದಾಖಲಾತಿ ಪ್ರಕ್ರಿಯೆ ಇನ್ನೂ ಚಾಲ್ತಿಯಲ್ಲಿದೆ. 2.5 ಲಕ್ಷ ವಿದ್ಯಾರ್ಥಿಗಳ ಗುರಿ ಮುಟ್ಟಲು ಇಲಾಖೆಯ ಅಧಿಕಾರಿಗಳಿಗೆ ಸ್ಪಷ್ಟ ಸೂಚನೆ ನೀಡಲಾಗಿದೆ. ದಾಖಲಾತಿ ಮುಗಿಯುವ ಹೊತ್ತಿಗೆ ಎಷ್ಟು ಸಾಧನೆಯಾಗಲಿದೆ ಎಂದು ಕಾದು ನೋಡಬೇಕಿದೆ. ಸರಕಾರಿ ಕಾಲೇಜುಗಳಲ್ಲಿ ದಾಖಲಾತಿ ಹೆಚ್ಚಿಸಲು ಇಲಾಖೆಯಿಂದ ಗರಿಷ್ಠ ಕ್ರಮ ಕೈಗೊಳ್ಳಲಾಗಿದೆ.

-ಎಸ್. ಭರತ್, ನಿರ್ದೇಶಕ ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)

ನಂಬರ್ ಗೇಮ್ ಸರಕಾರಿ ಪಿಯು ಸ್ಥಿತಿಗತಿ

ರಾಜ್ಯದಲ್ಲಿರುವ ಒಟ್ಟು ಸರಕಾರಿ ಪಿಯು ಕಾಲೇಜು	1,338
ಪ್ರಸಕ್ತ ಸಾಲಿನ ಒಟ್ಟು ದಾಖಲಾತಿ ಗುರಿ	2.5 ಲಕ್ಷ
ಇದುವರೆಗೆ ದಾಖಲಾದ ವಿದ್ಯಾರ್ಥಿಗಳು	1.7 ಲಕ್ಷ
ಎಸ್ಸೆಸ್ಸೆಲ್ಸಿ ನಂತರ ಪಿಯುಸಿ ಸೇರುತ್ತಿರುವವರ ಪ್ರಮಾಣ	63%
ದಾಖಲಾದ ಸರಕಾರಿ ಶಾಲಾ ಹಳೇ ವಿದ್ಯಾರ್ಥಿಗಳು	99,028
ದಾಖಲಾದ ಖಾಸಗಿ ಶಾಲಾ ಹಳೇ ವಿದ್ಯಾರ್ಥಿಗಳು	65,852

ಕುಸಿತಕ್ಕೇನು ಕಾರಣ?

- ಐಟಿಐ, ಡಿಪ್ಲೊಮಾದಂತಹ ಶಾರ್ಟ್ ಟರ್ಮ್, ಪ್ರಾಯೋಗಿಕ ಕೋರ್ಸ್ ಗಳತ್ತ ಹೆಚ್ಚಿದ ಕ್ರೇಜ್
- ಸರಕಾರಿ ಕಾಲೇಜುಗಳಲ್ಲಿ ಇಂದಿಗೂ ಸರಿಯಾದ ಲ್ಯಾಬ್, ಕ್ಲಾಸ್‌ರೂಮ್ ಕೊರತೆ ಇರುವುದು
- ಬಹುತೇಕ ಕಾಲೇಜುಗಳಲ್ಲಿ ಕಾಯಂ ಉಪನ್ಯಾಸಕರಿಲ್ಲದೆ ಪಾಠ ಪ್ರವಚನಗಳಿಗೆ ತೊಂದರೆ
- ಆರ್ಥಿಕವಾಗಿ ಕಷ್ಟವಿದ್ದರೂ ಖಾಸಗಿ ಕಾಲೇಜುಗಳಿಗೇ ಸೇರಿಸಬೇಕೆಂಬ ಪೋಷಕರ ಹಠ ಮತ್ತು ಪ್ರತಿಷ್ಠೆ.
- ಹಳ್ಳಿಗಳನ್ನು ತೊರೆದು ಕಮರ್ಷಿಯಲ್ ವಿದ್ಯಾಭ್ಯಾಸಕ್ಕಾಗಿ ಸಿಟಿಗಳತ್ತ ಓಡುತ್ತಿರುವ ಯುವ ಪೀಳಿಗೆ.

ಜಗತ್ತಿನ ಅತಿ ವೇಗದ ಕ್ಷಿಪಣಿ ಖರೀದಿಗೆ ಮುಂದಾದ ಯುಎಇ | ಆಕಾಶತೀರ ರಕ್ಷಣಾ ವ್ಯವಸ್ಥೆಗೂ ಡಿಮ್ಯಾಂಡ್

ಅರಬ್‌ಗೆ ಭಾರತದ ಬ್ರಹ್ಮೋಸ್ ಕ್ಷಿಪಣಿ ಬಲ

ಹೊಸದಿಲ್ಲಿ: ಜಗತ್ತಿನ ಅತಿದೊಡ್ಡ ಶಸ್ತ್ರಾಸ್ತ್ರ ಆಮದು ದೇಶವಾಗಿದ್ದ ಭಾರತ, ಈಗ ಮಿಲಿಟರಿ ಸಲಕರಣೆಗಳು ಮತ್ತು ಶಸ್ತ್ರಾಸ್ತ್ರಗಳ ರಫ್ತುದಾರನಾಗಿ ಹೊರಹೊಮ್ಮಿದ್ದು, ಇದೇ ಮೊದಲ ಬಾರಿಗೆ ಮಧ್ಯಪ್ರಾಚ್ಯಕ್ಕೂ ತನ್ನ ಮಾರುಕಟ್ಟೆ ವಿಸ್ತರಿಸುತ್ತಿದೆ.

ಭಾರತದ ಅತ್ಯಾಧುನಿಕ ರಕ್ಷಣಾ ವ್ಯವಸ್ಥೆಗಳಾದ 'ಬ್ರಹ್ಮೋಸ್' ಸೂಪರ್‌ಸಾನಿಕ್ ಕ್ರೂಸ್ ಕ್ಷಿಪಣಿ ಹಾಗೂ 'ಆಕಾಶತೀರ' ವಾಯು ರಕ್ಷಣಾ ವ್ಯವಸ್ಥೆಯನ್ನು ಖರೀದಿಸಲು ಅರಬ್ ಸಂಯುಕ್ತ ಸಂಸ್ಥಾನ (ಯುಎಇ) ಮುಂದಾಗಿದೆ. ಈ ಕುರಿತು ಉಭಯ ದೇಶಗಳ ನಡುವೆ ಮಾತುಕತೆಗಳು ಆರಂಭವಾಗಿದೆ. ಈ ಒಪ್ಪಂದ ಅಂತಿಮಗೊಂಡರೆ, ಕೊಲ್ಲಿ ದೇಶವೊಂದಕ್ಕೆ ಭಾರತದ ಮೊದಲ 'ಬ್ರಹ್ಮೋಸ್' ರಫ್ತು ಇದಾಗಲಿದೆ. ಫಿಲಿಪ್ಪೀನ್ಸ್, ವಿಯೆಟ್ನಾಂ ಮತ್ತು ಇಂಡೋನೇಷ್ಯಾದಂತಹ ದೇಶಗಳು ಈಗಾಗಲೇ ಭಾರತದ ಬ್ರಹ್ಮೋಸ್ ಮತ್ತು ಇತರ ರಕ್ಷಣಾ ತಂತ್ರಜ್ಞಾನವನ್ನು ಖರೀದಿಸಲು ಒಪ್ಪಂದ ಮಾಡಿಕೊಂಡಿವೆ.

ರಷ್ಯಾದ ಸಹಯೋಗದಲ್ಲಿ ಭಾರತ 'ಬ್ರಹ್ಮೋಸ್' ತಯಾರಿಸುತ್ತಿದೆ. ಹೀಗಾಗಿ ವಿದೇಶಕ್ಕೆ ರಫ್ತು ಮಾಡಲು ರಷ್ಯಾದ ಅನುಮತಿ ಬೇಕಾದರೂ, ಪ್ರಸ್ತುತ ಭಾರತ-ರಷ್ಯಾದ ನಡುವಿನ ಉತ್ತಮ ಸಂಬಂಧದ ಹಿನ್ನೆಲೆಯಲ್ಲಿ ಇದು ಕಷ್ಟಸಾಧ್ಯವೇನಲ್ಲ ಎಂದು ಮೂಲಗಳು ತಿಳಿಸಿವೆ.

ಯುಎಇ ಖರೀದಿಗೆ ಕಾರಣವೇನು?

ಇತ್ತೀಚೆಗೆ ಅಮೆರಿಕ-ಇರಾನ್ ಯುದ್ಧದಿಂದಾಗಿ ಮಧ್ಯಪ್ರಾಚ್ಯದಲ್ಲಿ ಸಂಘರ್ಷದ ಸ್ಥಿತಿ ಮನೆಮಾಡಿದೆ. ಅಮೆರಿಕದ ಮಿತ್ರದೇಶವಾದ ಯುಎಇ ಪದೇಪದೆ ಇರಾನ್‌ನಿಂದ ದಾಳಿಗೆ ಗುರಿಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಭಾರತ ಸೇರಿದಂತೆ ಹಲವು ದೇಶಗಳಿಂದ ಶಸ್ತ್ರಾಸ್ತ್ರ ಖರೀದಿಗೆ ಯುಎಇ ಮುಂದಾಗಿದೆ.

ಪ್ರಧಾನಿ ಮೋದಿ ಅವರು ಬದಲಾಗುತ್ತಿರುವ ಭಾರತದ ರಕ್ಷಣಾ ಸಾಮರ್ಥ್ಯದ ಬಗ್ಗೆ ಗುರುವಾರವಷ್ಟೇ (ಜೂನ್ 21) ಮಾತನಾಡಿದ್ದರು. ಕೋಲ್ಕೊತಾದಲ್ಲಿ ಮೂರು ನೂತನ ಯುದ್ಧನೌಕೆಗಳನ್ನು ನೌಕಾಪಡೆಗೆ ಸೇರ್ಪಡೆಗೊಳಿಸಿ ಮಾತನಾಡಿದ್ದ ಅವರು, ಮಿಲಿಟರಿ ಉತ್ಪಾದನೆಯಲ್ಲಿ ಭಾರತದ ಸ್ಪಷ್ಟ ನಿಲುವನ್ನು ಜಗತ್ತಿನ ಮುಂದಿಟ್ಟಿದ್ದರು. »05

ಎಂಥಾ ಶಕ್ತಿಶಾಲಿ ಮಿಸೈಲ್ ಗೊತ್ತೇ?

ಭೂಮಿ, ಸಮುದ್ರ ಮತ್ತು ವಾಯುನೆಲೆಗಳಿಂದ ಉಡಾವಣೆ ಮಾಡಬಹುದಾದ ವಿಶ್ವದ ಅತ್ಯಂತ ವೇಗದ ಕ್ರೂಸ್ ಕ್ಷಿಪಣಿ ಇದಾಗಿದೆ. 290 ಕಿ.ಮೀ. ದೂರದ ಗುರಿಯನ್ನು ಹೊಡೆದುರುಳಿಸಬಲ್ಲದು.

ಆಕಾಶತೀರ: ಭಾರತೀಯ ಸೇನೆ ಮತ್ತು ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ ಜಂಟಿಯಾಗಿ ಅಭಿವೃದ್ಧಿಪಡಿಸಿರುವ ಸಂಪೂರ್ಣ ಸ್ವಯಂಚಾಲಿತ ವಾಯು ರಕ್ಷಣಾ ಕಮಾಂಡ್ ಮತ್ತು ನಿಯಂತ್ರಣ ವ್ಯವಸ್ಥೆ. ವಿವಿಧ ಸೆನ್ಸಾರ್‌ಗಳು, ಶಸ್ತ್ರಾಸ್ತ್ರ ವ್ಯವಸ್ಥೆಗಳಿಂದ ಬರುವ ಮಾಹಿತಿಯನ್ನು ಇದು ಸಂಯೋಜಿಸಿ, ನೈಜ ಅವಧಿಯಲ್ಲಿ ಪ್ರತಿಕ್ರಿಯೆ ನೀಡಲು ನೆರವಾಗುತ್ತದೆ.

ವಿವರ	2014	2026
ರಕ್ಷಣಾ ಉತ್ಪಾದನೆ	40,000 ಕೋಟಿ ರೂ.	1.8 ಲಕ್ಷ ಕೋಟಿ ರೂ.
ಶಸ್ತ್ರಾಸ್ತ್ರ ರಫ್ತು	700 ಕೋಟಿ ರೂ.	40,000 ಕೋಟಿ ರೂ.
ಖರೀದಿದಾರರು	03 ದೇಶಗಳು	80ಕ್ಕೂ ಹೆಚ್ಚು ದೇಶಗಳು

ಪ್ರಶ್ನೆ: ವ್ಯಾಪಾರದಲ್ಲಿ ಬಹಳ ನಷ್ಟ ಅನುಭವಿಸುತ್ತಿದ್ದೇನೆ. ಪರಿಹಾರವೇನು?

ಜನ್ಮ ದಿನಾಂಕ: 18.03.1989 **ನಕ್ಷತ್ರ:** ಶತಭಿಷ

ಪರಿಹಾರ: ಲಗ್ನದಲ್ಲಿಯೇ ಸೂರ್ಯ ಮತ್ತು ರಾಹು ಇರುವುದರಿಂದ ಹಠಾತ್ ಸಮಸ್ಯೆಗಳು ಎದುರಾಗುತ್ತವೆ. ಇದರಿಂದ ಸಮಯವೂ ಹಾಳಾಗುತ್ತದೆ, ನಷ್ಟ ಉಂಟಾಗುತ್ತದೆ ಮತ್ತು ಖಿನ್ನತೆಗೆ ತುತ್ತಾಗುವ ಸಾಧ್ಯತೆಗಳಿರುತ್ತವೆ. ಆದರಿಂದ ಪಾರಾಗಲು ಗುರು ಪ್ರಾರ್ಥನೆ ಮತ್ತು ಗುರು ಕೃಪೆ ಅತ್ಯಗತ್ಯ. ಜೀವನದ ಸಮಸ್ಯೆಗಳಿಂದ ಹೊರಬರಲು ಕುಲಗುರುಗಳನ್ನು ಭೇಟಿ ಮಾಡಿ ಆಶೀರ್ವಾದ, ಮಾರ್ಗದರ್ಶನ ಪಡೆಯಿರಿ.

ನೀವೂ ಪ್ರಶ್ನೆ ಕೇಳಬಹುದು...

ನೀವು ನಿಮ್ಮ ವೈಯಕ್ತಿಕ ಪ್ರಶ್ನೆಯನ್ನು ಇಲ್ಲಿ ಕೇಳಬಹುದು. **ರಾಜಗುರು ಬಿ.ಎಸ್. ದ್ವಾರಕನಾಥ್** ಅವರು ನಿಮ್ಮ ಒಂದು ಪ್ರಶ್ನೆಗೆ ಉತ್ತರಿಸಲಿದ್ದಾರೆ. ನಿಮ್ಮ ಪ್ರಶ್ನೆಯನ್ನು ಜನ್ಮದಿನಾಂಕ, ಸಮಯ (ಬೆಳಗ್ಗೆ/ಮಧ್ಯಾಹ್ನ/ರಾತ್ರಿ), ಹುಟ್ಟಿದ ಸ್ಥಳ, ರಾಶಿ-ನಕ್ಷತ್ರದೊಂದಿಗೆ ಈ ಕೆಳಗಿನ ನಂಬರ್‌ಗೆ ವಾಟ್ಸ್ಆ್ಯಪ್ ಮಾಡಿ.ದಿನಕ್ಕೊಬ್ಬರ ಪ್ರಶ್ನೆಗೆ ಉತ್ತರ ಪ್ರಕಟಿಸಲಾಗುವುದು.

ವಾಟ್ಸ್ಆ್ಯಪ್ ಸಂಖ್ಯೆ: 6366422240

ಪಂಚಾಂಗ 23-06-2026

ಪರಾಭವ ನಾಮ ಸಂವತ್ಸರ
ಅಯನ: ಉತ್ತರಾಯಣ.
ಋತು: ಗ್ರೀಷ್ಮ. **ಮಾಸ:** ಜ್ಯೇಷ್ಠ.
ಪಕ್ಷ: ಶುಕ್ಲ. **ಮಳೆ ನಕ್ಷತ್ರ:** ಆರಿದ್ರಾ.
ನಿತ್ಯನಕ್ಷತ್ರ: ಹಸ್ತ. **ತಿಥಿ:** ನವಮಿ.
ಯೋಗ: ವರೀಯಾನ್.
ಕರಣ: ಕೌಲವ.
ವಾರ: ಮಂಗಳವಾರ.

ರಾಹು ಕಾಲ: **ಮ. 3.00 - 4.30**
ಗುಳಿಕ ಕಾಲ: **ಮ. 12.00-1.30**
ಯಮಗಂಡ ಕಾಲ: **ಬೆ. 9.00-10.30**
ಸೂರ್ಯ ಉದಯ: **ಬೆ. 5.56** ಸೂರ್ಯ ಅಸ್ತ: **ಸಂ. 6.47**

ಧರ್ಮಸ್ಥಳ ಆಣೆ ಪ್ರಮಾಣಕ್ಕೆ ಮುಂದುವರಿದ ನಾಯಕರ ಆಕ್ಷೇಪ, ಅಸಮಾಧಾನ

ಅಡ್ಡ ಮತ ಎಚ್ಚರಿಸಿದ್ದರೂ ನಿರ್ಲಕ್ಷ್ಯ

ಬೆಂಗಳೂರು/ ಮಂಗಳೂರು/ ಹೊಸಪೇಟೆ: ವಿಧಾನ ಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನದ ಬಗ್ಗೆ ಮೊದಲೇ ಕೆಲವರಿಗೆ ಗೊತ್ತಾಗಿ ಎಚ್ಚರಿಕೆ ನೀಡಿದರೂ ಬಿಜೆಪಿ ನಾಯಕತ್ವ ಎಚ್ಚೆತ್ತು ಕೊಂಡಿಲ್ಲ ಎಂಬ ಅಂಶ ಈಗ ಬೆಳಕಿಗೆ ಬಂದಿದೆ.

ಅಡ್ಡ ಮತದಾನ ಸಂಬಂಧ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಧರ್ಮಸ್ಥಳದಲ್ಲಿ ಆಣೆಪ್ರಮಾಣಕ್ಕೆ ಮುಂದಾಗಿರುವ ವಿಚಾರದಲ್ಲಿ ಬಿಜೆಪಿಯಲ್ಲಿ ತೀವ್ರ ಅಸಮಾಧಾನ ಮುಂದುವರಿದಿದೆ. ವಿಜಯೇಂದ್ರ ಪ್ರಸ್ತಾಪಕ್ಕೆ ಜಾಲತಾಣದಲ್ಲಿ ಹಿರಿಯ ಶಾಸಕ ಸುರೇಶ್‌ಕುಮಾರ್ ಆಕ್ಷೇಪ ವ್ಯಕ್ತಪಡಿಸಿದ ಬೆನ್ನಲ್ಲೇ, ಮಾಜಿ ಸಿಎಂ ಸದಾನಂದ ಗೌಡ, ನಳಿನ್‌ಕುಮಾರ್ ಕಟೀಲ್, ಮಾಜಿ ಸಚಿವ ಶ್ರೀರಾಮುಲು, ಶಾಸಕ ರಮೇಶ್ ಜಾರಕಿಹೊಳಿ ಸಹ ಪಕ್ಷ ಅಧ್ಯಕ್ಷರ ನಿಲುವನ್ನು ಖಂಡಿಸಿದ್ದಾರೆ.

ಎರಡು ಸಭೆ, ಮಾಹಿತಿ ಕೊಟ್ಟರೂ ಎಚ್ಚರಗೊಳ್ಳಲಿಲ್ಲ: ಬೆಂಗಳೂರಿನಲ್ಲಿ




ಮಾತನಾಡಿದ ಮಾಜಿ ಮುಖ್ಯಮಂತ್ರಿ ಸದಾನಂದ ಗೌಡ, ''ವಿಧಾನ ಪರಿಷತ್ ಚುನಾವಣೆಗೂ ಮೊದಲು ಪ್ರೆಸ್ಟೀಜ್ ಅಪಾರ್ಟ್‌ಮೆಂಟ್‌ನಲ್ಲಿ ಸಭೆಯೊಂದು ನಡೆದಿತ್ತು. ಅಲ್ಲಿ ಕೆಲ ಬಿಜೆಪಿ, ಕಾಂಗ್ರೆಸ್ ನಾಯಕರು ಸಭೆ ನಡೆಸುತ್ತಿರುವ ಮಾಹಿತಿ ಬಂದಿತ್ತು. ಈ ಬಗ್ಗೆ ತಿಳಿಸಲು ವಿಜಯೇಂದ್ರ, ಅಶೋಕ್ ಅವರಿಗೆ ಕರೆ ಮಾಡಿದರೂ ಸಂಪರ್ಕಕ್ಕೆ ಸಿಗಲಿಲ್ಲ, ಹಾಗಾಗಿ ಪ್ರಧಾನ ಕಾರ್ಯದರ್ಶಿ ಒಬ್ಬರಿಗೆ ಸಂಪರ್ಕಿಸಿ ಗಂಭೀರವಾಗಿ ಪರಿಗಣಿಸಲು ಹೇಳಿದ್ದೆ,'' ಎಂದು ತಿಳಿಸಿದ್ದಾರೆ.

''ನಾನು ಈ ವಿಚಾರ ತಿಳಿಸಿದ ಕೆಲ ದಿನಗಳ ನಂತರ ಮತ್ತೆ ಸಭೆ ನಡೆದಿತ್ತು. ಈ ಬಗ್ಗೆಯೂ ಪ್ರಧಾನ ಕಾರ್ಯದರ್ಶಿಗೆ

ದಿಲ್ಲಿಗೆ ವಿಜಯೇಂದ್ರ

ಪರಿಷತ್ ಚುನಾವಣೆಯಲ್ಲಿ ಪಕ್ಷದ ಶಾಸಕರು ಅಡ್ಡ ಮತದಾನ ಮಾಡಿದ ಪ್ರಕರಣದ ಹಿನ್ನೆಲೆಯಲ್ಲಿ ವರಿಷ್ಠರನ್ನು ಭೇಟಿಯಾಗಲು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ದಿಲ್ಲಿಗೆ ತೆರಳಿದ್ದಾರೆ. ಮಂಗಳವಾರ ಸಭೆ ನಡೆಯಲಿದ್ದು, ಪ್ರತಿಪಕ್ಷದ ನಾಯಕ ಆರ್.ಅಶೋಕ್ ಅವರೂ ಪಾಲ್ಗೊಳ್ಳಲಿದ್ದಾರೆ.

ತಿಳಿಸಿದ್ದೆ. ನನಗೆ ಈ ವಿಚಾರವಾಗಿ ನನ್ನ ಮತ್ತು ಮೋದಿಯವರ ಅಭಿಮಾನಿಯೊಬ್ಬರು ಮಾಹಿತಿ ನೀಡಿದ್ದರು. ಆದರೆ, ಯಾವುದೇ ಎಚ್ಚರಿಕೆ ವಹಿಸಿರಲಿಲ್ಲ, ಅಡ್ಡಮತದಾನವಾದ ಬಳಿಕ ಅದೇ ಪ್ರಧಾನ ಕಾರ್ಯದರ್ಶಿ ನನಗೆ ಕರೆ ಮಾಡಿ ನೀವು ಹೇಳಿದಂತೆಯೇ ಆಯಿತುಎಂದುಬೇಸರವ್ಯಕ್ತಪಡಿಸಿದ್ದರು,'' ಎಂದು ಆಕ್ಷೇಪಿಸಿದರು.

ದೇವರ ಹೆಸರು ಸರಿಯಲ್ಲ: ಬಿಜೆಪಿ ಮಾಜಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್, ''ರಾಜಕಾರಣದಲ್ಲಿ ದೇವರ ಹೆಸರು ತರುವುದು, ಪ್ರಮಾಣ ಮಾಡುವುದು ಸಮಂಜಸವಲ್ಲ, ಶಾಸಕರು ಅಡ್ಡ ಮತದಾನ ಮಾಡಿರುವ ಬಗ್ಗೆ ತನಿಖೆ ನಡೆದು, ಅವರಿಗೆ ತಕ್ಕ ಶಾಸ್ತಿಯಾಗಬೇಕು. ತಪ್ಪಿತಸ್ಥರನ್ನು ಹುಡುಕುವ ಶಕ್ತಿ ಬಿಜೆಪಿಗಿದೆ,'' ಎಂದರು.

ವೇದಿಕೆಯಲ್ಲಿ ಪ್ರಸ್ತಾಪ: ಹೊಸಪೇಟೆ (ವಿಜಯನಗರ)ಯಲ್ಲಿ ಮಾತನಾಡಿದ ಮಾಜಿ ಸಚಿವ ಬಿ.ಶ್ರೀರಾಮುಲು, ''ಯಾರು ಅಡ್ಡಮತದಾನ ಮಾಡಿದ್ದಾರೆ ಎಂಬುದು ನನಗೆ ಗೊತ್ತಿದೆ. ಆ ಬಗ್ಗೆ ಪಕ್ಷದ ವೇದಿಕೆಯಲ್ಲಿ ಮಾತನಾಡುತ್ತೇನೆ. ಧರ್ಮಸ್ಥಳ ಪವಿತ್ರ ಕ್ಷೇತ್ರವಾಗಿದೆ. ಅಲ್ಲಿ ಆಣೆ, ಪ್ರಮಾಣದ ಮಾತು ಬೇಡ. ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಮತ್ತು ಶಾಸಕ ಎಸ್.ಸುರೇಶ್ ಕುಮಾರ್ ಅವರು ಇಂತಹ ಆಣೆ-ಪ್ರಮಾಣ ಬೇಡವೆಂದು ತಿಳಿಸಿದ್ದಾರೆ. ನಾನು ಅವರ ಅಭಿಪ್ರಾಯವನ್ನು ಬೆಂಬಲಿಸುವೆ,'' ಎಂದರು.

ಬಿಜೆಪಿಯಿಂದ ಸರಣಿ ಸುಳ್ಳು

ನೀಟ್ ಪರೀಕ್ಷೆ ಮಿಸ್ | ಕೆಪಿಸಿಸಿ ಅಧ್ಯಕ್ಷ ಹರಿಪ್ರಸಾದ್ ಹೇಳಿಕೆ

■ **ವಿಕ ಸುದ್ದಿಲೋಕ** ಬೆಂಗಳೂರು

ನಗರದ ಅರಮನೆ ಮೈದಾನದಲ್ಲಿ ಭಾನುವಾರ ಕೆಪಿಸಿಸಿ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸುವಾಗ ಆಗಿರುವ ಸಂಚಾರ ದಟ್ಟಣೆ ಸಮಸ್ಯೆಯಿಂದ ನೀಟ್ ಪರೀಕ್ಷೆಗೆ ಹಾಜರಾಗಲು ಸಾಧ್ಯವಾಗದ ವಿದ್ಯಾರ್ಥಿಗಳಲ್ಲಿ ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ವಿಷಾದ ವ್ಯಕ್ತಪಡಿಸಿದ್ದಾರೆ.

ಅಧ್ಯಕ್ಷರಾಗಿ ಪದಗ್ರಹಣದ ಬಳಿಕ ಪಕ್ಷದ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ''ಪರೀಕ್ಷೆ ಮಿಸ್ ಮಾಡಿಕೊಂಡಿರುವ ವಿದ್ಯಾರ್ಥಿಗಳಿಗೆ ಮುಂದಿನ ಪರೀಕ್ಷೆ ಬರೆಯಲು ಎಲ್ಲ ಸಹಾಯ ಮಾಡುತ್ತೇವೆ,''ಎಂದು ತಿಳಿಸಿದ್ದಾರೆ.

''ಕಾರ್ಯಕ್ರಮದಿಂದ ತೊಂದರೆ ಅನುಭವಿಸಿರುವ ವಿದ್ಯಾರ್ಥಿಗಳನ್ನು ಭೇಟಿ ಮಾಡಲು ನಮ್ಮ ತಂಡ ಪ್ರಯತ್ನ ಮಾಡುತ್ತಿದ್ದು, ಅವರಿಗೆ ಆಗಿರುವ ನಷ್ಟ ಭರಿಸಲು ಸಿದ್ಧರಿದ್ದೇವೆ. ಆದರೆ, ಬಿಜೆಪಿಯವರು ಈ ವಿಚಾರದಲ್ಲಿ ಕೆಲವು ವಿದ್ಯಾರ್ಥಿಗಳಿಂದ ಸುಳ್ಳು ಹೇಳಿಸಿರುವ ಸಾಧ್ಯತೆಗಳಿವೆ,'' ಎಂದು ಸಂಶಯ ವ್ಯಕ್ತಪಡಿಸಿದರು.

''ಸಾರ್ವಜನಿಕರಿಗೆ ತೊಂದರೆ ಆಗಬಾರದು ಎಂಬ ಕಾರಣಕ್ಕೆ ಭಾನುವಾರ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಇದರಿಂದ ಸ್ವಲ್ಪಮಟ್ಟಿಗೆ ಸಾರ್ವಜನಿಕರಿಗೆ ತೊಂದರೆ ಆಗಿರುವುದನ್ನು ಅಲ್ಲಗಳೆಯುವುದಿಲ್ಲ, ಆದರೆ, ನೀಟ್ ಪರೀಕ್ಷೆ 1.30ಕ್ಕೆ ಶುರುವಾಗಿದ್ದು, ನಮ್ಮ ಪಕ್ಷದ ಕಾರ್ಯಕ್ರಮಕ್ಕೆ ಬರಬೇಕಿದ್ದ ಎಲ್ಲ ಬಸ್‌ಗಳು ಬೆಳಗ್ಗೆ 10.30ಕ್ಕೆ ಅರಮನೆ ಮೈದಾನಕ್ಕೆ ತಲುಪಿದ್ದವು. ಪೊಲೀಸರು ಮತ್ತು ಸೇವಾ ದಳದ ಕಾರ್ಯಕರ್ತರು ಸಾರ್ವಜನಿಕರಿಗೆ ತೊಂದರೆಯಾಗದಂತೆ ಕೆಲಸ ಮಾಡಿದ್ದಾರೆ. ಆದರೂ, 2,3 ಮಕ್ಕಳಿಗೆ ತೊಂದರೆ ಆಗಿದೆ ಎಂಬ ಮಾಹಿತಿ ಇದ್ದು, ಅದಕ್ಕಾಗಿ ವಿಷಾದಿಸುತ್ತೇನೆ,'' ಎಂದರು.



ಜಮೀರ್ ಬಿಕೆ ಭೇಟಿ

ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಅವರು ಮಾಜಿ ಸಚಿವ ಜಮೀರ್ ಅಹ್ಮದ್ ಖಾನ್ ನಿವಾಸಕ್ಕೆ ಸೋಮವಾರ ಭೇಟಿ ನೀಡಿ ಸಮಾಲೋಚಿಸಿದರು. ಪಕ್ಷದ ಸಂಘಟನೆ ಸಂಬಂಧವಾಗಿ ಉಭಯ ನಾಯಕರು ಈ ವೇಳೆ ಚರ್ಚಿಸಿದರು.

ಬಿಜೆಪಿ ಸರಣಿ ಸುಳ್ಳು: ''ಕಾಂಗ್ರೆಸ್ ಪಕ್ಷದ ಕಾರ್ಯಕ್ರಮದಿಂದ ನೀಟ್ ವಿದ್ಯಾರ್ಥಿಗಳಿಗೆ ತೊಂದರೆಯಾಯಿತು ಎಂದು ಸರಣಿ ಸುಳ್ಳುಗಳನ್ನು ಬಿಜೆಪಿ ನಾಯಕರು ಹರಡುತ್ತಿದ್ದಾರೆ. ಹಾಗಾದರೆ ನೀಟ್ ಪರೀಕ್ಷೆ ಮುಂದೂಡಿಕೆಯಾಗಿದ್ದು ಏಕೆ? ಸಿಬಿಎಸ್‌ಸಿ ಪರೀಕ್ಷೆ ಪ್ರಶ್ನೆಪತ್ರಿಕೆ ಸೋರಿಕೆಯಾದವು. 12 ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಾಗ ಪ್ರಧಾನಿ ಮೋದಿ ಅವರಾಗಲಿ, ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರಾಗಲಿ ವಿಷಾದವನ್ನೇ ವ್ಯಕ್ತಪಡಿಸಲಿಲ್ಲ, ಆದರೆ, ಕಾಂಗ್ರೆಸ್ ಕಾರ್ಯಕ್ರಮದಿಂದ ನಡೆಯಬಾರದ ಪ್ರಮಾದ ನಡೆದಿದೆ ಎಂಬಂತೆ ಬಿಜೆಪಿ ಸಂಸದ ತೇಜಸ್ವಿಸೂರ್ಯ ಬೊಬ್ಬೆಹಾಕುತ್ತಿದ್ದಾರೆ,'' ಎಂದು ಕಿಡಿಕಾರಿದರು.

ಮಣ್ಣು ಕುಸಿತ: ಸಾವು

ಮಾಗಡಿ(ಬೆಂ.ದಕ್ಷಿಣ): ದಾಬಸ್‌ಪೇಟೆ ಕೈಗಾರಿಕಾ ಪ್ರದೇಶಕ್ಕೆ ಕಾವೇರಿ ನೀರು ಪೂರೈಸುವ ಪೈಪ್‌ಲೈನ್ ಅಳವಡಿಸುವ ಕಾಮಗಾರಿ ವೇಳೆ ಗುಡೇಮಾರನಹಳ್ಳಿ ಟೋಲ್ ಸಮೀಪ ಕಂದಕದ ಮಣ್ಣು ಕುಸಿದು ಜಾರ್ಖಂಡ್ ರಾಜ್ಯದ ಪಲಮು ಜಿಲ್ಲೆಯ ಡಾಲ್ಟನ್ ಗಂಜ್ ಗ್ರಾಮದ ಕಾರ್ಮಿಕ ನೀರಜ್ ಕುಮಾರ್ ಚಂದ್ರಬನ್ನಿ (31) ಮೃತಪಟ್ಟಿದ್ದು, ಮತ್ತೊಬ್ಬ ಕಾರ್ಮಿಕ ಅಂಕಿತ್ ಕುಮಾರ್ ಗಾಯಗೊಂಡಿದ್ದಾರೆ.

ವಿದ್ಯಾರ್ಥಿಗಳ ಸಂಕಷ್ಟಕ್ಕೆ ಕಾಂಗ್ರೆಸ್ಸೇ ಕಾರಣ: ಅಶೋಕ್

ಬೆಂಗಳೂರು: ಕಾಂಗ್ರೆಸ್ ಸಮಾವೇಶದಿಂದಲೇ ನೀಟ್ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ. ಪರೀಕ್ಷೆ ತಪ್ಪಿದೆ ಎಂದು ವಿಧಾನಸಭೆ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಆರೋಪಿಸಿದ್ದಾರೆ.

ಸುದ್ದಿಗಾರರೊಂದಿಗೆ ಸೋಮವಾರ ಮಾತನಾಡಿ, ''ಕಾಂಗ್ರೆಸ್ ನಾಯಕರಿಗೆ ವಿದ್ಯಾರ್ಥಿಗಳ ಭವಿಷ್ಯಕ್ಕಿಂತ ತಮ್ಮ ಪ್ರಚಾರವೇ ಮುಖ್ಯವಾಗಿತ್ತು,'' ಎಂದು ಆಕ್ಷೇಪಿಸಿದರು.

ಕಮಿಷನ್ ವ್ಯವಹಾರ:''ಕಾಂಗ್ರೆಸ್ ಅಧಿಕಾರಕ್ಕೆ ಬಂದ ಬಳಿಕ ರಾಜ್ಯದಲ್ಲಿ ಕಮಿಷನ್ ವ್ಯವಹಾರ ನಡೆಯುತ್ತಿದೆ. ಈಗ ಅದಾನಿ ಕಂಪನಿಯ ಯೋಜನೆಗಳ ವಿಚಾರದಲ್ಲೂ ಅನುಮಾನ ಉಂಟಾಗಿದೆ. ಬಡವರ ಹೆಸರಿನಲ್ಲಿ ಕೋಟ್ಯಂತರ ರೂ. ವೆಚ್ಚದ ಯೋಜನೆ ಘೋಷಿಸಿದ ಕಾಂಗ್ರೆಸ್ ಸರಕಾರ ವಾಸ್ತವದಲ್ಲಿ ಕಮಿಷನ್ ವಸೂಲಿಗಾಗಿಯೇ ಆಡಳಿತ ನಡೆಸುತ್ತಿದೆ. ಅದಾನಿ ಸಂಸ್ಥೆಯ ಯೋಜನೆ ಸಂಬಂಧದಲ್ಲಿ ಕಾಂಗ್ರೆಸ್ ನಾಯಕರು ಚುನಾವಣೆಗೂ ಮೊದಲು ಒಂದು ರೀತಿ ಮಾತನಾಡಿದ್ದರು. ಈಗ ಅವರ ವರ್ತನೆ ಬೇರೆಯಾಗಿದೆ,'' ಎಂದು ಆಪಾದಿಸಿದರು.

ಭಾರತ ಸರ್ಕಾರ
ಭಾರತದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ
(ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ, ಭಾರತ ಸರ್ಕಾರ)
ಯೋಜನಾ ಅನುಷ್ಠಾನ ಘಟಕ–ಬೆಂಗಳೂರು

ಸಾರ್ವಜನಿಕ ಪ್ರಕಟಣೆ / ಸೂಚನೆ
2026–27 ನೇ ಹಣಕಾಸು ವರ್ಷದ ಹೆಡಗಿನಬೆಲೆ, ಅಗ್ರಹಾರ, ಕೃಷ್ಣರಾಜಪುರ ಮತ್ತು ಸುಂದರಪಾಳ್ಯ ಸುಂಕ ವಸೂಲಾತಿ ಕೇಂದ್ರದಲ್ಲಿ ದಿನಾಂಕ 25.06.2026 ರಿಂದ ಅನ್ವಯವಾಗುವ ಪರಿಷ್ಕರಿಸಲಾದ ಸುಂಕ ದರ

1. ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಇವರ ಪತ್ರ 07.05.2026 ರ ಅನ್ವಯ ಅನುಮೋದನೆಗೊಂಡ ಶುಲ್ಕ ದರಗಳ ಅನುಸಾರವಾಗಿ ಹೆಡಗಿನಬೆಲೆ, ಅಗ್ರಹಾರ, ಕೃಷ್ಣರಾಜಪುರ ಮತ್ತು ಸುಂದರಪಾಳ್ಯ ಸುಂಕ ವಸೂಲಾತಿ ಕೇಂದ್ರದಲ್ಲಿ ಬಳಕೆದಾರರ ಶುಲ್ಕ ದರಗಳು 25.06.2026 (0:00 ಘಂಟೆ) ರಿಂದ ಕರ್ನಾಟಕ ರಾಜ್ಯದ ಬೆಂಗಳೂರು – ಚೆನ್ನೈ ಎಕ್ಸ್‌ಪ್ರೆಸ್‌ವೇಯ ಬೆಂಗಳೂರಿನಿಂದ ಬೆತಮಂಗಲ ವಿಭಾಗದಲ್ಲಿ, ಕಿ.ಮೀ 0.000 ರಿಂದ ಕಿ.ಮೀ 71.000 ವರೆಗೆ (ಆರಂಭ ಬಿಂದುವಿನಲ್ಲಿ ಎನ್‌ಎಚ್–4 ನಲ್ಲಿ ಇಂಟರ್ ಚೇಂಜ್ ಎನ್‌ಎಚ್–207 ಕಡೆಗೆ 0.700 ಕಿ.ಮೀ ಪ್ರವೇಶ ರಸ್ತೆಯನ್ನು ಒಳಗೊಂಡಂತೆ) 4 ಲೇನ್ ಎಕ್ಸ್‌ಪ್ರೆಸ್‌ವೇ ಬಳಕೆಗೆ ಅನ್ವಯವಾಗುತ್ತದೆ ಎಂದು ಸಾರ್ವಜನಿಕರಿಗೆ ಈ ಮೂಲಕ ತಿಳಿಸಲಾಗುತ್ತಿದೆ. ಕೆಳಗೆ ತಿಳಿಸಿದ ದರ 31.03.2027 ವರೆಗೆ ಜಾರಿಯಲ್ಲಿರುತ್ತದೆ.

ಮೊತ್ತ ರೂ.ಗಳಲ್ಲಿ

ಹೆಡಗಿನಬೆಲೆ ಸುಂಕವಸೂಲಾತಿ ಕೇಂದ್ರದಲ್ಲಿ

	ವಾಹನಗಳ ಮಾದರಿ	ಏಕಮುಖ ಸಂಚಾರಕ್ಕೆ	ಅದೇ ದಿನ ಮರಳಿ ಬಂದರೆ	ಒಂದು ತಿಂಗಳಲ್ಲಿ 50 ಬಾರಿ ಮಾಸಿಕ ಪಾಸ್ ಶುಲ್ಕ
ಅಗ್ರಹಾರ ಸುಂಕವಸೂಲಾತಿ ಕೇಂದ್ರದಿಂದ	ಕಾರು / ಜೀಪು / ವ್ಯಾನು / ಲಘು ಮೋಟಾರು ವಾಹನ	50	75	1,655
	ಲಘು ವಾಣಿಜ್ಯ ವಾಹನಂಗಕು / ಲಘು ಸರಕು ವಾಹನಗಳು / ಮಿನಿ ಬಸ್ಸು	80	120	2,675
	ಬಸ್ಸು ಅಥವಾ ಟ್ರಕ್ (ಎರಡು ಅಕ್ಸೆಲ್‌ಗಳು)	170	250	5,605
	ಮೂರು ಆಕ್ಸೆಲ್ ವಾಣಿಜ್ಯ ವಾಹನ	185	275	6,110
	ಭಾರಿ ನಿರ್ಮಾಣದ ಯಂತ್ರಗಳು (ಎಚ್ ಸಿ ಎಂ) ಅಥವಾ ಭೂ ಅಗೆತದ ಸಾಧನಗಳು (ಇಎಂಇ) ಅಥವಾ ಬಹು ಆಕ್ಸೆಲ್ ವಾಹನ (ಎಂಎವಿ) (4 ರಿಂದ 6 ಅಕ್ಸೆಲ್‌ಗಳದ್ದು)	265	395	8,785
	ಮಿತಿಮೀರಿದ ಅಳತೆಯ ವಾಹನಗಳು (7 ಅಥವಾ ಅದಕ್ಕೂ ಹೆಚ್ಚಿನ ಸಂಖ್ಯೆ ಅಕ್ಸೆಲ್‌ಗಳದ್ದು)	320	480	10,695
ಕೃಷ್ಣರಾಜಪುರ ಸುಂಕವಸೂಲಾತಿ ಕೇಂದ್ರದಿಂದ	ಕಾರು / ಜೀಪು / ವ್ಯಾನು / ಲಘು ಮೋಟಾರು ವಾಹನ	115	175	3,855
	ಲಘು ವಾಣಿಜ್ಯ ವಾಹನಂಗಕು / ಲಘು ಸರಕು ವಾಹನಗಳು / ಮಿನಿ ಬಸ್ಸು	185	280	6,230
	ಬಸ್ಸು ಅಥವಾ ಟ್ರಕ್ (ಎರಡು ಅಕ್ಸೆಲ್‌ಗಳು)	390	585	13,050
	ಮೂರು ಆಕ್ಸೆಲ್ ವಾಣಿಜ್ಯ ವಾಹನ	425	640	14,235
	ಭಾರಿ ನಿರ್ಮಾಣದ ಯಂತ್ರಗಳು (ಎಚ್ ಸಿ ಎಂ) ಅಥವಾ ಭೂ ಅಗೆತದ ಸಾಧನಗಳು (ಇಎಂಇ) ಅಥವಾ ಬಹು ಆಕ್ಸೆಲ್ ವಾಹನ (ಎಂಎವಿ) (4 ರಿಂದ 6 ಅಕ್ಸೆಲ್‌ಗಳದ್ದು)	615	920	20,460
	ಮಿತಿಮೀರಿದ ಅಳತೆಯ ವಾಹನಗಳು (7 ಅಥವಾ ಅದಕ್ಕೂ ಹೆಚ್ಚಿನ ಸಂಖ್ಯೆ ಅಕ್ಸೆಲ್‌ಗಳದ್ದು)	745	1,120	24,910
ಸುಂದರಪಾಳ್ಯ ಸುಂಕವಸೂಲಾತಿ ಕೇಂದ್ರದಿಂದ	ಕಾರು / ಜೀಪು / ವ್ಯಾನು / ಲಘು ಮೋಟಾರು ವಾಹನ	145	215	4,805
	ಲಘು ವಾಣಿಜ್ಯ ವಾಹನಂಗಕು / ಲಘು ಸರಕು ವಾಹನಗಳು / ಮಿನಿ ಬಸ್ಸು	235	350	7,765
	ಬಸ್ಸು ಅಥವಾ ಟ್ರಕ್ (ಎರಡು ಅಕ್ಸೆಲ್‌ಗಳು)	490	730	16,270
	ಮೂರು ಆಕ್ಸೆಲ್ ವಾಣಿಜ್ಯ ವಾಹನ	530	800	17,750
	ಭಾರಿ ನಿರ್ಮಾಣದ ಯಂತ್ರಗಳು (ಎಚ್ ಸಿ ಎಂ) ಅಥವಾ ಭೂ ಅಗೆತದ ಸಾಧನಗಳು (ಇಎಂಇ) ಅಥವಾ ಬಹು ಆಕ್ಸೆಲ್ ವಾಹನ (ಎಂಎವಿ) (4 ರಿಂದ 6 ಅಕ್ಸೆಲ್‌ಗಳದ್ದು)	765	1,150	25,515
	ಮಿತಿಮೀರಿದ ಅಳತೆಯ ವಾಹನಗಳು (7 ಅಥವಾ ಅದಕ್ಕೂ ಹೆಚ್ಚಿನ ಸಂಖ್ಯೆ ಅಕ್ಸೆಲ್‌ಗಳದ್ದು)	930	1,400	31,060
ಭೈರೆಡ್ಡಿಪಲ್ಲೆ ಸುಂಕವಸೂಲಾತಿ ಕೇಂದ್ರದಿಂದ	ಕಾರು / ಜೀಪು / ವ್ಯಾನು / ಲಘು ಮೋಟಾರು ವಾಹನ	195	290	6,465
	ಲಘು ವಾಣಿಜ್ಯ ವಾಹನಂಗಕು / ಲಘು ಸರಕು ವಾಹನಗಳು / ಮಿನಿ ಬಸ್ಸು	315	470	10,440
	ಬಸ್ಸು ಅಥವಾ ಟ್ರಕ್ (ಎರಡು ಅಕ್ಸೆಲ್‌ಗಳು)	655	985	21,875
	ಮೂರು ಆಕ್ಸೆಲ್ ವಾಣಿಜ್ಯ ವಾಹನ	715	1,075	23,865
	ಭಾರಿ ನಿರ್ಮಾಣದ ಯಂತ್ರಗಳು (ಎಚ್ ಸಿ ಎಂ) ಅಥವಾ ಭೂ ಅಗೆತದ ಸಾಧನಗಳು (ಇಎಂಇ) ಅಥವಾ ಬಹು ಆಕ್ಸೆಲ್ ವಾಹನ (ಎಂಎವಿ) (4 ರಿಂದ 6 ಅಕ್ಸೆಲ್‌ಗಳದ್ದು)	1,030	1,545	34,305
	ಮಿತಿಮೀರಿದ ಅಳತೆಯ ವಾಹನಗಳು (7 ಅಥವಾ ಅದಕ್ಕೂ ಹೆಚ್ಚಿನ ಸಂಖ್ಯೆ ಅಕ್ಸೆಲ್‌ಗಳದ್ದು)	1,255	1,880	41,765

ಅಗ್ರಹಾರ ಸುಂಕವಸೂಲಾತಿ ಕೇಂದ್ರದಲ್ಲಿ

	ವಾಹನಗಳ ಮಾದರಿ	ಏಕಮುಖ ಸಂಚಾರಕ್ಕೆ	ಅದೇ ದಿನ ಮರಳಿ ಬಂದರೆ	ಒಂದು ತಿಂಗಳಲ್ಲಿ 50 ಬಾರಿ ಮಾಸಿಕ ಪಾಸ್ ಶುಲ್ಕ
ಹೆಡಗಿನಬೆಲೆ ಸುಂಕವಸೂಲಾತಿ ಕೇಂದ್ರದಿಂದ	ಕಾರು / ಜೀಪು / ವ್ಯಾನು / ಲಘು ಮೋಟಾರು ವಾಹನ	50	75	1,655
	ಲಘು ವಾಣಿಜ್ಯ ವಾಹನಂಗಕು / ಲಘು ಸರಕು ವಾಹನಗಳು / ಮಿನಿ ಬಸ್ಸು	80	120	2,675
	ಬಸ್ಸು ಅಥವಾ ಟ್ರಕ್ (ಎರಡು ಅಕ್ಸೆಲ್‌ಗಳು)	170	250	5,605
	ಮೂರು ಆಕ್ಸೆಲ್ ವಾಣಿಜ್ಯ ವಾಹನ	185	275	6,110
	ಭಾರಿ ನಿರ್ಮಾಣದ ಯಂತ್ರಗಳು (ಎಚ್ ಸಿ ಎಂ) ಅಥವಾ ಭೂ ಅಗೆತದ ಸಾಧನಗಳು (ಇಎಂಇ) ಅಥವಾ ಬಹು ಆಕ್ಸೆಲ್ ವಾಹನ (ಎಂಎವಿ) (4 ರಿಂದ 6 ಅಕ್ಸೆಲ್‌ಗಳದ್ದು)	265	395	8,785
	ಮಿತಿಮೀರಿದ ಅಳತೆಯ ವಾಹನಗಳು (7 ಅಥವಾ ಅದಕ್ಕೂ ಹೆಚ್ಚಿನ ಸಂಖ್ಯೆ ಅಕ್ಸೆಲ್‌ಗಳದ್ದು)	320	480	10,695
ಕೃಷ್ಣರಾಜಪುರ ಸುಂಕವಸೂಲಾತಿ ಕೇಂದ್ರದಿಂದ	ಕಾರು / ಜೀಪು / ವ್ಯಾನು / ಲಘು ಮೋಟಾರು ವಾಹನ	65	100	2,200
	ಲಘು ವಾಣಿಜ್ಯ ವಾಹನಂಗಕು / ಲಘು ಸರಕು ವಾಹನಗಳು / ಮಿನಿ ಬಸ್ಸು	105	160	3,555
	ಬಸ್ಸು ಅಥವಾ ಟ್ರಕ್ (ಎರಡು ಅಕ್ಸೆಲ್‌ಗಳು)	225	335	7,445
	ಮೂರು ಆಕ್ಸೆಲ್ ವಾಣಿಜ್ಯ ವಾಹನ	245	365	8,125
	ಭಾರಿ ನಿರ್ಮಾಣದ ಯಂತ್ರಗಳು (ಎಚ್ ಸಿ ಎಂ) ಅಥವಾ ಭೂ ಅಗೆತದ ಸಾಧನಗಳು (ಇಎಂಇ) ಅಥವಾ ಬಹು ಆಕ್ಸೆಲ್ ವಾಹನ (ಎಂಎವಿ) (4 ರಿಂದ 6 ಅಕ್ಸೆಲ್‌ಗಳದ್ದು)	350	525	11,675
	ಮಿತಿಮೀರಿದ ಅಳತೆಯ ವಾಹನಗಳು (7 ಅಥವಾ ಅದಕ್ಕೂ ಹೆಚ್ಚಿನ ಸಂಖ್ಯೆ ಅಕ್ಸೆಲ್‌ಗಳದ್ದು)	425	640	14,215
ಸುಂದರಪಾಳ್ಯ ಸುಂಕವಸೂಲಾತಿ ಕೇಂದ್ರದಿಂದ	ಕಾರು / ಜೀಪು / ವ್ಯಾನು / ಲಘು ಮೋಟಾರು ವಾಹನ	95	140	3,150
	ಲಘು ವಾಣಿಜ್ಯ ವಾಹನಂಗಕು / ಲಘು ಸರಕು ವಾಹನಗಳು / ಮಿನಿ ಬಸ್ಸು	155	230	5,090
	ಬಸ್ಸು ಅಥವಾ ಟ್ರಕ್ (ಎರಡು ಅಕ್ಸೆಲ್‌ಗಳು)	320	480	10,670
	ಮೂರು ಆಕ್ಸೆಲ್ ವಾಣಿಜ್ಯ ವಾಹನ	350	525	11,640
	ಭಾರಿ ನಿರ್ಮಾಣದ ಯಂತ್ರಗಳು (ಎಚ್ ಸಿ ಎಂ) ಅಥವಾ ಭೂ ಅಗೆತದ ಸಾಧನಗಳು (ಇಎಂಇ) ಅಥವಾ ಬಹು ಆಕ್ಸೆಲ್ ವಾಹನ (ಎಂಎವಿ) (4 ರಿಂದ 6 ಅಕ್ಸೆಲ್‌ಗಳದ್ದು)	500	755	16,730
	ಮಿತಿಮೀರಿದ ಅಳತೆಯ ವಾಹನಗಳು (7 ಅಥವಾ ಅದಕ್ಕೂ ಹೆಚ್ಚಿನ ಸಂಖ್ಯೆ ಅಕ್ಸೆಲ್‌ಗಳದ್ದು)	610	915	20,365
ಭೈರೆಡ್ಡಿಪಲ್ಲೆ ಸುಂಕವಸೂಲಾತಿ ಕೇಂದ್ರದಿಂದ	ಕಾರು / ಜೀಪು / ವ್ಯಾನು / ಲಘು ಮೋಟಾರು ವಾಹನ	145	215	4,810
	ಲಘು ವಾಣಿಜ್ಯ ವಾಹನಂಗಕು / ಲಘು ಸರಕು ವಾಹನಗಳು / ಮಿನಿ ಬಸ್ಸು	235	350	7,765
	ಬಸ್ಸು ಅಥವಾ ಟ್ರಕ್ (ಎರಡು ಅಕ್ಸೆಲ್‌ಗಳು)	490	730	16,275
	ಮೂರು ಆಕ್ಸೆಲ್ ವಾಣಿಜ್ಯ ವಾಹನ	535	800	17,755
	ಭಾರಿ ನಿರ್ಮಾಣದ ಯಂತ್ರಗಳು (ಎಚ್ ಸಿ ಎಂ) ಅಥವಾ ಭೂ ಅಗೆತದ ಸಾಧನಗಳು (ಇಎಂಇ) ಅಥವಾ ಬಹು ಆಕ್ಸೆಲ್ ವಾಹನ (ಎಂಎವಿ) (4 ರಿಂದ 6 ಅಕ್ಸೆಲ್‌ಗಳದ್ದು)	765	1,150	25,520
	ಮಿತಿಮೀರಿದ ಅಳತೆಯ ವಾಹನಗಳು (7 ಅಥವಾ ಅದಕ್ಕೂ ಹೆಚ್ಚಿನ ಸಂಖ್ಯೆ ಅಕ್ಸೆಲ್‌ಗಳದ್ದು)	930	1,400	31,070

ಕೃಷ್ಣರಾಜಪುರ ಸುಂಕವಸೂಲಾತಿ ಕೇಂದ್ರದಲ್ಲಿ

	ವಾಹನಗಳ ಮಾದರಿ	ಏಕಮುಖ ಸಂಚಾರಕ್ಕೆ	ಅದೇ ದಿನ ಮರಳಿ ಬಂದರೆ	ಒಂದು ತಿಂಗಳಲ್ಲಿ 50 ಬಾರಿ ಮಾಸಿಕ ಪಾಸ್ ಶುಲ್ಕ
ಹೆಡಗಿನಬೆಲೆ ಸುಂಕವಸೂಲಾತಿ ಕೇಂದ್ರದಿಂದ	ಕಾರು / ಜೀಪು / ವ್ಯಾನು / ಲಘು ಮೋಟಾರು ವಾಹನ	115	175	3,855
	ಲಘು ವಾಣಿಜ್ಯ ವಾಹನಂಗಕು / ಲಘು ಸರಕು ವಾಹನಗಳು / ಮಿನಿ ಬಸ್ಸು	185	280	6,230
	ಬಸ್ಸು ಅಥವಾ ಟ್ರಕ್ (ಎರಡು ಅಕ್ಸೆಲ್‌ಗಳು)	390	585	13,050
	ಮೂರು ಆಕ್ಸೆಲ್ ವಾಣಿಜ್ಯ ವಾಹನ	425	640	14,235
	ಭಾರಿ ನಿರ್ಮಾಣದ ಯಂತ್ರಗಳು (ಎಚ್ ಸಿ ಎಂ) ಅಥವಾ ಭೂ ಅಗೆತದ ಸಾಧನಗಳು (ಇಎಂಇ) ಅಥವಾ ಬಹು ಆಕ್ಸೆಲ್ ವಾಹನ (ಎಂಎವಿ) (4 ರಿಂದ 6 ಅಕ್ಸೆಲ್‌ಗಳದ್ದು)	615	920	20,460
	ಮಿತಿಮೀರಿದ ಅಳತೆಯ ವಾಹನಗಳು (7 ಅಥವಾ ಅದಕ್ಕೂ ಹೆಚ್ಚಿನ ಸಂಖ್ಯೆ ಅಕ್ಸೆಲ್‌ಗಳದ್ದು)	745	1,120	24,910
ಅಗ್ರಹಾರ ಸುಂಕವಸೂಲಾತಿ ಕೇಂದ್ರದಿಂದ	ಕಾರು / ಜೀಪು / ವ್ಯಾನು / ಲಘು ಮೋಟಾರು ವಾಹನ	65	100	2,200
	ಲಘು ವಾಣಿಜ್ಯ ವಾಹನಂಗಕು / ಲಘು ಸರಕು ವಾಹನಗಳು / ಮಿನಿ ಬಸ್ಸು	105	160	3,555
	ಬಸ್ಸು ಅಥವಾ ಟ್ರಕ್ (ಎರಡು ಅಕ್ಸೆಲ್‌ಗಳು)	225	335	7,445
	ಮೂರು ಆಕ್ಸೆಲ್ ವಾಣಿಜ್ಯ ವಾಹನ	245	365	8,125
	ಭಾರಿ ನಿರ್ಮಾಣದ ಯಂತ್ರಗಳು (ಎಚ್ ಸಿ ಎಂ) ಅಥವಾ ಭೂ ಅಗೆತದ ಸಾಧನಗಳು (ಇಎಂಇ) ಅಥವಾ ಬಹು ಆಕ್ಸೆಲ್ ವಾಹನ (ಎಂಎವಿ) (4 ರಿಂದ 6 ಅಕ್ಸೆಲ್‌ಗಳದ್ದು)	350	525	11,675
	ಮಿತಿಮೀರಿದ ಅಳತೆಯ ವಾಹನಗಳು (7 ಅಥವಾ ಅದಕ್ಕೂ ಹೆಚ್ಚಿನ ಸಂಖ್ಯೆ ಅಕ್ಸೆಲ್‌ಗಳದ್ದು)	425	640	14,215
ಸುಂದರಪಾಳ್ಯ ಸುಂಕವಸೂಲಾತಿ ಕೇಂದ್ರದಿಂದ	ಕಾರು / ಜೀಪು / ವ್ಯಾನು / ಲಘು ಮೋಟಾರು ವಾಹನ	30	45	950
	ಲಘು ವಾಣಿಜ್ಯ ವಾಹನಂಗಕು / ಲಘು ಸರಕು ವಾಹನಗಳು / ಮಿನಿ ಬಸ್ಸು	45	70	1,540
	ಬಸ್ಸು ಅಥವಾ ಟ್ರಕ್ (ಎರಡು ಅಕ್ಸೆಲ್‌ಗಳು)	95	145	3,220
	ಮೂರು ಆಕ್ಸೆಲ್ ವಾಣಿಜ್ಯ ವಾಹನ	105	160	3,515
	ಭಾರಿ ನಿರ್ಮಾಣದ ಯಂತ್ರಗಳು (ಎಚ್ ಸಿ ಎಂ) ಅಥವಾ ಭೂ ಅಗೆತದ ಸಾಧನಗಳು (ಇಎಂಇ) ಅಥವಾ ಬಹು ಆಕ್ಸೆಲ್ ವಾಹನ (ಎಂಎವಿ) (4 ರಿಂದ 6 ಅಕ್ಸೆಲ್‌ಗಳದ್ದು)	150	225	5,050
	ಮಿತಿಮೀರಿದ ಅಳತೆಯ ವಾಹನಗಳು (7 ಅಥವಾ ಅದಕ್ಕೂ ಹೆಚ್ಚಿನ ಸಂಖ್ಯೆ ಅಕ್ಸೆಲ್‌ಗಳದ್ದು)	185	275	6,150
ಭೈರೆಡ್ಡಿಪಲ್ಲೆ ಸುಂಕವಸೂಲಾತಿ ಕೇಂದ್ರದಿಂದ	ಕಾರು / ಜೀಪು / ವ್ಯಾನು / ಲಘು ಮೋಟಾರು ವಾಹನ	80	115	2,610
	ಲಘು ವಾಣಿಜ್ಯ ವಾಹನಂಗಕು / ಲಘು ಸರಕು ವಾಹನಗಳು / ಮಿನಿ ಬಸ್ಸು	125	190	4,215
	ಬಸ್ಸು ಅಥವಾ ಟ್ರಕ್ (ಎರಡು ಅಕ್ಸೆಲ್‌ಗಳು)	265	395	8,830
	ಮೂರು ಆಕ್ಸೆಲ್ ವಾಣಿಜ್ಯ ವಾಹನ	290	435	9,630
	ಭಾರಿ ನಿರ್ಮಾಣದ ಯಂತ್ರಗಳು (ಎಚ್ ಸಿ ಎಂ) ಅಥವಾ ಭೂ ಅಗೆತದ ಸಾಧನಗಳು (ಇಎಂಇ) ಅಥವಾ ಬಹು ಆಕ್ಸೆಲ್ ವಾಹನ (ಎಂಎವಿ) (4 ರಿಂದ 6 ಅಕ್ಸೆಲ್‌ಗಳದ್ದು)	415	625	13,845
	ಮಿತಿಮೀರಿದ ಅಳತೆಯ ವಾಹನಗಳು (7 ಅಥವಾ ಅದಕ್ಕೂ ಹೆಚ್ಚಿನ ಸಂಖ್ಯೆ ಅಕ್ಸೆಲ್‌ಗಳದ್ದು)	505	760	16,855

ಸುಂದರಪಾಳ್ಯ ಸುಂಕ ವಸೂಲಾತಿ ಕೇಂದ್ರದಲ್ಲಿ

	ವಾಹನಗಳ ಮಾದರಿ	ಏಕಮುಖ ಸಂಚಾರಕ್ಕೆ	ಅದೇ ದಿನ ಮರಳಿ ಬಂದರೆ	ಒಂದು ತಿಂಗಳಲ್ಲಿ 50 ಬಾರಿ ಮಾಸಿಕ ಪಾಸ್ ಶುಲ್ಕ
ಹೆಡಗಿನಬೆಲೆ ಸುಂಕವಸೂಲಾತಿ ಕೇಂದ್ರದಿಂದ	ಕಾರು / ಜೀಪು / ವ್ಯಾನು / ಲಘು ಮೋಟಾರು ವಾಹನ	145	215	4,805
	ಲಘು ವಾಣಿಜ್ಯ ವಾಹನಂಗಕು / ಲಘು ಸರಕು ವಾಹನಗಳು / ಮಿನಿ ಬಸ್ಸು	235	350	7,765
	ಬಸ್ಸು ಅಥವಾ ಟ್ರಕ್ (ಎರಡು ಅಕ್ಸೆಲ್‌ಗಳು)	490	730	16,270
	ಮೂರು ಆಕ್ಸೆಲ್ ವಾಣಿಜ್ಯ ವಾಹನ	530	800	17,750
	ಭಾರಿ ನಿರ್ಮಾಣದ ಯಂತ್ರಗಳು (ಎಚ್ ಸಿ ಎಂ) ಅಥವಾ ಭೂ ಅಗೆತದ ಸಾಧನಗಳು (ಇಎಂಇ) ಅಥವಾ ಬಹು ಆಕ್ಸೆಲ್ ವಾಹನ (ಎಂಎವಿ) (4 ರಿಂದ 6 ಅಕ್ಸೆಲ್‌ಗಳದ್ದು)	765	1,150	25,515
	ಮಿತಿಮೀರಿದ ಅಳತೆಯ ವಾಹನಗಳು (7 ಅಥವಾ ಅದಕ್ಕೂ ಹೆಚ್ಚಿನ ಸಂಖ್ಯೆ ಅಕ್ಸೆಲ್‌ಗಳದ್ದು)	930	1,400	31,060
ಅಗ್ರಹಾರ ಸುಂಕವಸೂಲಾತಿ ಕೇಂದ್ರದಿಂದ	ಕಾರು / ಜೀಪು / ವ್ಯಾನು / ಲಘು ಮೋಟಾರು ವಾಹನ	95	140	3,150
	ಲಘು ವಾಣಿಜ್ಯ ವಾಹನಂಗಕು / ಲಘು ಸರಕು ವಾಹನಗಳು / ಮಿನಿ ಬಸ್ಸು	155	230	5,090
	ಬಸ್ಸು ಅಥವಾ ಟ್ರಕ್ (ಎರಡು ಅಕ್ಸೆಲ್‌ಗಳು)	320	480	10,670
	ಮೂರು ಆಕ್ಸೆಲ್ ವಾಣಿಜ್ಯ ವಾಹನ	350	525	11,640
	ಭಾರಿ ನಿರ್ಮಾಣದ ಯಂತ್ರಗಳು (ಎಚ್ ಸಿ ಎಂ) ಅಥವಾ ಭೂ ಅಗೆತದ ಸಾಧನಗಳು (ಇಎಂಇ) ಅಥವಾ ಬಹು ಆಕ್ಸೆಲ್ ವಾಹನ (ಎಂಎವಿ) (4 ರಿಂದ 6 ಅಕ್ಸೆಲ್‌ಗಳದ್ದು)	500	755	16,730
	ಮಿತಿಮೀರಿದ ಅಳತೆಯ ವಾಹನಗಳು (7 ಅಥವಾ ಅದಕ್ಕೂ ಹೆಚ್ಚಿನ ಸಂಖ್ಯೆ ಅಕ್ಸೆಲ್‌ಗಳದ್ದು)	610	915	20,365
ಕೃಷ್ಣರಾಜಪುರ ಸುಂಕವಸೂಲಾತಿ ಕೇಂದ್ರದಿಂದ	ಕಾರು / ಜೀಪು / ವ್ಯಾನು / ಲಘು ಮೋಟಾರು ವಾಹನ	30	45	950
	ಲಘು ವಾಣಿಜ್ಯ ವಾಹನಂಗಕು / ಲಘು ಸರಕು ವಾಹನಗಳು / ಮಿನಿ ಬಸ್ಸು	45	70	1,540
	ಬಸ್ಸು ಅಥವಾ ಟ್ರಕ್ (ಎರಡು ಅಕ್ಸೆಲ್‌ಗಳು)	95	145	3,220
	ಮೂರು ಆಕ್ಸೆಲ್ ವಾಣಿಜ್ಯ ವಾಹನ	105	160	3,515
	ಭಾರಿ ನಿರ್ಮಾಣದ ಯಂತ್ರಗಳು (ಎಚ್ ಸಿ ಎಂ) ಅಥವಾ ಭೂ ಅಗೆತದ ಸಾಧನಗಳು (ಇಎಂಇ) ಅಥವಾ ಬಹು ಆಕ್ಸೆಲ್ ವಾಹನ (ಎಂಎವಿ) (4 ರಿಂದ 6 ಅಕ್ಸೆಲ್‌ಗಳದ್ದು)	150	225	5,050
	ಮಿತಿಮೀರಿದ ಅಳತೆಯ ವಾಹನಗಳು (7 ಅಥವಾ ಅದಕ್ಕೂ ಹೆಚ್ಚಿನ ಸಂಖ್ಯೆ ಅಕ್ಸೆಲ್‌ಗಳದ್ದು)	185	275	6,150
ಭೈರೆಡ್ಡಿಪಲ್ಲೆ ಸುಂಕವಸೂಲಾತಿ ಕೇಂದ್ರದಿಂದ	ಕಾರು / ಜೀಪು / ವ್ಯಾನು / ಲಘು ಮೋಟಾರು ವಾಹನ	50	75	1,655
	ಲಘು ವಾಣಿಜ್ಯ ವಾಹನಂಗಕು / ಲಘು ಸರಕು ವಾಹನಗಳು / ಮಿನಿ ಬಸ್ಸು	80	120	2,675
	ಬಸ್ಸು ಅಥವಾ ಟ್ರಕ್ (ಎರಡು ಅಕ್ಸೆಲ್‌ಗಳು)	170	250	5,605
	ಮೂರು ಆಕ್ಸೆಲ್ ವಾಣಿಜ್ಯ ವಾಹನ	185	275	6,115
	ಭಾರಿ ನಿರ್ಮಾಣದ ಯಂತ್ರಗಳು (ಎಚ್ ಸಿ ಎಂ) ಅಥವಾ ಭೂ ಅಗೆತದ ಸಾಧನಗಳು (ಇಎಂಇ) ಅಥವಾ ಬಹು ಆಕ್ಸೆಲ್ ವಾಹನ (ಎಂಎವಿ) (4 ರಿಂದ 6 ಅಕ್ಸೆಲ್‌ಗಳದ್ದು)	265	395	8,790
	ಮಿತಿಮೀರಿದ ಅಳತೆಯ ವಾಹನಗಳು (7 ಅಥವಾ ಅದಕ್ಕೂ ಹೆಚ್ಚಿನ ಸಂಖ್ಯೆ ಅಕ್ಸೆಲ್‌ಗಳದ್ದು)	320	480	10,705

2. ಈ ಮೇಲಿನ ಸುಂಕವಸೂಲಾತಿ ಕೇಂದ್ರ ದಲ್ಲಿ ಈ ಕೆಳಗಿನ ರಿಯಾಯತಿ ಲಭ್ಯವಿದೆ:–
a. ಎಲ್ಲಾ ರೀತಿಯ ವಾಹನಗಳು ಪ್ರಯಾಣದ 24 ತಾಸಿನೊಳಗೆ ಮರಳಿ ಬಂದಲ್ಲಿ ಶೇ.25% ರಿಯಾಯಿತಿ.
b. ಎಲ್ಲಾ ವಿಭಾಗದಲ್ಲಿ ವಾಹನಗಳ ಪಾವತಿ ದಿನಾಂಕದಿಂದ ಒಂದು ತಿಂಗಳೊಳಗಾಗಿ 50 ಬಾರಿ ಪ್ರಯಾಣಿಸಿದಲ್ಲಿ ಶೇ.33% ರಿಯಾಯಿತಿ
c. ಚಾಲಕ ಅಥವಾ ಮಾಲೀಕ ಅಥವಾ ಅದರ ವರ್ಗಕ್ಕೆ ನಿರ್ದಿಷ್ಟಪಡಿಸಿದ ಅನುಮತಿಸಲಾದ ಭಾರಕ್ಕಿಂತ ಹೆಚ್ಚಿನ ಭಾರವನ್ನು ತುಂಬಿದ ಯಾಂತ್ರಿಕ ವಾಹನದ ಪ್ರಭಾರದಲ್ಲಿರುವ ವ್ಯಕ್ತಿಯು, ರಾಷ್ಟ್ರೀಯ ಹೆದ್ದಾರಿಯಲ್ಲಿ ಮಿತಿಮೀರಿದ ಭಾರವನ್ನು ತುಂಬಿದ ವಾಹನವನ್ನು ಪ್ರವೇಶಿಸಿದ್ದಕ್ಕಾಗಿ ಶುಲ್ಕ ಸಂಗ್ರಹಣಾ ಏಜೆನ್ಸಿಗೆ ಸದರಿ ನಿಯಮಗಳ ನಿಯಮ 10ರ ಉಪ–ನಿಯಮ 1ಎಯಲ್ಲಿ ನಿರ್ದಿಷ್ಟಪಡಿಸಿದ ಶುಲ್ಕಕ್ಕೆ ಸಮನಾದ ಶುಲ್ಕವನ್ನು ಪಾವತಿಸಲು ಬದ್ಧನಾಗಿರತಕ್ಕದ್ದು ಮತ್ತು ಅಂತಹ ಯಾಂತ್ರಿಕ ವಾಹನದಿಂದ ಹೆಚ್ಚುವರಿ ಭಾರವನ್ನು ತೆಗೆದುಹಾಕದ ಹೊರತು ಹೆದ್ದಾರಿ ವಿಭಾಗವನ್ನು ಬಳಸಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.
d. ಮೇಲೆ ಪ್ರಕಟಿಸಿದ ದರಗಳು FY 2026–27 ವರ್ಷಕ್ಕಾಗಿವೆ ಮತ್ತು 01.04.2027 ರಿಂದ ದರಗಳನ್ನು ಪರಿಷ್ಕರಿಸಲಾಗುವುದು, ಇದು ಎನ್‌ಎಚ್ ಶುಲ್ಕ ನಿಯಮ 2008 ರ ನಿಯಮ 5 ಮತ್ತು ಅದರ ತಿದ್ದುಪಡಿಗಳ ಪ್ರಕಾರ ದೇಶಾದ್ಯಂತದ ಎಲ್ಲಾ ಬಳಕೆದಾರ ಶುಲ್ಕ ಪ್ಲಾಜಾಗಳಿಗೆ ವಾರ್ಷಿಕ ದರ ಪರಿಷ್ಕರಣೆಯಾಗಿದೆ.
3. ಜಿ ಎಸ್ ಆರ್ 950 (ಇ) ದಿನಾಂಕ 03.12.2010 ರ ಶುಲ್ಕ ವಿನಾಯಿತಿ ಹೊಂದಿರುವ ವಾಹನಗಳ ಪಟ್ಟಿಯನ್ನು ನೀಡಲಾಗಿದೆ
4. ಈ ಸುಂಕವಸೂಲಾತಿ ಕೇಂದ್ರಗಳು S .O No.2326 (ಇ) ದಿನಾಂಕ 07.05.2026 ರ ಸುಂಕ ವಸೂಲಾತಿ ಅಧಿಸೂಚನೆಯನ್ನು ಗೆಜೆಟ್ ಆಫ್ ಇಂಡಿಯಾದಲ್ಲಿ ಪ್ರಕಟಿಸಲಾಗಿದೆ.
5. ಯಾವುದೇ ದೂರುಗಳಿಗಾಗಿ ಸಂಪರ್ಕಿಸಿ 1033 ಮತ್ತು ವಿಚಾರಣೆಗಾಗಿ ಅಥವಾ ಸಲಹೆಗಳನ್ನು ನೀಡಲು ಸಂಪರ್ಕಿಸಿ ಯೋಜನಾ ನಿರ್ದೇಶಕರು , ಬೆಂಗಳೂರು–ತುಮಕೂರು ರಸ್ತೆ, ನಾಗಸಂದ್ರ ಮೆಟ್ರೋ ನಿಲ್ದಾಣದ ಪಕ್ಕದಲ್ಲಿ, ಬೆಂಗಳೂರು–560073 ದೂರವಾಣಿ ಸಂಖ್ಯೆ. 080–28394403/080–28394383.

BUILDING A NATION , NOT JUST ROADS

ಮುಸ್ಲಿಮರಿಗೆ ಸಚಿವ ಸ್ಥಾನಕ್ಕೆ ಮನವಿ

ಬೆಂಗಳೂರು: ಸಂಪುಟ ವಿಸ್ತರಣೆ ವೇಳೆ ಕನಿಷ್ಠ ಮೂವರಿಗೆ ಸ್ಥಾನ ನೀಡಬೇಕು ಎಂದು ಉತ್ತರ ಕರ್ನಾಟಕ ಭಾಗದ 14 ಜಿಲ್ಲೆಗಳ ನಾನಾ ದರ್ಗಾಗಳ ಧರ್ಮಗುರುಗಳ ನಿಯೋಗ ಸಿಎಂ ಡಿ.ಕೆ.ಶಿವಕುಮಾರ್ ಅವರಿಗೆ ಮನವಿ ಸಲ್ಲಿಸಿದೆ.

ಉತ್ತರ ಕರ್ನಾಟಕದವರಿಗೆ ಸ್ಥಾನ ನೀಡಬೇಕು. ಬಹಳ ವರ್ಷದಿಂದಲೂ ಕಿತ್ತೂರು ಪ್ರಾಂತ್ಯಕ್ಕೆ ಪ್ರಾತಿನಿಧ್ಯ ಸಿಕ್ಕಿಲ್ಲ, ಹಾಗಾಗಿ ಈ ಬಾರಿ ಅವಕಾಶ ಕಲ್ಪಿಸಬೇಕು ಎಂದು ಒತ್ತಾಯ ಮಾಡಿದರು. ಇದಕ್ಕೆ ಉತ್ತರಿಸಿದ ಸಿಎಂ ಡಿ.ಕೆ.ಶಿವಕುಮಾರ್, ''ಮನ್ಸೂರ್ ಅವರನ್ನು ರಾಜ್ಯಸಭೆಗೆ ಆಯ್ಕೆ ಮಾಡಿದ್ದೇವೆ. ಸಿಎಂ ಪುತ್ರರ ವಿರುದ್ಧ ಶಿಗ್ಗಾವಿಯಲ್ಲಿ ಗೆಲ್ಲಿಸಿದ್ದೇವೆ. ಖಾದರ್ ಅವರನ್ನು ಸ್ಪೀಕರ್ ಮಾಡಿದ್ದೇವು. ರಾಮನಗರದಲ್ಲೂ ಇಕ್ಬಾಲ್ ಗೆಲ್ಲಿಸಿಕೊಂಡಿದ್ದೇವೆ. ನಿಮ್ಮ ಬೇಡಿಕೆ ಹೈಕಮಾಂಡ್ ಗಮನಕ್ಕೆ ತರುತ್ತೇವೆ. ಅವರ ನಿರ್ದೇಶನದಂತೆ ಸಂಪುಟ ವಿಸ್ತರಣೆಯಾಗಲಿದೆ,''ಎಂದರು. ಬಳಿಕ ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಅವರನ್ನೂ ಭೇಟಿಯಾದರು.

KSIIDCಯಿಂದ ₹143 ಕೋಟಿ ಡಿವಿಡೆಂಡ್

ಬೆಂಗಳೂರು: ಕೆಎಸ್‌ಐಐಡಿಸಿ 2024–25ರಲ್ಲಿ ಗಳಿಸಿದ ನಿವ್ವಳ ಲಾಭದಲ್ಲಿ ಗಳಿಸಿದ 143.12 ಕೋಟಿ ರೂ. ಲಾಭಾಂಶದಲ್ಲಿ (ಡಿವಿಡೆಂಡ್) 3 ಕೋಟಿ ರೂ. ಚೆಕ್ ಅನ್ನು ಸಿಎಂ ಪರಿಹಾರ ನಿಧಿಗಾಗಿ ಕೈಗಾರಿಕೆ ಸಚಿವ ಎಂ ಬಿ ಪಾಟೀಲ್ ಸಿಎಂ ಡಿ.ಕೆ.ಶಿವಕುಮಾರ್ ಅವರಿಗೆ ಸೋಮವಾರ ಹಸ್ತಾಂತರಿಸಿದರು.



ಈ ವೇಳೆ ಮಾತನಾಡಿದ ಸಚಿವ ಎಂ.ಬಿ.ಪಾಟೀಲ್, ''ನಿಗಮವು 2024–25ರಲ್ಲಿ ಒಟ್ಟು ತೆರಿಗೆ ಕಡಿತದ ಬಳಿಕ 188.41 ಕೋಟಿ ರೂ. ಲಾಭ ಗಳಿಸಿತ್ತು. ಜತೆಗೆ 2025–26ನೇ ಸಾಲಿನಲ್ಲಿ ಸಂಸ್ಥೆಗೆ 19.34 ಕೋಟಿ ರೂ. ವಿಶೇಷ ಡಿವಿಡೆಂಡ್ ಲಾಭದಲ್ಲಿ ಬಂದಿತ್ತು,'' ಎಂದರು. ''ಕೆಎಸ್‌ಐಐಡಿಸಿಗೆ ಕ್ಯಾಮ್ಕೊ, ಕ್ಯಾಟ್ಕೊ, ಎಂಎಸ್‌ಐಎಲ್, ಎಚ್‌ಜಿಎಂಎಲ್ ಮತ್ತಿತರ ಉದ್ದಿಮೆಗಳಿಂದ ಈ ಆದಾಯ ಬಂದಿದೆ. ಸಾರ್ವಜನಿಕ ಉದ್ದಿಮೆಗಳು ಲಾಭದ ಹಳಿಗೆ ಮರಳುತ್ತಿರುವುದು ಮತ್ತು ಕಳೆದ 3 ವರ್ಷಗಳಿಂದ ಇದು ಸಾರ್ವಕಾಲಿಕ ದಾಖಲೆಯ ಪ್ರಮಾಣದಲ್ಲಿರುವುದು ಉತ್ತಮ ಬೆಳವಣಿಗೆ,'' ಎಂದು ಹೇಳಿದರು.

ರೈಲು ಗಾಲಿ ಕಾರ್ಖಾನೆ
ಯಲಹಂಕ, ಬೆಂಗಳೂರು–560064
Website: www.rwf.indianrailways.gov.in
e-mail:smm.rwfblr@gmail.com

ಟೆಂಡರ್ ಪ್ರಕಟಣೆ ಸಂಖ್ಯೆ: ಆರ್‌ಡಬ್ಲ್ಯೂಎಫ್/ಎಸ್/07/2026–27 ದಿ: 18.06.2026

ಭಾರತದ ರಾಷ್ಟ್ರಪತಿಗಳ ಪರವಾಗಿ, ಪ್ರಧಾನ ಮುಖ್ಯ ಸಾಮಗ್ರಿ ಪ್ರಬಂಧಕರು ಭಾರತೀಯ ರೈಲ್ವೆಯ ಇ-ಪೋರ್ಟಲ್ **www.ireps.gov.in** ನಲ್ಲಿ ಈ ಕೆಳಗಿನ ವಸ್ತುಗಳ ಪೂರೈಕೆಗಾಗಿ ಒಇಎಂ/ ಅಧಿಕೃತ ಡೀಲರ್‌ಗಳಿಂದ ಎಲೆಕ್ಟ್ರಾನಿಕ್ ಓಪನ್ ಟೆಂಡರ್ ಆಹ್ವಾನಿಸುತ್ತಾರೆ.

ಕ್ರಸಂ: 1. ಟೆಂಡರ್ ನಂ. P2265536. **ಸಂಕ್ಷಿಪ್ತ ವಸ್ತುವಿನ ವಿವರಣೆ:** ಡಿಎನ್‌ಎಂಎಕ್ಸ್ 150616–ಡಬ್ಲ್ಯೂಎಂ4405 ಇನ್ಸರ್ಟ್‌ಗಳು ಜೊತೆಗೆ ಕೆಳಗಿನ ಮಾನದಂಡಗಳು: (1) ಫೀಡ್ ರೇಂಜ್=0.8–1.2 ಮಿಮೀ 2. ವೇಗ=395–270 ಮೀ/ನಿಮಿಷ (3) ಡೀಪ್ ಆಫ್ ಕಟ್ = 0.5–6 ಮಿಮೀ (4) ಕಾರ್ನರ್ ರೇಡಿಯಸ್ = 1.6 (5) ಚಿಪ್ ಬ್ರೇಕರ್ = ಇರಬೇಕು (6) ವೈಪರ್ ಸೌಲಭ್ಯ = ಇರಬೇಕು (7) ಲೇಪನ = ಸಿವಿಡಿ ಟಿಐಸಿಎನ್ +ಎಐ203+ಟಿಐಎನ್ ತಯಾರಕರು : ಸ್ಯಾಂಡ್‌ವಿಕ್ ಅಥವಾ ಅದಕ್ಕೆ ಸಮಾನವಾದ ಗುಣಮಟ್ಟದ ಉತ್ಪನ್ನ. **ಪ್ರಮಾಣ:** 5000 ಸಂಖ್ಯೆಗಳು. **ಟೆಂಡರ್‌ನ ಕೊನೆಯ ದಿನಾಂಕ ಮತ್ತು ಸಮಯ : 10.07.2026, 14.00** ಗಂಟೆಗಳು.

ಟೆಂಡರ್ ಪ್ರಕಟಣೆ ಸಂಖ್ಯೆ: ಆರ್‌ಡಬ್ಲ್ಯೂಎಫ್/ಎಸ್/ಪಿ2/08/2026–27 ದಿ: 20.06.2026

ಕ್ರಸಂ: 1. ಟೆಂಡರ್ ನಂ. P3265034. **ಸಂಕ್ಷಿಪ್ತ ವಸ್ತುವಿನ ವಿವರಣೆ:** ಪಿಎಎಲ್ ಬೋರರ್ ಸಿಎನ್‌ಸಿ ಯಂತ್ರ ಮತ್ತು ಪಿಎಎಲ್ ಸಿಎನ್‌ಸಿ ವಿಟಿಎಲ್ ಯಂತ್ರಗಳಿಗೆ ಸೀಮೆನ್ಸ್ ತಯಾರಿಕೆಯ ಸ್ಪೇರ್ ಸೆಟ್ (2 ಐಟಂಗಳು). 1 ಹೊಸ ಪಿಎಎಲ್ ಬೋರರ್ ಸಿಎನ್‌ಸಿ ಯಂತ್ರದ ಸ್ಪೇರ್ ಸೆಟ್‌ನ ಪೂರೈಕೆ, ಸ್ಥಾಪನೆ ಮತ್ತು ಕಾರ್ಯಾರಂಭ. 2 ಪಿಎಎಲ್ ಸಿಎನ್‌ಸಿ ವಿಟಿಎಲ್ ಯಂತ್ರದ ಸ್ಪೇರ್ ಸೆಟ್‌ನ ಪೂರೈಕೆ, ಸ್ಥಾಪನೆ ಮತ್ತು ಕಾರ್ಯಾರಂಭ. **ಪ್ರಮಾಣ: 1.** 1 ಸೆಟ್. **2.** 1 ಸೆಟ್. **ಟೆಂಡರ್‌ನ ಕೊನೆಯ ದಿನಾಂಕ ಮತ್ತು ಸಮಯ: 16.07.2026 14.00** ಗಂಟೆಗಳು. **ಕ್ರಸಂ: 2. ಟೆಂಡರ್ ನಂ.** P3265025A. **ಸಂಕ್ಷಿಪ್ತ ವಸ್ತುವಿನ ವಿವರಣೆ:** ಅಲೆನ್ ಬ್ರಾಡ್ಲಿಯ ಬಿಡಿ ಭಾಗಗಳ (ರಾಕ್‌ವೆಲ್ ಆಟೊಮೇಷನ್) ತಯಾರಿಕೆ (4 ಐಟಂಗಳು). **(1)** 5069–ಎಲ್306ಇಆರ್ ಕಾಂಪ್ಯಾಕ್ಟ್‌ಲಾಜಿಕ್ಸ್ 600ಕೆಬಿ ಎನೆಟ್ ನಿಯಂತ್ರಕ. **(2)** 5 0 6 9 – ಐಎ16 ಡಿಜಿಟಲ್ 16–ಪಾಯಿಂಟ್ ಎಸಿ ಇನ್‌ಪುಟ್ ಮಾಡ್ಯೂಲ್. **(3)** 120 ಮತ್ತು 240ವಿ ಎಸಿ ಸಿಗ್ನಲ್‌ಗಳನ್ನು ಬೆಂಬಲಿಸುವ 5069–ಒಎ16 ಡಿಜಿಟಲ್ 16–ಪಾಯಿಂಟ್ ಔಟ್‌ಪುಟ್ ಮಾಡ್ಯೂಲ್. **(4)** 5069–ಎಇಎನ್‌ಟಿಆರ್ ಈಥರ್‌ನೆಟ್/ಐಪಿ ಅಡಾಪ್ಟರ್. **ಪ್ರಮಾಣ: 1.**08 ಸಂಖ್ಯೆಗಳು, **2.** 36 ಸಂಖ್ಯೆಗಳು, **3.** 21 ಸಂಖ್ಯೆಗಳು, **4.** 18 ಸಂಖ್ಯೆಗಳು. **ಟೆಂಡರ್‌ನ ಕೊನೆಯ ದಿನಾಂಕ ಮತ್ತು ಸಮಯ: 07.07.2026, 14.00** ಗಂಟೆಗಳು.

ಟೆಂಡರ್‌ನ ವಿವರಗಳನ್ನು ವೆಬ್‌ಸೈಟ್ **www.rwf.indianrailways.gov.in** ಅಥವಾ **www.ireps.gov.in** ನಲ್ಲಿ ವೀಕ್ಷಿಸಬಹುದು. ಟೆಂಡರ್ ದಾಖಲೆಗಳು ಮತ್ತು ಟೆಂಡರ್‌ಗೆ ಸಂಬಂಧಿಸಿದ ತಿದ್ದುಪಡಿ/ ಅಧಿಸೂಚನೆ ಇದ್ದಲ್ಲಿ ಪೋರ್ಟಲ್‌ನಲ್ಲಿ ಮಾತ್ರ ಲಭ್ಯವಿರುತ್ತದೆ.

ಪ್ರಧಾನ ಮುಖ್ಯ ಸಾಮಾಗ್ರಿ ಪ್ರಬಂಧಕರು

ನೈಋತ್ಯ ರೈಲ್ವೆ

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಇ–ಟೆಂಡರು ಸೂಚನೆ ಸಂ.: Y/E.29/2026-27/35 ದಿನಾಂಕ: 16.06.2026

ಕಾಮಗಾರಿಯ ವಿವರ	ಅಂದಾಜು ಮೌಲ್ಯ
1) ಮೈಸೂರಿನಲ್ಲಿ ಎಲ್‌ಹೆಚ್‌ಬಿ / ಐಸಿಎಫ್ ಕೋಚ್ ನಿರ್ವಹಣೆ ಸಲಕರಣೆಗಳಿಗೆ ಬೇಕಾದ ಬಲವರ್ಧನೆ ಕಾಮಗಾರಿ. **2) ಅಶೋಕಪುರಂ:** ಅಶೋಕಪುರಂ ನಿಲ್ದಾಣದಲ್ಲಿ ಸಿ & ಡಬ್ಲ್ಯೂ ಚಟುವಟಿಕೆಗಳಿಗಾಗಿ ಸರ್ವೀಸ್ ಕೊಠಡಿಗಳ ನಿರ್ಮಾಣ – ವಿದ್ಯುತ್ ವ್ಯವಸ್ಥೆ.	ರೂ. 14,47,966.78

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **07.07.2026, 11:00 ಗಂಟೆಯವರೆಗೆ**

ಇ–ಟೆಂಡರು ಸೂಚನೆ ಸಂ.: Y/E.29/2026-27/36 ದಿನಾಂಕ: 17.06.2026

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಕಟಕಪುತ್ತೂರು: ಕಟಕಪುತ್ತೂರು ರೈಲ್ವೆ ನಿಲ್ದಾಣದಲ್ಲಿ ಪಿಎಫ್ ಸಂ. 1ರ ಪೂರ್ಣ ಉದ್ದಕ್ಕೆ ಪ್ಲಾಟ್‌ಫಾರ್ಮ್ ಶೆಲ್ಟರ್‌ನ (ಐಆರ್‌ಎಸ್) ವ್ಯವಸ್ಥೆ.	ರೂ. 31,68,783.44

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **08.07.2026, 11:00 ಗಂಟೆಯವರೆಗೆ**

ಇ–ಟೆಂಡರು ಸೂಚನೆ ಸಂ.: Y/E.29/2026-27/37 ದಿನಾಂಕ: 17.06.2026

ಕಾಮಗಾರಿಯ ವಿವರ	ಅಂದಾಜು ಮೌಲ್ಯ
15 ಇಂಟರ್‌ಲಾಕ್ ಮಾಡಲಾದ ಎಲ್‌ಸಿ ಗೇಟುಗಳಿಗೆ ಆರ್‌ಟಿಯು ಮತ್ತು 22 ಎಲ್‌ಸಿ ಗೇಟುಗಳಿಗೆ ಇಂಟಿಗ್ರೇಟೆಡ್ ಪವರ್ ಸಪ್ಲೈ ವ್ಯವಸ್ಥೆ – ವಿದ್ಯುತ್ ವ್ಯವಸ್ಥೆಗಳು.	ರೂ. 15,54,938.00

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **08.07.2026, 11:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ **www.ireps.gov.in** ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್ ಸಾಮಾನ್ಯ/ಮೈಸೂರು
PUB/232/AAF/PRB/SWR/2026-27

ಸುಲಭ ಟಿಕೆಟ್ ಬುಕಿಂಗ್, **PNR** ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ **RailOne** ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | SWRAILWAYHQ | sw_railways

ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿ.,
ಕೇಂದ್ರ ಕಛೇರಿ, ಟಿಪ್ಪು ಸುಲ್ತಾನ್ ಅರಮನೆ ರಸ್ತೆ, ಅಂಚೆ ಪೆಟ್ಟಿಗೆ ಸಂ.1811 ಕೋಟೆ, ಬೆಂಗಳೂರು–560018. ದೂರವಾಣಿ: 080–26702024/26701124

ಸಂ: ಪಿ.ಎಸ್.ಟಿ/ಸಂಖ್ಯೆ:42/2026–27 ದಿನಾಂಕ: 22–06–2026

ಪತ್ರಿಕಾ ಪ್ರಕಟಣೆ

ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿ., ಇದರ 2025–26ನೇ ಸಾಲಿನ **97ನೇ ವರ್ಷದ ವಾರ್ಷಿಕ ವರದಿ** ಪುಸ್ತಕಗಳನ್ನು ಮುದ್ರಣ ಮಾಡಿಸಲು ಉತ್ತಮ ಗುಣಮಟ್ಟದ 80 ಜಿ.ಎಸ್.ಎಮ್ ಪೇಪರನ್ನು ಉಪಯೋಗಿಸಿ ಅಂದಾಜು 300 ರಿಂದ 360 ಪುಟಗಳ ವಾರ್ಷಿಕ ವರದಿಯಲ್ಲಿ ಬ್ಯಾಂಕಿನ ಆರ್ಥಿಕ ಮಾಹಿತಿಗಳೊಂದಿಗೆ ಮಾನ್ಯ ಆಡಳಿತಾಧಿಕಾರಿಯವರ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರ, ಮಾನ್ಯ ಕಾರ್ಯದರ್ಶಿ ರವರ ಕಲರ್ ಭಾವಚಿತ್ರಗಳು, ಮೊದಲ ಮತ್ತು ಕೊನೆಯ ಪುಟದಲ್ಲಿ ಮಲ್ಟಿಕಲರ್ ಪ್ರಿಂಟಿನೊಂದಿಗೆ (ಮೊದಲ ಪುಟದಲ್ಲಿ ಬ್ಯಾಂಕಿನ ಕಟ್ಟಡದ ಕಲರ್ ಪೋಟೊಗಳನ್ನು ಹಾಗೂ ಕೊನೆಯ ಪುಟದಲ್ಲಿ ಬ್ಯಾಂಕಿನ ಯೋಜನೆಗಳ ಕಲರ್ ಪೋಟೊಗಳನ್ನು) ಒಳಗೊಂಡಂತೆ 300 ವಾರ್ಷಿಕ ವರದಿ ಪುಸ್ತಕಗಳನ್ನು ಮುದ್ರಿಸಿ ಸರಬರಾಜು ಮಾಡಲು ಪ್ರತಿಷ್ಠಿತ ಮುದ್ರಣಕಾರರಿಂದ / ಸರಬರಾಜುದಾರರಿಂದ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ. ದಿನಾಂಕ: 01/07/2026 ರಂದು ಕಛೇರಿ ವೇಳೆಯೊಳಗೆ ಆಸಕ್ತರು ದರಪಟ್ಟಿಗಳನ್ನು ಸಲ್ಲಿಸಿ ಭಾಗವಹಿಸಲು ಕೋರಿದೆ.

ಸೂಚನೆ: ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಮುದ್ರಣ ಮತ್ತು ಲೇಖನ ಸಾಮಗ್ರಿ ವಿಭಾಗವನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ವ್ಯವಸ್ಥಾಪಕ ನಿರ್ದೇಶಕರು

Published for the Proprietors, Metropolitan Media Company Limited, by Lokesh K V at No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru560011. (Ph: 08040877666) and printed by him at Bennett Coleman & Co Ltd., The Times of India Press, No. 9/10/11A, 4th Main, KIADB Bommasandra Industrial Area, Anekal Taluk, Bangalore 560 099 (Ph: 08042200500) Regd. Office: No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru560011 (Ph: 08040877666), Editor: Sudarshan Channangihalli – responsible for selection of news under PRB Act. ©All Rights Reserved. Reproduction in whole or in part without written permission is prohibited.

ಸ್ಟೇಟ್ ನ್ಯೂಸ್

ರಾಜ್ಯದ 200 ಪೊಲೀಸ್ ಸಿಬ್ಬಂದಿಗೆ ಡಿಜಿ-ಐಜಿಪಿ ಪದಕ

ಬೆಂಗಳೂರು: ಅತ್ಯುತ್ತಮ ಸೇವೆ ಸಲ್ಲಿಸಿದ 200 ಪೊಲೀಸ್ ಅಧಿಕಾರಿ/ಸಿಬ್ಬಂದಿಗೆ 2025-26ನೇ ಸಾಲಿನ 'ಡಿಜಿ-ಐಜಿಪಿ ಪ್ರಶಂಸನಾ ಪದಕ' ಘೋಷಿಸಿ ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ.ಎಂ.ಎ ಸಲೀಂ ಸೋಮವಾರ ಆದೇಶ ಹೊರಡಿಸಿದ್ದಾರೆ. ಐಜಿಪಿ ಎನ್.ಸತೀಶ್‌ಕುಮಾರ್, ಹುಬ್ಬಳ್ಳಿ-ಧಾರವಾಡ ಕಮಿಷನರ್ ಎನ್.ಶಶಿಕುಮಾರ್, ಸಿಐಡಿ ಡಿಐಜಿ ಡಾ.ಭೀಮಾಶಂಕರ್ ಗುಳೇದ್, ಡಿಐಜಿ ಶಾಂತನು ಸಿನ್ಹಾ ಸೇರಿದಂತೆ 17 ಮಂದಿ ಐಪಿಎಸ್ ಅಧಿಕಾರಿಗಳಿಗೂ ಪದಕ ಗೌರವ ಸಿಕ್ಕಿದೆ. ಬೆಂಗಳೂರು ಕಮಿಷನರೇಟ್ ವ್ಯಾಪ್ತಿಯಲ್ಲಿ ಕೇಂದ್ರ ವಿಭಾಗದ ಡಿಸಿಪಿ ಅಕ್ಷಯ್ ಎಂ. ಹಾಕೆ, ಆಗ್ನೇಯ ವಿಭಾಗದ ಡಿಸಿಪಿ ಮೊಹಮದ್ ಎಂ. ಸುಜೀತಾ, ಸಂಚಾರ ಉತ್ತರ ವಿಭಾಗದ ಡಿಸಿಪಿ ಜಯಪ್ರಕಾಶ್, ಆಡಳಿತ ವಿಭಾಗದ ಡಿಸಿಪಿ ಪದ್ಮಿನಿ ಸಾಹೋ, ಕಮಾಂಡ್ ಸೆಂಟರ್ ಡಿಸಿಪಿ ಕ್ಷಮಾ ಮಿಶ್ರಾ, ಪೂರ್ವವಿಭಾಗದ ಡಿಸಿಪಿ ಸಾಹಿಲ್ ಬಾಗ್ಲಾ, ಸಿಸಿಬಿ ಡಿಸಿಪಿ-2 ರಾಜಾ ಇಮಾಮ್ ಕಾಸಿಂ ಅವರು ಪದಕಕ್ಕೆ ಭಾಜನರಾಗಿದ್ದಾರೆ. ಅಲ್ಲದೆ, ರಾಜ್ಯದ ವಿವಿಧೆ ಕಾರ್ಯನಿರ್ವಹಿಸುತ್ತಿರುವ ಎಸ್ಪಿ, ಎಸಿಪಿ/ ಡಿವೈಎಸ್ಪಿಗಳು, ಕೆಎಸ್‌ಆರ್‌ಪಿ ಕಮಾಂಡೆಂಟ್‌ಗಳು, ಇನ್‌ಸ್ಪೆಕ್ಟರ್‌ಗಳು, ಪಿಎಸ್‌ಐ, ಎಎಸ್‌ಐ ಹಾಗೂ ಕಾನ್‌ಸ್ಟೆಬಲ್ ಹಂತದವರೆಗೆ 200 ಮಂದಿಗೆ ಪದಕ ಘೋಷಿಸಲಾಗಿದೆ.

ಪಿಜಿ-ಸಿಇಟಿ-ಜೂ.30ಕ್ಕೆ ವಿಶೇಷ ಕೋಟಾಗಳ ದಾಖಲೆ ಸಲ್ಲಿಕೆ

ಬೆಂಗಳೂರು: ಎಂಬಿಎ, ಎಂಸಿಎ ಕೋರ್ಸ್‌ಗಳ ಪ್ರವೇಶಕ್ಕೆ ಪಿಜಿ-ಸಿಇಟಿ ಅರ್ಜಿಯಲ್ಲಿ ಮಾಜಿ ಸೈನಿಕ ವಿಶೇಷ ಕ್ಯಾಟಗರಿಗಳನ್ನು ಕ್ಲೇಮ್ ಮಾಡಿರುವ ಅಭ್ಯರ್ಥಿಗಳು ಜೂ. 29 ಅಥವಾ 30ರಂದು ಕೆಇಎ ಕಚೇರಿಯಲ್ಲಿ ತಮ್ಮ ದಾಖಲೆಗಳನ್ನು ಸಲ್ಲಿಸಬೇಕು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ. ವಿಶೇಷಚೇತನ ಕೋಟಾದವರ ವೈದ್ಯ ತಪಾಸಣೆ ಜು. 1 ಮತ್ತು 2ರಂದು ವಿಕ್ಟೋರಿಯಾ ಹಾಗೂ ಮಿಂಟೋ ಆಸ್ಪತ್ರೆಯಲ್ಲಿ ನಡೆಯಲಿದೆ ಎಂದು ತಿಳಿಸಿದ್ದಾರೆ.

ನಾಗರಬಾವಿಯಲ್ಲಿ ಟೌನ್‌ಶಿಪ್ ದಂಧೆ

ಸಿಎಂ ವಿರುದ್ಧ ಎಚ್ಡಿಕೆ ವಾಗ್ದಾಳಿ | 80% ರೈತರು ಯೋಜನೆ ವಿರೋಧಿಸಿದರೂ ಅನುಷ್ಠಾನದ ಹಠವೇಕೆ?

■ **ವಿಕ ಸುದ್ದಿಲೋಕ** ಬೆಂಗಳೂರು

''ರಿಯಲ್ ಎಸ್ಟೇಟ್ ದುರಾಸೆಯಿಂದ ಮುಗ್ಧ ರೈತರಿಂದ ಫಲವತ್ತಾದ ಭೂಮಿಯನ್ನು ಕಸಿದುಕೊಂಡು ದಂಧೆಕೋರರಿಗೆ ನೀಡಲು ಬ್ರೋಕರ್ ಕೆಲಸ ಮಾಡುತ್ತಿದ್ದಾರೆ,'' ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿಗಳ ವಿರುದ್ಧ ನೇರ ಆರೋಪ ಮಾಡಿದ್ದಾರೆ.

ಜೆಡಿಎಸ್ ಕಚೇರಿ ಜೆ.ಪಿ. ಭವನದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕುಮಾರಸ್ವಾಮಿ, ''ನಿಮ್ಮ ಪಾಪದ ಕೊಡ ತುಂಬಿದೆ. ಶಾಸ್ತಿಯಾಗುವ ಕಾಲ ಸನಿಹದಲ್ಲಿದೆ,'' ಎಂದು ಎಚ್ಚರಿಕೆ ನೀಡಿದರು.

''ಟೌನ್‌ಶಿಪ್‌ಗೆ ಸಂಬಂಧಿಸಿದ ಯಾವುದೇ ಕೆಲಸಗಳು ರಾಮನಗರ ಡಿಸಿ ಕಚೇರಿಯಲ್ಲಿ ನಡೆಯುತ್ತಿಲ್ಲ, ಎಲ್ಲವೂ ತೆರೆಮರೆಯಲ್ಲಿ ಗೌಪ್ಯವಾಗಿ ನಡೆಯುತ್ತಿದೆ. ವಿಧಾನಸೌಧ ಅಥವಾ ಸರಕಾರಿ ಕಚೇರಿಯಲ್ಲಿ ಕೆಲಸಗಳು ನಡೆದರೆ, ಎಲ್ಲರಿಗೂ ಸುಲಭವಾಗಿ ಗೊತ್ತಾಗುತ್ತದೆ ಮತ್ತು ಕುಮಾರಸ್ವಾಮಿ ಅವರಿಗೆ ಮಾಹಿತಿ ಹೋಗುತ್ತದೆ ಎಂಬ ಕಾರಣಕ್ಕೆ ನಾಗರಬಾವಿಯಲ್ಲಿ ಬಾಡಿಗೆ ಮನೆಯೊಂದರಿಂದ ಟೌನ್‌ಶಿಪ್ ದಂಧೆ ಮಾಡುತ್ತಿದ್ದಾರೆ. ಕೆಲವು ಪುಢಾರಿಗಳು, ಟೌನ್‌ಶಿಪ್ ಕಿಂಗ್‌ಪಿನ್ ಚೇಲಾಗಳು ಸೇರಿಕೊಂಡು ಆ ಮನೆಯಲ್ಲಿ ವ್ಯವಹಾರ ನಡೆಸುತ್ತಿದ್ದಾರೆ,'' ಎಂದು ಆಪಾದಿಸಿದರು.

''ಬಿಡದಿ ಟೌನ್‌ಶಿಪ್ ಯೋಜನೆ ಬಗ್ಗೆ ಡಿ.ಕೆ.ಶಿವಕುಮಾರ್ ಅವರು 2007ರಲ್ಲಿ ವಿಧಾನಸಭೆ ಕಲಾಪದಲ್ಲಿ ಹೇಳಿದ್ದ ಮಾತುಗಳನ್ನು ಒಮ್ಮೆ ನೆನಪು ಮಾಡಿಕೊಳ್ಳಲಿ. ಯೋಜನೆಗೆ ತೀವ್ರ ವಿರೋಧ ವ್ಯಕ್ತಪಡಿಸಿದ್ದ ಶಿವಕುಮಾರ್ ಅವರು ಈಗ ಟೌನ್ ಶಿಪ್ ಯೋಜನೆಯನ್ನು ಕಾರ್ಯಗತ ಮಾಡಿಯೇ ತೀರುತ್ತೇನೆ ಎಂದು ಹೇಳುತ್ತಿದ್ದಾರೆ. ಶೇ.80ರಷ್ಟು ರೈತರು ಭೂಮಿ ಬಿಟ್ಟುಕೊಡಲು ತಯಾರಿಲ್ಲ, ಆದರೂ ಯೋಜನೆ ಕೈಬಿಡಲು ಏನು ಸಮಸ್ಯೆ? ಮಾಜಿ ಸಿಎಂ ಸಿದ್ದರಾಮಯ್ಯ, ಮಲ್ಲಿಕಾರ್ಜುನ ಖರ್ಗೆ ಅವರೂ ಈ ಹಿಂದೆ ಯೋಜನೆಯನ್ನು ವಿರೋಧಿಸಿದ್ದರು. ಆಗ ದೊಡ್ಡ ಗಂಟಲಿನಲ್ಲಿ ವಿರೋಧಿಸಿ ವೀರಾವೇಷದ ಮಾತನಾಡಿದ್ದರು. ಈಗ ಎಲ್ಲ ಅಕ್ರಮಗಳನ್ನು ನೋಡಿಯೂ ಜಾಣಮೌನ ವಹಿಸಿದ್ದಾರೆ,'' ಎಂದು ದೂರಿದರು. 2007ರ ಆಗಸ್ಟ್‌ನಲ್ಲಿ ವಿಧಾನಸಭೆಯಲ್ಲಿ ನಡೆದಿದ್ದ ಚರ್ಚೆಯ ದಾಖಲೆಗಳನ್ನು ಕುಮಾರಸ್ವಾಮಿ ಬಿಡುಗಡೆ ಮಾಡಿದರು.

''ಬಿಡದಿಯ ಫಲವತ್ತಾದ ಭೂಮಿಯಲ್ಲಿ ಟೌನ್‌ಶಿಪ್ ಬೇಡ. ಬೇರೆ ಎಲ್ಲಾದರೂ ಮಾಡಿ ಎಂದು 2007ರಲ್ಲಿ ಅಧಿವೇಶನದಲ್ಲಿ ಹೇಳಿದ್ದ ಸಿದ್ದರಾಮಯ್ಯ ಅವರು ಈಗ ಮೌನ ವಹಿಸಿರುವುದು ಸರಿಯಲ್ಲ,'' ಎಂದು ಹೇಳಿದರು.

ಸಿಎಂ ಜೈಲಿಗೆ ಹೋಗಲ್ಲ: ಬಿಡದಿ ಟೌನ್‌ಶಿಪ್ ಸಮರ್ಥನೆ ಮಾಡಿಕೊಂಡು ಮುಖ್ಯಮಂತ್ರಿಗಳು ನೀಡಿದ್ದ ಎಲ್ಲ ಹೇಳಿಕೆಗಳಿಗೆ ಸ್ಪಷ್ಟನೆಗಳನ್ನು ನೀಡಿದ ಕುಮಾರಸ್ವಾಮಿ, ''ನೋಟಿಫೈ ಆಗಿರುವ ಭೂಮಿಯನ್ನು ಡಿನೋಟಿಫೈ ಮಾಡಿ ನಾನು ಜೈಲಿಗೆ ಹೋಗಲೇ ಎಂದು ಡಿ.ಕೆ.ಶಿವಕುಮಾರ್ ಕೇಳುತ್ತಿದ್ದಾರೆ. ಅರ್ಕಾವತಿಯಲ್ಲಿ ರೀಡೂ ಮಾಡಿಕೊಂಡವರೇ ನೆಮ್ಮದಿಯಾಗಿ ಓಡಾಡಿಕೊಂಡಿರುವಾಗ, ರೈತರ ಉದ್ಧಾರಕ್ಕಾಗಿ ಯೋಜನೆಯನ್ನೇ ಕೈಬಿಟ್ಟರೆ ಮುಖ್ಯಮಂತ್ರಿ ಜೈಲಿಗೆ ಹೋಗುತ್ತಾರಾ? ಟೌನ್‌ಶಿಪ್ ಮಾಡಿ ರೈತರ ಭೂಮಿ ಕೊಳ್ಳೆ ಹೊಡೆಯುವುದೇ ಮುಖ್ಯವಾಗಿದೆ. ರೈತರನ್ನು ಉಳಿಸಿಕೊಳ್ಳಲು ಡಿನೋಟಿಫಿಕೇಷನ್ ಮಾಡಿದರೆ ಯಾರೂ ಜೈಲಿಗೆ ಹೋಗುವುದಿಲ್ಲ,'' ಎಂದು ಹೇಳಿದರು.



ಬೈರಮಂಗಲ ಚಲೋ ರ‍್ಯಾಲಿ

ಬಿಡದಿ(ಬೆಂಗಳೂರು ದಕ್ಷಿಣ ಜಿಲ್ಲೆ): ರಾಜ್ಯ ರೈತ ಸಂಘದ ಬೆಂಗಳೂರು ವಿಭಾಗದ ಎಲ್ಲಾ ಜಿಲ್ಲಾ ಶಾಖೆಗಳ ಪದಾಧಿಕಾರಿಗಳು ಸೋಮವಾರ ಬೈರಮಂಗಲ ಚಲೋ ರ‍್ಯಾಲಿ ನಡೆಸಿ ಬಿಡದಿ ಟೌನ್‌ಶಿಪ್ ಯೋಜನೆಗಾಗಿ ಫಲವತ್ತಾದ ಭೂಮಿ ಸ್ವಾಧೀನಕ್ಕೆ ಬಿಡುವುದಿಲ್ಲ ಎಂದು ನಿರ್ಣಯಗಳನ್ನು ಕೈಗೊಂಡಿದ್ದಾರೆ. ಸಮಾವೇಶದಲ್ಲಿ ಭಾಗವಹಿಸಿದ್ದ ಪಾಂಡವಪುರ ಕ್ಷೇತ್ರದ ಶಾಸಕ ದರ್ಶನ್ ಪುಟ್ಟಣ್ಣಯ್ಯ ಮಾತನಾಡಿ, ''ಟೌನ್‌ಶಿಪ್ ಹೆಸರಿನಲ್ಲಿ ಕಟ್ಟಡಗಳನ್ನು ಕಟ್ಟಿ ರೈತರನ್ನು ಬೀದಿಗೆ ತಂದು ನಿಲ್ಲಿಸುವುದು ಬೇಡ,'' ಎಂದರು.

ಪರಿಹಾರದ ಚೆಕ್ ಸುಳ್ಳು ಸುದ್ದಿ

ಇತ್ತೀಚೆಗೆ ಬಿಡದಿ ಟೌನ್‌ಶಿಪ್ ಯೋಜನೆ ಸಂತ್ರಸ್ತರಿಗೆ ಮಾಗಡಿ ಶಾಸಕ ಎಚ್.ಸಿ.ಬಾಲಕೃಷ್ಣ ಸಂತ್ರಸ್ತರಿಗೆ ಚೆಕ್ ವಿತರಿಸಿದ್ದ ಚೆಕ್‌ನಲ್ಲಿದ್ದ 2026 ಅಂತಿದ್ದ ದಿನಾಂಕವನ್ನು 2024 ಎಂದು ತಿದ್ದಿ, ಜಾಲತಾಣಗಳಲ್ಲಿ ಸುಳ್ಳು ಮಾಹಿತಿ ಹರಡುತ್ತಿದ್ದ ಯಶವಂತ್ ಮದ್ದೂರ್, ಎಸ್.ಪಿ. ನಾಗರಾಜ್ ವಿರುದ್ಧ ರಾಮನಗರದ ಸೆನ್ ಠಾಣೆಯಲ್ಲಿ ದೂರು ದಾಖಲಾಗಿದೆ ಎಂದು ಬದಲಾಯಿಸಿದ್ದರು.

> **ಸಂಪುಟ ಸೇರುವ ಆಕಾಂಕ್ಷಿಗಳಿಂದ ಸಿಎಂ ಡಿಕೆಶಿ ದೊಡ್ಡ ಪ್ರಮಾಣದಲ್ಲಿ ವಸೂಲಿ ಮಾಡುತ್ತಿದ್ದಾರೆ. ಹೈಕಮಾಂಡ್‌ಗೆ ಕೊಡಬೇಕು ಎಂದು ಮ್ಯಾನೇಜ್‌ಮೆಂಟ್ (ಎಐಸಿಸಿ ಹೈಕಮಾಂಡ್) ಕೋಟಾಕ್ಕೆ ಶೇ.5 ಹಾಗೂ ಪೇಮೆಂಟ್ ಕೋಟಾಕ್ಕೆ ಶೇ. 95 ಸೀಟುಗಳನ್ನು ನಿಗದಿಪಡಿಸಿ ಶಾಸಕರಿಂದ ಹಣ ಪೀಕುತ್ತಿರುವ ಮಾಹಿತಿ ಸಿಕ್ಕಿದೆ. ಈ ಕಾರಣಕ್ಕಾಗೇ ಕ್ಯಾಬಿನೆಟ್ ವಿಸ್ತರಣೆ ವಿಳಂಬವಾಗುತ್ತಿದೆ.**
>
> **-ಎಚ್.ಡಿ. ಕುಮಾರಸ್ವಾಮಿ** ಕೇಂದ್ರ ಸಚಿವ

ಭಾರತ್ ಜೋಡೋ ಯುವ ಸಂಘ ಚರ್ಚೆ

ಬೆಂಗಳೂರು: ರಾಜ್ಯಾದ್ಯಂತ 'ಭಾರತ್ ಜೋಡೋ ಯುವ ಸಂಘ'ಗಳ ರಚನೆ ಸಂಬಂಧ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟ ಉಪಸಮಿತಿಯ ಮಹತ್ವದ ಸಭೆ ಸೋಮವಾರ ನಡೆಯಿತು.

'ಯುವಯುಗ -ನವಯುಗ' ಘೋಷಣೆಯೊಂದಿಗೆ ಯುವಜನಾಂಗದ ಸರ್ವಾಂಗೀಣ ಉನ್ನತಿಗೆ ಒತ್ತು ನೀಡುವ ಸಂಬಂಧ ಪ್ರತಿ ಪಂಚಾಯತ್ ಹಾಗೂ ವಾರ್ಡ್ ಮಟ್ಟದಲ್ಲಿ ಒಂದೊಂದು ಯುವ ಸಂಘಗಳನ್ನು ರಚಿಸಲು ಉದ್ದೇಶಿಸಲಾಗಿದೆ. ಪ್ರತಿ ಯುವ ಸಂಘದ ಕಾರ್ಯಚಟುವಟಿಕೆಗಳಿಗೆ ಸರಕಾರದಿಂದ 10 ಲಕ್ಷ ರೂ. ಅನುದಾನ ನೀಡಲಾಗುತ್ತಿದೆ. ಈ ಸಂಘಗಳ ಸ್ವರೂಪ ಏನಿರಬೇಕು, ಇನ್ನಿತರ ಕುರಿತು ಚರ್ಚೆ ನಡೆಯಿತು.

ವಿಬಿ-ಜಿ ರಾಮ್‌ಜಿ ಚರ್ಚೆ: ಗ್ರಾಮೀಣ ಭಾಗದ ಜನರಿಗೆ ಉದ್ಯೋಗ ಕಲ್ಪಿಸುವ ಮನರೇಗಾ ಬದಲಿಗೆ ಇದೇ ಜುಲೈ 1 ರಿಂದ ವಿಬಿ ಜಿ ರಾಮ್ ಜಿ ಯೋಜನೆ ಜಾರಿಗೆ ಬರಲಿರುವ ಹಿನ್ನೆಲೆಯಲ್ಲಿ ರಾಜ್ಯ ಸರಕಾರದ ನಿಲುವು ಏನಿರಬೇಕು ಎಂಬ ಕುರಿತಂತೆಯೂ ಸಂಪುಟ ಉಪಸಮಿತಿಯಲ್ಲಿ ಚರ್ಚೆ ನಡೆಯಿತು. ಆದರೆ, ಸಭೆಯಲ್ಲಿ ಸ್ಪಷ್ಟ ತೀರ್ಮಾನಕ್ಕೆ ಬರಲಾಗಿಲ್ಲ ಎಂದು ತಿಳಿದುಬಂದಿದೆ.

ಅಂಕೇಗೌಡರ ಪುಸ್ತಕ ಸಂರಕ್ಷಿಸಿ: ಸಿಎಂ

■ **ವಿಕ ಸುದ್ದಿಲೋಕ** ಬೆಂಗಳೂರು

ಪದ್ಮಶ್ರೀ ಪುರಸ್ಕೃತ ಅಂಕೇಗೌಡರ ಸಂಗ್ರಹದಲ್ಲಿರುವ 20 ಲಕ್ಷಕ್ಕೂ ಹೆಚ್ಚು ಪುಸ್ತಕಗಳ ರಕ್ಷಣೆಗೆ ಸೂಕ್ತ ಜಾಗ ಹುಡುಕಿ ಸುಸಜ್ಜಿತ ಕಟ್ಟಡದ ವ್ಯವಸ್ಥೆ ಮಾಡುವಂತೆ ಸಿಎಂ ಡಿ.ಕೆ.ಶಿವಕುಮಾರ್ ಸರಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್ ಅವರಿಗೆ ಸೂಚಿಸಿದ್ದಾರೆ.

ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಅವರೊಂದಿಗೆ ಅಂಕೇಗೌಡ ಅವರು ಸಿಎಂ ಡಿ.ಕೆ. ಶಿವಕುಮಾರ್ ಅವರನ್ನು ವಿಧಾನಸೌಧದಲ್ಲಿ ಸೋಮವಾರ ಭೇಟಿಯಾದರು. ಈ ಸಂದರ್ಭದಲ್ಲಿ ಅಂಕೇಗೌಡರನ್ನು ಸನ್ಮಾನಿಸಿದ ಸಿಎಂ, ಪುಸ್ತಕ ರಕ್ಷಣೆಗೆ ಕ್ರಮದ ಭರವಸೆ ನೀಡಿದರು.

ತಮ್ಮ ಬಳಿಯಿರುವ ಅಪರೂಪದ ನಾಣ್ಯಗಳು, ಅಂಚೆ ಚೀಟಿಗಳನ್ನು ಸಿಎಂ ಅವರಿಗೆ ತೋರಿಸಿದ ಅಂಕೇಗೌಡರು ಇದರ ಬಗ್ಗೆ ವಿವರಣೆ ನೀಡಿದರು. ಸಿಎಂ ಇವನ್ನೆಲ್ಲ ಕುತೂಹಲದಿಂದ ವೀಕ್ಷಿಸಿದರು.

''ಮಂಡ್ಯ ಜಿಲ್ಲೆಯ ಪಾಂಡವಪುರದಲ್ಲಿ 'ಅಂಕೇಗೌಡ ಜ್ಞಾನ ಪ್ರತಿಷ್ಠಾನ'ದಿಂದ 20 ಲಕ್ಷಕ್ಕೂ ಹೆಚ್ಚು ಪುಸ್ತಕಗಳನ್ನು ಸಂಗ್ರಹಿಸಲಾಗಿದೆ. ದೇಶದ ಅತಿ ದೊಡ್ಡ ವೈಯಕ್ತಿಕ ಗ್ರಂಥಾಲಯ ಇದಾಗಿದೆ,'' ಎಂದು ಸಿಎಂ ಅವರಿಗೆ ಮಾಹಿತಿ ನೀಡಿದರು.

ದಿನೇಶ್ ಗೂಳಿಗೌಡ ಪತ್ರ: ಅಂಕೇಗೌಡರಿಗೆ ಪದ್ಮಶ್ರೀ ಪುರಸ್ಕಾರ ಬಂದ ಸಂದರ್ಭದಲ್ಲಿ ರಾಜ್ಯ ಸರಕಾರಕ್ಕೆ ಪತ್ರ ಬರೆದಿದ್ದ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ, ಪುಸ್ತಕಗಳ ರಕ್ಷಣೆಗೆ ಜಾಗ ಒದಗಿಸಿ ಕಟ್ಟಡ ನಿರ್ಮಿಸಬೇಕು ಎಂದು ಮನವಿ ಮಾಡಿಕೊಂಡಿದ್ದರು. ಅಂದಿನ ಸಿಎಂ ಸಿದ್ದರಾಮಯ್ಯ ಹಾಗೂ ಅಂದಿನ ಡಿಸಿಎಂ ಡಿ.ಕೆ. ಶಿವಕುಮಾರ್ ಅವರಿಗೆ ಪತ್ರ ಬರೆದಿದ್ದರು.

ಶ್ರೀಮುಮ್ಮಡಿ ನಿರ್ವಾಣ ಶ್ರೀ ಶಿವೈಕ್ಯ

ರಾಮನಗರ(ಬೆಂ.ದಕ್ಷಿಣ): ಕನಕಪುರದ ಪ್ರಸಿದ್ಧ ಶ್ರೀದೇಗುಲ ಮಠದ ಪೀಠಾಧ್ಯಕ್ಷರಾಗಿದ್ದ ಶ್ರೀಮುಮ್ಮಡಿ ನಿರ್ವಾಣ ಮಹಾಸ್ವಾಮಿಯವರು

ಅನಾರೋಗ್ಯದಿಂದ ಸೋಮವಾರ ಸಂಜೆ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಶಿವೈಕ್ಯರಾದರು. ಜೂ.23ರಂದು ಮಠದ ಆವರಣದಲ್ಲಿ ಲಿಂಗೈಕ್ಯ ಶ್ರೀಮುಮ್ಮಡಿ ನಿರ್ವಾಣ ಮಹಾಸ್ವಾಮೀಜಿಯವರ ಅಂತಿಮ ದರ್ಶನಕ್ಕೆ ಅವಕಾಶವಿರಲಿದ್ದು, ಅಲ್ಲಿಯೇ ಶ್ರೀಗಳ ಅಂತಿಮ ಸಂಸ್ಕಾರ ಹಾಗೂ ಧಾರ್ಮಿಕ ವಿಧಿವಿಧಾನಗಳು ನೆರವೇರಲಿವೆ. ಶ್ರೀಗಳ ಅಗಲಿಕೆಗೆ ಕೇಂದ್ರ ರೈಲ್ವೆ ಮತ್ತು ಜಲಶಕ್ತಿ ರಾಜ್ಯ ಖಾತೆ ಸಚಿವ ವಿ.ಸೋಮಣ್ಣ ಅವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಎಸಿಗಳಿಗೆ ಹೆಚ್ಚಿನ ಅಧಿಕಾರ: ಪರಂ

■ **ವಿಕ ಸುದ್ದಿಲೋಕ** ಬೆಂಗಳೂರು

ಸುಮಾರು ಎರಡು ವಾರಗಳ ಅಸೌಖ್ಯದ ಬಳಿಕ ಚೇತರಿಸಿಕೊಂಡಿರುವ ಡಿಸಿಎಂ ಡಾ.ಜಿ. ಪರಮೇಶ್ವರ್ ವಿಧಾನಸೌಧದಲ್ಲಿ ಸೋಮವಾರ ಕಂದಾಯ ಇಲಾಖೆ ಅಧಿಕಾರಿಗಳ ಸಭೆ ನಡೆಸಿದರು. ಜನ ಸಾಮಾನ್ಯರ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದ ಅವರು, ಇಲಾಖೆ ಕಾರ್ಯಕ್ಷಮತೆ ಹೆಚ್ಚಿಸಲು ಸಹಾಯಕ ಆಯುಕ್ತರಿಗೆ(ಎಸಿ) ಇನ್ನಷ್ಟು ಹೆಚ್ಚಿನ ಅಧಿಕಾರ ನೀಡುವ ತೀರ್ಮಾನವನ್ನು ಪ್ರಕಟಿಸಿದರು.

ಈ ಹಿಂದೆ ಗೃಹ ಸಚಿವರಾಗಿ ಕಾರ್ಯನಿರ್ವಹಿಸುತ್ತಿದ್ದ ವಿಧಾನಸೌಧ 3ನೇ ಮಹಡಿಯ ಕೊಠಡಿಯನ್ನೇ ಡಿಸಿಎಂ ಆದ ಬಳಿಕವೂ ಪರಮೇಶ್ವರ್ ಅವರಿಗೆ ಹಂಚಿಕೆ ಮಾಡಲಾಗಿದೆ. ತಮ್ಮ ಈ ಕೊಠಡಿಯನ್ನು ನವೀಕರಣ ಮಾಡಿಕೊಳ್ಳುತ್ತಿರುವ ಅವರು, ಸಮಿತಿ ಕೊಠಡಿಯಲ್ಲಿ ಇಲಾಖೆಯ ಅಧಿಕಾರಿಗಳ ಸಭೆ ನಡೆಸಿದರು.

ಶೀಘ್ರ, ಖಾಲಿ ಹುದ್ದೆ ಭರ್ತಿ: ''ಕಂದಾಯ ಇಲಾಖೆಯ ಖಾಲಿ ಹುದ್ದೆಗಳ ನೇಮಕ ಪ್ರಕ್ರಿಯೆಯನ್ನು ತ್ವರಿತಗೊಳಿಸಬೇಕು. ಅಧಿಕಾರಿ ಮತ್ತು ಸಿಬ್ಬಂದಿಗೆ ಬಡ್ತಿ ಪ್ರಕ್ರಿಯೆಯಲ್ಲಿ ಯಾವುದೇ ವಿಳಂಬ ಉಂಟಾಗಬಾರದು. ಜೇಷ್ಠತಾ ಪಟ್ಟಿಯನ್ನು ಶೀಘ್ರ ಪ್ರಕಟಿಸಿ, ನಿಯಮಾನುಸಾರ ಪಾರದರ್ಶಕವಾಗಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕು,'' ಎಂದು ಸೂಚಿಸಿದರು.

''ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳು ಜನಸಾಮಾನ್ಯರ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸಬೇಕು. ಭೂದಾಖಲೆ, ಖಾತೆ ಬದಲಾವಣೆ, ಸರ್ವೇ ಕಾರ್ಯ, ಮ್ಯುಟೇಷನ್ ಹಾಗೂ ಇತರೆ ಕಂದಾಯ ಸೇವೆಗಳ ವಿಲೇವಾರಿಯಲ್ಲಿ ವಿಳಂಬ ಕಡಿಮೆ ಮಾಡುವ ನಿಟ್ಟಿನಲ್ಲಿ ನಿರಂತರ ಮೇಲ್ವಿಚಾರಣೆ ನಡೆಸಬೇಕು. ಇ-ಪೌತಿ ಖಾತೆ ಸೇರಿದಂತೆ ಇಲಾಖೆಯ ಎಲ್ಲ ಆನ್‌ಲೈನ್ ಮತ್ತು ಸಾರ್ವಜನಿಕ ಸೇವೆಗಳನ್ನು ನಿಗದಿತ ಕಾಲಮಿತಿಯೊಳಗೆ ಪೂರ್ಣಗೊಳಿಸಬೇಕು. ಸಾರ್ವಜನಿಕರು ಸರಕಾರಿ ಕಚೇರಿಗಳಿಗೆ ಅನಗತ್ಯವಾಗಿ ಅಲೆದಾಡುವ ಪರಿಸ್ಥಿತಿ ನಿರ್ಮಾಣವಾಗದಂತೆ ಸೇವೆಗಳ ವಿತರಣೆಯಲ್ಲಿ ದಕ್ಷತೆ ಮತ್ತು ಪಾರದರ್ಶಕತೆ ಕಾಪಾಡಬೇಕು,'' ಎಂದು ಸೂಚನೆ ನೀಡಿದರು.

''ಪರವಾನಗಿ ಭೂಮಾಪಕರ ವೃತ್ತಿಪರ ಸಮಸ್ಯೆಗಳ ಪರಿಹಾರಕ್ಕೆ ಅಗತ್ಯ ಕ್ರಮ ಕೈಗೊಳ್ಳಬೇಕು. ಸಾರ್ವಜನಿಕರಿಗೆ ಉತ್ತಮ ಸೇವೆ ಒದಗಿಸಲು ಸಾಧ್ಯವಾಗುವಂತೆ ಆಡಳಿತಾತ್ಮಕ ಕಾರ್ಯಗಳಿಗೆ ಮತ್ತಷ್ಟು ವೇಗ ಸಿಗಬೇಕು. ಈ ನಿಟ್ಟಿನಲ್ಲಿ ಕೆಲಸ ಮಾಡಿ,'' ಎಂದು ಸಲಹೆ ಮಾಡಿದರು.

ಅರ್ಜಿ ಸಲ್ಲಿಸಲು 15 ದಿನ ಅವಕಾಶ | ವಸತಿ ಕಟ್ಟಡಕ್ಕೆ ಶಾಶ್ವತ ವಿದ್ಯುತ್ ಸಂಪರ್ಕ

ಒಸಿ ವಿನಾಯಿತಿ ಅಧಿಕೃತ ಆದೇಶ

■ **ವಿಕ ಸುದ್ದಿಲೋಕ** ಬೆಂಗಳೂರು

ರಾಜ್ಯದಲ್ಲಿ ವಸತಿ ಕಟ್ಟಡಗಳ ಶಾಶ್ವತ ವಿದ್ಯುತ್ ಸಂಪರ್ಕಕ್ಕೆ ಎದುರಾಗುತ್ತಿದ್ದ ತೊಂದರೆ ನಿವಾರಣೆಗೆ ಮಹತ್ವದ ನಿರ್ಧಾರ ಕೈಗೊಂಡಿರುವ ರಾಜ್ಯ ಸರಕಾರ, ಸಾರ್ವಜನಿಕರ ಹಿತದೃಷ್ಟಿಯಿಂದ ನಿರ್ದಿಷ್ಟ ಮಿತಿಯೊಳಗಿನ ವಸತಿ ಕಟ್ಟಡಗಳಿಗೆ ಶಾಶ್ವತ ವಿದ್ಯುತ್ ಸಂಪರ್ಕ ಪಡೆಯಲು ಸ್ವಾಧೀನಾನುಭವ ಪ್ರಮಾಣಪತ್ರ (ಒಸಿ) ಒದಗಿಸುವುದರಿಂದ ಒಂದು ಬಾರಿಯ ಕ್ರಮವಾಗಿ ವಿನಾಯಿತಿ ನೀಡಿ ಸೋಮವಾರ ಅಧಿಕೃತ ಆದೇಶ ಹೊರಡಿಸಿದೆ.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಧ್ಯಕ್ಷತೆಯಲ್ಲಿ ನಡೆದಿದ್ದ ಸಚಿವ ಸಂಪುಟ ಸಭೆಯ ನಿರ್ಣಯದಂತೆ ಇಂಧನ ಇಲಾಖೆಯು ಈ ಆದೇಶ ಜಾರಿಗೊಳಿಸಿದೆ. ಜಿಬಿಎ ವ್ಯಾಪ್ತಿ, ರಾಜ್ಯದ ಮಹಾನಗರ ಪಾಲಿಕೆಗಳು, ನಗರ ಸ್ಥಳೀಯ ಸಂಸ್ಥೆಗಳು ಮತ್ತು ಗ್ರಾಮ ಪಂಚಾಯಿತಿ ವ್ಯಾಪ್ತಿ ಸೇರಿದಂತೆ ಇಡೀ ರಾಜ್ಯಕ್ಕೆ ವಿನಾಯಿತಿ ಆದೇಶ ಅನ್ವಯವಾಗಲಿದೆ. 2,400 ಚದರ ಅಡಿ (+ಶೇ.20ರಷ್ಟು ಹೆಚ್ಚುವರಿ ವ್ಯತ್ಯಾಸದ ಮಿತಿಯೊಂದಿಗೆ) ಅಳತೆಯ ನಿವೇಶನಗಳಲ್ಲಿ ನಿರ್ಮಿಸಲಾಗಿರುವ ಜಿ+3 ಅಂತಸ್ತಿನ ವಸತಿ ಕಟ್ಟಡಗಳು ಅಥವಾ ಸ್ಟಿಲ್ಟ್ ಪಾರ್ಕಿಂಗ್ +4 ಮಹಡಿಗಳನ್ನು ಹೊಂದಿರುವ ವಸತಿ ಕಟ್ಟಡಗಳಿಗೆ ಮಾತ್ರ ವಿನಾಯಿತಿ ಸಿಗಲಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಯಾರಿಗೆ ಲಭ್ಯ?

- ಶಾಶ್ವತ ವಿದ್ಯುತ್ ಸಂಪರ್ಕಕ್ಕಾಗಿ ಈಗಾಗಲೇ 2026ರ ಮೇ 31ರೊಳಗೆ ಅರ್ಜಿ ಸಲ್ಲಿಸಿರುವ ಪ್ರಕರಣಗಳು.
- ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆದು ಕಟ್ಟಡ ನಿರ್ಮಿಸಿ ಪೂರ್ಣಗೊಳಿಸಿರುವ ಪ್ರಕರಣಗಳು.
- ಯಾವುದೇ ವಿದ್ಯುತ್ ಸಂಪರ್ಕ ಪಡೆಯದೆ ಕಟ್ಟಡ ಕಾಮಗಾರಿ ಪೂರ್ಣಗೊಂಡಿರುವ ಪ್ರಕರಣಗಳು.

ಅರ್ಜಿ ಸಲ್ಲಿಕೆಗೆ ಕೊನೆ ಅವಕಾಶ: ಈ ಆದೇಶದ ದಿನಾಂಕದಿಂದ ಅಂದರೆ ಜೂ.22ರಿಂದ ಮುಂದಿನ 15 ದಿನಗಳವರೆಗೆ ಮಾತ್ರ ಹೊಸದಾಗಿ ಶಾಶ್ವತ ವಿದ್ಯುತ್ ಸಂಪರ್ಕಕ್ಕಾಗಿ ಅರ್ಜಿ ಸಲ್ಲಿಸಲು ಸಾರ್ವಜನಿಕರಿಗೆ ಅವಕಾಶ ಕಲ್ಪಿಸಲಾಗಿದೆ.

ಗ್ರಾಮೀಣ ಪ್ರದೇಶ, ರೈತರಿಗೆ ವಿಶೇಷ ಸವಲತ್ತು: ಗ್ರಾಮೀಣ ಭಾಗದ ರೈತರಿಗೆ ನೆರವಾಗುವ ನಿಟ್ಟಿನಲ್ಲಿ ಸರಕಾರ ಮತ್ತೊಂದು ಪ್ರಮುಖ ನಿರ್ಧಾರ ಕೈಗೊಂಡಿದೆ. ಗ್ರಾಮೀಣ ಪ್ರದೇಶಗಳಲ್ಲಿ ರೈತರು ವಾಸಿಸುವ ಮನೆಗಳಿಗೆ ಹಾಗೂ ಕೃಷಿ ಪೂರಕ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ಪಡೆಯಲು ಸ್ವಾಧೀನಾನುಭವ ಪ್ರಮಾಣಪತ್ರ (ಒಸಿ) ಪಡೆಯುವುದರಿಂದ ಸಂಪೂರ್ಣ ವಿನಾಯಿತಿ ನೀಡಲಾಗಿದೆ. ರೈತರು ವಾಸಿಸುವ ಮನೆ, ತೋಟದ ಮನೆ, ಕೃಷಿ ಉಪಕರಣಗಳನ್ನು ಇಡುವ ಮನೆ, ದನದ ಕೊಟ್ಟಿಗೆ ಹಾಗೂ ರೇಷ್ಮೆ ಗೂಡಿನ ಮನೆಗಳಿಗೆ ವಿನಾಯಿತಿ ನೀಡಲಾಗಿದೆ. ಈ ಆದೇಶದನ್ವಯ ರಾಜ್ಯದ ಎಸ್ಕಾಂಗಳು ಸಾರ್ವಜನಿಕರಿಗೆ ವಿದ್ಯುತ್ ಸಂಪರ್ಕ ನೀಡಲು ಅನುಸರಿಸಬೇಕಾದ ಸಾಮಾನ್ಯ ಮಾರ್ಗಸೂಚಿಗಳನ್ನು ಇಂಧನ ಇಲಾಖೆಯು ಪ್ರತ್ಯೇಕವಾಗಿ ಶೀಘ್ರದಲ್ಲೇ ಪ್ರಕಟಿಸಲಿದೆ.

ಸೌರಕೋಶ ಬಳಕೆ ಕೇಂದ್ರಕ್ಕೆ ನಿರ್ದೇಶನ

■ **ವಿಕ ಸುದ್ದಿಲೋಕ** ಬೆಂಗಳೂರು

ದೇಶೀಯ, ವಾಣಿಜ್ಯ ಮತ್ತು ಕೈಗಾರಿಕಾ ಸೌರ ಯೋಜನೆಗಳಲ್ಲಿ ಕಡ್ಡಾಯವಾಗಿ ಸ್ಥಳೀಯವಾಗಿ ತಯಾರಿಸಿದ ಸೌರ ಕೋಶ (ಸೋಲಾರ್ ಸೆಲ್ಸ್)ಗಳನ್ನು ಮಾತ್ರ ಬಳಸುವಂತೆ ಹೊರಡಿಸಿರುವ ಆದೇಶ ಸಂಬಂಧ ವಿವರಣೆ ನೀಡುವಂತೆ ಹೈಕೋರ್ಟ್, ಕೇಂದ್ರ ಸರಕಾರಕ್ಕೆ ನಿರ್ದೇಶನ ನೀಡಿದೆ.

ಸೌರ ವಿದ್ಯುತ್ ಉತ್ಪಾದನಾ ಯೋಜನೆಗಳಿಗೆ 2026ರ ಜೂ.1ರಿಂದ ಅನ್ವಯವಾಗುವಂತೆ ದೇಶೀಯ, ವಾಣಿಜ್ಯ ಮತ್ತು ಕೈಗಾರಿಕಾ ಸೌರ ಯೋಜನೆಗಳಲ್ಲಿ ಸ್ಥಳೀಯವಾಗಿ ತಯಾರಿಸಿದ ಸೌರ ಕೋಶಗಳನ್ನು ಮಾತ್ರ ಬಳಸಬೇಕು ಎಂದು ಕೇಂದ್ರ ಸರಕಾರದ ನವೀಕರಿಸಬಹುದಾದ ಇಂಧನ ಸಚಿವಾಲಯದ ಸುತ್ತೋಲೆ ಪ್ರಶ್ನಿಸಿ ಕರ್ನಾಟಕ ನವೀಕರಿಸಬಹುದಾದ ಇಂಧನ ಉತ್ಪಾದಕರ ಸಂಘ, ಕೇರಳ ನವೀಕರಿಸಬಹುದಾದ ಇಂಧನ ಉದ್ಯಮಿಗಳು ಮತ್ತು ಪ್ರವರ್ತಕರ ಸಂಘ, ತಮಿಳುನಾಡು ಸೌರಶಕ್ತಿ ಅಭಿವೃದ್ಧಿದಾರರ ಸಂಘ ಸಲ್ಲಿಸಿದ್ದ ಅರ್ಜಿಯು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ಪೀಠದ ಮುಂದೆ ಸೋಮವಾರ ವಿಚಾರಣೆಗೆ ಬಂದಿತ್ತು.

ದರ್ಶನ್ ಪತ್ನಿ ನಿಂದಕರಿಗೆ ಜಾಮೀನಿಲ್ಲ

■ **ವಿಕ ಸುದ್ದಿಲೋಕ** ಬೆಂಗಳೂರು

'ಡೆವಿಲ್' ಸಿನಿಮಾ ಪ್ರಚಾರ ಸಂದರ್ಭದಲ್ಲಿ ನಟ ದರ್ಶನ್ ಪತ್ನಿ ವಿಜಯಲಕ್ಷ್ಮೀ ವಿರುದ್ಧ ಸಾಮಾಜಿಕ ಜಾಲತಾಣದಲ್ಲಿ ಅಶ್ಲೀಲ ಕಾಮೆಂಟ್ ಮಾಡಿದ ಆರೋಪದ ಮೇರೆಗೆ ಬಂಧನಕ್ಕೊಳಗಾಗಿರುವ ನಾಲ್ವರು ಆರೋಪಿಗಳ ಜಾಮೀನು ಅರ್ಜಿಯನ್ನು ಹೈಕೋರ್ಟ್ ಸೋಮವಾರ ವಜಾಗೊಳಿಸಿದೆ.

ಜಾಮೀನು ಕೋರಿ ಪ್ರಶಾಂತ್ ತಲ್ವಾರ್, ಬಿ.ಚಂದ್ರಶೇಖರ್, ನಿಂಗರಾಜ್ ಗುಲಾಪ್ಪ ತಲ್ವಾರ್ ಮತ್ತು ಜಿ.ಬಿ. ನಿತಿನ್ ಸಲ್ಲಿಸಿರುವ ಜಾಮೀನು ಅರ್ಜಿಗಳನ್ನು ನ್ಯಾ.ಎಸ್. ರಾಚಯ್ಯ ಅವರಿದ್ದ ಏಕಸದಸ್ಯ ಪೀಠ ವಜಾಗೊಳಿಸಿ ಆದೇಶಿಸಿದೆ.

''ವಿಜಯಲಕ್ಷ್ಮೀ 2025ರ ಡಿಸೆಂಬರ್‌ನಲ್ಲಿ ದರ್ಶನ್ ನಟನೆಯ ಡೆವಿಲ್ ಸಿನಿಮಾ ಪ್ರಚಾರದಲ್ಲಿ ಭಾಗವಹಿಸಿದ್ದ ಸಂದರ್ಭದಲ್ಲಿ ಆರೋಪಿಗಳು ಸಾಮಾಜಿಕ ಜಾಲತಾಣದಲ್ಲಿ ಅಶ್ಲೀಲ ಪದಗಳಿಂದ ನಿಂದಿಸಿ ಪೋಸ್ಟ್ ಹಾಕಿದ್ದಾರೆ. ಮಹಿಳೆಯ ವಿರುದ್ಧ ಇಂತಹ ಕಾಮೆಂಟ್‌ಗಳು ಹಾಕುವುದನ್ನು ಕ್ಷಮಿಸಲಾಗದು. ಪ್ರಕರಣದಲ್ಲಿ ದೂರುದಾರಾದ ವಿಜಯಲಕ್ಷ್ಮೀ ವಿರುದ್ಧ ಅರ್ಜಿದಾರರು ಮಾಡಿರುವ ಕಾಮೆಂಟ್‌ಗಳು ದೇಶದ ಮಹಿಳೆಯ ಬಗ್ಗೆ ಅವರ ಮನಸ್ಥಿತಿಯನ್ನು ಸೂಚಿಸುತ್ತದೆ,'' ಎಂದು ನ್ಯಾಯಪೀಠ ಗಂಭೀರವಾಗಿ ನುಡಿದಿದೆ.

''ಸಂವಿಧಾನವು ಕಲ್ಪಿಸಿರುವ ಅಭಿವ್ಯಕ್ತಿ ಸ್ವಾತಂತ್ರ್ಯ ಮೂಲಭೂತ ಹಕ್ಕು ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ, ಆದರೂ, ಅಂತಹ ಪ್ರತಿಯೊಂದು ಹಕ್ಕಿಗೂ ಆದರದ್ದೇ ಆದ ನಿರ್ಬಂಧಗಳಿವೆ. ಅಂತಹ ನಿರ್ಬಂಧಗಳನ್ನು ಮೀರುವುದು ಅಥವಾ ಇನ್ನೊಬ್ಬ ವ್ಯಕ್ತಿಯ ವೈಯಕ್ತಿಕ ಸ್ವಾತಂತ್ರ್ಯವನ್ನು ಅತಿಕ್ರಮಿಸುವುದು ಖಂಡಿತವಾಗಿಯೂ ಅಪರಾಧವಾಗುತ್ತದೆ. ಆ ಅಪರಾಧವನ್ನು ಕಾನೂನಿನ ಪ್ರಕಾರ ವ್ಯವಹರಿಸಲಾಗುತ್ತದೆ,'' ಎಂದು ಅಭಿಪ್ರಾಯ ವ್ಯಕ್ತಪಡಿಸಿದೆ.

''ಅಲ್ಲದೆ, ಸಾಮಾಜಿಕ ಮಾಧ್ಯಮವು ಸಭ್ಯತೆ ಕಾಪಾಡಿಕೊಳ್ಳುವ ಮತ್ತು ಈ ದೇಶದ ನಾಗರಿಕರ ಮನಸ್ಸಿನಲ್ಲಿ ವಿಶ್ವಾಸ ತುಂಬುವ ಜವಾಬ್ದಾರಿ ಹೊಂದಿದೆಯೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಸಾಮಾಜಿಕ ಜಾಲತಾಣದಲ್ಲಿ ಯಾವುದೇ ವಿಷಯಗಳ ಬಗ್ಗೆ ಕಾಮೆಂಟ್ ಮಾಡುವ ವ್ಯಕ್ತಿಗಳು ಸಾರ್ವಜನಿಕ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡಿಕೊಳ್ಳಬೇಕು,'' ಎಂದು ನ್ಯಾಯಪೀಠ ಸಲಹೆ ನೀಡಿದೆ.

ವಿಜಯಲಕ್ಷ್ಮಿ ಸಾಮಾಜಿಕ ಜಾಲತಾಣದಲ್ಲಿ ಅಶ್ಲೀಲ ಪದಗಳಿಂದ ನಿಂದಿಸಿ ಪೋಸ್ಟ್ ಹಾಕಿದವರ ವಿರುದ್ಧ ನಗರ ಪೊಲೀಸ್ ಆಯುಕ್ತರ ಕಚೇರಿಗೆ ತೆರಳಿ ದೂರು ನೀಡಿದ್ದರು. ದೂರಿನನ್ವಯ ಸೈಬರ್ ಕ್ರೈಂ ಠಾಣಾ ಪೊಲೀಸರು ಎಫ್‌ಐಆರ್ ದಾಖಲಿಸಿ ಆರೋಪಿಗಳನ್ನು ಬಂಧಿಸಿದ್ದರು. ಅವರಿಗೆ ಜಾಮೀನು ನಿರಾಕರಿಸಿ ನಗರದ 45ನೇ ಎಸಿಜೆಎಂ ನ್ಯಾಯಾಲಯ ಆದೇಶಿಸಿತ್ತು.

ಪೋಕ್ಸೊ ಆರೋಪಿಗೆ ರಿಲೀಫ್ ಇಲ್ಲ

ಬೆಂಗಳೂರು: ಅಪ್ರಾಪ್ತೆ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಸಂತ್ರಸ್ತೆಯು ಬೇರೊಬ್ಬರನ್ನು ಮದುವೆಯಾಗಿದ್ದಾರೆಂಬ ಕಾರಣಕ್ಕೆ ಆರೋಪಿ ವಿರುದ್ಧ ಲೈಂಗಿಕ ದೌರ್ಜನ್ಯಗಳಿಂದ ಮಕ್ಕಳ ರಕ್ಷಣಾ ಕಾಯಿದೆ (ಪೋಕ್ಸೊ) ಅಡಿಯಲ್ಲಿ ದಾಖಲಾದ ಪ್ರಕರಣ ರದ್ದುಪಡಿಸಲಾಗದು ಎಂದು ಹೈಕೋರ್ಟ್ ಮೌಖಿಕವಾಗಿ ಹೇಳಿದೆ.

ಸಂತ್ರಸ್ತೆ ಬೇರೊಬ್ಬನನ್ನು ಮದುವೆಯಾಗಿದ್ದಾರೆ ಮತ್ತು ಪ್ರಕರಣದ ಸಹ ಆರೋಪಿಗಳು ಖುಲಾಸೆಯಾಗಿದ್ದಾರೆಂಬ ಕಾರಣಕ್ಕೆ ಪೋಕ್ಸೊ ಕಾಯಿದೆಯಡಿ ತನ್ನ ವಿರುದ್ಧದ ವಿಚಾರಣಾ ನ್ಯಾಯಾಲಯದ ವಿಚಾರಣೆ ರದ್ದುಪಡಿಸಬೇಕು ಎಂದು ಕೋರಿ ದೇವನಹಳ್ಳಿ ತಾಲೂಕಿನ ನಿವಾಸಿ ಪಾಲಾಕ್ಷ ಕುಮಾರ್ ಸಲ್ಲಿಸಿದ್ದ ಅರ್ಜಿಯು ನ್ಯಾ. ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠದ ಮುಂದೆ ಸೋಮವಾರ ವಿಚಾರಣೆಗೆ ಬಂದಿತ್ತು.

ನ್ಯಾಯಾಲಯಪ್ರಕರಣ ರದ್ದುಗೊಳಿಸಲಾಗದೆಂದು ಮೌಖಿಕ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದಂತೆಯೇ ಅರ್ಜಿದಾರರ ಪರ ವಕೀಲರು ನ್ಯಾಯಾಲಯದಿಂದ ಅರ್ಜಿ ವಾಪಸ್ ಪಡೆಯುವುದಾಗಿ ತಿಳಿಸಿದರು. ಅದಕ್ಕೆ ಸಮ್ಮತಿಸಿದ ನ್ಯಾಯಪೀಠ, ಅರ್ಜಿ ಹಿಂಪಡೆಯಲು ಒಪ್ಪಿಗೆ ನೀಡಿ ಆದೇಶ ಹೊರಡಿಸಿತು.

ನಂದಿನಿ ಅಪಪ್ರಚಾರ, ವೈದ್ಯೆ ವಿರುದ್ಧದ ಪ್ರಕರಣ ತಡೆಗೆ ಹೈಕೋರ್ಟ್ ನಕಾರ

■ **ವಿಕ ಸುದ್ದಿಲೋಕ** ಬೆಂಗಳೂರು

ನಂದಿನಿ ಹಾಲು ಹಾಗೂ ಉತ್ಪನ್ನಗಳ ಬಗ್ಗೆ ಅಪಪ್ರಚಾರದ ರೀಲ್ಸ್ ಮಾಡಿ ಅವುಗಳನ್ನು ಇನ್‌ಸ್ಟಾಗ್ರಾಂ ಹಾಗೂ ಇತರೆ ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್ ಮಾಡಿದ್ದ ಆರೋಪ ಎದುರಿಸುತ್ತಿರುವ ನಗರದ ವೈದ್ಯೆ ಡಾ.ಶರಣ್ಯ ಪದ್ಮಾ ವಿರುದ್ಧ ಮಲ್ಲೇಶ್ವರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್‌ಗೆ ತಡೆ ನೀಡಲು ಹೈಕೋರ್ಟ್ ನಿರಾಕರಿಸಿದೆ.

ಅಲ್ಲದೆ, ''ನೀವೇನು ಹಾಲು ಪರೀಕ್ಷೆ ಮಾಡಿದ್ದೀರಾ? ನೀವು ಹೇಗೆ ನಂದಿನಿ ಹಾಲು ವಿಷಪೂರಿತವಾಗಿದೆ ಎಂದು ಹೇಳುತ್ತೀರಾ? ಹಾಗೆ ಹೇಳಿ ಜನರನಲ್ಲಿ ಆತಂಕ ಮೂಡಿಸಿದ್ದೀರಿ,'' ಎಂದು ನ್ಯಾಯಾಲಯ ತರಾಟೆಗೆ ತೆಗೆದುಕೊಂಡಿದೆ.

ಪ್ರಕರಣದ ಸಂಬಂಧ ಎಫ್‌ಐಆರ್ ಹಾಗೂ 32ನೇ ಎಸಿಜೆಎಂ ನ್ಯಾಯಾಲಯದಲ್ಲಿ ನಡೆಯುತ್ತಿರುವ ಪ್ರಕರಣ ರದ್ದು ಕೋರಿ ಹೆಸರಾಂತ ಆಸ್ಪತ್ರೆಯಲ್ಲಿ ವೈದ್ಯೆಯಾಗಿ ಸೇವೆ ಸಲ್ಲಿಸುತ್ತಿರುವ ಮೂಲತಃ ಕೋಲಾರ ಜಿಲ್ಲೆಯ ಮಾಲೂರಿನ ಡಾ. ಶರಣ್ಯ ಪದ್ಮಾ ಸಲ್ಲಿಸಿದ್ದ ಅರ್ಜಿಯು ನ್ಯಾ.ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠದ ಮುಂದೆ ಸೋಮವಾರ ವಿಚಾರಣೆಗೆ ಬಂದಿತು.

ಕೆಲ ಕಾಲ ವಾದ ಆಲಿಸಿದ ಬಳಿಕ ನ್ಯಾಯಾಲಯ, ''ನೀವು ಹಾಲು ಪರೀಕ್ಷೆ ಮಾಡಿ, ದೃಢೀಕರಣ ಮಾಡಿದ್ದೀರಾ? ಆ ಬಗ್ಗೆ ಸರಕಾರಕ್ಕೆ ಮಾಹಿತಿ ಕಳುಹಿಸಿಕೊಟ್ಟಿದ್ದೀರಾ? ಇನ್‌ಸ್ಟಾಗ್ರಾಂ ಇರುವುದು ಇಂತಹ ಕೆಲಸ ಮಾಡುವುದಕ್ಕಾಗಿಯೇ? ಹಾಲು ಚೆನ್ನಾಗಿಲ್ಲ ಅಂದ್ರೆ ನೀವು ಕುಡಿಬೇಡಿ. ನಿಮಗಿಷ್ಟವಿಲ್ಲದಿದ್ದರೆ ನೀವು ಸುವಾಸಿತ ಹಾಲನ್ನೂ ಕುಡಿಯಬೇಡಿ. ಆದರೆ, ಇಂತಹ ಅಪಪ್ರಚಾರದ ಕೆಲಸ ಏಕೆ ಮಾಡುತ್ತೀರಾ? ಜನರಿಗೆ ಏಕೆ ತಪ್ಪು ಮಾಹಿತಿ ಕೊಡುತ್ತೀರಿ,'' ಎಂದು ಖಾರವಾಗಿ ಪ್ರಶ್ನಿಸಿತು.

ಅಲ್ಲದೆ, ಅರ್ಜಿದಾರರ ವಿರುದ್ಧ ಎಫ್‌ಐಆರ್‌ಗೆ ತಡೆಯಾಜ್ಞೆ ನೀಡಲು ನಿರಾಕರಿಸಿತು. ಅರ್ಜಿ ಸಂಬಂಧ ಸರಕಾರ, ಕೆಎಂಎಫ್ ನಿರ್ದೇಶಕಿ ಹಾಗೂ ದೂರುದಾರೆ ಆರ್.ಪದ್ಮಾವತಿ ಸೇರಿದಂತೆ ಎಲ್ಲಾ ಪ್ರತಿವಾದಿಗಳಿಗೆ ನೋಟಿಸ್ ಜಾರಿ ಮಾಡಿ ವಿಚಾರಣೆ ಮುಂದೂಡಿತು.

1,600 ಪೊಲೀಸ್ ನೇಮಕಕ್ಕೆ ಅರ್ಜಿ

■ **ವಿಕ ಸುದ್ದಿಲೋಕ** ಬೆಂಗಳೂರು

ರಾಜ್ಯ ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ 1,600 ಪೊಲೀಸ್ ಕಾನ್‌ಸ್ಟೆಬಲ್ (ಸಿಎಆರ್ ಹಾಗೂ ಡಿಎಆರ್) ಹುದ್ದೆಗಳ ನೇಮಕಾತಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಆನ್‌ಲೈನ್‌ನಲ್ಲಿ ಅರ್ಜಿ ಆಹ್ವಾನಿಸಿದೆ. ಅರ್ಜಿ ಸಲ್ಲಿಸಲು ಜು.22 ಕೊನೆ ದಿನವಾಗಿದೆ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ.

ಮಿಕ್ಕುಳಿದ ವೃಂದದ 1,421 ಹಾಗೂ ಸ್ಥಳೀಯ ವೃಂದದ 179 ಹುದ್ದೆಗಳಿಗೆ ಪ್ರತ್ಯೇಕವಾಗಿ ಅರ್ಜಿ ಆಹ್ವಾನಿಸಲಾಗಿದೆ. ಸೆ.6 ರಂದು ಪ್ರತ್ಯೇಕವಾಗಿಯೇ ಲಿಖಿತ ಪರೀಕ್ಷೆ ನಡೆಸಲಾಗುವುದು. ದ್ವಿತೀಯ ಪಿಯುಸಿ ಅಥವಾ ತತ್ಸಮಾನ ವಿದ್ಯಾರ್ಹತೆ ನಿಗದಿಪಡಿಸಲಾಗಿದ್ದು, ಪರೀಕ್ಷೆಯಲ್ಲಿ ಋಣಾತ್ಮಕ ಮೌಲ್ಯಮಾಪನ ಇರಲಿದೆ ಎಂದು ಅವರು ತಿಳಿಸಿದ್ದಾರೆ.

ಕನಕ ಕವನ ಸ್ಪರ್ಧೆ ಅವಧಿ ವಿಸ್ತರಣೆ

ಬೆಂಗಳೂರು: ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರವು ಆಯೋಜಿಸಿರುವ ರಾಜ್ಯಮಟ್ಟದ 'ಕನಕ ಕವನ ಸ್ಪರ್ಧೆ'ಯ ಅವಧಿಯನ್ನು ಆಸಕ್ತರ ಕೋರಿಕೆಯ ಮೇರೆಗೆ 2026ರ ಜುಲೈ 31ರವರೆಗೆ ವಿಸ್ತರಿಸಲಾಗಿದೆ. ಸ್ಪರ್ಧೆಯಲ್ಲಿ 18 ರಿಂದ 40 ವರ್ಷ ವಯೋಮಿತಿಯುಳ್ಳವರು ಭಾಗವಹಿಸಬಹುದು.

ಸ್ಪರ್ಧೆಗೆ ಬರುವ ಕವನಗಳಲ್ಲಿ ಬಹುಮಾನಕ್ಕೆ 60 ಕವನಗಳನ್ನು ಆಯ್ಕೆ ಮಾಡಲಾಗುವುದು. ಆಯ್ಕೆಯಾದ ಕವನಕ್ಕೆ 1,000 ರೂ. ಪ್ರೋತ್ಸಾಹ ಧನವನ್ನು ನೀಡಲಾಗುವುದು. ಸ್ಪರ್ಧಿಯು ಅರ್ಜಿ ಮತ್ತು ಕವನವನ್ನು ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ, ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಂಗಳೂರು-560 056 ಈ ವಿಳಾಸಕ್ಕೆ ಕಳುಹಿಸಿಕೊಡಬೇಕು. ಅರ್ಜಿಯನ್ನು ಮತ್ತು ಲೇಖನವನ್ನು ಅಂಚೆ/ಕೊರಿಯರ್ /ಇ-ಮೇಲ್ ಅಥವಾ ಖುದ್ದಾಗಿ ಸಲ್ಲಿಸಬಹುದು. ಅರ್ಜಿ ನಮೂನೆಯನ್ನು https://kanakadasaresearch-center.karnataka.gov.in/ ವೆಬ್ ಸೈಟ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. kanakare-searchcentre@gmail.com

ಎಂಜಿನಿಯರಿಂಗ್ ವಿದ್ಯಾರ್ಥಿ ಆತ್ಮಹತ್ಯೆ

ತುಮಕೂರು: ನಗರದ ಉಪ್ಪಾರಹಳ್ಳಿಯ ಬಿಸಿಎಂ ವಿದ್ಯಾರ್ಥಿ ನಿಲಯದಲ್ಲಿ ಎಂಜಿನಿಯರಿಂಗ್ ವಿದ್ಯಾರ್ಥಿ ಜಿ.ಇ. ವೆಂಕಟೇಶ್(25) ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಖಾಸಗಿ ಎಂಜಿನಿಯರಿಂಗ್ ಕಾಲೇಜಿನಲ್ಲಿ 3ನೇ ವರ್ಷದ ಎಂಜಿನಿಯರಿಂಗ್ ವ್ಯಾಸಂಗ ಮಾಡುತ್ತಿದ್ದ ವೆಂಕಟೇಶ್ ಸೋಮವಾರ ವಿದ್ಯಾರ್ಥಿ ನಿಲಯದಲ್ಲಿ ಯಾರೂ ಇಲ್ಲದ ವೇಳೆ ಕೊಠಡಿಯಲ್ಲಿ ನೇಣಿಗೆ ಶರಣಾಗಿದ್ದಾನೆ. 'ನೀವು ಐವರು ಒಟ್ಟಿಗೆ ಇರಬೇಕೆಂಬುದು ನನ್ನ ಕೊನೆಯ ಆಸೆ' ಎಂದು ಪೋಷಕರಿಗೆ ಡೆತ್‌ನೋಟ್ ಬರೆದಿಟ್ಟಿರುವುದು ತಿಳಿದಿದೆ.

ಮೋಡಗಳ ಮಡಿಲಲ್ಲಿ ಮಿಂದ ನಂದಿ ಗಿರಿಧಾಮ



ಚಿಕ್ಕಬಳ್ಳಾಪುರ ಜಿಲ್ಲೆಯ ನಂದಿ ಗಿರಿಧಾಮದ ಬೆಟ್ಟ ಸಂಪೂರ್ಣ ಮುಂಗಾರಿನ ಮೋಡಗಳಿಂದ ಆವರಿಸಿಕೊಂಡು ಪ್ರಕೃತಿ ಪ್ರಿಯರ ಮನಸೂರೆಗೊಳ್ಳುತ್ತಿದೆ. ಹಸಿರು ಹೊದಿಕೆಯ ನಡುವೆ ಬೆಟ್ಟದ ಶಿಖರವನ್ನು ಮುತ್ತಿಕ್ಕಿರುವ ಮೋಡಗಳು ಅಪರೂಪದ ದೃಶ್ಯವನ್ನು ಸೃಷ್ಟಿಸಿವೆ.

TIMES interact

Connecting People, Connecting Needs.

ನಿಮ್ಮ ಕ್ಲಾಸಿಫೈಡ್ ಜಾಹೀರಾತಿಗಾಗಿ ಸಂಪರ್ಕಿಸಿ
080-40877 666, 40877 543
ಕರೆ ಮಾಡಿ : 99160 79232
narasinha.kulkarni@timesofindia.com

ಉದ್ಯೋಗ RECRUITMENT

SITUATION VACANT

OTHER VACANCIES

GENERAL

ನೇರ ಸಂದರ್ಶನ: ಸೆಕ್ಯೂರಿಟಿ ಗಾರ್ಡ್ (25 ರಿಂದ 55 ವರ್ಷ) ಸಂಬಳ 18000. ಹೆಬ್ಬಾಳ ಸುತ್ತ ಮುತ್ತ, ಹೌಸ್ ಕೀಪಿಂಗ್–10 ಹುಡುಗರು ದಿನಕ್ಕೆ 750. ವಾರದ ಸಂಬಳ ಇರುತ್ತದೆ. ಸಂಪರ್ಕಿಸಿ: ಮೊ. 9448150408, 9164993307

ಪ್ರೈವೇಟ್ ಲಿಮಿಟೆಡ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು 10th & PUC ಪಾಸ್ ಆಗಿರುವ 30 ವರ್ಷದೊಳಗಿನ ಯುವಕರು ಬೇಕಾಗಿದ್ದಾರೆ ರಾಜಾಜಿನಗರ ಸುತ್ತಮುತ್ತ ಇರುವವರಿಗೆ ಆದ್ಯತೆ ಮೊ: 9902891620 / 9845579620

ಮನೆಯಿಂದಲೇ ಕೆಲಸ. ಡೇಟಾ ಎಂಟ್ರಿ, ಎಸ್.ಎಂ.ಎಸ್. ಸೆಂಡಿಂಗ್, ಪಾರ್ಕ್‌ಂಗ್ ವರ್ಕ್, ಮಹಿಳೆಯರಿಗೆ, ಪುರುಷರಿಗೆ, ವಿದ್ಯಾರ್ಥಿಗಳಿಗೆ ಆದ್ಯತೆ. 20,000 - 25000/-. ಸಂ: 70900 72435.

RETIRED PERSONS

WANTED Men, Women - Office work, Full /Part Time, Age 25 to 65, SSLC, PUC, Degree. Earn Monthly Rs. 1 Lakh +, Free Europe Trip. Ct:9980670027

ಪ್ರವಾಸ TRAVEL

PACKAGE TOURS

28.06.2026, 1 ದಿನ 3 ಆಂಜನೇಯ ಬ್ರಾಂತೇಶ, ಶಾಂತೇಶ, ಕಾಂತೇಶ. 11.07.2026, 2 ದಿನಗಳು ಹಂಪಿ, ಅಂಜನಾದ್ರಿ ಬೆಟ್ಟ, ನವಬೃಂದಾವನ, ಟಿ.ಬಿ. ಡ್ಯಾಂ, ಇತ್ಯಾದಿ. 94814 33157.

TOURS & TRAVELS

3/07/2026 ರಾಮೇಶ್ವರಂ ಮತ್ತು ಕನ್ಯಾಕುಮಾರಿ 6 ದಿನಗಳ ರೂ 7500 & ಕಾಶಿ ಮತ್ತು ಅಯೋಧ್ಯ 16 ದಿನಗಳ, ವೆಂಕಟೇಶ್ವರ ಟೂರ್ಸ್ ಪಾವಗಡ ರಾಮಾಂಜಿನಪ್ಪ 6362710105

14/8/2026 ರಿಂದ 4 ದಿನಗಳು ವಿಮಾನದಲ್ಲಿ ಕಾಮಖ್ಯದೇವಿ ವಿಐಪಿ ದರ್ಶನ ಮೇಘಾಲಯ ಶಿಲ್ಲೊಂಗ್ ಚಿರಪುಂಜಿ ರೂ 37000 / ಶ್ರೀ ರಾಮ್ ಟೂರ್ಸ್ 9108933383 / 9606600383

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳನ್ನು ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಂದಿಗೆ ವ್ಯವಹರಿಸ ಬೇಕಾಗುತ್ತದೆ. ಅದಕ್ಕೆ ಪತ್ರಿಕೆಯು ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು

TIMES TRIBUTE PAYING HOMAGE TO THE DEPARTED SOUL ದಿನಪತ್ರಿಕೆಯಲ್ಲಿ ತುರ್ತು ಸ್ಮರಣೆ ಅಥವಾ ನಿಧನ ಜಾಹೀರಾತು ಪ್ರಕಟಿಸಲು ನಾವು ಲಭ್ಯ

ನಾವು ನಿಮ್ಮ ಮನವಿಯನ್ನು ಕರೆ/ಇಮೇಲ್ / ವಾಟ್ಸಪ್ ಮೂಲಕ ಸ್ವೀಕರಿಸುತ್ತೇವೆ

ತ್ವರಿತಗತಿಯಲ್ಲಿ ನಿಮ್ಮ ಪ್ರಕಟಣೆ / ಜಾಹೀರಾತು ವಿನ್ಯಾಸ ಮಾಡಲಾಗುವುದು

ನೀವು ಅನುಮೋದಿಸಿದ ನಂತರ ಶುಲ್ಕವನ್ನು ಪೇಟಿಎಂ / ಎನ್‌ಇಎಫ್‌ಟಿ / ಆರ್‌ಟಿಜಿಎಸ್ ಮೂಲಕ ಪಾವತಿಸುವುದು.

ಸಂಪರ್ಕಿಸಿ: ಇರ್ಫಾನ್ ಶೇಖ್ 8088815336
irfan.shekh@timesofindia.com

ಸೇವೆಗಳು SERVICES

ASTROLOGY

ನಿಮ್ಮ ಜೀವನದ ಅತ್ಯಂತ ಕಷ್ಟಕರ ಹಾಗೂ ಕಠಿಣ ಸಮಸ್ಯೆಗಳಿಗೆ ಶಾಸ್ತ್ರೋಕ್ತ ಶಾಶ್ವತ ಪರಿಹಾರವಿದೆ ಪಿಎಲ್ ಜೋಶಿ ಬೆಂಗಳೂರು. 9663365085

personal

LOST & FOUND

LOST OF DOCUMENT

Notice is hereby given that the Lost of Share certificates **No. 0399 & 0400** and Security Deposit Receipts **Nos. 002181 & 002182** for equity shares of **CENTURY GALAXY DEVELOPERS LIMITED** for **3262 Shares** in the name of Mr. Hussain Ahmed Jawad Ghuloom. Any person who has a claim in respect of the said shares should lodge such claim with the Company at its Registered Office at B Tower, 9th Floor, Corporate Block, Diamond District, Kodihally, Bangalore-560008 within 15 days from the date of this advertisement, else the Company will proceed to issue Duplicate share certificates.

Sd/- Authorised Signatory
(**M/s. Century Galaxy Developers Limited**)
Date : 22-06-2026 Place: Bangalore

CHANGE OF NAME

I, Chidananda Bylakere Kumar, Aged about 45 years, residing at Byaladakere, Maligehalli Post, Kasaba Hobli, Chikkanayanahalli, Tumkur 572214. I have changed my name to CHIDANANDA BYALADAKERE KUMAR vide affidavit dated : 18/06/2026 Before Notary S R THULASIKRISHNA.

I, SUJATHA GULUR DORESWAMY, W/o VUTHANUR SREENIVASA MURTHY, residing at No. 14, Anugraha, 9th cross, Varma Layout, Bhuvaneshwari Nagar, Dasarahalli, Hebbal, B'lore-24, do hereby solemnly declare that my maiden name is SUJATHA GULUR DORESWAMY and in the Passport name was entered as Sujatha Murthy by mistake. I further declare that I shall be called my name as SUJATHA GULUR DORESWAMY (Sujatha G D) for all future purposes vide aff Dt.23/05/2026 sworn before Notary Vijayalakshmi K B'lore.

I, Hassan Amreliwala, aged 19 Years Old, Son of Hatim Hakimuddin Amreliwala, aged 49 years old, Residing at Canopy Colounge, Haines Road, Coles Park, Frazer Town Bangalore 560005, hereby declare that my name is wrongly Spelled in my Passport as Hasan Amreliwala (Passport No. Y7345520). My correct name is spelled Hassan Amreliwala for all future reference vide Affidavit dated 16th June 2026 sworn before the notary Prasad Shetty KB, Bangalore.

I Prameela Mohan Kumar, W/O, Mohan Kumar.K.L., Residing At, No 2/1, Sri Rama Nilaya, basappa Road, shanthi Nagar, Bengaluru 560027, have Changed My Name to Prameela Kadur Lokesh for all purposes.

I, SUBRAT PATTNAIK S/o Madanmohan Pattnaik, Res at Saikrupa Sandesh, Flat No-408, 4th Floor, Chinnappa Layout, Mahadevapura Outer Ring Road, Opp To More Store, Hoodi, Bangalore 560048, do hereby solemnly affirm and declare that my name in PASSPORT mentioned as SUBRAT KUMAR PATTNAIK insted of SUBRAT PATTNAIK For all purpose vide affidavit dated 20-06-2026, Sworn to Before me

I, Sunilkumar Bangundi residing at 1009, 36A Main Road, Ideal Homes Township, RR Nagar, Bengaluru 560098, declare that my son name Pranav @ Pranav S @ Pranav Sunilkumar and Pranav Bangundi are all same & pertains to him only; and henceforth he shall be known as Pranav Bangundi vide affidavit Dt. 19.06.2026, sworn before notary K V Prema Kumari, Bengaluru

I, ANEES UR REHMAN, S/o Atheeq Ur Rehman, R/o No.68/294/4, Door No.A-7, 3rd Floor, 8th B Main, Virat nagar, Bommanahalli, Ward No. 175, Bangalore – 560068, do hereby declare's that my correct name is ANEES UR REHMAN and not ANEES UR REHAMAN, as mentioned wrongly in my SSLC Marks card, vide affidavit dated 04.04.2026, sworn before notary G. Dayanada, Bangalore.

I, SYEEDA HUMEERA, W/o Atheeq Ur Rehman, R/o No. A-7, 3rd Floor, 8th B Main, Virat nagar, Bommanahalli, Ward No. 175, Bangalore – 560068, have changed my name from SYEEDA HUMEERA to SYEEDA HUMEERA REHMAN, vide affidavit dated 04.04.2026, sworn before notary G. Dayanada, Bangalore.

I, Udeshkumar Krishandev Vij alias Udesh alias Udesh Vij, S/o Krishandev Diwanchand Vij, R/o House No. 521/9, Near Anjaneya Temple Road, Anjaneya Badavane, Davangere, Karnataka, 577002, hereby state that the above name variations refer to one and the same person for all purposes.

CAUTION NOTICE

Publication reserves the right to withhold / cancel ads without prior notice and / or assigning any reason. Refund (if any) against such unpublished ads must be claimed at the booking offices.

I, Manjunatha R S, r/at No. 113, Ramakrishna Math, Swami Vivekananda Road, Ulsoor, Bangalore 560008 have changed my name to Swami Satyavidananda for all purposes vide affidavit dt. 08.06.2026 sworn before Notary L Puttaraju, Bangalore.

I am Mahesh Kumar, s/o poojappa, r/o Rajajinagar Bengaluru, I have changed my name from Mahesh Kumar poojappa to mahesh kumar

I, LINDLEY MARQUIS, (as per Passport No. P8169238), S/o N. E. Chandrasekaran, R/o Apt No. 2BN-502, Wisdom Tree Community, Near Kristu Jayanti College, K. Narayanapura, Dr. Shivarama Karanth Nagar, Bangalore - 560077, have changed my name from LINDLEY MARQUIS to LINDLEY MARQUIS CHANDRASEKARAN for all purposes.

I, Shankar M S, S/o Late. Siddaramegowda, R/at No.08, Mathrushree Nilaya, 3rd Main, 2nd Cross, Janaganga Nagar, Opposite PVP School, Banga lore Viswavidalya, Bengaluru-560056, here by declare that SHANKAR M S & SHANKARA M S both the names belongs to me only, vide affidavit dt: 22.06. 2026 Notary Devaraja E, B.lore.

I, Aiswariya Muthukumar C/o Jagan S R/o No.T8 3rd floor, Rashi Pride Apartment, BTM 6th Stage, near Sai Baba Temple, Bangalore South, Bengaluru, Karnataka- 560076. Changed my name as M Aiswarya for all future purposes

I Pooja Ravishankar Poul, W/o, Deepak.C.M., Residing At, No 18/1, Shanthi Nilaya, Pallekamama Nagar Road, B/H Decathlon Chikkajala, Bengaluru 562157 have Changed Mlny name to Pooja Ravishankar, for all purposes.

I, Fiona Loveleen Pinto, born on 13/10/1983. Residing @ # 2146/1, 2nd cross, after Jyothi school St Thomas town post, B'lore-560084 have changed my name to FIONA PINTO Vide affidavit IN-KA94821515324364Y dated 22/06/26 sworn before Notary Y.R.Chandrasekar Bangalore

I Suneeta spouse of Army No JC 781687Y Rank - Nb/ Sub, Name. Rabendra Singh of 515 Army Base WKSP, Bangalore and resident of Vill Musarahi Jhor, Deorahat Bangar, Kanpur dehat Uttar Pradesh, 209112 have declared that my name & DOB has wrongly mentioned in my husbands Army Service record, the same has to be changed from Suneeta to correct Name Suneeta Devi and DOB changed from 15 June 1985 to correct DOB 1 Jan 1983 according to my Aadhar card vide affidavit certificate No. IN-UP50837785617 71Y 12 May 2026. Both Names & DOB pertains to one and same person.

I, Abhigyan Ankur Agarwal, R/o Flat No A-211, Ozone Evergreens, Harlur Road, Off Sarjapur Road, Opposite Families Mart, Bangalore South, PO: Hsr Layout, DIST: Bengaluru, Karnataka - 560102, have changed my name to Abhigyan Agarwal.

I Radhakrishna S/O Krishnappa residing at 528 4th Block HBR Layout Bangalore, have changed my name to Krishna Ravish vide affidavit dated 19th Jun 2026 at Rajendra Advocate, Nagasandra Bangalore

I, Swapna Anand Kumar @ Sapna Ranka Anand R/o No.1765/1, Ranka nivas, Main road, Mandimohalla, Mysuru 570021 have changed my name to Sapna Anand Kumar (Sapna A) I shall be called by this name for all purposes

I, HAJIRA SULTANA W/o. NASIR SHAIKH Resident at No.13, KZ Bait Ul Iman, 3rd Main, Near Kali Temple Road Subedarpalya, Yeswanthpura, Bengaluru 560022 have changed my name to HAJIRA SHAIKH vide affidavit dated 20.06.2026 sworn before notary Chandrakala, Bangalore.

I, Bhuva Ankitaben Jagdishbhai W/o Hardik Hasmukhbhai Sangani, R/o. C1805, Keya Around The Life, Seegehalli, Bengaluru 560067, Changed my Name as Ankita Hardik Sangani.

I, Parmar Chandresh Nanji R/o: 402, 1247, 25th A Cross Rd, Sector 2, HSR Layout, Bengaluru - 560102, have changed my name as Parmar Chandresh Nanjibhai for all future purposes.

I LYDIA LEELAVATHI . S, residing at Flat C008, C block ground floor, SLV vajra, Horamavu,(Nr old age home)Bangalore;- 560016. Clarify that my name is wrongly mentioned as LYDIA LEELAVATHI in my daughters birth certificate. Both names belong to one and the same person. Hence forth my correct name should be known as LYDIA LEELAVATHI .S for all purposes.

I hitherto known as Sumeeta PM alias Sumeeta Parameswari Mariadas alias Sumeeta David D/o Mariadas Mandadi and wife of S K DAVID, R/o No. 517, Vishnuvallabha Nilaya, Balaji Layout, Vajarahalli, Bengaluru – 560062; have changed my name and shall hereafter be known as Sumee Starlina David. I have changed my name only not my religion.

ಎಚ್ಚರಿಕೆ ನೋಟೀಸು

ಪ್ರಕಾಶಕರು ಪೂರ್ವ ಸೂಚನೆ ನೀಡದೆಯೇ ಮತ್ತು /ಅಥವಾ ಯಾವುದೇ ಕಾರಣ ನೀಡದೆ ಜಾಹೀರಾತುಗಳನ್ನು ತಡೆ ಹಿಡಿಯುವ / ರದ್ದುಪಡಿಸುವ ಅಧಿಕಾರವನ್ನು ಕಾಯ್ದಿರಿಸಿಕೊಂಡಿರುತ್ತಾರೆ. ಹೀಗೆ ಪ್ರಕಟವಾಗದ ಜಾಹೀರಾತುಗಳು (ಇದ್ದಲ್ಲಿ) ಸಂಬಂಧಿತ ಮರುಪಾವತಿಗಳಿಗಾಗಿ ಬುಕಿಂಗ್ ಕಚೇರಿಗಳಲ್ಲಿ ಕ್ಲೇಮು ಸಲ್ಲಿಸಬೇಕು.

I, Pushpa Latha Gudipally w/o Sudheer Reddy Gudipally, R/o A-209, Jyothi Enclave, 1st A Cross, Kaggadasapura, CV Raman Nagar, Bangalore-560093. I have changed my name from Pushpa Latha Gudipally to Pushpa Latha Katkuri for all purposes.

I, Harshiya Banu Iliyaz Pasha, W/o Kashif Ulla Beig H A, R/at #108, 1st Floor, D S Max Seagull Nest, Bethal Nagar, K R Puram, Virgonagar Post, Bengaluru-560049, have changed my name to HARSHIYA BANU, vide affidavit dt: 20.06.2026 before notary Meer Hassan, Bangalore

I Ramamoorthi Sampath Reddy S/O, Sampath Reddy R/o N0-16,behind Prakash Road Lines,1st Stage, 2nd Phase,peenya, Bengaluru-560058 have changed my name to Ramamurthy Sampath Reddy.

I, Subbe Gowda S/O, Narayanappa R/o Basettihalli Bengaluru Rural 561203 have changed my name to N Subbegowda for all purposes.

I, 6500167X, Sep/ASH, Kishor Kumar of ASC Centre and College changed my son's name Shaury Ansh Bhagat to Shaurya Ansh Bhagat, for all purpose.

I, Hussain Ahmed Jawad Ghuloom S/o Ahmed Jawad, residing at Flat No. D-13, 1st Floor, D Block, Diamond District, Bangalore- 560008. I have changed my name to Hussein Ahmed Jawad vide affidavit dated 20/06/2026 sworn before notary Lakshmaiah, Bangalore.

I, Shridevi G. Tophakhane (Old Name), D/o Bheemasen acharya Hangal and W/o Gireesh Tophakhane, aged about 53 years, residing at No.156, 2nd Cross, Krishna Garden Incity Layout, Doddakammanahalli Road, Near South Park Apartment, Chikkakammanahalli, Gottigere Post, Bengaluru - 560 083, have changed my name to SHRIDEVI TOPHAKHANE (New Name) vide affidavit dated 18.06.2026 sworn before Notary Aravind Patil GG.

I, Nazara Fathima Mohammed Adil, D/o Mohammed Adil, R/o No-G01, SV Homes 1ST Cross Road, Sarvabhouma Nagar, Bilekahalli, Bengaluru-560076. have changed my name to Nazara Fathima Adil for all Purposes.

I, kushawaha shalu keshavprasad, D/o keshavprasad kushwaha, R/o G-158 bapa sitaram socity more surat gujarat - 394517, have changed my name to salu kushwaha. both names are mine.

I, Adithya M Reddy, declare that in my passport No. X6972504 my name is entered has Adithya Mohan Kumar, both the names are one & the same person & the correct name is Adithya M Reddy. Affidavit date : 19/06/2026

I, Karan Dilip R/O No 101 Sri Ramdev Complex K C Circle Chunchghatta Bengaluru 560062 Have Changed My Name to Karan Kumaar for All Purpses.

I, Sumaiya Riyaz Ahmed R/o No 27 East Street Neelasandra Viveknagar Post bangalore 560047 Have changed my name to Sumaiya Iffat for all Purposes.

I, Varsha J Joseph, Resident Flat Number 603, Tower 29, 6th Floor, L & T Raintree Boulevard, Bellary Road, Byatarayanapura Bengaluru-560092. Changed my name from Varsha Sharma to Varsha J Joseph to all further purposes (J full form is Jerish).

I, Anamika P C (Paul Choudhiri) , R/o : D1117 Arat Firenza, Electronic city Phase - 1, Bangalore : 105 have changed my name to Anamika P (Paul) Affidavit date : 22/06/2026

CHURCH NOTICES

I M.S. Lakshmi, aged about 52 years W/o Sudeendra B.V. residing at No.547, 6th cross, Vidyamanyanagar, Vishwaneedam Bangalore-560091 have changed my name to LAKSHMI SUDEENDRA instead of M.S.Lakshmi, M.S.Laksmi Sudeendra. Now as per Aadhar card my name is LAKSHMI SUDEENDRA Vide affidavit dated 22/06/2026 sworn before notary N.Nagappa.

GET NOTICED

ಅಂತರಾಷ್ಟ್ರೀಯ ಯೋಗ ದಿನಾಚರಣೆಯ ಪ್ರಯುಕ್ತ ಗಂಗೊಂಡನಹಳ್ಳಿ ಮುಖ್ಯರಸ್ತೆಯಲ್ಲಿರುವ ಸಿದ್ಧಾರ್ಥ ಇಂಟರ್ನ್ಯಾಷನಲ್ ಶಾಲೆಯ ಮುಖ್ಯಸ್ಥರಾದ ಎಚ್.ಬಿ ಸಿದ್ದಗಂಗಯ್ಯ ಹಾಗೂ ಅಪೋಲೋ ಡಯಾಗ್ನೋಸ್ಟಿಕ್ಸ್‌ನ ಮುಖ್ಯಸ್ಥರಾದ ವಿಶ್ವನಾಥ್ ಗುಪ್ತ ಅವರ ಸಹಯೋಗದಲ್ಲಿ ಉಚಿತ ರಕ್ತ ತಪಾಸಣಾ ಶಿಬಿರವನ್ನು ಆಯೋಜಿಸಲಾಯಿತು. ಹಾಗೆಯೇ ಯೋಗ ಶಿಕ್ಷಕರಾದ ವೇದ ಚೇತನ್ ಅವರ ನೇತೃತ್ವದಲ್ಲಿ ಸಾಮೂಹಿಕ ಯೋಗಾಭ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ADMISSION OPEN

NETHRADHAMA SCHOOL OF OPTOMETRY

ಪ್ರವೇಶ ತೆರೆಯಲಾಗಿದೆ

2026-27 | ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯಕ್ಕೆ ಸಂಯೋಜಿತವಾಗಿದೆ

	ಅರ್ಹತೆ :	ಅವಧಿ :
ಬಿ. ಆಪ್ಟಮ್. (ಬ್ಯಾಚುಲರ್ ಆಫ್ ಆಪ್ಟೊಮೆಟ್ರಿ)	PUC ಯಲ್ಲಿ 50% (PCB / PCM)	4 ವರ್ಷ + 1 ವರ್ಷದ ಇಂಟರ್ನ್‌ಶಿಪ್
ಬ್ಯಾಚುಲರ್ ಆಫ್ ಆಪ್ಟೊಮೆಟ್ರಿ - ಲ್ಯಾಟರಲ್ ಎಂಟ್ರಿ	ಆಫ್ತಾಲ್ಮಿಕ್ ಟೆಕ್ನಾಲಜಿಯಲ್ಲಿ ಡಿಪ್ಲೊಮಾ	3 ವರ್ಷ + 1 ವರ್ಷದ ಇಂಟರ್ನ್‌ಶಿಪ್
ಎಂ.ಆಪ್ಟೊಮ್. ಮಾಸ್ಟರ್ ಆಫ್ ಆಪ್ಟೊಮೆಟ್ರಿ	ಬಿ.ಆಪ್ಟೊಮ್‌ನಲ್ಲಿ 50% ಅಂಕಗಳು	2 ವರ್ಷ

080-2671-6152 | optoschool@nethradhama.org

ನಮ್ಮ ಆಪ್ಟೊಮೆಟ್ರಿ ಕೋರ್ಸ್‌ಗಳ ಕುರಿತು ಹೆಚ್ಚಿನ ಮಾಹಿತಿಗಾಗಿ QR ಕೋಡ್ ಸ್ಕ್ಯಾನ್ ಮಾಡಿ

ಹೆಚ್ಚಿನ ವಿವರಗಳಿಗಾಗಿ 77607 44990

ಸಂಖ್ಯೆ 818, 13 ನೇ ಕ್ರಾಸ್, 7 ನೇ ಬ್ಲಾಕ್ ಪಶ್ಚಿಮ, ಜಯನಗರ, ಬೆಂಗಳೂರು 560070

ಸ್ಟೇಟ್ ನ್ಯೂಸ್

25ರಂದು ತುಂಗಭದ್ರಾ ಕ್ರಸ್ಟ್‌ಗೇಟ್ ಲೋಕಾರ್ಪಣೆ

ಹೊಸಪೇಟೆ (ವಿಜಯನಗರ): ತುಂಗಭದ್ರಾ ಜಲಾಶಯಕ್ಕೆ ಹೊಸದಾಗಿ ಅಳವಡಿಸಿರುವ 33 ಸ್ಟೀಲ್‌ವೇ ಕ್ರಸ್ಟ್‌ಗೇಟ್‌ಗಳ ಲೋಕಾರ್ಪಣೆಯು ಕೊಪ್ಪಳ ಜಿಲ್ಲೆ ಮುನಿರಾಬಾದ್ ಸರಕಾರಿ ಹೈಸ್ಕೂಲ್ ಮೈದಾನದಲ್ಲಿ ಜೂನ್ 25ರಂದು ಬೆಳಗ್ಗೆ 11ಕ್ಕೆ ಜರುಗಲಿದೆ. ಈ ಕಾರ್ಯಕ್ರಮವನ್ನು ಸಿಎಂ ಡಿ.ಕೆ.ಶಿವಕುಮಾರ್ ಉದ್ಘಾಟಿಸುವರು. ಕೇಂದ್ರ ಜಲಶಕ್ತಿ ಸಚಿವ ಸಿ.ಆರ್.ಪಾಟೀಲ್, ಆಂಧ್ರಪ್ರದೇಶದ ಸಿಎಂ ಎನ್.ಚಂದ್ರಬಾಬು ನಾಯ್ಡು, ತೆಲಂಗಾಣ ಸಿಎಂ ಎ.ರೇವಂತ್ ರೆಡ್ಡಿ ಭಾಗವಹಿಸುವರು ಎಂದು ತುಂಗಭದ್ರಾ ಮಂಡಳಿಯ ಪ್ರಕಟಣೆ ತಿಳಿಸಿದೆ.

ನಂಜನಗೂಡು ದೇಗುಲದಲ್ಲಿ ಇಂದಿನಿಂದ ಗಿರಿಜಾ ಕಲ್ಯಾಣ

ನಂಜನಗೂಡು (ಮೈಸೂರು): ಪಟ್ಟಣದ ಶ್ರೀಕಂಠೇಶ್ವರಸ್ವಾಮಿ ದೇಗುಲದಲ್ಲಿ ಜೂನ್ 23ರಿಂದ 30ರವರೆಗೆ ಗಿರಿಜಾ ಕಲ್ಯಾಣ ಮಹೋತ್ಸವ ನಡೆಯಲಿದೆ. 24ರಂದು ಸಂಜೆ ನಡೆಯುವ ಕಾಶಿಯಾತ್ರೆಯಲ್ಲಿ ಭಾಗಿಯಾಗಲು ರಾಜ್ಯ ಹಾಗೂ ಹೊರ ರಾಜ್ಯಗಳಿಂದ 20ಕ್ಕೂ ಹೆಚ್ಚು ಕಲಾತಂಡಗಳು ಆಗಮಿಸುವ ನಿರೀಕ್ಷೆಯಿದೆ. ಜೂನ್ 23ರಂದು ರಾತ್ರಿ 8ಕ್ಕೆ ವರಪೂಜೆ, 24ರಂದು ಸಂಜೆ 6.45ರಿಂದ 7.15ರೊಳಗೆ ಸಲ್ಲುವ ಶುಭ ಧನುರ್ ಲಗ್ನದಲ್ಲಿ ಧಾರಾ ಮಹೋತ್ಸವ ಜರುಗಲಿದೆ.

ವಧು ಕೈ ಕೊಟ್ಟರೂ ನಡೆದ ಮದುವೆ!

ನರಗುಂದ (ಗದಗ): ಮದುವೆಯಾಗಬೇಕಿದ್ದ ವಧು ಕೊನೆ ಗಳಿಗೆಯಲ್ಲಿ ನಿರಾಕರಿಸಿದ ಕಾರಣ ಇನ್ನೇನು ಮದುವೆ ಮುರಿದೇ ಹೋಯಿತು ಎನ್ನುವಷ್ಟರಲ್ಲಿ ಬೇರೊಂದು ಕನ್ಯೆ ಹುಡುಕಿ ನಿಶ್ಚಿಯವಾಗಿದ್ದ ಮುಹೂರ್ತದಲ್ಲೇ ಮದುವೆ ಮಾಡಿದ ಘಟನೆ ಪಟ್ಟಣದಲ್ಲಿ ಸೋಮವಾರ ನಡೆದಿದೆ. ಪಟ್ಟಣದ ಕಸಬಾ ಬಡಾವಣೆಯ ನಿಂಗಪ್ಪ ಬಸಪ್ಪ ಸವದಿ ಎಂಬುವರ ಮದುವೆ ಬಾದಾಮಿ ತಾಲೂಕಿನ ಮಾಗನೂರ ಗ್ರಾಮದ ಯುವತಿಯೊಂದಿಗೆ ಸೋಮವಾರ ನಿಶ್ಚಯವಾಗಿತ್ತು. ಆದರೆ, ಯುವತಿ ವೈಯಕ್ತಿಕ ಕಾರಣದಿಂದ ಶನಿವಾರ ರಾತ್ರಿ ಏಕಾಏಕಿ ಮದುವೆಗೆ ನಿರಾಕರಿಸಿದರು. ಈ ಕುರಿತು ಆಕೆಯ ಪೋಷಕರು ಲಿಖಿತ ಮುಚ್ಚಳಿಕೆ ಪತ್ರ ಬರೆದುಕೊಟ್ಟರು. ಇದರಿಂದ ವರನ ಪಾಲಕರಿಗೆ ಬರಸಿಡಿಲು ಬಡಿದಂತಾಯಿತು. ಈ ವೇಳೆ ಗುರು-ಹಿರಿಯರು, ಮದುವೆ ನಿಲ್ಲಿಸುವುದು ಬೇಡ ಎಂದು ವರನ ತಂದೆ-ತಾಯಿಗಳಿಗೆ ಧೈರ್ಯ ಹೇಳಿ ಬೇರೆ ಕನ್ಯೆ ಹುಡುಕಾಟ ಪ್ರಾರಂಭಿಸಿದರು. ರಾಮದುರ್ಗ ತಾಲೂಕಿನ ಕೆ. ಚಂದರಗಿ ಗ್ರಾಮದ ಯುವತಿ ಹಾಗೂ ಆಕೆಯ ತಂದೆ-ತಾಯಿಗೆ ವಾಸ್ತವ ಸಂಗತಿ ಬಗ್ಗೆ ಮನವರಿಕೆ ಮಾಡಿಕೊಟ್ಟು, ಅವರ ಒಪ್ಪಿಗೆ ಪಡೆದು ಸೋಮವಾರವೇ ಮದುವೆ ನಡೆಸಿದರು.

ಮುತ್ತತ್ತಿಯಲ್ಲಿ ಯುವಕ ನದಿಪಾಲು

ಮಳವಳ್ಳಿ (ಮಂಡ್ಯ): ತಾಲೂಕಿನ ಪ್ರವಾಸಿ ತಾಣ ಮುತ್ತತ್ತಿ ಕಾವೇರಿ ನದಿಯಲ್ಲಿ ಈಜಲು ಹೋದ ಯುವಕ ನೀರಿನ ಸೆಳೆತಕ್ಕೆ ಸಿಲುಕಿ ಸೋಮವಾರ ಮೃತಪಟ್ಟಿದ್ದಾರೆ. ರಾಮನಗರ ಜಿಲ್ಲೆ ಕನಕಪುರ ತಾಲೂಕಿನ ಮುದ್ದೇಗೌಡನ ದೊಡ್ಡಿ ಗ್ರಾಮದ ಅರುಣ್ ಕುಮಾರ್ (32) ಮೃತರು. ಕಾರು ಚಾಲಕರಾಗಿದ್ದ ಅವರು ಭಾನುವಾರ 9 ಸ್ನೇಹಿತರ ಜತೆ ಮುತ್ತತ್ತಿರಾಯನ ದರ್ಶನ ಪಡೆದ ನಂತರ ಎಲ್ಲರೂ ಕಾವೇರಿ ನದಿಯಲ್ಲಿ ಈಜಲು ಹೋಗಿದ್ದರು. ಅರುಣ್ ಕುಮಾರ್ ನೀರಿನ ಸೆಳೆತಕ್ಕೆ ಸಿಲುಕಿ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಮರ್ಷಿಯಲ್ ಟ್ಯಾಕ್ಸ್ ಅಧಿಕಾರಿಯ ಪುತ್ರ ಆತ್ಮಹತ್ಯೆ

ಕಲಬುರಗಿ: ಕಮರ್ಷಿಯಲ್ ಟ್ಯಾಕ್ಸ್ ಅಧಿಕಾರಿಯ ಪುತ್ರ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದು, ಕೊಳತೆ ಸ್ಥಿತಿಯಲ್ಲಿ ಶವ ಪತ್ತೆಯಾಗಿದೆ. ನಗರದ ನಿವಾಸಿ ಕೃಷ್ಣಪಾಟೀಲ್ (25) ಮನೆಯಲ್ಲಿ ಸೀರೆಯಿಂದ ನೇಣು ಬಿಗಿದುಕೊಂಡು ಕೆಲವು ದಿನಗಳ ಹಿಂದೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ವಿಜಯಪುರ ಜಿಲ್ಲೆಯಲ್ಲಿ ಕಮರ್ಷಿಯಲ್ ಟ್ಯಾಕ್ಸ್ ವಿಭಾಗದ ಅಧಿಕಾರಿ ಭಾರತಿ ಅಪ್ಪಾರಾವ್ ಮಾಲಿಪಾಟೀಲ್ ಪುತ್ರ ಕೃಷ್ಣ ಎಂಜಿನಿಯರಿಂಗ್ ಮುಗಿಸಿದ್ದರು. ಸಿಂಗಲ್ ಪೇರೆಂಟ್ ಹಿನ್ನೆಲೆಯಲ್ಲಿ ಮಾನಸಿಕವಾಗಿ ಕುಗ್ಗಿದ್ದ ಎಂದು ಹೇಳಲಾಗುತ್ತಿದೆ. ಇಲ್ಲಿನ ನಿವಾಸಕ್ಕೆ ಪ್ರತಿ ವಾರ ತಾಯಿ ಬಂದು ಹೋಗುತ್ತಿದ್ದರು.

ತಿ.ನರಸೀಪುರದಲ್ಲಿ ಜೀತ ಕೃತ್ಯ

ಇಟ್ಟಿಗೆ ಫ್ಯಾಕ್ಟರಿಯಲ್ಲಿದ್ದ 18 ಸೋಲಿಗರ ರಕ್ಷಣೆ | ಮೂವರು ಮಾಲೀಕರ ಬಂಧನ

■ **ವಿಕ ಸುದ್ದಿಲೋಕ** ಮೈಸೂರು

ತಿ.ನರಸೀಪುರ ತಾಲೂಕಿನ ಸೋಸಲೆ ಹೋಬಳಿಯ ಬೇವನಹಳ್ಳಿಯಲ್ಲಿ ಕಳೆದ ಏಳು ವರ್ಷಗಳಿಂದ ಕಾನೂನು ಕಣ್ಣು ತಪ್ಪಿಸಿ ನಡೆಯುತ್ತಿದ್ದ ಜೀತ ಪದ್ಧತಿ ಪ್ರಕರಣವೊಂದು ಕೊನೆಗೂ ಬಯಲಾಗಿದೆ. ಅನಧಿಕೃತ ಇಟ್ಟಿಗೆ ಫ್ಯಾಕ್ಟರಿಯಲ್ಲಿ ಬಲವಂತವಾಗಿ ಕೂಡಿಹಾಕಲಾಗಿದ್ದ ಇಬ್ಬರು ಅಪ್ರಾಪ್ತ ಮಕ್ಕಳು ಸೇರಿದಂತೆ ಸೋಲಿಗ ಸಮುದಾಯದ 18 ಮಂದಿಯನ್ನು ಪೊಲೀಸರು ಹಾಗೂ ಸ್ವಯಂ ಸೇವಾ ಸಂಸ್ಥೆಗಳ ಜಂಟಿ ಕಾರ್ಯಾಚರಣೆಯ ಮೂಲಕ ರಕ್ಷಿಸಲಾಗಿದೆ.

ತಮಿಳುನಾಡು ಮೂಲದ ಎಂಟು ಕುಟುಂಬಗಳ 7 ಪುರುಷರು, 9 ಮಹಿಳೆಯರು ಹಾಗೂ ಇಬ್ಬರು ಮಕ್ಕಳು ಈ ನರಕ ಯಾತನೆ ಅನುಭವಿಸುತ್ತಿದ್ದರು. ಇಟ್ಟಿಗೆ ಫ್ಯಾಕ್ಟರಿಯ ಮಾಲೀಕರಾದ ಯತಿರಾಜ್, ಗಿರೀಶ್ ಮತ್ತು ಮಹದೇವ್ ಎಂಬುವವರನ್ನು ಬನ್ನೂರು ಪೊಲೀಸರು ಬಂಧಿಸಿದ್ದು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಇಟ್ಟಿಗೆ ಫ್ಯಾಕ್ಟರಿಯ ಮಾಲೀಕರ ಅತಿಯಾದ ಕಿರುಕುಳ ಮತ್ತು ಶೋಷಣೆ ತಾಳಲಾರದೆ ಮುತ್ತಣ್ಣ ಮತ್ತು ಜ್ಯೋತಿ ಎಂಬ ದಂಪತಿ ಇತ್ತೀಚೆಗೆ ಅಲ್ಲಿಂದ ಪರಾರಿಯಾಗಿದ್ದರು. ಆದರೆ, ಬೆನ್ನಟ್ಟಿದ ಮಾಲೀಕರು ದಂಪತಿಯನ್ನು ಹುಡುಕಿ ಬಲವಂತವಾಗಿ ಎಳೆದುಕೊಂಡು ಬಂದು ತೋಟದ ಮನೆಯೊಂದರಲ್ಲಿ ಕೂಡಿ ಹಾಕಿದ್ದರು. ಮರಳಿ ಕೆಲಸ ಮಾಡಲು ಒಪ್ಪದಿದ್ದಾಗ ಅವರ ಮೇಲೆ ತೀವ್ರ ಹಲ್ಲೆ ನಡೆಸಲಾಗಿತ್ತು. ಈ ದಂಪತಿಯ ಜೀತದ ಕುರಿತು ಮಡಿಲು ಸೇವಾ ಸಂಸ್ಥೆಗೆ ಸಿಕ್ಕ ಮಾಹಿತಿ ಮೇರೆಗೆ ತಹಸೀಲ್ದಾರ್ ಸುರೇಶಾಚಾರ್ ನೇತೃತ್ವದಲ್ಲಿ ಪೊಲೀಸರು ದಾಳಿ ನಡೆಸಿದರು. ಆಗ ಅಲ್ಲಿ ದಂಪತಿ ಮಾತ್ರವಲ್ಲದೆ ಒಟ್ಟು 18 ಮಂದಿ ಜೀತದಾಳುಗಳಾಗಿ ಕಣ್ಣೀರಲ್ಲಿ ಕೈ ತೊಳೆಯುತ್ತಿದ್ದ ಆಘಾತಕಾರಿ ಸತ್ಯ ಬೆಳಕಿಗೆ ಬಂದಿದೆ. ಹಲ್ಲೆಗೊಳಗಾದ ದಂಪತಿಯನ್ನು ಬನ್ನೂರು ಆಸ್ಪತ್ರೆಗೆ ದಾಖಲಿಸಲಾಗಿದೆ. ಐಜೆಎಂನ (ಇಂಟರ್ ನ್ಯಾಷನಲ್ ಜಸ್ಟಿಸ್ ಮಿಷನ್) ಹೃದಯರಾಜ್, ಕಾರ್ಮಿಕ ಅಧಿಕಾರಿ ಲಕ್ಷ್ಮೀಶ, ಡಿಎಲ್‌ಎಸ್‌ಎ ನಜೀರ್, ಚಿಕ್ಕಮಗಳೂರಿನ ವಿಕಸನ ಸಂಸ್ಥೆಯ ನವೀನ್ ಕಾರ್ಯಾಚರಣೆಗೆ ಸಹಕರಿಸಿದ್ದಾರೆ.

ಬೇವಿನಹಳ್ಳಿ ಗ್ರಾಮದಲ್ಲಿ ಜೀತ ಪದ್ಧತಿಗೆ ಒಳಗಾಗಿ ಮಾಲೀಕರಿಂದ ಹಲ್ಲೆಗೊಳಗಾಗಿರುವ ಸಂತ್ರಸ್ತೆ ಜ್ಯೋತಿ, ಮುತ್ತುರಾಜ್ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಸಾಲಕ್ಕಾಗಿ ಜೀತ!

ಸುಮಾರು 25 ವರ್ಷಗಳ ಹಿಂದೆ ತಮಿಳುನಾಡಿನಿಂದ ಬದುಕು ಅರಸಿ ಮೈಸೂರು ಭಾಗಕ್ಕೆ ವಲಸೆ ಬಂದಿದ್ದ ಈ ಸೋಲಿಗ ಕುಟುಂಬಗಳು ಇಟ್ಟಿಗೆ ಕಾರ್ಖಾನೆಯನ್ನೇ ನಂಬಿಕೊಂಡಿದ್ದವು. ಮಾಲೀಕರು ಮುಂಗಡವಾಗಿ ನೀಡಿದ್ದ ಕೇವಲ 25,000 ರೂ. ಸಾಲದ ಹಣವನ್ನೇ ಬಂಡವಾಳವಾಗಿಸಿಕೊಂಡು ಎಲ್ಲರನ್ನೂ ಕಟ್ಟಿಹಾಕಲಾಗಿತ್ತು. ಇಬ್ಬರು ಮಕ್ಕಳು ಸೇರಿದಂತೆ 18 ಮಂದಿ ಹಗಲಿರುಳು ದುಡಿದರೂ ಮಾಲೀಕರು ಇಡೀ ಕುಟುಂಬದ ನಿರ್ವಹಣೆಗೆ ನೀಡುತ್ತಿದ್ದದ್ದು ವಾರಕ್ಕೆ ಕೇವಲ ಒಂದು ಸಾವಿರ ರೂಪಾಯಿ ಮಾತ್ರ!

> ಇಟ್ಟಿಗೆ ಫ್ಯಾಕ್ಟರಿಯಲ್ಲಿ ಐದಾರು ಕುಟುಂಬವನ್ನು ಜೀತಕ್ಕೆ ಇರಿಸಿಕೊಂಡಿರುವ ಬಗ್ಗೆ ಮಾಹಿತಿ ಬಂದ ಮೇರೆಗೆ ಕಾರ್ಯಾಚರಣೆ ನಡೆಸಲಾಗಿದ್ದು, ಇಬ್ಬರು ಮಕ್ಕಳು ಸೇರಿದಂತೆ 18 ಜನರನ್ನು ರಕ್ಷಣೆ ಮಾಡಲಾಗಿದೆ.
>
> **-ನಾಗರಾಜ ಸಿದ್ದಪ್ಪ ಅಂಕಸದೊಡ್ಡಿ** ಸದಸ್ಯ ಕಾರ್ಯದರ್ಶಿ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ

> ಇಟ್ಟಿಗೆ ಫ್ಯಾಕ್ಟರಿ ಮಾಲೀಕರಿಂದ ಜೀತಕ್ಕೊಳಗಾಗಿದ್ದ ಕುಟುಂಬಗಳನ್ನು ರಕ್ಷಣೆ ಮಾಡಿ, ಹಲ್ಲೆಗೊಳಗಾಗಿದ್ದ ಕುಟುಂಬಕ್ಕೆ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ, ಅವರನ್ನು ಸಾಂತ್ವನ ಕೇಂದ್ರಕ್ಕೆ ಕಳುಹಿಸಿಕೊಡಲಾಗುವುದು.
>
> **-ಸುರೇಶಾಚಾರ್** ತಹಸೀಲ್ದಾರ್, ತಿ.ನರಸೀಪುರ

ಅಡವಿಟ್ಟ ಚಿನ್ನ ವಾಪಸ್ ಕೇಳಿದ್ದಕ್ಕೆ ಫೈರಿಂಗ್: ಮೂವರಿಗೆ ಗಾಯ

ಧಾರವಾಡ: ತಾಲೂಕಿನ ಗರಗ ಗ್ರಾಮದಲ್ಲಿ ಅಡವಿಟ್ಟ ಚಿನ್ನ ವಾಪಸ್ ಕೇಳಿದ ತಂದೆ-ಮಗನ ಮೇಲೆ ಚಿನ್ನದ ವ್ಯಾಪಾರಿಯೊಬ್ಬ ಸೋಮವಾರ ಗುಂಡಿನ ದಾಳಿ ನಡೆಸಿದ್ದಾನೆ. ಈ ವೇಳೆ ರಸ್ತೆಯಲ್ಲಿ ಶಾಲೆಯಿಂದ ಮನೆಗೆ ಹೊರಟಿದ್ದ 10 ವರ್ಷದ ಬಾಲಕಿಗೂ ಗುಂಡು ತಗುಲಿದ್ದು ಮೂವರನ್ನೂ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಮೌನೇಶ ಬಡಿಗೇರ

ಧಾರವಾಡ ತಾಲೂಕು ಜೀರಿಗವಾಡ ಗ್ರಾಮದ ನಿಂಗಪ್ಪ ಫಕ್ಕೀರಪ್ಪ ಹೊರಕೇರಿ (66), ಸಿದ್ದಪ್ಪ ನಿಂಗಪ್ಪ ಹೊರಕೇರಿ (32) ಗರಗ ಗ್ರಾಮದ ಶ್ರದ್ಧಾ (10) ಗಾಯಗೊಂಡವರು. ಜ್ಯುವೆಲರಿ ಅಂಗಡಿ ಮಾಲೀಕ ಮೌನೇಶ ಆರ್.ಬಡಿಗೇರ್ (45) ನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಪ್ರಕರಣದ ಹಿನ್ನೆಲೆ: ''4 ವರ್ಷಗಳ ಹಿಂದೆ ನಿಂಗಪ್ಪ ಅವರು 40 ಗ್ರಾಂ ಚಿನ್ನಾಭರಣವನ್ನು ಮೌನೇಶ್ ಬಳಿ ಗಿರವಿ ಇಟ್ಟು 60 ಸಾವಿರ ರೂ. ಸಾಲ ಪಡೆದಿದ್ದರು. ಬಡ್ಡಿ ಸಮೇತ ಸಾಲ ವಾಪಸ್ ತೀರಿಸುವುದಾಗಿ ಹೇಳಿ ಆಭರಣ ವಾಪಸ್ ನೀಡುವಂತೆ ಮಗನೊಂದಿಗೆ ಮೌನೇಶ್‌ನನ್ನು ಕೇಳಿದರು. ವ್ಯಾಪಾರಿ ಚಿನ್ನಾಭರಣ ವಾಪಸ್ ನೀಡಲು ನಿರಾಕರಿಸಿದ್ದರಿಂದ ಮಾತಿಗೆ ಮಾತು ಬೆಳೆದು ಕೈ ಕೈ ಮಿಲಾಯಿಸುವ ಹಂತಕ್ಕೆ ಜಗಳ ಹೋಯಿತು. ಕುಪಿತಗೊಂಡ ಮೌನೇಶ್ ರಿವಾಲ್ವರ್ ತೆಗೆದು 5-6 ಸುತ್ತು ಗುಂಡು ಹಾರಿಸಿದ,'' ಎಂದು ಪೊಲೀಸರು ಹೇಳಿದ್ದಾರೆ.

''ಫೈರಿಂಗ್‌ನಿಂದ ನಿಂಗಪ್ಪನ ಬಲತೊಡೆಗೆ 2 ಗುಂಡು ತಗುಲಿವೆ. ಸಿದ್ದಪ್ಪನ ಎಡ ತೊಡೆಗೆ 2 ಹಾಗೂ ಹೊಟ್ಟೆಗೆ 1 ಗುಂಡು ಹೊಕ್ಕಿದೆ. ಈ ಗಲಾಟೆ ನಡೆಯುತ್ತಿರುವಾಗ ರಸ್ತೆಯಲ್ಲಿ ಶಾಲೆಯಿಂದ ಹೊರಟಿದ್ದ ಶ್ರದ್ಧಾಳ ಎಡಗಾಲಿಗೆ ಗುಂಡುಗಳು ತಗುಲಿವೆ. ಎಲ್ಲರೂ ಪ್ರಾಣಾಪಾಯದಿಂದ ಪಾರಾಗಿದ್ದಾರೆ'' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗುಂಜನ್ ಆರ್ಯ ತಿಳಿಸಿದ್ದಾರೆ.

ಸಿಡಿಲಿಗೆ ರೈತ ಬಲಿ

ಔರಾದ್ (ಬೀದರ್): ತಾಲೂಕಿನ ಮಾನೂರ ತಾಂಡಾದಲ್ಲಿ ಸೋಮವಾರ ಸಿಡಿಲು ಬಡಿದು ರೈತರೊಬ್ಬರು ಮೃತಪಟ್ಟಿದ್ದಾರೆ. ರಾಮರಾವ್ ತುಕಾರಾಮ ಕೋಳಿ (60) ಮೃತರು. ಜಮೀನಿನ ಒಂದು ಭಾಗದಲ್ಲಿ ಕುಟುಂಬದವರು ಹತ್ತಿ ನಾಟಿ ಮಾಡುತ್ತಿದ್ದರೆ, ಮತ್ತೊಂದು ಭಾಗದಲ್ಲಿ ರಾಮರಾವ್ ಅವರು ಬೇಸಾಯ ನಿರತರಾಗಿದ್ದಾಗ ಅಲ್ಪ ಮಳೆಯ ನಡುವೆಯೇ ಏಕಾಏಕಿ ಸಿಡಿಲು ಬಡಿದು ಮೃತಪಟ್ಟರು. ಚಿಂತಾಕಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಿಎಂಗೆ ಆಶೀರ್ವಾದ

ಬೆಂಗಳೂರಿನ ವಿಜಯನಗರದಲ್ಲಿರುವ ಆದಿಚುಂಚನಗಿರಿ ಶಾಖಾ ಮಠಕ್ಕೆ ಸೋಮವಾರ ಭೇಟಿ ನೀಡಿದ ಸಿಎಂ ಡಿ.ಕೆ. ಶಿವಕುಮಾರ್ ಅವರು ನಿರ್ಮಲಾನಂದನಾಥ ಸ್ವಾಮೀಜಿಗಳ ಆಶೀರ್ವಾದ ಪಡೆದರು.

ಕೃತಕ ಬುದ್ಧಿಮತ್ತೆಯಿಂದ ಆರೋಗ್ಯ ಕ್ಷೇತ್ರದಲ್ಲಿ ಪರಿವರ್ತನೆ: ಗೆಹ್ಲೋಟ್

■ **ವಿಕ ಸುದ್ದಿಲೋಕ** ಮಂಡ್ಯ

ಆಯುರ್ವೇದ, ಯೋಗ ಮತ್ತು ಆಧುನಿಕ ವೈದ್ಯಕೀಯ ವಿಜ್ಞಾನಗಳ ಸಮನ್ವಯದ ಮೂಲಕ ಸಮಗ್ರ ಆರೋಗ್ಯ ಸೇವೆಗೆ ಹೊಸ ಸಾಧ್ಯತೆಗಳು ಮೂಡುತ್ತಿವೆ. ಇದು ಆರೋಗ್ಯ ಕ್ಷೇತ್ರವನ್ನು ಇನ್ನಷ್ಟು ಮಾನವೀಯ ಮತ್ತು ಪರಿಣಾಮಕಾರಿಯಾಗಿಸಲಿದೆ ಎಂದು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅಭಿಪ್ರಾಯಪಟ್ಟರು.

ನಾಗಮಂಗಲ ತಾಲೂಕು ಬಿ.ಜಿ.ನಗರದ ಆದಿಚುಂಚನಗಿರಿ ವಿಶ್ವವಿದ್ಯಾಲಯದಲ್ಲಿ ಆದಿಚುಂಚನಗಿರಿ ಇನ್‌ಸ್ಟಿಟ್ಯೂಟ್ ಫಾರ್ ಮಾಲಿಕ್ಯುಲರ್ ಮೆಡಿಸಿನ್ ಆಯೋಜಿಸಿದ್ದ 'ಆರೋಗ್ಯ ವಿಜ್ಞಾನಗಳಲ್ಲಿ ಅಂತರಶಿಸ್ತೀಯ ವಿಧಾನಗಳು ಹಾಗೂ ಭಾಷಾಂತರ ಸಂಶೋಧನೆ' ಕುರಿತ ಎರಡು ದಿನಗಳ ಅಂತಾರಾಷ್ಟ್ರೀಯ ಸಮ್ಮೇಳನವನ್ನು ಸೋಮವಾರ ಉದ್ಘಾಟಿಸಿ ಅವರು ಮಾತನಾಡಿದರು.

''ವಿಕಸಿತ ಭಾರತ-2047 ಗುರಿ ಸಾಧನೆಯಲ್ಲಿ ಆರೋಗ್ಯ ಸಂಶೋಧನೆ ಪ್ರಮುಖ ಪಾತ್ರ ವಹಿಸಲಿದೆ. ರಾಷ್ಟ್ರೀಯ ಶಿಕ್ಷಣ ನೀತಿ-2020 ಬಹುಶಿಸ್ತೀಯ ಮತ್ತು ಅಂತರ ಶಿಸ್ತೀಯ ಶಿಕ್ಷಣಕ್ಕೆ ಒತ್ತು ನೀಡಿರುವುದು ಸಂಶೋಧನೆಗೆ ಹೊಸ ದಿಕ್ಕುಗಳನ್ನು ನೀಡುತ್ತಿದೆ. ಈ ನಿಟ್ಟಿನಲ್ಲಿ ಆಯೋಜಿಸಿರುವ ಅಂತಾರಾಷ್ಟ್ರೀಯ ಸಮ್ಮೇಳನಕ್ಕೆ ಜಪಾನ್‌ನ ಹೊಕ್ಕೈಡೊ ವಿಶ್ವವಿದ್ಯಾಲಯ ಸೇರಿದಂತೆ ನಾನಾ ಅಂತಾರಾಷ್ಟ್ರೀಯ ಸಂಸ್ಥೆಗಳ ಪ್ರತಿನಿಧಿಗಳು, ವಿಜ್ಞಾನಿಗಳು, ಸಂಶೋಧಕರು ಭಾಗವಹಿಸಿರುವುದು ಜಾಗತಿಕ ವೈಜ್ಞಾನಿಕ ಸಹಭಾಗಿತ್ವದ ಮಹತ್ವವನ್ನು ಪ್ರತಿಬಿಂಬಿಸುತ್ತದೆ,'' ಎಂದರು.

ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಆರ್.ಪಾಟೀಲ್, ಶಾಸಕ ಎನ್. ಚಲುವರಾಯಸ್ವಾಮಿ ಮಾತನಾಡಿದರು.

> ಪ್ರಸ್ತುತ ಜಾಗತಿಕ ಆರೋಗ್ಯ ಸಮಸ್ಯೆಗಳಿಗೆ ಆಯುರ್ವೇದ ಮತ್ತು ಅಲೋಪತಿ ಪದ್ಧತಿಗಳನ್ನು ಒಟ್ಟಿಗೆ ಸೇರಿಸಿ ಚಿಕಿತ್ಸೆ ನೀಡುವುದರಿಂದ ಉತ್ತಮ ಪರಿಹಾರ ಕಂಡುಕೊಳ್ಳಬಹುದು.
>
> **- ಡಾ.ನಿರ್ಮಲಾನಂದನಾಥ ಸ್ವಾಮೀಜಿ** ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ

ಯುವಕನ ದುಷ್ಕೃತ್ಯಕ್ಕೆ ಅಂಜಿ ಜೀವಕ್ಕೆ ಕುತ್ತು ತಂದುಕೊಂಡರು

ಬ್ಲ್ಯಾಕ್‌ಮೇಲ್‌ಗೆ ಒಂದೇ ಕುಟುಂಬದ ಮೂವರು ಬಲಿ

■ **ವಿಕ ಸುದ್ದಿಲೋಕ** ಮೈಸೂರು

ಯುವಕನೊಬ್ಬನ ಬ್ಲ್ಯಾಕ್‌ಮೇಲ್‌ಗೆ ಅಂಜಿ ಹಸಮಣೆ ಏರಬೇಕಿದ್ದ ಯುವತಿ ಹಾಗೂ ಆಕೆಯ ಪೋಷಕರು ಸೋಮವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ತಿ.ನರಸೀಪುರ ತಾಲೂಕಿನ ಹಳೆ ಕೆಂಪಯ್ಯನ ಹುಂಡಿ ಗ್ರಾಮದ ಶಿವಣ್ಣ (54), ನಾಗರತ್ನ (44) ಹಾಗೂ ರಕ್ಷಿತಾ (22) ಕ್ರಿಮಿನಾಶಕ ಸೇವಿಸಿ ಜೀವ ಕಳೆದುಕೊಂಡಿದ್ದಾರೆ.

ರಕ್ಷಿತಾ ಮದುವೆಗೆ ಮೂರು ದಿನ ಇರುವಾಗಲೇ ಇಡೀ ಕುಟುಂಬ ದುರಂತ ಅಂತ್ಯ ಕಂಡಿದೆ. ''ಗ್ರಾಮದ ಉಲ್ಲಾಸ್‌ಗೌಡ ಎಂಬುವವನ ಕಿರುಕುಳ ಹಾಗೂ ಬ್ಲ್ಯಾಕ್‌ಮೇಲ್ ನಮ್ಮ ಸಾವಿಗೆ ಕಾರಣ,'' ಎಂದು ಡೆತ್‌ನೋಟ್‌ನಲ್ಲಿ ರಕ್ಷಿತಾ ಬರೆದಿದ್ದಾರೆ.

ರಾಜಿ ಪಂಚಾಯಿತಿ: ರಕ್ಷಿತಾ ಹಾಗೂ ಉಲ್ಲಾಸ್‌ಗೌಡ ಸ್ನೇಹಿತರಾಗಿದ್ದು, ಕಾರಣಾಂತರದಿಂದ ಇಬ್ಬರೂ ಅಂತರ ಕಾಯ್ದುಕೊಂಡಿದ್ದರು. ರಕ್ಷಿತಾ ಪೋಷಕರು ಶ್ರೀರಂಗಪಟ್ಟಣದ ಯುವಕನೊಂದಿಗೆ ಮಗಳ ವಿವಾಹವನ್ನು ಜೂನ್ 25 ಮತ್ತು 26ರಂದು ನಿಗದಿ ಮಾಡಿದ್ದರು. ಇದರಿಂದ ಕೋಪಗೊಂಡ ಉಲ್ಲಾಸ್‌ಗೌಡ ರಕ್ಷಿತಾಗೆ ಕರೆ ಮಾಡಿ ತನ್ನನ್ನೇ ಮದುವೆಯಾಗುವಂತೆ ಪೀಡಿಸುತ್ತಿದ್ದ. ಆತಂಕಗೊಂಡ ರಕ್ಷಿತಾಳ ಪೋಷಕರು, ಗ್ರಾಮದ ಮುಖಂಡರ ಗಮನಕ್ಕೆ ತಂದು ನ್ಯಾಯ ಪಂಚಾಯಿತಿ ಮಾಡಿಸಿದ್ದರು. ಮದುವೆಗೆ ನಾಲ್ಕು ದಿನ ಇರುವಾಗ ಬ್ಲ್ಯಾಕ್‌ಮೇಲ್ ಮಾಡಿದ್ದರಿಂದ ರಕ್ಷಿತಾ ಕುಟುಂಬ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದೆ ಎಂದು ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತಿಳಿಸಿದ್ದಾರೆ.

ಹೊಸ ಮನೆಯಲ್ಲೇ ಸೇವನೆ: ಶಿವಣ್ಣ ಅವರಿಗೆ ಗ್ರಾಮದಲ್ಲಿ ಹಳೆ ಮನೆಯಿದ್ದು, ಗ್ರಾಮದ ಹೊರಗೆ ಹೊಸ ಮನೆಯೊಂದನ್ನು ನಿರ್ಮಿಸಿದ್ದರು. ಹಳೆ ಮನೆಯಲ್ಲೇ ವಾಸವಿದ್ದ ಕುಟುಂಬ ಆತ್ಮಹತ್ಯೆಗೆ ನಿರ್ಧರಿಸಿ ಭಾನುವಾರ ಬೆಳಗ್ಗೆ ಹೊಸ ಮನೆಗೆ ಬಂದು ಅಲ್ಲಿ ಡೆತ್ ನೋಟ್ ಬರೆದು ವಿಷ ಸೇವಿಸಿದ್ದಾರೆ. ಶಿವಣ್ಣ ಕುಟುಂಬದವರು ಹಳೆ ಮನೆ ಬಳಿ ಕಾಣಿಸದ್ದರಿಂದ ಸಂಬಂಧಿಕರು ಹಾಗೂ ಗ್ರಾಮಸ್ಥರು ಅನುಮಾನಗೊಂಡು ಹೊಸ ಮನೆಗೆ ಹೋಗಿ ನೋಡಿದಾಗ ಪ್ರಕರಣ ಬೆಳಕಿಗೆ ಬಂದಿದೆ.

ಜಿಲ್ಲಾ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಡಿವೈಎಸ್ಪಿ ಧರ್ಮೇಂದ್ರ ಘಟನಾ ಸ್ಥಳ ಪರಿಶೀಲಿಸಿದರು. ರಕ್ಷಿತಾ ಸಂಬಂಧಿ ದೂರು ನೀಡಿದ್ದು, ತಿ.ನರಸೀಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶವ ಸ್ಥಳಾಂತರಕ್ಕೆ ವಿರೋಧ: ಎಸ್ಪಿ ಮೃತದೇಹ ಪರಿಶೀಲಿಸಿ ಮನೆಯಿಂದ ಹೊರಗೆ ಬರುತ್ತಿದ್ದಂತೆ ನೆರೆದಿದ್ದ ಜನರು ಡೆತ್ ನೋಟ್ ಆಧಾರದಲ್ಲಿ ಉಲ್ಲಾಸ್‌ಗೌಡನನ್ನು ಬಂಧಿಸುವವರೆಗೂ ಮೃತದೇಹ ಸ್ಥಳಾಂತರ ಮಾಡಲು ಬಿಡುವುದಿಲ್ಲ ಎಂದು ಪಟ್ಟು ಹಿಡಿದರು. ಆರೋಪಿಯನ್ನು ಬಂಧಿಸುವುದಾಗಿ ಪೊಲೀಸರು ಭರವಸೆ ನೀಡಿದ ಬಳಿಕ ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಲಾಯಿತು.

ಡೆತ್‌ನೋಟ್‌ನಲ್ಲೇನಿದೆ?

''ನಾನು ಕಳುಹಿಸಿರುವ ಮೆಸೇಜ್, ಫೋಟೊಗಳನ್ನು ಮದುವೆಯಾಗುವ ಹುಡುಗನಿಗೆ ಕಳುಹಿಸಿ ಉಲ್ಲಾಸ್‌ಗೌಡ ಬ್ಲ್ಯಾಕ್‌ಮೇಲ್ ಮಾಡಿ ನನಗೆ ಮಾನಸಿಕ ಕಿರುಕುಳ, ಚಿತ್ರ ಹಿಂಸೆ ನೀಡಿದ್ದಾನೆ. ಮೂವರು ಸಾವಿಗೀಡಾಗಲು ಉಲ್ಲಾಸ್‌ಗೌಡ ಕಾರಣ'' ಎಂದು ಡೆತ್‌ನೋಟ್‌ನಲ್ಲಿ ಯುವತಿ ರಕ್ಷಿತಾ ತಿಳಿಸಿದ್ದಾಳೆ. ''ಒಡಹುಟ್ಟಿದವ ಎಂದು ತಿಳಿದು ಅನ್ನ ಹಾಕಿದ್ದೆ. ಆದರೆ, ನೀನು ದ್ರೋಹ ಬಗೆದಿದ್ದೀಯ. ನಮ್ಮ ಸಾವಿನ ನಂತರ ನೀನು ನೆಮ್ಮದಿಯಾಗಿ ಜೀವನ ನಡೆಸಲು ಸಾಧ್ಯವಿಲ್ಲ'' ಎಂದು ಬರೆದಿದ್ದಾರೆ.

ಪಿಯು ಸೀಟುಗಳು ಈ ಬಾರಿಯೂ ಖಾಲಿ ಖಾಲಿ?

» ಮೊದಲ ಪುಟದಿಂದ

ಎಸ್ಸೆಸ್ಸೆಲ್ಸಿ ನಂತರ ಸಾಂಪ್ರದಾಯಿಕ ಪಿಯುಸಿ (ಕಲೆ, ವಾಣಿಜ್ಯ, ವಿಜ್ಞಾನ) ಓದುವವರ ಸಂಖ್ಯೆ ಶೇ. 63ಕ್ಕೆ ಕುಸಿದಿದೆ. ಇಂದಿನ ಜೆನ್-ಜಿ ಹಾಗೂ ಗ್ರಾಮೀಣ ಭಾಗದ ಯುವ ಸಮೂಹ ತಕ್ಷಣ ಕೈಗೆ ಉದ್ಯೋಗ ನೀಡುವ ಐಟಿಐ, ಡಿಪ್ಲೊಮಾದಂತಹ ವೃತ್ತಿಪರ ಕೋರ್ಸ್‌ಗಳತ್ತ ಹೆಚ್ಚು ಆಕರ್ಷಿತರಾಗುತ್ತಿದ್ದಾರೆ. ಇದರ ಜತೆಗೆ, ಗ್ರಾಮೀಣ ಭಾಗದಲ್ಲಿ ಎಸ್ಸೆಸ್ಸೆಲ್ಸಿ ಬಳಿಕ ಉದ್ಯೋಗ ಹುಡುಕಿಕೊಂಡು ನಗರಗಳತ್ತ ವಲಸೆ ಹೋಗುವ ಪ್ರವೃತ್ತಿಯೂ ಪಿಯುಸಿ ದಾಖಲಾತಿ ಕುಸಿತಕ್ಕೆ ಪ್ರಮುಖ ಕಾರಣವಾಗಿದೆ.

ಡ್ಯಾಮೇಜ್ ಕಂಟ್ರೋಲ್‌ಗೆ ಮೂರು ಪ್ಲಾನ್

- ಟ್ರೆಂಡ್‌ಗೆ ತಕ್ಕಂತೆ ಕಾಲೇಜುಗಳಲ್ಲಿ ಹೊಸ ಕೋರ್ಸ್ ಹಾಗೂ ಕಾಂಬಿನೇಷನ್‌ಗಳ ಪರಿಚಯ.
- ಅಡ್ಮಿಷನ್ ಪಡೆಯಲು ನೀಡಲಾಗುವ ಕೊನೆಯ ದಿನಾಂಕದ ವಿಸ್ತರಣೆ.
- ಈ ವರ್ಷದಿಂದಲೇ ಸರಕಾರಿ ಕಾಲೇಜು ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕ ವಿತರಣೆ.

ಹಗ್ಗದಿಂದ ಕಟ್ಟಿ ಚಿಣ್ಣರ ಮೇಲೆ ಹಲ್ಲೆ

■ **ವಿಕ ಸುದ್ದಿಲೋಕ** ಬಾಗಲಕೋಟೆ

ಕ್ರಿಕೆಟ್ ಬಾಲ್ ಬಡಿದಿದ್ದಕ್ಕೆ ಶಿಕ್ಷೆ

ಬಾದಾಮಿ ತಾಲೂಕಿನ ನರೇನೂರು ತಾಂಡಾ-1ರಲ್ಲಿ ಬಾಲ್ ಬಡಿಯಿತು ಎಂಬ ಕಾರಣಕ್ಕೆ ಬಾಲಕರನ್ನು ಹಗ್ಗದಿಂದ ಕಟ್ಟಿ ಹಲ್ಲೆ ನಡೆಸಲಾಗಿದೆ.

ಭಾನುವಾರ ಕ್ರಿಕೆಟ್ ಆಟವಾಡುತ್ತಿದ್ದ ಮಕ್ಕಳು ಹೊಡೆದ ಚೆಂಡು ನೆರೆಯ ಮನೆಯ ರೇಣುಕಾ ಅವರ ಕಾಲಿಗೆ ತಗುಲಿತು. ಚೆಂಡು ಬಡಿದ ಕಾರಣ ಕೋಪಗೊಂಡ ರೇಣುಕಾ ಹಾಗೂ ಮೂವರು ಬಾಲಕರನ್ನು ಸರಕಾರಿ ಶಾಲೆಯ ಕಿಟಕಿಗೆ ಹಗ್ಗಗಳಿಂದ ಕಟ್ಟಿ ಹಲ್ಲೆ ನಡೆಸಿದರು. ಬಾಲಕರನ್ನು ಬಾಗಲಕೋಟೆಯ ಜಿಲ್ಲಾ ಸ್ಪತ್ರೆಗೆ ದಾಖಲಿಸಲಾಗಿದೆ. ಮಕ್ಕಳ ಪಾಲಕರು ನೀಡಿದ ದೂರು ಆಧರಿಸಿ ರೇಣುಕಾ ಲಮಾಣಿ, ಬಸವರಾಜ ಲಮಾಣಿ ಹಾಗೂ ಅಭಿ ಲಮಾಣಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಹಂದಿ ಜ್ವರಕ್ಕೆ ಯಲ್ಲಾಪುರದ ವ್ಯಕ್ತಿ ಬಲಿ

ಮಂಗಳೂರು: ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರದ ವ್ಯಕ್ತಿಯೊಬ್ಬರು ಎಚ್1ಎನ್1(ಹಂದಿ ಜ್ವರ) ಸೋಂಕಿನಿಂದ ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಯಲ್ಲಾಪುರದ ಚವತ್ತಿ ಗ್ರಾಮದ 41 ವರ್ಷದ ವ್ಯಕ್ತಿ ತೀವ್ರ ಜ್ವರದಿಂದ ಬಳಲುತ್ತಿದ್ದರು. ಈ ಹಿನ್ನೆಲೆಯಲ್ಲಿ ಅವರನ್ನು ಸ್ಥಳೀಯ ಆಸ್ಪತ್ರೆಯೊಂದಕ್ಕೆ ದಾಖಲಿಸಲಾಗಿತ್ತು. ಆದರೆ ದಿನದಿಂದ ದಿನಕ್ಕೆ ಆರೋಗ್ಯ ಬಿಗಡಾಯಿಸಿದ ಕಾರಣ ಅವರನ್ನು ಮಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಅರಬ್‌ಗೆ ಭಾರತದ ಬ್ರಹ್ಮೋಸ್ ಕ್ಷಿಪಣಿ ಬಲ

» ಮೊದಲ ಪುಟದಿಂದ

2025-26ರಲ್ಲಿ ದಾಖಲೆ ಎಕ್ಸ್‌ಪೋರ್ಟ್

2025-26ನೇ ಸಾಲಿನಲ್ಲಿ ಭಾರತದಲ್ಲಿ ರಕ್ಷಣಾ ಸಲಕರಣೆಗಳ ಉತ್ಪಾದನೆ ಇದುವರೆಗಿನ ದಾಖಲೆ 1.80 ಲಕ್ಷ ಕೋಟಿ ರೂ.ಗೆ ಏರಿಕೆಯಾಗಿದೆ. ಇದು ಕಳೆದ ವರ್ಷಕ್ಕೆ ಹೋಲಿಸಿದರೆ ಶೇ. 15ರಷ್ಟು ಹೆಚ್ಚಳವಾದರೆ, 2020-21ರ ಅವಧಿಗೆ ಹೋಲಿಸಿದರೆ 110% ಹೆಚ್ಚಳವೆನಿಸಿದೆ. ಭಾರತದಲ್ಲಿ ದೇಶೀಯ ಮಿಲಿಟರಿ ಉತ್ಪಾದನೆ 2013-14ನೇ ಸಾಲಿಗೆ ಹೋಲಿಸಿದರೆ 4 ಪಟ್ಟು ಹೆಚ್ಚಾಗಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಕಳೆದವಾರವಷ್ಟೇ ಮಾಹಿತಿ ನೀಡಿದ್ದರು.

ಆಮದುದಾರನಿಂದ ರಫ್ತುದಾರನ ಸ್ಥಾನಕ್ಕೆ

ಈ ಹಿಂದೆ ಭಾರತವು ಯುದ್ಧವಿಮಾನಗಳು, ಕ್ಷಿಪಣಿಗಳು, ಮತ್ತು ರೇಡಾರ್‌ಗಳಿಗಾಗಿ ರಷ್ಯಾ, ಅಮೆರಿಕ, ಫ್ರಾನ್ಸ್ ಅಥವಾ ಇಸ್ರೇಲ್ ಮೇಲೆ ಸಂಪೂರ್ಣವಾಗಿ ಅವಲಂಬಿತವಾಗಿತ್ತು. 'ಆತ್ಮನಿರ್ಭರ್ ಭಾರತ್' ಅಭಿಯಾನದಡಿ, ದೇಶೀಯವಾಗಿ ಶಸ್ತ್ರಾಸ್ತ್ರಗಳನ್ನು ಉತ್ಪಾದಿಸಲು ಸರಕಾರ ಸಾರ್ವಜನಿಕ ವಲಯದ ಜತೆಗೆ ಖಾಸಗಿ ವಲಯಕ್ಕೂ ಹೆಚ್ಚಿನ ಉತ್ತೇಜನ ನೀಡುತ್ತಿದೆ. ಹೀಗಾಗಿ ರಕ್ಷಣಾ ಸಾಮಗ್ರಿ ಉತ್ಪಾದನೆ ಮತ್ತು ರಫ್ತು ಗಣನೀಯವಾಗಿ ಏರಿಕೆಯಾಗಿದೆ.

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ

ಉಪ ಪ್ರಧಾನ ವ್ಯವಸ್ಥಾಪಕರ ಕಚೇರಿ -1, (ಬಿಎಸ್‌ಡಬ್ಲ್ಯೂಎಂಎಲ್)
1ನೇ ಮಹಡಿ, ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು -560052.

ಸಂಖ್ಯೆ: ಡಿಜಿಎಂ-1/ಬಿಎಸ್‌ಡಬ್ಲ್ಯೂಎಂಎಲ್/ಪಿಆರ್/482/2026 ದಿನಾಂಕ : 22.06.2026

ಟೆಂಡರ್ ರದ್ದತಿ ಅಧಿಸೂಚನೆ
(GOK KPP ಪೋರ್ಟಲ್ ಮೂಲಕ ಮಾತ್ರ)

ದಿನಾಂಕ: **05.06.2026** ರಂದು ಬಿಎಸ್‌ಡಬ್ಲ್ಯೂಎಂಎಲ್‌ನ ಉಪ ಪ್ರಧಾನ ವ್ಯವಸ್ಥಾಪಕರು-1 ಹೊರಡಿಸಿದ ಮೇಲೆ ಉಲ್ಲೇಖಿಸಲಾದ ಟೆಂಡರ್ ಅಧಿಸೂಚನೆ ಸಂಖ್ಯೆ: DGM-1/BSWML/TEND/10/2026-27 ಅನ್ನು ತಾಂತ್ರಿಕ ಕಾರಣಗಳಿಂದ ರದ್ದುಗೊಳಿಸಲಾಗಿದೆ ಎಂದು ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟ ಎಲ್ಲರಿಗೂ ಈ ಮೂಲಕ ತಿಳಿಸಿಲಾಗಿದೆ.

ಸಹಿ/-
ಉಪ ಪ್ರಧಾನ ವ್ಯವಸ್ಥಾಪಕರು-1,
ಬಿಎಸ್‌ಡಬ್ಲ್ಯೂಎಂಎಲ್

ವಾಸಾಸಂಇ/ವಾ.ಪ್ರ/1299/ಶಿರಡಿ ಸಾಯಿ/2026-27

PUBLIC NOTICE

This is to inform the general public that my client intends to purchase the immovable property mentioned and described the schedule below from its owners **(i) Sri. Srinivas Murthy,** son of Late Channappa, **(ii) Sri. Deepak Kumar,** son of Sri. Srinivas Murthy, and **(iii) Divyashree S,** daughter of Sri. Srinivas Murthy (hereafter collectively referred to as "Owners"). The Owners represent that the Schedule Property is free from any encumbrance, mortgage, charge, lien or litigation and they have not entered any sort of Agreement/MOU/Deeds etc., for transfer of the Schedule Property. Any person/s having any objection, claim, right, title and/or interest with respect to the Schedule Property or any part or portion thereof by way of sale, conveyance, acquisition, partition, transfer, memorandum of understanding, exchange, mortgage, pledge, charge, encumbrance, inheritance, succession, lease, easement or demand or objections or claims of any nature whatsoever for the proposed transaction shall lodge their claim(s)/objection(s)/demand(s) with the undersigned supported by documentary evidence **within Fifteen (15) days** from the date of publication of this Notice failing which, my client shall proceed with the above-mentioned transaction as though there are no claim(s)/objection(s)/demand(s) to the proposed transaction.

SCHEDULE

All the piece and parcel of the immovable property bearing Survey No. 71/1A, measuring 29 guntas (excluding 1 gunta of 'A' kharab land), situated at Kadugodi Village, Bidarahalli Hobli, Bengaluru East Taluk, Bengaluru Urban District and bounded on the:

East by : Remaining portion Land bearing Survey No.71/1A;
West by : Land bearing Survey No.72;
North by : Land bearing Survey No.70; and
South by : Land bearing Survey No.71/1B.

Vinay K. S., Advocate,
Vinay Kademane & Associates
307, 3rd Floor, Prestige Centre Point, No.7/49, Edward Road,
Bengaluru-560001 Ph.: 080 22863885 / 49763233
email: vinay@vinaykademane.in

Place : Bengaluru
Date : 20-06-2026

TATA ELECTRONICS

ಸಾರ್ವಜನಿಕ ಸೂಚನೆ

ಮೋಸದ ಅಥವಾ ವಂಚನೆಯ ನೇಮಕಾತಿ ಜಾಹೀರಾತುಗಳ ಬಗ್ಗೆ ಎಚ್ಚರದಿಂದಿರಿ

ಟಾಟಾ ಎಲೆಕ್ಟ್ರಾನಿಕ್ಸ್ ಅಥವಾ ಅದರ ಅಂಗಸಂಸ್ಥೆಗಳಿಂದ ಬಂದಿರುವುದಾಗಿ ಸುಳ್ಳು ಹೇಳಿಕೊಂಡು ಸ್ಥಳೀಯ ಪೋಸ್ಟರ್‌ಗಳು/ಫ್ಲೈಯರ್‌ಗಳು, ಇ-ಮೇಲ್, ಲಿಂಕ್ಡ್‌ಇನ್, ವಾಟ್ಸಾಪ್ ಮತ್ತು ಇತರೆ ಅನಧಿಕೃತ ಚಾನೆಲ್ ಅಥವಾ ಜಾಲತಾಣಗಳ ಮೂಲಕ ಮೋಸದ ಉದ್ಯೋಗ ಜಾಹೀರಾತುಗಳು ಮತ್ತಿತರೆ ಕೊಡುಗೆಗಳನ್ನು ಪ್ರಸಾರ ಮಾಡಲಾಗುತ್ತಿದೆ ಎಂಬುದು ನಮ್ಮ ಗಮನಕ್ಕೆ ಬಂದಿದೆ. ಈ ಸಂದೇಶಗಳು ಇಂತಿವೆ:

1. ಟಾಟಾ ಎಲೆಕ್ಟ್ರಾನಿಕ್ಸ್ ನೇಮಕಾತಿದಾರರು ಅಥವಾ ಪ್ರತಿನಿಧಿಗಳಂತೆ ನಟಿಸುವುದು
2. ನೇಮಕಾತಿ ಮುಂದುವರಿಸಲು ವೈಯಕ್ತಿಕ ಮಾಹಿತಿ ಅಥವಾ ಪಾವತಿಗಳಿಗೆ ಮನವಿ ಮಾಡುವುದು
3. ತರಬೇತಿ ಅಥವಾ ವಿಮೆ-ಸಂಬಂಧಿತ ವೆಚ್ಚಗಳನ್ನು ಭರಿಸುವ ನೆಪದಲ್ಲಿ ಹಣಕಾಸಿನ ಕೊಡುಗೆಗಳನ್ನು ಪಡೆಯುವುದು

ದಯವಿಟ್ಟು ಗಮನಿಸಿ

1. ಟಾಟಾ ಎಲೆಕ್ಟ್ರಾನಿಕ್ಸ್ ಮತ್ತು ಅದರ ಅಂಗಸಂಸ್ಥೆಗಳು ಅನಗತ್ಯ ಉದ್ಯೋಗ ಕೊಡುಗೆಗಳನ್ನು ಪ್ರೇರೆಪಿಸುವುದಿಲ್ಲ.
2. ನೇಮಕಾತಿ ಸಮಯದಲ್ಲಿ ನಾವು ಸಂಸ್ಕರಣಾ ಶುಲ್ಕ ಅಥವಾ ಭದ್ರತಾ ಠೇವಣಿ ಸೇರಿದಂತೆ ಯಾವುದೇ ಪಾವತಿಗಳಿಗೆ ಎಂದಿಗೂ ಮನವಿ ಮಾಡುವುದಿಲ್ಲ.

ನಮ್ಮ ಅಧಿಕೃತ ವೆಬ್‌ಸೈಟ್ www.tataelectronics.com ಮೂಲಕ ಮಾತ್ರ ಅರ್ಜಿ ಸಲ್ಲಿಸಿ. ಉದ್ಯೋಗ ಅಥವಾ ಕೊಡುಗೆಯ ದೃಢೀಕರಣ ಪರಿಶೀಲಿಸಲು ಇಲ್ಲಿ ಸಂಪರ್ಕಿಸಿ: careeroptions@tataelectronics.co.in.

ವಂಚನೆಯ ಬಗ್ಗೆ ನಿಮಗೆ ಅನುಮಾನ ಮೂಡಿದರೆ ಅಥವಾ ಕಳ್ಳತನವನ್ನು ನೀವು ಗುರುತಿಸಿದ್ದೇ ಆದರೆ, ನಿಮ್ಮ ಸ್ಥಳೀಯ ಕಾನೂನು ಜಾರಿ ಸಂಸ್ಥೆಗೆ ದೂರು ನೀಡಿ.

*ಟಾಟಾ ಎಲೆಕ್ಟ್ರಾನಿಕ್ಸ್ ಮತ್ತು ಅದರ ಅಂಗಸಂಸ್ಥೆಗಳು ಮೋಸದ ಅಥವಾ ವಂಚನೆಯ ಸಂವಹನಗಳ ವಿಷಯ ಅಥವಾ ಅದರ ಪರಿಣಾಮಗಳಿಗೆ ಯಾವುದೇ ಹೊಣೆಗಾರಿಕೆ ಅಥವಾ ಜವಾಬ್ದಾರಿಯನ್ನು ನಿರಾಕರಿಸುತ್ತವೆ. ಇಂತಹ ದಾರಿ ತಪ್ಪಿಸುವ ಸಂದೇಶಗಳನ್ನು ಕಂಪನಿಯ ಕಾನೂನುಬದ್ಧ ಕೊಡುಗೆಗಳು ಅಥವಾ ಪ್ರಾತಿನಿಧ್ಯಗಳೆಂದು ಪರಿಗಣಿಸಬಾರದು.

ಕರ್ನಾಟಕ ಸರ್ಕಾರ
ಪೊಲೀಸ್ ಮಹಾ ನಿರ್ದೇಶಕರವರ ಕಛೇರಿ,
ಸಿ.ಐ.ಡಿ. ವಿಶೇಷ ಘಟಕಗಳು ಮತ್ತು ಆರ್ಥಿಕ ಅಪರಾಧಗಳು,
ಕಾರ್ಲ್ಟನ್ ಭವನ, ಅರಮನೆ ರಸ್ತೆ, ಬೆಂಗಳೂರು-560001

ಕಾಣೆಯಾಗಿದ್ದಾರೆ

Name: **THANISHKA R,** Age: **19 Yrs**

Name: **TEJASHWINI S,** Age: **17 Yrs**

ಕು। ತನಿಷ್ಕ ಆರ್. ತಂದೆ ರವೀಂದ್ರ 19 ವರ್ಷ ಮತ್ತು ತೇಜಸ್ವಿನಿ ಎಸ್ ತಂದೆ ಶ್ರೀನಿವಾಸ್ 17 ವರ್ಷ ಎಂಬುವವರು ದಿನಾಂಕ:31/01/2026 ರಂದು ವಿದ್ಯಾರಣ್ಯಪುರದಿಂದ ಕಾಣೆಯಾಗಿದ್ದು ಈ ಸಂಬಂಧ ವಿದ್ಯಾರಣ್ಯಪುರ ಪೊಲೀಸ್ ಠಾಣೆಯಲ್ಲಿ ಮೊ.ಸಂ.47/2026 ಕಲಂ: ಮಹಿಳೆ ಕಾಣೆಯಾದ ಬಗ್ಗೆ ಪ್ರಕರಣ ದಾಖಲಾಗಿರುತ್ತದೆ.

ಮೇಲ್ಕಂಡ ಕಾಣೆಯಾಗಿರುವ ಯುವತಿಯರ ಬಗ್ಗೆ ಮಾಹಿತಿ ದೊರೆತಲ್ಲಿ ಶ್ರೀ ಹಿತೇಂದ್ರ ಎಂ.ಎಸ್, ಪೊಲೀಸ್ ಇನ್ಸ್‌ಪೆಕ್ಟರ್, ಎಹೆಚ್‌ಟಿಯು, ಸಿಐಡಿ, ಬೆಂಗಳೂರು ನಗರ ದೂರವಾಣಿ ಸಂ. 080-22094443 ಮತ್ತು ಸಿಐಡಿ ಕಂಟ್ರೋಲ್ ರೂಮ್ ಮೊ. ಸಂ. 9480800123 ಗೆ ಮಾಹಿತಿ ನೀಡಲು ಕೋರಿದೆ

ದಿನಾಂಕ : 22.06.2026
DIPR/CP/1293/NR/2026-27

ಸಹಿ/-
ತನಿಖಾಧಿಕಾರಿ

ಎಲ್ ನಿನೊ ಛಾಯೆ ಭಯ ಬೇಡ

ಬೇಸಾಯಕ್ಕೆ ಪರ್ಯಾಯ ಬೆಳೆಗಳಿವೆ...

ಕರಾವಳಿಯಿಂದ ಬಯಲುಸೀಮೆವರೆಗೆ, ಮಲೆನಾಡಿನಿಂದ ಕಲ್ಯಾಣದವರೆಗೆ ಬೆಳೆ ಸೂತ್ರ

ಬೆಂಗಳೂರು: ಪ್ರಸಕ್ತ ಸಾಲಿನಲ್ಲಿ 'ಎಲ್ ನಿನೊ' ಪ್ರಭಾವದಿಂದಾಗಿ ಮುಂಗಾರು ಮಳೆ ವಾಡಿಕೆಗಿಂತ ಕುಂಠಿತಗೊಳ್ಳುವ ಮುನ್ಸೂಚನೆ ಇರುವುದರಿಂದ ರಾಜ್ಯದ ಕೃಷಿ ವಲಯ ಆತಂಕಕ್ಕೆ ಸಿಲುಕಿದೆ. ಹೆಚ್ಚು ನೀರು ಬೇಡುವ ಸಾಂಪ್ರದಾಯಿಕ ಬೆಳೆಗಳನ್ನೇ ನಂಬಿಕೊಂಡರೆ ರೈತರು ನಷ್ಟದ ಸುಳಿಗೆ ಸಿಲುಕುವುದು ನಿಶ್ಚಿತ. ಈ ಹಿನ್ನೆಲೆಯಲ್ಲಿ, ಮಳೆಯ ಅಭಾವ ಮತ್ತು ಬರದ ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸಲು ಕರ್ನಾಟಕದ ವಿವಿಧ ಪ್ರಾದೇಶಿಕ ವಲಯಗಳಿಗೆ ಕೃಷಿ ಇಲಾಖೆ ಹಾಗೂ ಕೃಷಿ ವಿಜ್ಞಾನಿಗಳು ಸಿದ್ಧಪಡಿಸಿರುವ ವಿಸ್ತೃತ ಪರ್ಯಾಯ ಬೆಳೆ ಯೋಜನೆ ಮತ್ತು ತಂತ್ರಜ್ಞಾನಗಳ ಸಂಪೂರ್ಣ ಮಾಹಿತಿ ಇಲ್ಲಿದೆ.

ಮಣ್ಣಿನ ತೇವಾಂಶ ಸಂರಕ್ಷಣೆಯೇ ಪ್ರಧಾನವಾಗಲಿ!

ಆಳ ಉಳುಮೆ ಮತ್ತು ಬದು ನಿರ್ಮಾಣ: ಇಳಿಜಾರಿಗೆ ಅಡ್ಡಲಾಗಿ ಪ್ರತಿ 10-12 ಮೀಟರ್‌ಗೆ ಸಣ್ಣ ಬದುಗಳನ್ನು ಹಾಗೂ ಪ್ರತಿ 3-4 ಮೀಟರ್‌ಗೆ ದೋಣಿ ಸಾಲುಗಳನ್ನು ನಿರ್ಮಿಸುವುದರಿಂದ ಮಣ್ಣಿನಲ್ಲಿ ತೇವಾಂಶ ಉಳಿಯುತ್ತದೆ.

- **ಬೀಜ ಕಠಿಣೀಕರಣ(ಸೀಡ್ ಹಾರ್ಡನಿಂಗ್):** ದ್ವಿದಳ ಧಾನ್ಯಗಳ ಬೀಜಗಳನ್ನು ಬಿತ್ತನೆಗೆ ಮುನ್ನ ಕ್ಯಾಲ್ಸಿಯಂ ಕ್ಲೋರೈಡ್ ದ್ರಾವಣದಲ್ಲಿ ನೆನೆಸಿ ಒಣಗಿಸುವುದರಿಂದ ಬರ ತಡೆದುಕೊಳ್ಳುವ ಸಾಮರ್ಥ್ಯ ಬರುತ್ತದೆ.
- **ಹೊದಿಕೆ ಬೆಳೆಗಳು(ಮಲ್ಚಿಂಗ್):** ಸೆಣಬು, ದಹಿಂಚ, ಹುರುಳಿ, ಅಲಸಂದೆಯಂತಹ ಹಸಿರೆಲೆ ಗೊಬ್ಬರದ ಬೆಳೆಗಳನ್ನು ಬೆಳೆದು ಭೂಮಿಯಲ್ಲೇ ಉಳುಮೆ ಮಾಡುವುದರಿಂದ ಸಾರಜನಕ ಹೆಚ್ಚಿ, ತೇವಾಂಶ ಆವಿಯಾಗುವುದು ತಪ್ಪುತ್ತದೆ. ಕೃಷಿ ಹೊಂಡ ಹೊಂದಿರುವವರು ಹೂವಾಡುವ ನಿರ್ಣಾಯಕ ಹಂತದಲ್ಲಿ ಮಾತ್ರ ರಕ್ಷಣಾತ್ಮಕ ನೀರು ಹರಿಸಬೇಕು.

ರೈತರ ವಿವೇಕ

ಮಳೆ ಕೊರತೆ ಆದಾಗ ನಮ್ಮ ಭಾಗದಲ್ಲಿ ಬರ ನಿರೋಧಕ ಬೆಳೆಗಳಾದ ನವಣೆ , ಸಜ್ಜೆ ,ಕುಸುಮೆ , ಆರ್ಕ ಸೇರಿ ದ್ವಿದಳ ಧಾನ್ಯ ಬೆಳೆಯುತ್ತಿದ್ದರು. ಈಗ ಅದೇ ಪರಿಸ್ಥಿತಿ ಇದ್ದು, ಸಿರಿಧಾನ್ಯ ಬಿತ್ತನೆ ಸೂಕ್ತ

-ಧನ್ಯಕುಮಾರ್ ಹಿರೇಲ್ಲನಹೊಳೆ ರೈತ, ದಾವಣಗೆರೆ

ಈ ಹಿಂದೆ ಮಳೆ ಕಡಿಮೆಯಾದಾಗ ಒಂದು ಸಾಲು ತೊಗರಿ, ಎರಡು ಸಾಲು ಸಜ್ಜೆ ಹಾಕಿ ಉತ್ತಮ ಬೆಳೆ ಬೆಳೆದಿದ್ದೆ.

- ಶರಣಗೌಡ ಹಾಳಸುಲ್ತಾನಪುರ ಪ್ರಗತಿಪರ ರೈತ ಕಲಬುರಗಿ

ಸದ್ಯ ಮಳೆ ಕೊರತೆಯಾಗಿದೆ. ಈ ಕಾರಣಕ್ಕಾಗಿಯೇ ನಾನು ನಮ್ಮ ಜಮೀನಿನಲ್ಲಿ ಹೆಚ್ಚು ಕಾಲ ಬೇಕಾಗುವ ಬೆಳೆಗಳ ಬದಲಿಗೆ ಅಲ್ಪಾವಧಿಗೆ ಲಾಭ ತಂದು ಕೊಡುವ ಸೊಪ್ಪು ಬೆಳೆಯಲು ಆರಂಭಿಸಿದ್ದೇನೆ.

-ವೆಂಕಟೇಶ್ ರೈತ, ಮೈಸೂರು ತಾಲೂಕು.

ಹಿಂದೊಮ್ಮೆ ಮುಂಗಾರು ಸಂದರ್ಭ ನಿರೀಕ್ಷೆಯಷ್ಟು ಮಳೆ ಸುರಿಯದೇ ಇದ್ದಾಗ ಬಿತ್ತನೆ ಮಾಡಿದ್ದ ಮತ್ತು ಆಗಲೇ ಸ್ವಲ್ಪ ಎತ್ತರಕ್ಕೆ ಬೆಳೆದಿದ್ದ ತೊಗರಿ, ಹತ್ತಿ ಬೆಳೆಯಲ್ಲಿ ತೇವಾಂಶ ಕಾಪಾಡಿಕೊಂಡಿದ್ದೆವು. ಪದೇಪದೆ ಎಡೆಕುಂಟೆ ಹೊಡೆದಿದ್ದೆವು.

-ಶಂಭನಗೌಡ ರೈತ ಕಲ್ಲೂರು

ಬಯಲುಸೀಮೆ

ಜಿಲ್ಲೆಗಳು: ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ಬೆಂಗಳೂರು ಗ್ರಾ.

ರಾಜ್ಯದಲ್ಲೇ ಅತ್ಯಂತ ಹೆಚ್ಚು ಮಳೆ ಕೊರತೆ ಎದುರಿಸುವ ಬಯಲುಸೀಮೆಗೆ ಈ ಬಾರಿ ಸಿರಿಧಾನ್ಯಗಳೇ ಆಸರೆ.

- **ಬೆಳೆ ಆಯ್ಕೆ:** ಹೆಚ್ಚು ನೀರು ಬೇಡುವ ಬೆಳೆಗಳ ಬದಲಾಗಿ ಕಡಿಮೆ ತೇವಾಂಶದಲ್ಲೂ ಮುನ್ನುಗ್ಗುವ ರಾಗಿ, ನವಣೆ, ಸಾಮೆ, ಊದಲು, ಹಾರಕ ಹಾಗೂ ಕೊರಲೆ ಬಿತ್ತನೆಗೆ ತಜ್ಞರು ಸಲಹೆ ನೀಡಿದ್ದಾರೆ. ರಾಗಿ ಬೆಳೆಗೆ ಕೇವಲ 350ರಿಂದ 500 ಮಿ.ಮೀ. ಮಳೆ ಸಾಕಾಗುತ್ತದೆ.
- **ಅಂತರಬೆಳೆ ಪದ್ಧತಿ:** ಏಕಬೆಳೆ ಪದ್ಧತಿ ಕೈಬಿಟ್ಟು ರಾಗಿ-ತೊಗರಿ (8:2), ರಾಗಿ-ಹೆಸರು ಅಥವಾ ರಾಗಿ-ಅವರೆ ಅಂತರಬೆಳೆ ಮಾದರಿ ಅಳವಡಿಸಿಕೊಳ್ಳಬೇಕು. ಇದು ಆರ್ಥಿಕ ಭದ್ರತೆ ನೀಡುತ್ತದೆ.
- **ರಾಗಿ ಬೀಜೋಪಚಾರ:** ಪ್ರತಿ ಕೆಜಿ ರಾಗಿ ಬೀಜವನ್ನು 600 ಮಿ.ಲೀ. ನೀರಿನಲ್ಲಿ 18 ಗಂಟೆ ನೆನೆಸಿ, 24 ಗಂಟೆ ನೆರಳಿನಲ್ಲಿ ಒಣಗಿಸಿ ಬಿತ್ತನೆ ಮಾಡುವುದರಿಂದ ಬರ ನಿರೋಧಕ ಶಕ್ತಿ ಹೆಚ್ಚುತ್ತದೆ.

ವಿಕ ಆಶಯ

ಉತ್ತರ ಕರ್ನಾಟಕ

ಜಿಲ್ಲೆಗಳು: ಬಾಗಲಕೋಟೆ, ಕಲಬುರಗಿ, ರಾಯಚೂರು, ಕೊಪ್ಪಳ

ಮೂರು ನದಿಗಳಿದ್ದರೂ ಶೇ. 40 ರಷ್ಟು ಮಳೆಯಾಶ್ರಿತ ಕೃಷಿ ಹೊಂದಿರುವ ಬಾಗಲಕೋಟೆ ಹಾಗೂ ಕಲ್ಯಾಣ ಕರ್ನಾಟಕ ಭಾಗದಲ್ಲಿ ಜೂನ್ ಮಳೆ ಕೈಕೊಟ್ಟಿರುವುದರಿಂದ ತಕ್ಷಣದ ಪರ್ಯಾಯ ಕ್ರಮಗಳು ಜರೂರಿಗಿವೆ.

- **ಬಾಗಲಕೋಟೆ ತಂತ್ರ:** ಕಬ್ಬು ಮತ್ತು ಈರುಳ್ಳಿಗೆ ಪರ್ಯಾಯವಾಗಿ ಕಡಿಮೆ ನೀರಿನಲ್ಲಿ ಬರುವ ಬಳ್ಳಿ ತರಕಾರಿಗಳಾದ ಹಾಗಲಕಾಯಿ, ಹೀರೆಕಾಯಿ, ಸೌತೆಕಾಯಿ ಅಥವಾ ಮೆಕ್ಕೆಜೋಳ ಬೆಳೆಯಬಹುದು. ಹಣ್ಣುಗಳ ಪೈಕಿ ಕಲ್ಲಂಗಡಿ, ಕರಬೂಜ, ನೆಲ್ಲಿ ಸೂಕ್ತ. ಸಿರಿಧಾನ್ಯಗಳಾದ ಸಜ್ಜೆ ನವಣೆ, ಹರಕ ಬಿತ್ತನೆಗೆ ಕವಿಕೆ ವಿಜ್ಞಾನಿಗಳು ಸಲಹೆ ನೀಡಿದ್ದಾರೆ.
- **ಕಲಬುರಗಿ ಮಿತ್ರ ಬೆಳೆ ಸೂತ್ರ:** ಜೂನ್ ಕೊನೆಯ ವಾರದವರೆಗೆ ಮಳೆಯಾಗದಿದ್ದರೆ ದೀರ್ಘಾವಧಿ ತೊಗರಿ ಬದಲಿಗೆ ಅಲ್ಪಾವಧಿ ತಳಿಗಳಾದ ಜಿಎಸ್3ಆರ್, ಜೆಆರ್‌ಐ 811 ಮತ್ತು ಜೆಆರ್‌ಐ 152 ಬಿತ್ತಬೇಕು. ಎರಡು ಸಾಲು ತೊಗರಿ ಜೊತೆ ನಾಲ್ಕು ಸಾಲು ಉದ್ದು/ಹೆಸರು ಅಥವಾ ಶೇಂಗಾ ಮಿತ್ರ ಬೆಳೆ ಹಾಕಬೇಕು.
- **ರಾಯಚೂರು - ಕೊಪ್ಪಳದ ವಿವೇಚನೆ:** ಜುಲೈ 15ರ ನಂತರವೂ ಮಳೆ ಬಾರದಿದ್ದರೆ ರಾಯಚೂರಿನಲ್ಲಿ ಸೂರ್ಯಕಾಂತಿ ಅತ್ಯುತ್ತಮ ಪರ್ಯಾಯ. ಕೊಪ್ಪಳದ ಖುಷ್ಕಿ ಭೂಮಿಯ ರೈತರು ಒಣ ಮಣ್ಣಿನಲ್ಲಿ ನೀರು ಇಂಗಿಸಲು ಹಳ್ಳದ ಮರಳು ಹರಡುವ ತಂತ್ರಜ್ಞಾನ ಹಾಗೂ ತೋಟಗಾರಿಕೆ ಗಿಡಗಳ ಬುಡಕ್ಕೆ ತೇವಾಂಶ ಕಾಯ್ದುಕೊಳ್ಳಲು 'ಸಜ್ಜೆಯ ದಂಟು' ಬಳಸುವ ದೇಶಿ ಪದ್ಧತಿ ಅನುಸರಿಸಬಹುದು.

ಮಧ್ಯ ಕರ್ನಾಟಕ

ಜಿಲ್ಲೆಗಳು: ದಾವಣಗೆರೆ, ವಿಜಯನಗರ, ಬಳ್ಳಾರಿ

ಮೆಕ್ಕೆಜೋಳದ ಕಣಜ ಎಂದೇ ಖ್ಯಾತಿಯಾಗಿರುವ ದಾವಣಗೆರೆ ಸೇರಿದಂತೆ ಮಧ್ಯ ಕರ್ನಾಟಕದಲ್ಲಿ ಮುಳ್ಳುಸಜ್ಜೆ ಕಳೆ ಕಾಟ ಮತ್ತು ಯೂರಿಯಾ ಕೊರತೆಯಿಂದಾಗಿ ಮೆಕ್ಕೆಜೋಳದ ವಿಸ್ತೀರ್ಣ ಕಡಿತಗೊಳಿಸುವುದು ಅನಿವಾರ್ಯವಾಗಿದೆ.

- **ಮೆಕ್ಕೆಜೋಳಕ್ಕೆ ಪರ್ಯಾಯ:** ಕೃಷಿ ಇಲಾಖೆಯು ಮೆಕ್ಕೆಜೋಳದ ಬದಲಾಗಿ ರಾಗಿ ಬೆಳೆಯಲು ಪ್ರೋತ್ಸಾಹಿಸುತ್ತಿದೆ. ಮಾರುಕಟ್ಟೆಯಲ್ಲಿ ಮೆಕ್ಕೆಜೋಳಕ್ಕೆ 2200 ರೂ. ಇದ್ದರೆ, ರಾಗಿಗೆ ಕೇಂದ್ರ ಸರಕಾರವೇ 5205 ರೂ. ಬೆಂಬಲ ಬೆಲೆ ಘೋಷಿಸಿದೆ.
- **ಸುರಕ್ಷಿತ ಬೆಳೆಗಳು:** ಸೋಯಾಬೀನ್, ಸೂರ್ಯಕಾಂತಿ, ಸಜ್ಜೆ ಹಾಗೂ ಹುರುಳಿ ಉತ್ತಮ ಪರ್ಯಾಯಗಳು. ವಿಜಯನಗರ ಮತ್ತು ಬಳ್ಳಾರಿ ಜಿಲ್ಲೆಗಳ ಒಣ ಹವಾಮಾನಕ್ಕೆ ನವಣೆ, ಸಾಮೆ, ಕೊರಲೆ ಸೂಕ್ತ.
- **ಬಳ್ಳಾರಿಯ ಈರಪ್ಪಯ್ಯ ಮಾದರಿ:** ಸಿರುಗುಪ್ಪ ತಾಲೂಕಿನ ರೈತ ಈರಪ್ಪಯ್ಯ ಅವರು 2017-18ರ ಅವಧಿಯಲ್ಲಿ ಜಿಲ್ಲೆಯಲ್ಲಿ ತೀವ್ರ ಬರಗಾಲ ಎದುರಾದ ವೇಳೆ ಕೃಷಿಯಿಂದ ದೂರವುಳಿಯದೇ ಕೊರಲೆ, ಬರಗು, ಆರಕ, ಸಾಮೆ ಬೆಳೆದು ಲಾಭ ಕಂಡುಕೊಂಡಿದ್ದರು. ಎಕರೆಗೆ 5 ಸಾವಿರ ರೂ. ಖರ್ಚು ಮಾಡಿ ತಮ್ಮ 10 ಎಕರೆ ಪ್ರದೇಶದಲ್ಲಿ ಬೆಳೆ ಬೆಳೆದು 4 ಲಕ್ಷ ರೂ.ಗೂ ಅಧಿಕ ಆದಾಯ ಪಡೆದಿದ್ದರು. ಮೆಣಸಿನಕಾಯಿ ಹಾಕುವವರು 7-8 ಸಾಲುಗಳ ನಂತರ ತೊಗರಿ, ಉದ್ದು ಬಿತ್ತನೆ ಮಾಡಬೇಕು.

ಮಲೆನಾಡು ಮತ್ತು ಕರಾವಳಿ

ಜಿಲ್ಲೆಗಳು: ಹಾಸನ, ಕೊಡಗು, ಉತ್ತರ ಕನ್ನಡ, ಚಿಕ್ಕಮಗಳೂರು

ಹೆಚ್ಚು ಮಳೆ ಬೀಳುವ ಮಲೆನಾಡು ಹಾಗೂ ಕರಾವಳಿಯಲ್ಲೂ ಈ ಬಾರಿ ಮುಂಗಾರು ವಿಳಂಬವಾಗಿರುವುದರಿಂದ ಸಾಂಪ್ರದಾಯಿಕ ಶೈಲಿ ಬದಲಾಗಬೇಕಿದೆ.

- **ಮಲೆನಾಡಿಗೆ ಇಸ್ರೇಲ್ ತಂತ್ರಜ್ಞಾನ:** ಉಚಿತ ವಿದ್ಯುತ್ ಇದೆ ಎಂದು ಯಥೇಚ್ಛವಾಗಿ ನೀರು ಹರಿಸುವುದನ್ನು ನಿಲ್ಲಿಸಿ, ಇಸ್ರೇಲ್ ಮಾದರಿಯ ಹನಿ ಅಥವಾ ತುಂತುರು ನೀರಾವರಿ ಅಳವಡಿಸಿಕೊಳ್ಳುವುದು ಅನಿವಾರ್ಯ ಎಂದು ಕೃಷಿ ತಜ್ಞ ಡಾ. ಎಂ.ಸಿ. ರಂಗಸ್ವಾಮಿ ತಿಳಿಸಿದ್ದಾರೆ. ರಾಸಾಯನಿಕ ಮುಕ್ತ ಸಾವಯವ ಕೃಷಿ ಭೂಮಿಯ ನೀರು ಹಿಡಿದಿಟ್ಟುಕೊಳ್ಳುವ ಶಕ್ತಿ ಹೆಚ್ಚಿಸುತ್ತದೆ.
- **ಕೊಡಗಿನ ಅಲ್ಪಾವಧಿ ಭತ್ತ:** ಕೊಡಗಿನಲ್ಲಿ ಶೇ.100 ರಷ್ಟು ಮಳೆಯಾಶ್ರಿತ ಕೃಷಿ ಇರುವುದರಿಂದ ಇಂಟಾನ್, ಬಿಬಿಟಿ ತಳಿಗಳ ಬದಲಿಗೆ 90 ರಿಂದ 125 ದಿನಗಳಲ್ಲಿ ಕಟಾವಿಗೆ ಬರುವ ತುಂಗ, ಆತಿರಾ, ಕೆಪಿಆರ್-1, ಐಆರ್-64 ನಂತಹ ಹೈಬ್ರಿಡ್ ಅಲ್ಪಾವಧಿ ಭತ್ತದ ತಳಿಗಳ ಮೊರೆ ಹೋಗುವುದು ಸೂಕ್ತ.
- **ಕರಾವಳಿಯ ಅಸ್ತ್ರ:** ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಭಾಗದಲ್ಲಿ ಸೆಪ್ಟೆಂಬರ್‌ವರೆಗೆ ಭತ್ತ ಬಿಟ್ಟು ಬೇರೆ ಪರ್ಯಾಯ ಬೆಳೆ ಸಾಧ್ಯವಿಲ್ಲ, ಹೀಗಾಗಿ ಮುಂಗಾರು ವಿಳಂಬವಾದರೆ 130 ದಿನಗಳ ತಳಿ ಬಿಟ್ಟು ಅಲ್ಪಾವಧಿ ತಳಿಗಳಾದ 1010 ಅಥವಾ ಐಆರ್-64 ಭತ್ತವನ್ನು ಜುಲೈ ನಾಟಿಗೆ ಬಳಸಿಕೊಳ್ಳಬೇಕು.

ಮಳೆ ಕೊರತೆಯಾದಾಗ ಹೊಲದಲ್ಲಿ 'ಎರಕಲಬಿಡಿ' ಬೀಳುತ್ತಿತ್ತು. ಮಣ್ಣು ಒಣಗದಂತೆ ನೋಡಿಕೊಳ್ಳಲು ರೈತರು ಮತ್ತೆಮತ್ತೆ ಎಡೆ ಹೊಡೆಯುತ್ತಿದ್ರು. ಇದರಿಂದ ಕೆಳಪದರದ ಮಣ್ಣಿನೊಳಗಿನ ತೇವಾಂಶ ಉಳಿಯುತ್ತಿತ್ತು. ಈಗ ಅಂಥ ಸ್ಥಿತಿ ಇಲ್ಲ, ನೀರು ಕಡಿಮೆ ಬೇಡುವ ಬೆಳೆ, ಮೂರು ತಿಂಗಳಲ್ಲಿ ಕೈಗೆ ಬರುವ ತಳಿಗಳೂ ಇವೆ. ಮಳೆ ಲಕ್ಷಣ ನೋಡಿ ಬೆಳೆ ಇಲ್ಲವೇ ತಳಿ ಬದಲಿಸಿದರೆ ಬರದ ನಷ್ಟ ತಪ್ಪಿಸಿಕೊಳ್ಳಬಹುದು

-ಶಂಕರಗೌಡ ಹಾದಿಮನಿ ಬೆಳಗಾವಿ.

ಕೃಷಿ ಅಧಿಕಾರಿಗಳ ಸಲಹೆ

ಬಾಗಲಕೋಟೆ ಜಿಲ್ಲೆಯಲ್ಲಿ ಶೇ.60 ರಷ್ಟು ಮಳೆ ಕೊರತೆಯಾಗುವ ಮುನ್ಸೂಚನೆಯಿದೆ. ಮಳೆಯಾಶ್ರಿತ ಪ್ರದೇಶದ ರೈತರು ಕಡಿಮೆ ನೀರಿನಲ್ಲಿ ಉತ್ತಮ ಫಸಲು ನೀಡುವ ಬೆಳೆಗಳತ್ತ ಗಮನಹರಿಸಬೇಕು. ಹುರುಳಿ, ಸಜ್ಜೆ, ನವಣೆ, ಹರಕ ಸೇರಿದಂತೆ ಸಿರಿಧಾನ್ಯಗಳನ್ನು ಬೆಳೆಯುವುದು ಉತ್ತಮ. ಈ ಬೆಳೆಗಳಿಗೆ ಹೆಚ್ಚುವರಿ ನೀರು ಬೇಕಿಲ್ಲ.

-ಸಿದ್ದು ಅಂಗಡಿ
ಕೃಷಿ ವಿಜ್ಞಾನಿ, ಕೃಷಿ ವಿಜ್ಞಾನ ಕೇಂದ್ರ, ಬಾಗಲಕೋಟೆ.

ದಾವಣಗೆರೆ ಜಿಲ್ಲೆಯಲ್ಲಿ ಮೆಕ್ಕೆಜೋಳ ಬದಲಿಗೆ ಬರ ನಿರೋಧಕ ಬೆಳೆಗಳಾದ ರಾಗಿ, ನವಣೆ ಜತೆ ಎಲ್ಲಾ ಸಿರಿಧಾನ್ಯ, ಸಜ್ಜೆ, ಸೋಯಾಬೀನ್, ಹುರುಳಿ ಬೆಳೆಯಲು ರೈತರನ್ನು ಇಲಾಖೆಯಿಂದ ಪ್ರೋತ್ಸಾಹಿಸಲಾಗುತ್ತಿದೆ.

- ಕೆ.ಜಿಯಾವುಲ್ಲಾ ಕೃಷಿ ಜಂಟಿ ನಿರ್ದೇಶಕರು, ದಾವಣಗೆರೆ.

ಕಲ್ಯಾಣ ಕರ್ನಾಟಕ ಭಾಗದಲ್ಲಿ ಮಳೆಯ ಅಭಾವವಾದರೆ ಅಲ್ಪಾವಧಿ ಬೆಳೆಗೆ ಒತ್ತು ನೀಡಬೇಕು. ಜತೆಗೆ ಮಿಶ್ರ ಬೆಳೆಗೆ ಮೊರೆ ಹೋಗಬೇಕು. ಜುಲೈ ಎರಡನೇ ವಾರದ ನಂತರ ಬಿತ್ತನೆ ಮಾಡಿದರೆ ಶೇ.20ರಷ್ಟು ಬಿತ್ತನೆ ಬೀಜ ಹೆಚ್ಚಿಸಬೇಕು.

- ರಾಜು ತೆಗ್ಗಳ್ಳಿ
ಮುಖ್ಯಸ್ಥರು, ಕೃಷಿ ವಿಜ್ಞಾನ ಕೇಂದ್ರ, ಕಲಬುರಗಿ.

ಮುಂಗಾರು ವಿಳಂಬವಾದರೆ 115 ರಿಂದ 120 ದಿನಗಳಲ್ಲಿ ಬೆಳೆಯುವ ಅಲ್ಪಾವಧಿ ಭತ್ತದ ತಳಿಗಳು ಇವೆ. ಕರಾವಳಿ ಭಾಗದಲ್ಲಿ ಸೆಪ್ಟೆಂಬರ್ ವರೆಗೆ ಭತ್ತ ಬಿಟ್ಟು ಬೇರೆ ಬೆಳೆ ಬೆಳೆಯಲು ಆಗುವುದಿಲ್ಲ, ಹಾಗಾಗಿ ಸದ್ಯ ಇಲ್ಲಿ ಭತ್ತ ಬಿಟ್ಟು ಪರ್ಯಾಯ ಬೆಳೆ ಬೆಳೆಯುವುದು ಸೂಕ್ತವಲ್ಲ.

- ಶಿವಪ್ರಸಾದ ಗಾಂವಕರ
ಕೃಷಿ ಜಂಟಿ ನಿರ್ದೇಶಕರು, ಉತ್ತರ ಕನ್ನಡ.

ಮೈಸೂರು ಭಾಗದ ರೈತರು ಈ ಸಂದರ್ಭದಲ್ಲಿ ಹೊದಿಕೆ ಬೆಳೆಗಳನ್ನು ಬೆಳೆಯಬೇಕು. ಮುಖ್ಯವಾಗಿ ಸೆಣಬು, ದಹಿಂಚ, ಗೊಬ್ಬರದ ಸೊಪ್ಪು, ಹುರುಳಿ, ಅಲಸಂದೆ, ಹೆಸರು ಬೆಳೆದು ಭೂಮಿಯಲ್ಲಿಯೇ ಉಳುಮೆ ಮಾಡಬೇಕು. ಇದರಿಂದ ಭೂಮಿಯಲ್ಲಿ ಸಾರಜನಕ ಹೆಚ್ಚುವುದಲ್ಲದೇ ಮಣ್ಣಿನ ಫಲವತ್ತತೆ ಮತ್ತು ತೇವಾಂಶ ಹೆಚ್ಚುತ್ತದೆ.

- ಡಾ. ಬಿ. ಎನ್. ಜ್ಞಾನೇಶ್ ಹಿರಿಯ ವಿಜ್ಞಾನಿ, ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರ, ಮೈಸೂರು.

- **ಮಾಹಿತಿ:** ರವಿರಾಜ್ ಗಲಗಲಿ, ವೆಂಕಟೇಶ ಎಗನೂರು, ಯಳನಾಡು ಮಂಜು, ಬೀರೇಶ್ ಕಬಿನಿ, ಪ್ರಕಾಶ್ ಜಿ., ರವಿಭಾರತಿ ಗೋಸಾವಿ, ಮಾರುತಿ ಸುಣಗಾರ, ಜಯಪ್ಪ ರಾಥೋಡ್, ಶ್ರೀಕಾಂತ ಅಕ್ಕಿ, ಮಂಜುನಾಥ ಸಾಲಿ, ಆದರ್ಶ ಕೋಡಿ, ಶಶಿಧರ್ ಎಸ್. ದೋಣಿಹಕ್ಲು

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ.2, 2/1 & 2/3, ಕಾಳಿದಾಸ ಮಾರ್ಗ, 1ನೇ ಮುಖ್ಯರಸ್ತೆ, ಗಾಂಧಿನಗರ,
ಬೆಂಗಳೂರು – 560009. ದೂರವಾಣಿ ಸಂ. 080-22265383 website: www.kiadb.in
ಸಂಖ್ಯೆ: ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ-ಇಪಿ-18/1733/2026-27 ದಿನಾಂಕ:22-06-2026
ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ
(ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)
ಕೆಐಡಿಬಿಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ, ಮಾನವಶಕ್ತಿ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಅರ್ಹ ಗುತ್ತಿಗೆದಾರರಿಂದ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ದ್ವಿಲಕೋಟೆ ಪದ್ಧತಿಯಲ್ಲಿ ಐಟಂ ದರ ಆಧಾರದ ಮೇಲೆ ವಿದ್ಯುನ್ಮಾನ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
ಕಾಮಗಾರಿಯ ಹೆಸರು: ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕಿನಲ್ಲಿ ದಾಬಸ್‌ಪೇಟೆ ಕೈಗಾರಿಕಾ ಪ್ರದೇಶ ಹಂತ-7 ಸೆಕ್ಟರ್-1 ರಲ್ಲಿ ರಸ್ತೆಗಳು, ಆರ್.ಸಿ.ಸಿ ಬದಿ ಚರಂಡಿ, ಆರ್.ಸಿ.ಸಿ ಅಡ್ಡಚರಂಡಿ, ತಡೆಗೋಡೆ ನಿರ್ಮಾಣ ಮತ್ತು ಹೆಚ್.ಡಿ.ಪಿ.ಇ ನೀರು ಸರಬರಾಜು ಕೊಳವೆ ಮಾರ್ಗ ನಿರ್ಮಾಣದೊಂದಿಗೆ ಕೈಗಾರಿಕಾ ಬಡಾವಣೆಯನ್ನು ರಚನೆ ಮಾಡುವ ಕಾಮಗಾರಿ.
● ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ 09-07-2026ರ ಸಂಜೆ 4:00 ಗಂಟೆಯವರೆಗೆ. ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಸಹಿ/-
ಪ್ರಧಾನ ಅಭಿಯಂತರರು,
ಕೆ.ಐ.ಎ.ಡಿ.ಬಿ, ಬೆಂಗಳೂರು
ಡಿಐಪಿಆರ್/ಸಿಪಿ/1300/ಸಿಸಿಎಲ್/2026-27

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ
ಉಪ ಪ್ರಧಾನ ವ್ಯವಸ್ಥಾಪಕರು-1 ರವರ ಕಛೇರಿ, 1ನೇ ಮಹಡಿ, ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು-560 052.
ಸಂ: ಉಪ್ರವ್ಯ-1/ಬೆಂಘತ್ಯಾನಿನಿ/ಟೆಂಡ್/11/2026-27 ದಿನಾಂಕ:22.06.2026
ಅಲ್ಪಾವಧಿ ಟೆಂಡರ್ ಪ್ರಕಟಣೆ
(ಜಿಒಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು, ಬೆಂಘತ್ಯಾನಿನಿ ಬೆಂಗಳೂರಿನ ಪರವಾಗಿ ಉಪ ಪ್ರಧಾನ ವ್ಯವಸ್ಥಾಪಕರು-1, ಕೆಳಗಿನ ಕೋಷ್ಟಕದಲ್ಲಿ ಉಲ್ಲೇಖಿಸಲಾದ ಕಾಮಗಾರಿಗಳಿಗೆ ಅರ್ಹ ಬಿಡ್ಡರ್‌ಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಪ್ಯಾಕೇಜ್ ವಿವರ	ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ) (ಜಿಎಸ್‌ಟಿ ಸೇರಿದಂತೆ)	ಇಎಂಡಿ (ರೂಗಳಲ್ಲಿ)	ಗುತ್ತಿಗೆ ಪೂರ್ಣಗೊಳಿಸುವಕಾಲಾವಧಿ (ಮಳೆಗಾಲ ಸೇರಿದಂತೆ)
1	ದೊಡ್ಡಬಿದರಕಲ್ಲು (ಪ್ಯಾಕೇಜ್-ಪಿ 1) ನಲ್ಲಿ ಎಂಆರ್‌ಎಫ್ ಶೆಡ್‌ಗಳ ನಿರ್ಮಾಣ.	2090.00	ರೂ. 1,00,000/- ಇ-ಪಾವತಿಯ ಮೂಲಕ ಅಂದರೆ, ಆನ್‌ಲೈನ್/ ಆರ್‌ಟಿಜಿಎಸ್ / ಎನ್‌ಇಎಫ್‌ಟಿ / ಓಟಿಸಿ ಹಾಗೂ ಉಳಿದ ರೂ. 19,90,000/- ಬ್ಯಾಂಕ್ ಗ್ಯಾರಂಟಿ / ಎಫ್‌ಡಿಆರ್ ಮೂಲಕ ರಾಷ್ಟ್ರೀಕೃತ / ಶೆಡ್ಯೂಲ್ಡ್ ಬ್ಯಾಂಕ್‌ನಿಂದ ನೀಡುವುದು.	09 ತಿಂಗಳು
2	ಸುಬ್ಬರಾಯನಪಾಳ್ಯ (ಪ್ಯಾಕೇಜ್-ಪಿ2) ರಲ್ಲಿ ಎಂಆರ್‌ಎಫ್ ಶೆಡ್‌ಗಳ ನಿರ್ಮಾಣ.	1369.00	ರೂ. 1,00,000/- ಇ-ಪಾವತಿಯ ಮೂಲಕ ಅಂದರೆ, ಆನ್‌ಲೈನ್/ ಆರ್‌ಟಿಜಿಎಸ್ / ಎನ್‌ಇಎಫ್‌ಟಿ / ಓಟಿಸಿ ಹಾಗೂ ಉಳಿದ ರೂ. 14,00,000/- ಬ್ಯಾಂಕ್ ಗ್ಯಾರಂಟಿ / ಎಫ್‌ಡಿಆರ್ ಮೂಲಕ ರಾಷ್ಟ್ರೀಕೃತ / ಶೆಡ್ಯೂಲ್ಡ್ ಬ್ಯಾಂಕ್‌ನಿಂದ ನೀಡುವುದು.	09 ತಿಂಗಳು
3	ತರಹುಣಸೆ (ಪ್ಯಾಕೇಜ್-ಪಿ3) ರಲ್ಲಿ ಎಂಆರ್‌ಎಫ್ ಶೆಡ್‌ಗಳ ನಿರ್ಮಾಣ.	4800.00	ರೂ. 1,00,000/- ಇ-ಪಾವತಿಯ ಮೂಲಕ ಅಂದರೆ, ಆನ್‌ಲೈನ್/ ಆರ್‌ಟಿಜಿಎಸ್ / ಎನ್‌ಇಎಫ್‌ಟಿ / ಓಟಿಸಿ ಹಾಗೂ ಉಳಿದ ರೂ. 47,00,000/- ಬ್ಯಾಂಕ್ ಗ್ಯಾರಂಟಿ / ಎಫ್‌ಡಿಆರ್ ಮೂಲಕ ರಾಷ್ಟ್ರೀಕೃತ / ಶೆಡ್ಯೂಲ್ಡ್ ಬ್ಯಾಂಕ್‌ನಿಂದ ನೀಡುವುದು.	09 ತಿಂಗಳು

1) ಬಿಡ್ ಪೂರ್ವ ಪ್ರಶ್ನೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 28.06.2026 ರಂದು ಸಂಜೆ 4:00 ಗಂಟೆಯವರೆಗೆ. 2) ಟೆಂಡರ್ ಪೂರ್ವ ಬಿಡ್ ಸಭೆ ದಿನಾಂಕ: 29.06.2026 ರಂದು ಮಧ್ಯಾಹ್ನ 3:00 ಗಂಟೆಗೆ ಮೇಲ್ಕಂಡ ಕಚೇರಿಯಲ್ಲಿ. 3) ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 05.07.2026 ರಂದು ಸಂಜೆ 4:00 ಗಂಟೆಯವರೆಗೆ. 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 06.07.2026ರಂದು ಸಂಜೆ 4:00 ಗಂಟೆಗೆ.
ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಸಹಿ/-
ಉಪ ಪ್ರಧಾನ ವ್ಯವಸ್ಥಾಪಕರು-1, ಬೆಂಘತ್ಯಾನಿನಿ
ವಾಸಾಸಂಇ/ವಾಪ್ರ/ಜಿಎ/1298/2026-27

ಕರ್ನಾಟಕ ಸರ್ಕಾರ – ಕರ್ನಾಟಕ ಅರಣ್ಯ ಇಲಾಖೆ
ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ಕಾರ್ಯಯೋಜನೆ ಮತ್ತು ಮೋಜಣಿ, ಶಿವಮೊಗ್ಗ-577204.
Ph. 08182-250785 Email: cfworkingplansmg@gmail.com
ಇ-ಟೆಂಡರ್ ಪ್ರಕಟಣೆ ಸಂಖ್ಯೆ: ಕಾಯೋಮೋಶಿ /ಎ2/RCCP/ಇ-ಟೆಂಡರ್/ಸಿಆರ್-16/2026-27 ದಿನಾಂಕ: 19.06.2026.
KPPP Portal ಮುಖಾಂತರ ಇ-ಟೆಂಡರ್ ಪ್ರಕಟಣೆ
2026-27 ನೇ ಸಾಲಿನಲ್ಲಿ "Construction of RCC Pillars of Specified Dimension at the given locations along the Surveyed Notified Forests for the Purpose of Boundary Demarcation in the Divisions of Shivamogga, Bhadravathi, Sagar, Mangalore, Kundapura and Kudremukh Wildlife during the Year 2026-27",ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು KPPP Portal ಮುಖಾಂತರ ಒಟ್ಟು ಅಂದಾಜು ರೂ. 79.38 ಲಕ್ಷಗಳ ಒಟ್ಟು 36 ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಕರ್ನಾಟಕ ಲೋಕೋಪಯೋಗಿ ಇಲಾಖೆಯ ಸಕ್ಷಮ ಪ್ರಾಧಿಕಾರದಿಂದ 4ನೇ ದರ್ಜೆಯ / ಮೇಲ್ಪಟ್ಟ ದರ್ಜೆಯ ಪರವಾನಗಿ ಹೊಂದಿರುವ ಆಸಕ್ತ ಅರ್ಹ ಲೋಕೋಪಯೋಗಿ ಗುತ್ತಿಗೆದಾರರು ದಿನಾಂಕ: 06.07.2026 ರ ಸಂಜೆಯೊಳಗೆ as per KPPP-Portal ಟೆಂಡರನ್ನು ಸಲ್ಲಿಸಬಹುದಾಗಿದೆ. ಇ-ಆಡಳಿತ ಕೇಂದ್ರ ಅಥವಾ ವೆಬ್ ಸೈಟ್ (https://kppp.karnataka.gov.in) ನಲ್ಲಿ ಪ್ರಕಟಿಸಿದಂತೆ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ: 08182-250785 ಅಥವಾ ಖುದ್ದಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ.
ಸಹಿ/- (ಜ್ಞಾನಾನಂದ.ಎಸ್) ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿ, ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಕಾರ್ಯಯೋಜನೆ ಮತ್ತು ಮೋಜಣಿ, ಶಿವಮೊಗ್ಗ
ವಾ.ಸಾ.ಸಂ.ಇ/ಕೆಸ್‌ಎಂಸಿಎ/ಶಿ/26-27/105/06/417

ಮೈಸೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ನೀಸ & ಒಚ (ಪೂರ್ವ) ವಿಭಾಗ,
ವಾವಿನೀಸ ಆವರಣ, ಯಾದವಗಿರಿ, ಮೈಸೂರು.
ಟೆಂಡರ್ ಪ್ರಕಟಣೆ ಸಂಖ್ಯೆ: ಮೈನಪಾ/ಕಾಇಂ/ನೀಸ&ಒಚ(ಪೂರ್ವ)/ಟಿಎನ್-6/ 316/2026-27 ದಿನಾಂಕ: 22-06-2026
ಅಲ್ಪಾವಧಿ / ಪೂರ್ಣಾವಧಿ ಟೆಂಡರ್ ಪ್ರಕಟಣೆ ಕರ್ನಾಟಕ ಸರ್ಕಾರದ ಕೆ.ಪಿಪಿ ಪೋರ್ಟಲ್ ಮುಖಾಂತರ ಮಾತ್ರ
ಪಾಲಿಕೆ ಅನುದಾನದಡಿ KTPP ನಿಯಮಗಳಿಗೆ ಒಳಪಟ್ಟಂತೆ ಟೆಂಡರ್‌ಗೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

				ಸಂಜೆ 4.30 ಗಂಟೆ ನಂತರ	ಸಂಜೆ 4.35 ಗಂಟೆ	ಸಂಜೆ 4.40 ಗಂಟೆ ನಂತರ
ಕ್ರ.ಸಂ.	ವಿವರ	ಟೆಂಡರ್ ಕಾಮಗಾರಿ/ ಸೇವಾ ಸಂಖ್ಯೆ	ಟೆಂಡರ್ ಮೊತ್ತ (ರೂ. ಲಕ್ಷಗಳಲ್ಲಿ)	ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ತಾಂತ್ರಿಕ/ ಆರ್ಥಿಕ ಬಿಡ್ ತೆರೆಯುವ ದಿನಾಂಕ
1	Kc-6	2	43.20	24.06.2026	01-07-2026	02-07-2026
				ಸಂಜೆ 4.30 ಗಂಟೆ ನಂತರ	ಸಂಜೆ 4.35 ಗಂಟೆ	ಬೆಳಿಗ್ಗೆ 10.30 ಗಂಟೆ ನಂತರ
2	Kw-1, Kw-2 & Kc-5	5	123.38	25.06.2026	10-07-2026	13-07-2026

ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ/ಬದಲಾವಣೆ/ ತಿದ್ದುಪಡಿಗಳಿದ್ದಲ್ಲಿ ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.
ಸಹಿ/- ಕಾರ್ಯಪಾಲಕ ಅಭಿಯಂತರರು, ನೀಸ & ಒಚ (ಪೂರ್ವ) ವಿಭಾಗ
ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಎಸಿ, ಫ್ಯಾನ್ ಹಂಗಿರದ ಕೂಲ್ ಹೌಸ್

ಮೈಸೂರಿನಲ್ಲೊಂದು ಹಸಿರುಮನೆ | ಎರಡಂತಸ್ತಿನಲ್ಲಿ ವರ್ಟಿಕಲ್ ಗಾರ್ಡನ್

■ **ಹರೀಶ ಎಲ್. ತಲಕಾಡು** ಮೈಸೂರು
harisha.lakshmipathy@timesofindia.com

ಸಾಂಸ್ಕೃತಿಕ ನಗರಿ ಮೈಸೂರಿನಲ್ಲೊಂದು ಹಸಿರು ಮನೆ ಇದೆ. ಈ ಮನೆಗೆ ಫ್ಯಾನ್, ಎಸಿಯೇ ಇಲ್ಲ. ಗಿಡ-ಮರ-ಬಳ್ಳಿಗಳ ಹಸಿರು ಹೊದಿಕೆ ಈ ಮನೆಯನ್ನು ತಣ್ಣಗಿರಿಸಿದೆ. ಬೇಸಿಗೆ ಸೇರಿದಂತೆ ವರ್ಷಪೂರ್ತಿ ಈ ಮನೆ ಕೂಲ್ ಆಗಿದ್ದು, ಎಲ್ಲರ ಗಮನ ಸೆಳೆಯುತ್ತಿದೆ.

ಮೇಲ್ನೋಟಕ್ಕೆ ಮನೆಯೇ ಕಾಣಿಸದಷ್ಟು ಬಳ್ಳಿಗಳು ಆವರಿಸಿವೆ. ಸುತ್ತೆಲ್ಲ ಮರ-ಗಿಡ ಹಂದರ. ಇದರಿಂದ ಮನೆಯೊಳಗೆ ಮಾತ್ರವಲ್ಲದೇ ಆವರಣದಲ್ಲಿಯೂ ಹವಾನಿಯಂತ್ರಿತ ವ್ಯವಸ್ಥೆ ಇದೆ. ಇಡೀ ಹಸಿರು ಮನೆ ಆವರಣದಲ್ಲಿ 200 ಜಾತಿಯ 10 ಸಾವಿರಕ್ಕೂ ಹೆಚ್ಚು ಗಿಡ,ಬಳ್ಳಿ, ಔಷಧೀಯ ಸಸ್ಯಗಳಿವೆ. ಮೈಸೂರಿನ ಗೋಕುಲಂ 3ನೇ ಹಂತದ ತ್ರಿನೇತ್ರ ಸರ್ಕಲ್ ಬಳಿ ಬಂದರೆ ಎರಡಂತಸ್ತಿನ ಈ ಹಸಿರು ಮನೆ ಕಾಣಿಸುತ್ತದೆ. ಇದು ಪರಿಸರ ಪ್ರೇಮಿ ಫಾದರ್ ಬೆಂಜಮಿನ್ ವಾಸ್ ಅವರ ಕನಸಿನ ಮನೆ. ಕೊಡಗಿನ ಸೋಮವಾರಪೇಟೆ ಮೂಲದ ಬೆಂಜಮಿನ್ ವಾಸ್ ಮೈಸೂರಿನ ಸೆಂಟ್ ಫಿಲೋಮಿನಾ ಚರ್ಚ್‌ನಲ್ಲಿ ಫಾದರ್ ಆಗಿದ್ದರು.

ಎಸಿ ಬಳಕೆ ಎಫೆಕ್ಟ್: ಪರಿಸರ ತಾಪಮಾನ ಏರಿಕೆಗೆ ಎಸಿ ಕೊಡುಗೆಯೂ ಇದೆ. ವಾತಾವರಣದಲ್ಲಿನ ತೇವಾಂಶವನ್ನು ಒಳಗೆ ಹೀರಿ, ಉಷ್ಣ ಗಾಳಿಯನ್ನು ಹೊರದಬ್ಬುವ ಎಸಿಯು ಪರಿಸರದ ಮೇಲೆ ಕೆಟ್ಟ ಪರಿಣಾಮ ಉಂಟು ಮಾಡುತ್ತದೆ. ಮನುಷ್ಯನ ಆರೋಗ್ಯಕ್ಕೂ ಎಸಿ ಒಳ್ಳೆಯದಲ್ಲ, ಇದರಿಂದ ಖರ್ಚಿನ ಬಾಬ್ತು ಕೂಡ ಹೆಚ್ಚುತ್ತದೆ. ಬದಲಿಗೆ, 30*40 ಸುತ್ತಳತೆಯ ಮನೆ ಪರಿಸರದಲ್ಲಿ ಮರಬಳ್ಳಿ ಬೆಳೆಸಿ ನೈಸರ್ಗಿಕ ಎಸಿ ಸೃಷ್ಟಿಸುವುದರಿಂದ ನೂರಾರು ಲಾಭಗಳಿವೆ.

ನನ್ನ ಭೂಮಿ ಹೆಜ್ಜೆ ವಿಕ ಅಭಿಯಾನ

- ಮಿಡ್ ಸೈಜ್ ಮನೆಯ ಗಾರ್ಡನ್ ಮಾಡಲು ಆರಂಭದಲ್ಲಿ 1 ಲಕ್ಷ ರೂ. ವರೆಗೆ ಖರ್ಚು ತಗುಲಬಹುದು. ಎಸಿ ಅಳವಡಿಕೆಗೆ ಆರಂಭದಲ್ಲಿ 35 ಸಾವಿರ ರೂ. ಸಾಕಾದರೂ ನಂತರ ಸರ್ವಿಸ್ ಖರ್ಚು ಬೆಳೆಯುತ್ತಾ ಹೋಗುತ್ತದೆ.
- ಸಾಧಾರಣ ಸಾಮರ್ಥ್ಯದ ಒಂದು ಎಸಿಗೆ ತಿಂಗಳಿಗೆ 200 ಯೂನಿಟ್ ವಿದ್ಯುತ್ ಬಳಕೆಯಾಗುತ್ತದೆ. ಮರಬಳ್ಳಿಯಾದರೆ ನೀರುಣಿಸಲು 50 ಯೂನಿಟ್ ಸಾಕು.
- ಎಸಿಗಾದರೆ ಸರಾಸರಿ 2000 ರೂ. ಪವರ್ ಬಿಲ್ ಬರುತ್ತದೆ. ಮರಬಳ್ಳಿ ಪೋಷಿಸಲು ಗರಿಷ್ಠ 500 ರೂ. ವರೆಗೆ ಖರ್ಚಾಗುತ್ತದೆ.
- ಎಸಿ ತಂಪುಗಾಳಿಯಲ್ಲಿ ತೇವಾಂಶ ಪ್ರಮಾಣ ಇರುವುದಿಲ್ಲ. ಇದನ್ನು ದೀರ್ಘಾವಧಿ ಬಳಸುವವರಲ್ಲಿ ಕಣ್ಣಿನ ಉರಿ, ತುರಿಕೆ ಚರ್ಮ, ತುಟಿ ಒಣಗುವಿಕೆ, ಶ್ವಾಸಕೋಶದ ಉರಿಯೂತ, ಕೀಲುನೋವು, ಸ್ನಾಯು ಸೆಳೆತದಂತಹ ಸಮಸ್ಯೆಗಳು ಕಾಣಿಸುತ್ತವೆ. ಮರಬಳ್ಳಿ ಎಸಿಯಾದರೆ ಶ್ವಾಸಕೋಶ ಸಮಸ್ಯೆ ನಿವಾರಣೆಯಾಗಿ ಸಂಪೂರ್ಣ ಆರೋಗ್ಯ ವೃದ್ಧಿಸುತ್ತದೆ.



ಮನೆಯ ಸುತ್ತಲೂ ಗಿಡ-ಮರ-ಬಳ್ಳಿಗಳನ್ನು ಬೆಳೆಸಲಾಗಿದ್ದು, ವರ್ಟಿಕಲ್ ಗಾರ್ಡನ್ ನಿರ್ಮಿಸಲಾಗಿದೆ. ಇಡೀ ಮನೆ ಹಸಿರು ಹೊದಿಕೆಯಿಂದ ವರ್ಷಪೂರ್ತಿ ತಂಪಾಗಿದ್ದು, ಪಕ್ಷಿಗಳ ಆವಾಸ ಸ್ಥಾನವಾಗಿದೆ. ಈ ಹಸಿರು ಮನೆಯ ಮೂಲಕ ಸಾರ್ವಜನಿಕರಲ್ಲಿ ಪರಿಸರ ಜಾಗೃತಿ ಮೂಡಿಸುವುದು ನಮ್ಮ ಉದ್ದೇಶವಾಗಿದೆ.

- ಬೆಂಜಮಿನ್ ವಾಸ್

ನಿಮ್ಮ ಸುತ್ತಲೂ ಇತಹ ಪರಿಸರ ಸಂರಕ್ಷಣೆಯ ಕುತೂಹಲಕಾರಿ ಯಶೋಗಾಥೆಗಳು ಗಮನಕ್ಕೆ ಬಂದರೆ ಬರೆದು ಈ ನಂಬರ್‌ಗೆ ವಾಟ್ಸ್ಆ್ಯಪ್ ಮಾಡಿ.
63664 22240

ವಿಜಯ ಕರ್ನಾಟಕ
ನಮ್ಮ ಬೆಂಗಳೂರು
ಮಂಗಳವಾರ, 23 ಜೂನ್ 2026
ಇಂದಿನ ತಾಪಮಾನ 21° ಕನಿಷ್ಠ 27° ಗರಿಷ್ಠ
X.com /vijaykarnataka facebook.com/vijaykarnataka www.vijaykarnataka.com

ಬೆಂಗಳೂರು ಉತ್ತರ ಪಾಲಿಕೆ ವತಿಯಿಂದ ಥಣಿಸಂದ್ರ ಮುಖ್ಯರಸ್ತೆಯಲ್ಲಿ ಫುಟ್‌ಪಾತ್ ಒತ್ತುವರಿ ತೆರವು ಕಾರ್ಯಾಚರಣೆ ನಡೆಯಿತು.

ರಿಹ್ಯಾಬ್ ಕೇಂದ್ರದ ಮಾಲೀಕನ ಕೊಲೆ ತನಿಖೆ ಚುರುಕು »08
27,500 ರೂ. ದಂಡ ಕಟ್ಟಿದ ಬೈಕ್ ಸವಾರ »08

ಮತ್ತೆ 450 ಕಿ.ಮೀ ವೈಟ್‌ಟಾಪಿಂಗ್

ಸಮಗ್ರ ಯೋಜನೆ ರೂಪಿಸಿ ಕಾಮಗಾರಿಯ ಪರಿಣಾಮಕಾರಿ ಅನುಷ್ಠಾನಕ್ಕೆ ಸಚಿವ ಕೃಷ್ಣ ಬೈರೇಗೌಡ ಸೂಚನೆ

ಸಂಚಾರ ದಟ್ಟಣೆಗೆ ದೀರ್ಘಕಾಲೀನ ಪರಿಹಾರಕ್ಕಾಗಿ ಬಿ-ಸ್ಮೈಲ್‌ನಿಂದ ಮಹತ್ವಾಕಾಂಕ್ಷಿ ಯೋಜನೆ

ಆರು ತಿಂಗಳಲ್ಲಿ ವೈಟ್ ಟಾಪಿಂಗ್ ಕಾಮಗಾರಿ ಪೂರ್ಣಗೊಳಿಸಲು ತಾಕೀತು

■ **ವಿಕ ಸುದ್ದಿಲೋಕ** ಬೆಂಗಳೂರು

2026-27ನೇ ಸಾಲಿನಲ್ಲಿ 3 ಸಾವಿರ ಕೋಟಿ ರೂ. ವೆಚ್ಚದಲ್ಲಿ 450 ಕಿ.ಮೀ. ಉದ್ದದ ವೈಟ್‌ಟಾಪಿಂಗ್ ರಸ್ತೆಗಳ ನಿರ್ಮಾಣಕ್ಕೆ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲಾಗಿದ್ದು, ಶೀಘ್ರದಲ್ಲೇ ಟೆಂಡರ್ ಆಹ್ವಾನಿಸಲಾಗುವುದು ಎಂದು ಬೆಂಗಳೂರು ನಗರಾಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.



3,000 ಕೋಟಿ ರೂ. ವೆಚ್ಚದಲ್ಲಿ ಡಿಪಿಆರ್

''ನಗರದಲ್ಲಿ ಗುಂಡಿಮುಕ್ತ ಮತ್ತು ದೀರ್ಘ ಕಾಲ ಬಾಳಿಕೆ ಬರುವ ರಸ್ತೆಗಳ ನಿರ್ಮಾಣಕ್ಕೆ ರಾಜ್ಯ ಸರಕಾರ ಪಣ ತೊಟ್ಟಿದೆ. ಹೊಸದಾಗಿ ಕೈಗೊಳ್ಳಲಿರುವ ವೈಟ್‌ಟಾಪಿಂಗ್ ಕಾಮಗಾರಿಗೆ ಸಂಬಂಧಿಸಿದಂತೆ ಎಲ್ಲ ಪ್ರಕ್ರಿಯೆಗಳು ಅಂತಿಮ ಹಂತದಲ್ಲಿದ್ದು, ತ್ವರಿತವಾಗಿ ಟೆಂಡರ್ ಆಹ್ವಾನಿಸಿ, ಕಾಮಗಾರಿ ಆರಂಭಿಸಲಾಗುವುದು,'' ಎಂದು ಅವರು ಸೋಮವಾರ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

''ಈಗಾಗಲೇ 196 ಕಿ.ಮೀ. ವೈಟ್ ಟಾಪಿಂಗ್ ಕಾಮಗಾರಿ ಪೂರ್ಣಗೊಂಡಿದೆ. ಹೊಸದಾಗಿ 126 ಕಿ.ಮೀ. ರಸ್ತೆ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದ್ದು, ಅದರಲ್ಲಿ 58 ಕಿ.ಮೀ. ಪೂರ್ಣಗೊಂಡಿದೆ. ಉಳಿದ ಕಾಮಗಾರಿಗಳಿಗೆ ವೇಗ ನೀಡಿ ಮುಂದಿನ 6 ತಿಂಗಳಲ್ಲಿ ಪೂರ್ಣಗೊಳಿಸುವಂತೆ ಸೂಚನೆ ನೀಡಲಾಗಿದೆ. ವೈಜ್ಞಾನಿಕ ರೀತಿಯಲ್ಲಿ ರಸ್ತೆಗಳನ್ನು ನಿರ್ಮಿಸುವುದರ ಜತೆಗೆ ಗುಣಮಟ್ಟದ ಪಾದಚಾರಿ ಮಾರ್ಗಗಳನ್ನೂ ನಿರ್ಮಿಸಲಾಗುತ್ತಿದೆ. ವೈಟ್ ಟಾಪಿಂಗ್ ಕಾಮಗಾರಿ ನಿರ್ವಹಿಸುತ್ತಿರುವ ಗುತ್ತಿಗೆದಾರರಿಗೆ ಅನುದಾನ ಬಿಡುಗಡೆ ಮಾಡುವಲ್ಲಿ ಯಾವುದೇ ಸಮಸ್ಯೆ ಇಲ್ಲ. ಅಧಿಕಾರಿಗಳು ಗುತ್ತಿಗೆದಾರರ ಮೇಲೆ ಸೂಕ್ತ ಒತ್ತಡ ಹೇರಿ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು,'' ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು.

ಸುರಕ್ಷತಾ ಕ್ರಮ ಕಟ್ಟುನಿಟ್ಟಾಗಿ ಪಾಲಿಸಿ: ''ವೈಟ್ ಟಾಪಿಂಗ್ ಕಾಮಗಾರಿ ನಡೆಯುವ ಎಲ್ಲ ಸ್ಥಳಗಳಲ್ಲಿ ಅಗತ್ಯ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲು ಸೂಚಿಸಲಾಗಿದೆ. ಕಾಮಗಾರಿ ನಡೆಯುವ ಪ್ರದೇಶಗಳನ್ನು ಸಮರ್ಪಕವಾಗಿ ನಿರ್ವಹಿಸಬೇಕು. ರಸ್ತೆ ಬದಿಯಲ್ಲಿ ಸಾಮಗ್ರಿಗಳನ್ನು ರಾಶಿ ಹಾಕುವುದು, ಜೆಲ್ಲಿ ಹಾಕಿ ಹಾಗೆಯೇ ಬಿಡುವುದು ಹಾಗೂ ರಸ್ತೆ ಅಗೆದು ನಿರ್ಲಕ್ಷ್ಯ ವಹಿಸುವುದರಿಂದ ಸಂಚಾರ ದಟ್ಟಣೆ ಹೆಚ್ಚಾಗುತ್ತಿದೆ. ಆದ್ದರಿಂದ ಗುರಿ ನಿಗದಿಪಡಿಸಿ ಹಂತಹಂತವಾಗಿ ಕಾಮಗಾರಿ ಪೂರ್ಣಗೊಳಿಸಬೇಕು. ಸಾರ್ವಜನಿಕರ ಸಮಸ್ಯೆಗಳನ್ನು ಅರಿತು ಕಾರ್ಯ ನಿರ್ವಹಿಸಬೇಕು. ಸ್ಥಳ ಪರಿಶೀಲನೆ ವೇಳೆ ಸಮಸ್ಯೆ ಕಂಡು ಬಂದರೆ ಅವುಗಳನ್ನು ತಕ್ಷಣ ಪರಿಹರಿಸಬೇಕು,'' ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು. »08

ಸುರಂಗ ಮಾರ್ಗ ಯೋಜನೆ

''ಉತ್ತರ-ದಕ್ಷಿಣ ದಿಕ್ಕಿನಲ್ಲಿ 16.7 ಕಿ.ಮೀ. ಉದ್ದದ ಸುರಂಗ ಮಾರ್ಗ ನಿರ್ಮಾಣಕ್ಕೆ ಈಗಾಗಲೇ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ ಸರಕಾರದ ಅನುಮೋದನೆಗೆ ಕಳುಹಿಸಲಾಗಿದೆ. ಸಚಿವ ಸಂಪುಟದ ಅನುಮೋದನೆಯ ಬಳಿಕ ಯೋಜನೆ ಅನುಷ್ಠಾನಗೊಳ್ಳಲಿದೆ. ಇದು ಸಂಕೀರ್ಣ ಹಾಗೂ ಮಹತ್ವದ ಯೋಜನೆಯಾಗಿದ್ದು, ಮುಂದಿನ ದಿನಗಳಲ್ಲಿ ಅದರ ಸಂಪೂರ್ಣ ವಿವರಗಳನ್ನು ಹಂಚಿಕೊಳ್ಳಲಾಗುವುದು. ಅದೇ ರೀತಿ ಪೂರ್ವ-ಪಶ್ಚಿಮ ಸುರಂಗ ಮಾರ್ಗ ಯೋಜನೆಯಡಿ ಹಳೆ ಮದ್ರಾಸ್ ರಸ್ತೆಯಿಂದ ಮೈಸೂರು ರಸ್ತೆಯವರೆಗೆ 22 ಕಿ.ಮೀ. ಉದ್ದದ ಸುರಂಗ ಮಾರ್ಗ ನಿರ್ಮಾಣಕ್ಕೆ ಮುಂದಿನ ಹಂತದಲ್ಲಿ ಟೆಂಡರ್ ಆಹ್ವಾನಿಸಲಾಗುವುದು,'' ಎಂದು ಸಚಿವರು ತಿಳಿಸಿದರು.

150 ಕಿ.ಮೀ. ಎಲಿವೇಟೆಡ್ ಕಾರಿಡಾರ್

''ನಗರದ ಸಂಚಾರ ದಟ್ಟಣೆಗೆ ದೀರ್ಘಾವಧಿಯ ಪರಿಹಾರ ಕಲ್ಪಿಸುವ ಉದ್ದೇಶದಿಂದ 150 ಕಿ.ಮೀ. ಉದ್ದದ ಎಲಿವೇಟೆಡ್ ಕಾರಿಡಾರ್‌ಗಳನ್ನು ನಿರ್ಮಿಸುವ ಗುರಿ ಹೊಂದಲಾಗಿದೆ. ಇದರಲ್ಲಿ 75 ಕಿ.ಮೀ. ಉದ್ದದ ಕಾರಿಡಾರ್ ನಿರ್ಮಾಣಕ್ಕೆ ಟೆಂಡರ್ ಕರೆಯಲು ತೀರ್ಮಾನಿಸಲಾಗಿದೆ. ಇದಕ್ಕೆ ಅಗತ್ಯವಿರುವ ಪೂರ್ವ ಸಿದ್ಧತೆ ಮಾಡಿಕೊಳ್ಳಲಾಗಿದೆ,'' ಎಂದರು.

ಕಿತ್ತು ಹಾಕಲು ವೈಟ್‌ಟಾಪಿಂಗ್ ಮಾಡುವುದೇಕೆ?

ನಗರದಲ್ಲಿ ಬಿ-ಸ್ಮೈಲ್ ವತಿಯಿಂದ ಕೈಗೆತ್ತಿಕೊಂಡಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಸೋಮವಾರ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಸಚಿವ ಕೃಷ್ಣ ಬೈರೇಗೌಡ, ಅಧಿಕಾರಿಗಳನ್ನು ಹಿಗ್ಗಾಮುಗ್ಗಾ ಜಾಡಿಸಿದರು.

ಸಚಿವರ ಪ್ರಶ್ನೆಗೆ ಅಧಿಕಾರಿಗಳು ನಿರುತ್ತರ

ಬೆಂಗಳೂರಿನ ದೀರ್ಘಕಾಲದ ಸಂಚಾರ ದಟ್ಟಣೆ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಕುರಿತು ಅಧಿಕಾರಿಗಳೊಂದಿಗೆ ಸುದೀರ್ಘ ಚರ್ಚೆ ನಡೆಸಿದ ಅವರು, ''ನೂರಾರು ಕೋಟಿ ಖರ್ಚು ಮಾಡಿದರೂ ನಗರದಲ್ಲಿನ ಫುಟ್‌ಪಾತ್-ಸರ್ವೀಸ್ ರಸ್ತೆಗಳ ನಿರ್ಮಾಣವನ್ನು ಕನಿಷ್ಠ ವೈಜ್ಞಾನಿಕವಾಗಿ ನಿರ್ಮಿಸಿಲ್ಲವೇಕೆ?,'' ಎಂದು ಅಧಿಕಾರಿಗಳ ವಿರುದ್ಧ ಅಸಮಾಧಾನ ಹೊರಹಾಕಿದರು.

''ವಿವಿಧ ರಸ್ತೆಗಳಲ್ಲಿ ಎಲಿವೇಟೆಡ್ ಕಾರಿಡಾರ್, ಮೇಲ್ಸೇತುವೆ ನಿರ್ಮಾಣ ಆಗಲಿವೆ ಎಂಬ ಮಾಹಿತಿಯಿದ್ದರೂ ಅಲ್ಲಿ ವೈಟ್‌ಟಾಪಿಂಗ್ ಮಾಡಿದ್ದೇಕೆ? ಆನಂತರ ಮೇಲ್ಸೇತುವೆ, ಎಲಿವೇಟೆಡ್ ಕಾರಿಡಾರ್ ಕಾರಣಕ್ಕೆ ಮತ್ತೆ ವೈಟ್ ಟಾಪಿಂಗ್ ಕಿತ್ತು ಹಾಕೋದು ಯಾರಿಗೆ ಬಿಲ್ ಮಾಡೋಕೆ? '' ಎಂದು ಪ್ರಶ್ನಿಸಿದರು.

ಸಚಿವರ ಪ್ರಶ್ನೆಗಳಿಗೆ ಉತ್ತರಿಸಲಾಗದೆ ಅಧಿಕಾರಿಗಳು, ಎಂಜಿನಿಯರ್‌ಗಳು ತಡಬಡಾಯಿಸಿದರು. ಆಗ ಸಚಿವರು, ''ಭವಿಷ್ಯದಲ್ಲಿ ಇಂತಹ ಲೋಪ ದೋಷಗಳಾಗದಂತೆ ಎಚ್ಚರ ವಹಿಸಬೇಕು. ಇಲ್ಲದಿದ್ದರೆ, ಅಂತಹ ಅಧಿಕಾರಿಗಳ ವಿರುದ್ಧ ಮುಲಾಜಿಲ್ಲದೆ ಕ್ರಮ ಕೈಗೊಳ್ಳಲಾಗುವುದು,'' ಎಂದು ಖಡಕ್ ಎಚ್ಚರಿಕೆ ನೀಡಿದರು.

''ಈಗಾಗಲೇ ಕೈಗೊಂಡಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಸಮಗ್ರ ಯೋಜನೆ ರೂಪಿಸಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕು. ಸಂಚಾರ ಸಮಸ್ಯೆಗಳಿಗೆ ದೀರ್ಘಾವಧಿಯ ಪರಿಹಾರ ಒದಗಿಸಲು ಕೈಗೆತ್ತಿಕೊಳ್ಳಬೇಕಾದ ಕಾರ್ಯಕ್ರಮಗಳ ಕುರಿತು ಸಿಎಂ ಅವರು ಈಗಾಗಲೇ ನೀಲನಕ್ಷೆ ರೂಪಿಸಿದ್ದು, ಅನೇಕ ಯೋಜನೆಗಳು ಅನುಷ್ಠಾನದ ಹಂತದಲ್ಲಿವೆ. ನಾನು ಯಾವುದೇ ಹೊಸ ಸಲಹೆ-ಸೂಚನೆ ನೀಡಿಲ್ಲ, ಈಗಾಗಲೇ ರೂಪಿಸಿರುವ ಯೋಜನೆಗಳನ್ನು ತ್ವರಿತಗತಿಯಲ್ಲಿ ಮತ್ತು ಸಮರ್ಪಕವಾಗಿ ಅನುಷ್ಠಾನಗೊಳಿಸಬೇಕು,'' ಎಂದರು.

ಪಾನಮತ್ತ ವಾಹನ ಚಾಲನೆ: 669 ಮಂದಿ ವಿರುದ್ಧ ಪ್ರಕರಣ

ಬೆಂಗಳೂರು: ರಾಜಧಾನಿಯಲ್ಲಿ ಪಾನಮತ್ತರಾಗಿ ವಾಹನ ಚಾಲನೆ ಮಾಡುವ ಚಾಲಕರ ಪತ್ತೆಗಾಗಿ ಜೂ.15ರಿಂದ 21ರವರೆಗೆ ವಿಶೇಷ ಕಾರ್ಯಾಚರಣೆ ನಡೆಸಿದ ಸಂಚಾರ ಪೊಲೀಸರು, 669 ಚಾಲಕರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

43,057 ವಾಹನಗಳ ಚಾಲಕರ ತಪಾಸಣೆ

ನಗರದ 53 ಸಂಚಾರ ಠಾಣೆಗಳ ವ್ಯಾಪ್ತಿಯಲ್ಲಿ ಪೊಲೀಸರು ವಿವಿಧ ಮಾದರಿಯ 43,057 ವಾಹನಗಳ ಚಾಲಕರ ತಪಾಸಣೆ ಮಾಡಿದ್ದು, ಈ ಪೈಕಿ 669 ಮಂದಿ ಮದ್ಯಪಾನ ಮಾಡಿ ಚಾಲನೆ ಮಾಡುತ್ತಿದ್ದುದು ಪತ್ತೆಯಾಗಿದೆ. ಈ ಚಾಲಕರ ವಿರುದ್ಧ ಪಾನಮತ್ತ ಚಾಲನೆ ಆರೋಪದಡಿ ಪ್ರಕರಣ ದಾಖಲಿಸಿ, ದಂಡ ವಿಧಿಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಅಜಾಗರೂಕತೆಯಿಂದ ಅತಿ ವೇಗವಾಗಿ ವಾಹನ ಚಾಲನೆ ಮಾಡುತ್ತಿದ್ದ 46 ಚಾಲಕರ ವಿರುದ್ಧ ಪ್ರಕರಣ ದಾಖಲಿಸಿ, 46 ಸಾವಿರ ರೂ. ದಂಡ ಸಂಗ್ರಹಿಸಲಾಗಿದೆ. ನಗರದಲ್ಲಿ ಮದ್ಯಪಾನ ಮಾಡಿ ವಾಹನ ಚಲಾಯಿಸುವ ಹಾಗೂ ಅತಿ ವೇಗದಿಂದ ವಾಹನ ಚಲಾಯಿಸುವವರ ಹಾವಳಿ ತಡೆಗೆ ಮತ್ತು ರಸ್ತೆ ಸುರಕ್ಷತೆಗಾಗಿ ಇಂತಹ ಕಾರ್ಯಾಚರಣೆ ಮುಂದುವರಿಸಲಾಗುತ್ತದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಸಾಮಾನ್ಯ ಮಾಸಿಕ ಪಾಸ್‌ನ ದರ ಹೆಚ್ಚಿಸಿಲ್ಲ: ಬಿಎಂಟಿಸಿ ಸ್ಪಷ್ಟನೆ

■ **ವಿಕ ಸುದ್ದಿಲೋಕ** ಬೆಂಗಳೂರು

ಸಾಮಾನ್ಯ ಮಾಸಿಕ ಪಾಸ್‌ನ ದರದಲ್ಲಿ ಯಾವುದೇ ರೀತಿ ಹೆಚ್ಚಳವಾಗಿಲ್ಲ, ಬದಲಿಗೆ ವಿಸ್ತಾರ ಮಾರ್ಗಗಳ ಪ್ರಯಾಣಿಕರ ಅನುಕೂಲಕ್ಕಾಗಿ ಮಾತ್ರ ಸಾಮಾನ್ಯ ವಿಸ್ತಾರ ಪಾಸ್ ಪರಿಚಯಿಸಲಾಗಿದೆ. ಆದ್ದರಿಂದ ಪ್ರಯಾಣಿಕರು ಸುಳ್ಳು ಸುದ್ದಿಗೆ ಕಿವಿಗೊಡಬಾರದು ಎಂದು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (ಬಿಎಂಟಿಸಿ) ಮನವಿ ಮಾಡಿದೆ.

ಹೊಸ ಕಾರ್ಯಾಚರಣೆ ವ್ಯಾಪ್ತಿಯನ್ನು ಪರಿಣಾಮಕಾರಿಯಾಗಿ ನಿರ್ವಹಿಸುವ ಉದ್ದೇಶದಿಂದ ನಗರದ ಕೇಂದ್ರ ಭಾಗದಿಂದ ಸುಮಾರು 40 ಕಿ.ಮೀ.ವರೆಗಿನ ಪ್ರದೇಶವನ್ನು 'ಸೀಮಿತ ವ್ಯಾಪ್ತಿ' ಹಾಗೂ ಅದರಾಚೆಗಿನ ಪ್ರದೇಶವನ್ನು 'ವಿಸ್ತಾರ ವ್ಯಾಪ್ತಿ' ಎಂದು ವರ್ಗೀಕರಿಸಲಾಗಿದೆ. ಹಾಗಾಗಿ, ಸಾರ್ವಜನಿಕರ ಹಿತದೃಷ್ಟಿಯಿಂದ ಈಗಾಗಲೇ ಜಾರಿಯಲ್ಲಿರುವ ವಿವಿಧ ಪಾಸುಗಳನ್ನು ಸೀಮಿತ ವ್ಯಾಪ್ತಿಯವರೆಗೆ ಯಾವುದೇ ಬದಲಾವಣೆ ಇಲ್ಲದೆ ಮುಂದುವರಿಸಲಾಗಿದೆ. ಆದರೆ, ಹೊಸದಾಗಿ ವಿಸ್ತರಿಸಿರುವ ಮಾರ್ಗಗಳಲ್ಲಿ ಪ್ರಯಾಣಿಸುವ ಪ್ರಯಾಣಿಕರ ಅನುಕೂಲಕ್ಕಾಗಿ ಮಾತ್ರ 2026ರ ಜೂ. 2ರಿಂದ 'ಸಾಮಾನ್ಯ ವಿಸ್ತಾರ' ದೈನಿಕ, ಸಾಪ್ತಾಹಿಕ ಹಾಗೂ ಮಾಸಿಕ ಪಾಸ್‌ಗಳನ್ನು ಪರಿಚಯಿಸಲಾಗಿದೆ ಎಂದು ಬಿಎಂಟಿಸಿ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ. »08

ಜೂ.2ರಿಂದ 21ರವರೆಗೆ ಸಾಮಾನ್ಯ ವಿಸ್ತಾರ ಪಾಸುಗಳ ಮಾರಾಟದ ವಿವರಗಳು

- ಸಾಮಾನ್ಯ ವಿಸ್ತಾರ ದೈನಿಕ ಪಾಸ್ (120 ರೂ.) 29
- ಸಾಮಾನ್ಯ ವಿಸ್ತಾರ ಸಾಪ್ತಾಹಿಕ ಪಾಸ್ (550 ರೂ.) 3
- ಸಾಮಾನ್ಯ ಮಾಸಿಕ ಪಾಸ್ (1,200 ರೂ.) 60,400
- ಸಾಮಾನ್ಯ ವಿಸ್ತಾರ ಮಾಸಿಕ ಪಾಸ್ (1,500 ರೂ.) 160

ಫ್ರೀಡಂ ಪಾರ್ಕ್‌ನಲ್ಲಿ ವಿದ್ಯುತ್ ಗುತ್ತಿಗೆದಾರರ ಬೃಹತ್ ಪ್ರತಿಭಟನೆ

ವಿದ್ಯುತ್ ವಿತರಣಾ ಜಾಲ ಖಾಸಗೀಕರಣಕ್ಕೆ ವಿರೋಧ

■ **ವಿಕ ಸುದ್ದಿಲೋಕ** ಬೆಂಗಳೂರು

ರಾಜ್ಯದಲ್ಲಿ ವಿದ್ಯುತ್ ವಿತರಣಾ ಜಾಲದ ಖಾಸಗೀಕರಣಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿರುವ ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದ ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಬೃಹತ್ ಪ್ರತಿಭಟನೆ ನಡೆಸಿದರು.

ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧೆಡೆಯಿಂದ ಆಗಮಿಸಿದ್ದ ವಿದ್ಯುತ್ ಗುತ್ತಿಗೆದಾರರು ಪ್ರತಿಭಟನೆಯಲ್ಲಿ ಪಾಲ್ಗೊಂಡು ಸರಕಾರದ ವಿರುದ್ಧ ಘೋಷಣೆ ಕೂಗಿದರು. ವಿದ್ಯುತ್ ವಿತರಣಾ ಜಾಲವನ್ನು ಯಾವುದೇ ಕಾರಣಕ್ಕೂ ಖಾಸಗೀಕರಣ ಮಾಡಬಾರದು ಎಂದು ಒಕ್ಕೊರಲ ಆಗ್ರಹ ಮಾಡಿದರು.

ಪ್ರತಿಭಟನೆಯ ನೇತೃತ್ವ ವಹಿಸಿದ್ದ ಸಂಘದ ಅಧ್ಯಕ್ಷ ಸಿ.ರಮೇಶ್ ಮಾತನಾಡಿ, ''ಟಾಟಾ ಕಂಪನಿಗಾಗಿ ವಿದ್ಯುತ್ ಇಲಾಖೆಯನ್ನು ಖಾಸಗೀಕರಣ ಮಾಡುವುದು ಸರಿಯಲ್ಲ. ಜತೆಗೆ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ವಿದ್ಯುತ್ ಗುತ್ತಿಗೆದಾರರ ಅವಶ್ಯಕತೆ ಇಲ್ಲ ಎಂದು ಪತ್ರ ಸಿದ್ಧಪಡಿಸಿದ್ದಾರೆ. ಇದರಿಂದ ಸುಮಾರು 69 ಸಾವಿರ ವಿದ್ಯುತ್ ಗುತ್ತಿಗೆದಾರರ ಜೀವನ ದುಸ್ತರವಾಗುತ್ತದೆ. ಗ್ರಾಮೀಣ ಭಾಗಗಳ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿ ಅಭಿವೃದ್ಧಿಗೆ ಹಿನ್ನಡೆಯಾಗುತ್ತದೆ. ದುರ್ಬಲ ವರ್ಗಗಳಿಗೆ ಸರಕಾರ ನೀಡುತ್ತಿರುವ ಸೌಲಭ್ಯಗಳ ಮೇಲೆ ಪ್ರತಿಕೂಲ ಪರಿಣಾಮ ಬೀಳುತ್ತದೆ. ಅಲ್ಲದೆ, ವಿದ್ಯುತ್ ಕ್ಷೇತ್ರದ ಸಿಬ್ಬಂದಿ, ಗುತ್ತಿಗೆದಾರರು ಹಾಗೂ ಸಂಬಂಧಿತ ವಲಯಗಳಲ್ಲಿ ಕಾರ್ಯನಿರ್ವಹಿಸುವ ಸಾವಿರಾರು ಮಂದಿ ಉದ್ಯೋಗ ಕಳೆದುಕೊಳ್ಳಬೇಕಾಗುತ್ತದೆ,'' ಎಂದು ವಿವರಿಸಿದರು.

''ಸಾರ್ವಜನಿಕ ಹಿತಕ್ಕಿಂತ ಲಾಭದ ಉದ್ದೇಶ ಹೆಚ್ಚಾಗಿ ಸೇವಾ ಗುಣಮಟ್ಟ ಕುಸಿಯುವುದರ ಜತೆಗೆ ವಿದ್ಯುತ್ ಬಿಲ್‌ಗಳು, ಸೇವಾ ಶುಲ್ಕಗಳು ಹೆಚ್ಚಾಗಿ ಗ್ರಾಹಕರಿಗೆ ಹೆಚ್ಚುವರಿ ಭಾರ ಬೀಳಲಿದೆ. ಈ ನಿಟ್ಟಿನಲ್ಲಿ 150 ಕಿಲೋ ವಾಟ್‌ವರೆಗೂ ಗುತ್ತಿಗೆದಾರರು ಬೇಡ ಎಂಬ ಪ್ರಸ್ತಾವನೆಯನ್ನು ಸರಕಾರ ಕೂಡಲೇ ಕೈಬಿಡಬೇಕು. ಪರವಾನಗಿ ಪಡೆದ ವಿದ್ಯುತ್ ಗುತ್ತಿಗೆದಾರರಿಂದಲೇ ವಿದ್ಯುತ್ ಕಾಮಗಾರಿ ನಿರ್ವಹಿಸಬೇಕೆಂಬ ಆದೇಶವನ್ನು ಮುಂದುವರಿಸಬೇಕು. ವಿದ್ಯುತ್ ಗುತ್ತಿಗೆದಾರರು ನಿರ್ವಹಿಸಿರುವ ಕಾಮಗಾರಿಗಳಿಗೆ ಅವರಿಂದಲೇ ಸಮಾಪನ ವರದಿ ಸಲ್ಲಿಸುವುದನ್ನು ಮುಂದುವರಿಸಬೇಕು. ಸಂಘದಲ್ಲಿರುವ 69 ಸಾವಿರಕ್ಕೂ ಅಧಿಕ ಸದಸ್ಯರ ಹಿತ ಕಾಪಾಡಬೇಕು,'' ಎಂದು ಒತ್ತಾಯಿಸಿದರು.

ಕೃಷಿ ಕ್ಷೇತ್ರಕ್ಕೆ ನಷ್ಟ

ವಿದ್ಯುತ್ ಕ್ಷೇತ್ರ ಖಾಸಗೀಕರಣಗೊಳಿಸಿದರೆ ಅನೇಕ ಸಮಸ್ಯೆ ಎದುರಿಸಬೇಕಾಗುತ್ತದೆ. ಗೃಹ ಜ್ಯೋತಿ ಯೋಜನೆಯ ಫಲಾನುಭವಿಗಳಿಗೆ ಉಚಿತ ವಿದ್ಯುತ್ ಸೌಲಭ್ಯಕ್ಕೆ ತೊಂದರೆ ಉಂಟಾಗುತ್ತದೆ. ವಿದ್ಯುತ್ ಉತ್ಪಾದನಾ ವೆಚ್ಚ ಮತ್ತು ಹೆಚ್ಚಳದಿಂದ ವಿದ್ಯುತ್ ದರಗಳು ಮತ್ತಷ್ಟು ಏರಿಕೆಯಾಗುತ್ತವೆ. ಕೃಷಿ ಪಂಪ್‌ಸೆಟ್‌ಗಳಿಗೆ ನೀಡಲಾಗುತ್ತಿರುವ ಉಚಿತ ಮತ್ತು ರಿಯಾಯಿತಿ ವಿದ್ಯುತ್ ಸೌಲಭ್ಯಗಳು ಕಡಿಮೆ ಆಗುತ್ತವೆ ಅಥವಾ ರದ್ದಾಗುತ್ತವೆ. ಇದರಿಂದ ಕೃಷಿ ಕ್ಷೇತ್ರಕ್ಕೆ ದೊಡ್ಡ ನಷ್ಟವಾಗಲಿದೆ. ರೈತರು ಸಂಕಷ್ಟಕ್ಕೆ ಸಿಲುಕಲಿದ್ದಾರೆ ಎಂದು ಪ್ರತಿಭಟನಾಕಾರರು ಸರಕಾರದ ಗಮನಸೆಳೆದರು.

ರಿಹ್ಯಾಬ್ ಕೇಂದ್ರದ ಮಾಲೀಕನ ಕೊಲೆ ತನಿಖೆ ಚುರುಕು

ಎಂಟು ಮಂದಿ ವ್ಯಸನಿಗಳಿಂದ ಡೆಡ್ಲಿ ಅಟ್ಯಾಕ್ | ಮಾಲೀಕನ ಕೊಂದು ಕಾರು ಕದ್ದು ಪರಾರಿ
ಸಿನಿಮಾ ಶೈಲಿಯಲ್ಲಿಯೇ ಕೊಲೆಗೈದ ವ್ಯಸನಿಗಳ ತಂಡ | ಕೊಲೆಯ ಕಾರಣ ಇನ್ನೂ ನಿಗೂಢ

■ **ವಿಕ ಸುದ್ದಿಲೋಕ** ಬೆಂಗಳೂರು

ಮದ್ಯ ಹಾಗೂ ಡ್ರಗ್ಸ್ ವ್ಯಸನಿಗಳ ಗುಂಪು ರಿಹ್ಯಾಬ್ ಕೇಂದ್ರದ ಮಾಲೀಕನನ್ನು ಬರ್ಬರವಾಗಿ ಕೊಲೆಗೈದು ಪರಾರಿಯಾಗಿದ್ದ ಪ್ರಕರಣದ ತನಿಖೆಯನ್ನು ಪೊಲೀಸರು ಚುರುಕುಗೊಳಿಸಿದ್ದಾರೆ.


ಶಿವಲಿಂಗು

ದೀಪಾಂಜಲಿನಗರದ ನ್ಯೂ ಲೈಫ್ ರಿಹ್ಯಾಬ್ ಕೇಂದ್ರದ ಮಾಲೀಕ ಶಿವಲಿಂಗು (62) ಅವರನ್ನು ಅಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ವ್ಯಸನಿಗಳೇ ಕೊಲೆಗೈದು ಪರಾರಿಯಾಗಿದ್ದರು. ಆರೋಪಿಗಳಿಂದ ಚಾಕು, ಕಬ್ಬಿಣದ ರಾಡ್‌ನಿಂದ ಹಲ್ಲೆಗೊಳಗಾಗಿ ಬದುಕುಳಿದಿರುವ ಕೇಂದ್ರದ ಸ್ವಯಂಸೇವಕ ಪಿ.ವಿಕ್ರಂ ರೆಡ್ಡಿ (48) ಅವರಿಗೆ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರಿದಿದೆ.

ಕೃತ್ಯದಲ್ಲಿ ವ್ಯಸನಿಗಳಾದ ನಿತಿನ್, ಚೇತನ್, ಸುಹೈಲ್ ಪಾಷಾ, ಮಯೂರ್, ಕಾರ್ತಿಕ್, ಪವನ್, ಚರಣ್, ಹರ್ಷಿತ್ ಭಾಗಿಯಾಗಿದ್ದು, ಅವರ ಬಂಧನಕ್ಕೆ ಕಾರ್ಯಾಚರಣೆ ಮುಂದುವರಿದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ರಿಹ್ಯಾಬ್ ಸೆಂಟರ್‌ನಲ್ಲಿ ಸೂಕ್ತ ವಸತಿ ಹಾಗೂ ಊಟ ನೀಡುತ್ತಿರಲಿಲ್ಲ ಎಂಬುದೂ ಸೇರಿದಂತೆ ಹಲವು ಕಾರಣಗಳಿಂದ ಬೇಸತ್ತು ಮಾಲೀಕನನ್ನು ವ್ಯಸನಿಗಳು

> **ರಿಹ್ಯಾಬ್ ಸೆಂಟರ್ ಮಾಲೀಕನ ಕೊಲೆ ಪ್ರಕರಣದ ತನಿಖೆ ಪ್ರಗತಿಯಲ್ಲಿದ್ದು, ಆರೋಪಿಗಳ ಬಂಧನಕ್ಕೆ ಕ್ರಮ ವಹಿಸಲಾಗಿದೆ. ತನಿಖೆ ಬಳಿಕವಷ್ಟೇ ಕೊಲೆಗೆ ನಿಖರ ಕಾರಣ ಗೊತ್ತಾಗಲಿದೆ.**
> **- ಎಸ್.ಯತೀಶ್** ಡಿಸಿಪಿ, ಪಶ್ಚಿಮ ವಿಭಾಗ

ಸಂಚು ರೂಪಿಸಿ ಕೊಲೆಗೈದಿರುವ ಅನುಮಾನವಿದೆ. ತನಿಖೆ ಬಳಿಕ ಈ ಬಗ್ಗೆ ಸ್ಪಷ್ಟತೆ ಸಿಗಲಿದೆ ಎಂದು ಮೂಲಗಳು ಹೇಳಿವೆ.

ಹಾಡಹಗಲೇ ಬರ್ಬರ ಕೊಲೆ: ಎರಡನೇ ಮಹಡಿಯಲ್ಲಿರುವ ವ್ಯಸನಿಗಳ ಕೊಠಡಿಯ ನಿರ್ವಹಣೆಯನ್ನು ನಿತಿನ್ ನಿರ್ವಹಿಸುತ್ತಿದ್ದರು. ಕಳೆದ ಒಂದು ವಾರದಿಂದ ವ್ಯಸನಿಗಳ ನಿರ್ವಹಣೆ ಜವಾಬ್ದಾರಿ ಸ್ವಯಂಸೇವಕರಿಗೆ ನೀಡಲಾಗಿತ್ತು. ಎಲ್ಲರೂ ಕಟ್ಟಡಕ್ಕೆ ಬಣ್ಣ ಬಳಿಯುವ ಕೆಲಸ ಮಾಡುತ್ತಿದ್ದರು.

ಹೈದರಾಬಾದ್ ಮೂಲದ ಶಿವಲಿಂಗು ಕಳೆದ 15 ವರ್ಷಗಳಿಂದ ದೀಪಾಂಜಲಿ ನಗರದ ರೈಲ್ವೆ ಪ್ಯಾರಲಲ್ ರಸ್ತೆಯಲ್ಲಿ 'ನ್ಯೂ ಲೈಫ್ ರಿಹ್ಯಾಬ್' ಕೇಂದ್ರ ನಡೆಸುತ್ತಿದ್ದರು. ಮದ್ಯ ಹಾಗೂ ಡ್ರಗ್ಸ್ ವ್ಯಸನಿಗಳಿಗೆ ಕೇಂದ್ರದಲ್ಲಿ ಪುನರ್ವಸತಿ ಹಾಗೂ ಚಿಕಿತ್ಸೆ ನೀಡಲಾಗುತ್ತಿತ್ತು. ಎರಡು ಮಹಡಿಗಳಲ್ಲಿ ನಡೆಯುತ್ತಿದ್ದ ಈ ಕೇಂದ್ರದಲ್ಲಿ 10ಕ್ಕೂ ಹೆಚ್ಚು ವ್ಯಸನಿಗಳು ಚಿಕಿತ್ಸೆ ಪಡೆಯುತ್ತಿದ್ದರು.

ನೆಲಮಹಡಿಯ ಕಚೇರಿಯಲ್ಲಿ ಜೂ.19ರಂದು ಮಧ್ಯಾಹ್ನ 1 ಗಂಟೆ ಸುಮಾರಿಗೆ ಶಿವಲಿಂಗು ನಿದ್ರೆಗೆ ಜಾರಿದ್ದರು. ವಿಕ್ರಂ ರೆಡ್ಡಿ ಟಿ.ವಿ ನೋಡುತ್ತಿದ್ದರು. ಈ ಸಮಯದಲ್ಲಿ ಏಕಾಏಕಿ ಕೊಠಡಿಗೆ ನುಗ್ಗಿದ ಕಾರ್ತಿಕ್ ಮತ್ತು ಇತರ ವ್ಯಸನಿಗಳು, ಮೊದಲಿಗೆ ವಿಕ್ರಂ ರೆಡ್ಡಿ ಮೇಲೆ ರಾಡ್‌ನಿಂದ ಹಲ್ಲೆ ನಡೆಸಿ, ಮೊಣಕಾಲಿಗೆ ಹೊಡೆದಿದ್ದರು.

ಕಿರುಚಾಟದಿಂದ ಎಚ್ಚರಗೊಂಡ ಶಿವಲಿಂಗು ಮೇಲೆ ಮುಗಿಬಿದ್ದ ವ್ಯಸನಿಗಳು, ಚಾಕುವಿನಿಂದ ಇರಿದಿದ್ದಾರೆ. ಕಬ್ಬಿಣದ ರಾಡ್‌ನಿಂದ ಮನಸೋ ಇಚ್ಛೆ ಹಲ್ಲೆ ನಡೆಸಿದ್ದಾರೆ. ರಕ್ತದ ಮಡುವಿನಲ್ಲಿ ಬಿದ್ದಿದ್ದ ಶಿವಲಿಂಗು ಸ್ಥಳದಲ್ಲಿಯೇ ಕೊನೆಯುಸಿರೆಳೆದಿದ್ದಾರೆ.

ಶಿವಲಿಂಗು ಅವರನ್ನು ಕೊಲೆಗೈದ ಬಳಿಕ ವ್ಯಸನಿಗಳು ಥೇಟ್ ಸಿನಿಮಾ ಶೈಲಿಯಲ್ಲಿ ಅಲ್ಲಿದ್ದ ಕಾರು ಹಾಗೂ ಬೈಕ್‌ನಲ್ಲಿ ಪರಾರಿಯಾಗಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಹಲ್ಲೆಗೆ ಒಳಗಾಗಿ ಬದುಕುಳಿದ ವಿಕ್ರಂ ರೆಡ್ಡಿಯು ರಸ್ತೆಗೆ ಬಂದು ಸಹಾಯಕ್ಕೆ ಕಿರುಚಾಡಿದ್ದಾರೆ. ಸ್ಥಳೀಯರಿಂದ ಮೊಬೈಲ್ ಪಡೆದು ಪರಿಚಯಸ್ಥರಿಗೆ ಕರೆ ಮಾಡಿ ಬಳಿಕ ಆಸ್ಪತ್ರೆಗೆ ದಾಖಲಾಗಿದ್ದರು. ಆಸ್ಪತ್ರೆಯಲ್ಲಿಯೇ ವಿಕ್ರಂ ರೆಡ್ಡಿ ದೂರು ಪಡೆದು ಪ್ರಕರಣ ದಾಖಲಿಸಲಾಗಿದ್ದು, ತನಿಖೆ ಮುಂದುವರಿದಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಅಪರಾಧ ಸುದ್ದಿ

ಜಿಮ್ ಟ್ರೈನರ್ ಕೊಲೆಗೆ ಉದ್ಯಮಿ ಸುಪಾರಿ?

ಬೆಂಗಳೂರು ದಕ್ಷಿಣ: ಬನ್ನೇರುಘಟ್ಟ ಬಳಿ ಇತ್ತೀಚೆಗೆ ಶವವಾಗಿ ಪತ್ತೆಯಾಗಿದ್ದ ಜಿಮ್ ಟ್ರೈನರ್ ಕೊಲೆಗೆ ಉದ್ಯಮಿಯೊಬ್ಬರು ಸುಪಾರಿ ಕೊಟ್ಟಿದ್ದರು ಎಂಬ ಆರೋಪ ಕೇಳಿ ಬಂದಿದೆ. ಈ ನಡುವೆ ಪ್ರಕರಣ ಸಂಬಂಧ ನಾಲ್ವರನ್ನು ಬಂಧಿಸಲಾಗಿದೆ.

ವಿಜಯ್

ಜೂ.10ರಂದು ಬನ್ನೇರುಘಟ್ಟ ರಾಗಿಹಳ್ಳಿ ಬಳಿ ಜಿಮ್ ಟ್ರೈನರ್ ವಿಜಯ್ ಶವ ಪತ್ತೆಯಾಗಿತ್ತು. ಫೋನ್ ಕರೆ ಆಧಾರದಲ್ಲಿ ಬನ್ನೇರುಘಟ್ಟ ಪೊಲೀಸರು ಆನೇಕಲ್ ಪಟ್ಟಣದ ರೌಡಿಶೀಟರ್ ಶ್ರೀರಾಮ ಸೇರಿದಂತೆ ಹೊಸಕೋಟೆ ಮೂಲದ ಸುಮಿತ್, ವೆಂಕಟೇಶಯ್ಯ, ಬಾಬು ಎಂಬ ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ.

''ವಿವಾಹಿತನಾಗಿದ್ದ ವಿಜಯ್ ಉದ್ಯಮಿಯೊಬ್ಬರ ಪುತ್ರಿಯೊಂದಿಗೆ ಪ್ರೇಮ ಸಂಬಂಧ ಇಟ್ಟುಕೊಂಡಿದ್ದ. ಈ ಹಿನ್ನೆಲೆಯಲ್ಲಿ ಉದ್ಯಮಿ ಆನೇಕಲ್ ಮೂಲದ ವಕೀಲನ ಮೂಲಕ ಸುಪಾರಿ ನೀಡಿ ಕೊಲೆ ಮಾಡಿಸಿದ್ದಾರೆ,'' ಎಂದು ವಿಜಯ್ ಕುಟುಂಬಸ್ಥರು ಆರೋಪಿಸಿದ್ದಾರೆ.

ನಾಲ್ವರು ಆರೋಪಿಗಳ ಬಂಧನ

''ಮೂಲತಃ ಕೋಲಾರ ಜಿಲ್ಲೆ ಮುಳಬಾಗಿಲಿನ ವಿಜಯ್ ಕೆ.ಆರ್.ಪುರದಲ್ಲಿ ಜಿಮ್ ಟ್ರೈನರ್ ಆಗಿದ್ದ. 7 ವರ್ಷಗಳ ಹಿಂದೆ ಪ್ರೀತಿಸಿ ಮದುವೆಯಾಗಿದ್ದು, ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ಜಿಮ್ ಟ್ರೈನಿಂಗ್‌ಗೆಂದು ಬರುತ್ತಿದ್ದ ಉದ್ಯಮಿ ಪುತ್ರಿಯನ್ನು ವಿಜಯ್ ಪ್ರೀತಿಸಲಾರಂಭಿಸಿದ್ದ. ಇದೇ ವಿಚಾರಕ್ಕೆ ದಾಂಪತ್ಯದಲ್ಲಿ ಬಿರುಕು ಮೂಡಿ ಪತ್ನಿ ತವರು ಸೇರಿದ್ದಳು. ಈ ಮಧ್ಯೆ, ಉದ್ಯಮಿ ಪುತ್ರಿ, ವಿಜಯ್ ಇದ್ದಕ್ಕಿದ್ದಂತೆ ನಾಪತ್ತೆಯಾಗಿದ್ದರು. ಈ ಸಂಬಂಧ ಕೆ.ಆರ್.ಪುರಂ ಪೊಲೀಸ್ ಠಾಣೆಯಲ್ಲಿ ಮಿಸ್ಸಿಂಗ್ ಕೇಸ್ ದಾಖಲಾಗಿತ್ತು. 20 ದಿನಗಳ ಬಳಿಕ ಇಬ್ಬರನ್ನು ಪತ್ತೆ ಮಾಡಲಾಗಿತ್ತು.

''ಈ ಹಿಂದೆ ಠಾಣೆಯಲ್ಲಿ ಪ್ರಕರಣ ದಾಖಲಾದಾಗ ಠಾಣೆಗೆ ಬಂದ ಉದ್ಯಮಿ 'ಮಗಳ ತಂಟೆಗೆ ಬಂದರೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದರು,'' ಎಂದು ಕುಟುಂಬಸ್ಥರು ಹೇಳಿದ್ದಾರೆ. ನಾಪತ್ತೆ ಕೇಸ್ ಬಳಿಕ ವಿಜಯ್ ಎಲೆಕ್ಟ್ರಾನಿಕ್ ಸಿಟಿಗೆ ಶಿಫ್ಟ್ ಆಗಿ ಪಿಜಿಯಲ್ಲಿ ವಾಸವಿದ್ದು, ಜಿಮ್ ಟ್ರೈನರ್ ಆಗಿದ್ದ. ಆದರೂ ಯುವತಿಯು ವಿಜಯ್ ಸಂಪರ್ಕ ಬಿಟ್ಟಿರಲಿಲ್ಲ ಎನ್ನಲಾಗಿದೆ.

ಕೆಐಎಎಲ್‌ನಲ್ಲಿ ಭರ್ಜರಿ ಬೇಟೆ: ₹2 ಕೋಟಿ ಮೌಲ್ಯದ ಗಾಂಜಾ ಜಪ್ತಿ

■ **ವಿಕ ಸುದ್ದಿಲೋಕ** ಬೆಂಗಳೂರು

ರಾಜಧಾನಿಯ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ (ಕೆಐಎಎಲ್) ಭರ್ಜರಿ ಕಾರ್ಯಾಚರಣೆ ನಡೆಸಿರುವ ಸೀಮಾ ಸುಂಕ (ಕಸ್ಟಮ್ಸ್) ಅಧಿಕಾರಿಗಳು, ಬರೋಬ್ಬರಿ 2.09 ಕೋಟಿ ರೂ. ಮೌಲ್ಯದ ಹೈಡ್ರೋಪೋನಿಕ್ ಗಾಂಜಾ ವಶಪಡಿಸಿಕೊಂಡಿದ್ದಾರೆ.

ಬ್ಯಾಂಕಾಕ್‌ನಿಂದ ವಿಮಾನದಲ್ಲಿ ಬೆಂಗಳೂರಿನ ಕೆಐಎಎಲ್‌ಗೆ ಬಂದಿದ್ದ ಪ್ರಯಾಣಿಕ ತನ್ನ ಲಗೇಜ್ ಬ್ಯಾಗ್‌ನಲ್ಲಿ ಹೈಡ್ರೋಪೋನಿಕ್ ಗಾಂಜಾ ಅಡಗಿಸಿಟ್ಟುಕೊಂಡಿದ್ದ. ಆರೋಪಿಯಿಂದ 5 ಕೆ.ಜಿ. 980 ಗ್ರಾಂ ಹೈಡ್ರೋಪೋನಿಕ್ ಗಾಂಜಾ ಜಪ್ತಿ ಮಾಡಲಾಗಿದೆ.

15 ಕೆ.ಜಿ. ಗಾಂಜಾ ಜಪ್ತಿ : ರೈಲು ಪ್ರಯಾಣದ ಮೂಲಕ ನಗರಕ್ಕೆ ಗಾಂಜಾ ತರಿಸಿ ಮಾರುತ್ತಿದ್ದ ಒಡಿಶಾ ಮೂಲದ ಸಪನ್‌ಕುಮಾರ್ (37) ಎಂಬುವವನನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ಆರೋಪಿ ಬಳಿ ಸುಮಾರು 15 ಲಕ್ಷ ರೂ. ಮೌಲ್ಯದ 15 ಕೆ.ಜಿ. ಗಾಂಜಾ ಜಪ್ತಿ ಮಾಡಲಾಗಿದೆ.

ಉದ್ಯೋಗ ಅರಸಿ ನಗರಕ್ಕೆ ಬಂದಿದ್ದ ಸಪನ್‌ಕುಮಾರ್, ಅತ್ತಿಬೆಲೆಯ ರಾಘವನಗರದಲ್ಲಿ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದ. ಡೆಲಿವರಿ ಬಾಯ್ ಆಗಿದ್ದ ಸಪನ್‌ಗೆ ಸುಲಭವಾಗಿ ಹಣ ಸಂಪಾದಿಸುವ ಆಲೋಚನೆ ಹುಟ್ಟಿಕೊಂಡಿತ್ತು. ಈ ನಿಟ್ಟಿನಲ್ಲಿ ಗಾಂಜಾ ಮಾರಾಟ ದಂಧೆಯಲ್ಲಿ ಸಕ್ರಿಯನಾಗಿದ್ದ. ಒಡಿಶಾದ ತನ್ನೂರಿನ ಸುತ್ತಮುತ್ತಲ ಭಾಗದಲ್ಲಿ ಕಡಿಮೆ ಬೆಲೆಗೆ ಗಾಂಜಾ ಖರೀದಿಸಿ ಸಹಚರರಿಂದ ರೈಲು ಪ್ರಯಾಣದ ಮೂಲಕ ನಗರಕ್ಕೆ ತರಿಸುತ್ತಿದ್ದ. ಕೆಲವೊಮ್ಮೆ ಸ್ವತಃ ಸಪನ್, ಗಾಂಜಾ ತಂದು ಇಲ್ಲಿನ ಕಾಲೇಜು ವಿದ್ಯಾರ್ಥಿಗಳು ಹಾಗೂ ಉದ್ಯೋಗಿಗಳಿಗೆ ಮಾರಾಟ ಮಾಡುತ್ತಿದ್ದ.

ಸುಲ್ತಾನ್ ಡೈಮಂಡ್ಸ್ ಗೋಲ್ಡ್‌ನಲ್ಲಿ ವಿಶೇಷ ಕೊಡುಗೆಗಳು

ಬೆಂಗಳೂರು: ನಗರದ ಸುಲ್ತಾನ್ ಡೈಮಂಡ್ಸ್ ಆ್ಯಂಡ್ ಗೋಲ್ಡ್ ಶೋರೂಂಗಳಲ್ಲಿ ಮೇಕ್ ಇಂಡಿಯಾ ಸ್ಪ್ರಾಂಗ್ ವಿಶೇಷ ಆಫರ್ ಆರಂಭಗೊಂಡಿದ್ದು, ಚಿನ್ನ ಹಾಗೂ ವಜ್ರಾಭರಣ ಖರೀದಿಯಲ್ಲಿ ರಿಯಾಯಿತಿ ಮತ್ತು ವಿಶೇಷ ಕೊಡುಗೆ ಘೋಷಿಸಲಾಗಿದೆ.

ವಜ್ರಾಭರಣಗಳ ಮೌಲ್ಯದ ಮೇಲೆ ಶೇ.20ರವರೆಗೆ ರಿಯಾಯಿತಿ, ಚಿನ್ನಾಭರಣ ತಯಾರಿಕಾ ಶುಲ್ಕದ ಮೇಲೆ ಫ್ಲಾಟ್ ಶೇ.40ರಷ್ಟು ರಿಯಾಯಿತಿ ಹಾಗೂ ಹಳೆಯ ಚಿನ್ನ ವಿನಿಮಯದ ಮೇಲೆ ಪ್ರತಿ ಗ್ರಾಂಗೆ 100 ರೂ. ಹೆಚ್ಚುವರಿ ಸೇರಿದಂತೆ ಆಕರ್ಷಕ ಕೊಡುಗೆ ಪಡೆಯಬಹುದು. ಪ್ರತಿ ವಾರ ಲಕ್ಕಿ ಡ್ರಾ ಆಯೋಜಿಸುತ್ತಿದ್ದು, ಅದೃಷ್ಟಶಾಲಿ ವಿಜೇತರಿಗೆ ಟಿವಿ, ಫ್ರಿಡ್ಜ್ ಅಥವಾ ವಾಷಿಂಗ್ ಮೆಷಿನ್ ಬಹುಮಾನವಾಗಿ ನೀಡಲಾಗುತ್ತದೆ. ಹಳೆಯ ಚಿನ್ನವನ್ನು ಮಾರುಕಟ್ಟೆ ದರದಲ್ಲಿ ಮಾರಾಟ ಮಾಡಿ ತಕ್ಷಣವೇ ಹಣ ಪಾವತಿ ಪಡೆಯುವ ಸೌಲಭ್ಯವೂ ಲಭ್ಯವಿದೆ. ಈ ರಿಯಾಯಿತಿ, ಉಡುಗೊರೆ ಹಾಗೂ ಸಾಪ್ತಾಹಿಕ ಲಕ್ಕಿ ಡ್ರಾ ಕೊಡುಗೆಗಳು ಜು.31ರವರೆಗೆ ಲಭ್ಯವಿರುತ್ತವೆ.

ಜಯನಗರ 3ನೇ ಬ್ಲಾಕ್, ಹಲಸೂರು ರಸ್ತೆ, ಎಚ್‌ಬಿಆರ್ ಲೇಔಟ್ ಬ್ಯಾರೀಸ್ ಅಮಿಟಿ ಕಟ್ಟಡ, ಎಲೆಕ್ಟ್ರಾನಿಕ್ ಸಿಟಿ ಎಂ5 ಇಸಿಟಿ ಮಾಲ್‌ನಲ್ಲಿ ಸುಲ್ತಾನ್ ಡೈಮಂಡ್ಸ್ ಗೋಲ್ಡ್ ಶೋರೂಂಗಳಿವೆ ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ದರ ಹೆಚ್ಚಿಸಿಲ್ಲ: ಬಿಎಂಟಿಸಿ ಸ್ಪಷ್ಟನೆ

» ನಮ್ಮ ಮೊದಲ ಪುಟದಿಂದ

ಪ್ರಸ್ತುತ ಬಿಎಂಟಿಸಿ ಒಟ್ಟು 1,819 ಮಾರ್ಗಗಳಲ್ಲಿ 6,295 ಬಸ್‌ಗಳು ಕಾರ್ಯಾಚರಿಸುತ್ತಿದ್ದು, ಅವುಗಳಲ್ಲಿ 96 ಮಾರ್ಗಗಳ 216 ಬಸ್‌ಗಳು ವಿಸ್ತಾರ ವ್ಯಾಪ್ತಿಯಲ್ಲಿ ಸಂಚರಿಸುತ್ತಿವೆ. ಸಾಮಾನ್ಯ ಮಾಸಿಕ ಪಾಸನ್ನು ಹೆಚ್ಚಿನ ಸಂಖ್ಯೆಯ ಪ್ರಯಾಣಿಕರು ಎಂದಿನಂತೆ ಬಳಸುತ್ತಿದ್ದು, ಅದರ ದರದಲ್ಲಿ ಯಾವುದೇ ಹೆಚ್ಚಳ ಮಾಡಲಾಗಿಲ್ಲ. ಹೊಸದಾಗಿ ಪರಿಚಯಿಸಿರುವ 'ಸಾಮಾನ್ಯ ವಿಸ್ತಾರ' ಪಾಸ್‌ಗಳು ಕೇವಲ ವಿಸ್ತಾರ ವ್ಯಾಪ್ತಿಯ ಮಾರ್ಗಗಳಲ್ಲಿ ಸಂಚರಿಸುವ ಪ್ರಯಾಣಿಕರಿಗಾಗಿ ಮಾತ್ರ ಜಾರಿಗೊಳಿಸಲಾಗಿದೆ ಎಂದು ತಿಳಿಸಿದ್ದಾರೆ. ಬಿಎಂಟಿಸಿ ಕಾರ್ಯಾಚರಣೆಯ ವ್ಯಾಪ್ತಿಯನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಿಂದ 40 ಕಿ.ಮೀ.ವರೆಗೆ ವಿಸ್ತರಿಸಲಾಗಿದೆ. ಈ ನಿರ್ಧಾರದಿಂದಾಗಿ ನಗರದ ಕೇಂದ್ರ ಭಾಗದಿಂದ 40-42 ಕಿ.ಮೀ.ವರೆಗೆ ಕಾರ್ಯಾಚರಣೆಗೊಳ್ಳುತ್ತಿದ್ದ ಬಸ್ ಸೇವೆ ಈಗ 65 ಕಿ.ಮೀ.ನಿಂದ 70 ಕಿ.ಮೀ.ಗೆ ವಿಸ್ತರಣೆಯಾಗಿದೆ. ಈ ಹಿನ್ನೆಲೆಯಲ್ಲಿ ಕನಕಪುರ, ರಾಮನಗರ, ಚನ್ನಪಟ್ಟಣ, ಮಾಗಡಿ, ಚಿಕ್ಕಬಳ್ಳಾಪುರ, ಮಾಲೂರು ಸೇರಿದಂತೆ ಬೆಂಗಳೂರು ನಗರ ಸುತ್ತಮುತ್ತಲಿನ ಪ್ರಮುಖ ಜಿಲ್ಲಾ ಹಾಗೂ ತಾಲೂಕು ಕೇಂದ್ರಗಳಿಗೆ ಬಿಎಂಟಿಸಿ ಬಸ್ ಸೇವೆ ವಿಸ್ತರಣೆಯಾಗಿದೆ. ಇದರಿಂದ ಸಾವಿರಾರು ಪ್ರಯಾಣಿಕರಿಗೂ ಅನುಕೂಲವಾಗಿದೆ.

ಎಲ್ಲಿ-ಏನು? ಮಂಗಳವಾರ

ಕನ್ನಡ ಅಭಿವೃದ್ಧಿ ಪ್ರಾಧಿಕಾರ: ಸಂವಿಧಾನ ನುಡಿ ಸಂಹಿತೆ ಕೃತಿ ಲೋಕಾರ್ಪಣೆ. ಉದ್ಘಾಟನೆ ಹಾಗೂ ಕೃತಿ ಲೋಕಾರ್ಪಣೆ : ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ ವಿ.ಪಾಟೀಲ. ಅಧ್ಯಕ್ಷತೆ : ಪ್ರಾಧಿಕಾರದ ಅಧ್ಯಕ್ಷ ಡಾ.ಪುರುಷೋತ್ತಮ ಬಿಳಿಮಲೆ, ಕೃತಿ ಕುರಿತು ಮಾತು: ಪ್ರಾಧ್ಯಾಪಕ ಎ.ನಾರಾಯಣ. **ಸ್ಥಳ :** ನಯನ ಸಭಾಂಗಣ, ಕನ್ನಡ ಭವನ, ರವೀಂದ್ರ ಕಲಾಕ್ಷೇತ್ರ ಆವರಣ. ಬೆಳಗ್ಗೆ 11.

ರಂಗ ಪಯಣ ಟ್ರಸ್ಟ್ : ಡಿ.ಕೆ.ಚೌಟ ಅವರ ಕಾದಂಬರಿ ಆಧಾರಿತ ಮಿತ್ತಬೈಲ್ ಯಮುನಕ್ಕ ನಾಟಕ ಪ್ರದರ್ಶನ. **ಸ್ಥಳ:** ಕಲಾಗ್ರಾಮ, ಮಲ್ಲತ್ತಹಳ್ಳಿ. ಸಂಜೆ 7.

ಶ್ರೀ ರಾಘವೇಂದ್ರ ಸೇವಾ ಸಮಿತಿ: ಚಂದ್ರಶೇಖರ ಆಚಾರ್ಯರಿಂದ 'ಯಕ್ಷಪ್ರಶ್ನೆ' ವಿಷಯವಾಗಿ ಧಾರ್ಮಿಕ ಪ್ರವಚನ. **ಸ್ಥಳ :** ಮಠದ ಆವರಣ, 6ನೇ ಅಡ್ಡರಸ್ತೆ, ಈಜುಕೊಳ ಬಡಾವಣೆ. ಸಂಜೆ 7.

ಸೋಸಲೆ ವ್ಯಾಸರಾಜ ಮಠ: ದ್ವೈಪಾಯನಾಚಾರ್ಯರಿಂದ ಜಗನ್ನಾಥದಾಸರ ವಿರಚಿತ ಹರಿಕಥಾಮೃತಸಾರದ 'ಕರುಣಾಸಂಧಿ' ವಿಷಯವಾಗಿ ಧಾರ್ಮಿಕ ಪ್ರವಚನ. **ಸ್ಥಳ:** ಮಠದ ಆವರಣ, 5ನೇ ಮುಖ್ಯರಸ್ತೆ, ಸುಬ್ರಹ್ಮಣ್ಯನಗರ. ಸಂಜೆ 6

27,500 ರೂ. ದಂಡ ಕಟ್ಟಿದ ಬೈಕ್ ಸವಾರ

■ **ವಿಕ ಸುದ್ದಿಲೋಕ** ಬೆಂಗಳೂರು

ಸಂಚಾರ ನಿಯಮ ಉಲ್ಲಂಘನೆಗೆ ದಂಡ ಪಾವತಿಯಲ್ಲಿ ಶೇ. 50ರಷ್ಟು ರಿಯಾಯಿತಿಗೆ ಭರ್ಜರಿ ಸ್ಪಂದನೆ ವ್ಯಕ್ತವಾಗಿದ್ದು, ಎರಡು ದಿನಗಳಲ್ಲಿ ನಗರ ಸಂಚಾರ ಪೊಲೀಸ್ ವಿಭಾಗಕ್ಕೆ 2.24 ಕೋಟಿ ರೂ. ದಂಡ ಸಂದಾಯವಾಗಿದೆ.

ಜೂ.21 ಹಾಗೂ ಸೋಮವಾರ ನಗರದಾದ್ಯಂತ ವಾಹನ ಸವಾರರು 75,487 ಸಂಚಾರ ನಿಯಮಗಳ ಉಲ್ಲಂಘನೆಗೆ ಶೇ. 50ರಷ್ಟು ರಿಯಾಯಿತಿಯಲ್ಲಿ ದಂಡ ಪಾವತಿಸಿದ್ದಾರೆ. ಒಟ್ಟು 2,24,70,450 ರೂ. ದಂಡ ಸಂಗ್ರಹವಾಗಿದೆ ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ.

100 ಬಾರಿ ಸಂಚಾರ ನಿಯಮ ಉಲ್ಲಂಘನೆ!

ದಂಡ ರಿಯಾಯಿತಿ ಸದುಪಯೋಗ ಮಾಡಿಕೊಂಡಿರುವ ಬೈಕ್ ಸವಾರರೊಬ್ಬರು, ತಮ್ಮ ಬೈಕ್‌ಗೆ ಸಂಬಂಧಿಸಿದ 100 ಉಲ್ಲಂಘನೆ ಪ್ರಕರಣಗಳಿಗೆ ದಂಡ ಕಟ್ಟಿದ್ದಾರೆ. ರಾಜಾಜಿನಗರ ಸಂಚಾರ ಠಾಣೆಗೆ ಆಗಮಿಸಿದ್ದ ಬೈಕ್ ಸವಾರ ಒಟ್ಟು 27,500 ರೂ.ದಂಡ ಪಾವತಿಸಿದ್ದಾರೆ.

ದಂಡ ಕಟ್ಟಿರುವ ಸವಾರನು ವಿದ್ಯಾರ್ಥಿಯಾಗಿದ್ದು, ಹೆಲ್ಮೆಟ್ ರಹಿತ ಚಾಲನೆ ಸೇರಿದಂತೆ ವಿವಿಧ ಮಾದರಿಯ 100 ಸಂಚಾರ ನಿಯಮ ಉಲ್ಲಂಘನೆ ಮಾಡಿದ್ದ. ಈಗ ರಿಯಾಯಿತಿ ಇರುವುದನ್ನು ಅರಿತು ದಂಡ ಪಾವತಿಸಿದ್ದಾನೆ. ಮುಂದಿನ ದಿನಗಳಲ್ಲಿ ನಿಯಮ ಉಲ್ಲಂಘಿಸುವುದಿಲ್ಲ ಎಂದು ತಿಳಿಸಿದ್ದಾನೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಜೂನ್ 21ರಿಂದ ಜುಲೈ 10ರವರೆಗೆ ಶೇ. 50ರಷ್ಟು ರಿಯಾಯಿತಿ ದರದಲ್ಲಿ ವಾಹನ ಸವಾರರು ದಂಡ ಪಾವತಿಸಲು ಅವಕಾಶವಿದ್ದು, ವಾಹನ ಸವಾರರು ಇದರ ಅನುಕೂಲ ಪಡೆಯಬಹುದು.

ಸಾರ್ವಜನಿಕ ಸ್ಥಳದಲ್ಲಿ ಧೂಮಪಾನ: ಖಾಕಿ ದಂಡಾಸ್ತ್ರ

■ **ವಿಕ ಸುದ್ದಿಲೋಕ** ಬೆಂಗಳೂರು

ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡುತ್ತಿದ್ದವರ ವಿರುದ್ಧ ಈಶಾನ್ಯ ವಿಭಾಗದ ರಾಣಿ ಚೆನ್ನಮ್ಮ ಪಡೆ ಹಾಗೂ ಚಿಕ್ಕಜಾಲ ಪೊಲೀಸ್ ಠಾಣೆ ಸಿಬ್ಬಂದಿ ದಿಢೀರ್ ಕಾರ್ಯಾಚರಣೆ ನಡೆಸಿ, 10 ಮಂದಿ ವಿರುದ್ಧ ಪ್ರಕರಣ ದಾಖಲಿಸಿ ದಂಡ ವಿಧಿಸಿದ್ದಾರೆ.

ಬಸ್ ನಿಲ್ದಾಣಗಳು, ಪ್ರಮುಖ ವಾಣಿಜ್ಯ ಸಂಕೀರ್ಣಗಳ ಸುತ್ತಮುತ್ತಲಿನ ಪ್ರದೇಶಗಳು, ಸಾರ್ವಜನಿಕ ರಸ್ತೆಗಳ ಬದಿ ಹಾಗೂ ಜನಸಂದಣಿ ಸ್ಥಳಗಳಲ್ಲಿ ಸೋಮವಾರ ಮುಂಜಾನೆಯಿಂದಲೇ ಕಾರ್ಯಾಚರಣೆ ನಡೆಸಿದ ಪೊಲೀಸರು, ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡುತ್ತಿದ್ದವರ ವಿರುದ್ಧ ಕೋಟ್ಪಾ ಕಾಯಿದೆಯಡಿ ಪ್ರಕರಣ ದಾಖಲಿಸಿದ್ದಾರೆ. ಅಲ್ಲದೆ, ಅವರಿಗೆ ದಂಡ ವಿಧಿಸಿದ್ದಾರೆ.

ಸಿಗರೇಟ್ ಅಥವಾ ಬೀಡಿಗಳ ಜಾಹೀರಾತು ಪೋಸ್ಟರ್‌ಗಳನ್ನು ಕಾನೂನುಬಾಹಿರವಾಗಿ ಹಾಕಿದ್ದ ಅಂಗಡಿಗಳಿಗೆ ಪೊಲೀಸರು ದಿಢೀರ್ ಭೇಟಿ ಕೊಟ್ಟು ಪರಿಶೀಲನೆ ಮಾಡಿದರು. ಇದೇ ವೇಳೆ ಕೋಟ್ಪಾ ಕಾಯಿದೆ ಉಲ್ಲಂಘಿಸಿದವರ ವಿರುದ್ಧ ಪ್ರಕರಣ ದಾಖಲಿಸಿದರು. ಅಲ್ಲದೆ, ಧೂಮಪಾನ ನಿರ್ಬಂಧಿತ ಸ್ಥಳಗಳಲ್ಲಿ ಧೂಮಪಾನ ಮಾಡುತ್ತಿದ್ದವರಿಗೆ ದಂಡ ವಿಧಿಸಿದರು. ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಸೂಚನೆಯಂತೆ ಪೊಲೀಸರು ಈ ಕಾರ್ಯಾಚರಣೆ ನಡೆಸಿದರು.

ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡದಂತೆ ಪೊಲೀಸರು ಜನರಲ್ಲಿ ಜಾಗೃತಿ ಮೂಡಿಸಿದರು. ಜತೆಗೆ, ಧೂಮಪಾನದಿಂದ ಆರೋಗ್ಯದ ಮೇಲಾಗುವ ದುಷ್ಪರಿಣಾಮಗಳು, ಪರೋಕ್ಷವಾಗಿ ಸುತ್ತಮುತ್ತಲಿನ ಮಹಿಳೆಯರು, ಮಕ್ಕಳೂ ಸೇರಿದಂತೆ ಇತರೆ ಸಾರ್ವಜನಿಕರಿಗೆ ಆಗುವ ಆರೋಗ್ಯ ಸಮಸ್ಯೆಗಳ ಬಗ್ಗೆ ಮನವರಿಕೆ ಮಾಡಿಕೊಟ್ಟರು. ಕೋಟ್ಪಾ ಕಾಯಿದೆಯ ಕಠಿಣ ನಿಯಮಗಳ ಬಗ್ಗೆ ವಿವರಿಸಿ, ನಗರವನ್ನು ಆರೋಗ್ಯಕರವಾಗಿಸಲು ಸಹಕರಿಸುವಂತೆ ಮನವಿ ಮಾಡಿದರು.

ಪ್ರತ್ಯೇಕ ಅಪಘಾತ: ಮೂವರ ಸಾವು

ಬೆಂಗಳೂರು: ನಗರದ ಮೇಡಹಳ್ಳಿ, ಎಚ್‌ಎಂಟಿ ಲೇಔಟ್ ಹಾಗೂ ವರ್ತೂರಿನಲ್ಲಿ ಸಂಭವಿಸಿದ ಪ್ರತ್ಯೇಕ ಅಪಘಾತಗಳಲ್ಲಿ ಬ್ಯಾಂಕ್ ಉದ್ಯೋಗಿ ಸೇರಿದಂತೆ ಮೂವರು ಮೃತಪಟ್ಟಿದ್ದಾರೆ.

ಆವಲಹಳ್ಳಿ ಸಮೀಪದ ಮೇಡಹಳ್ಳಿ ಕೆರೆ ಬಳಿ ಸೋಮವಾರ ಬೆಳಗ್ಗೆ ರಸ್ತೆ ವಿಭಜಕಕ್ಕೆ ದ್ವಿಚಕ್ರ ವಾಹನ ಡಿಕ್ಕಿಯಾಗಿ ರಾಜೇಂದ್ರ (59) ಎಂಬುವವರು ಸಾವನ್ನಪ್ಪಿದ್ದಾರೆ. ಕನ್ನಮಂಗಲ ನಿವಾಸಿಯಾದ ಅವರು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ (ಎಸ್‌ಬಿಐ) ಎಂ.ಜಿ.ರಸ್ತೆ ಶಾಖೆಯಲ್ಲಿ ಕೆಲಸ ಮಾಡುತ್ತಿದ್ದರು. ಕೆ.ಆರ್.ಪುರ ಸಂಚಾರ ಠಾಣೆಯಲ್ಲಿ ದೂರು ದಾಖಲಾಗಿದೆ.

ಫಾರ್ಮಾ ಕಂಪನಿ ಉದ್ಯೋಗಿ ಸಾವು: ಯಶವಂತಪುರ ಬಳಿಯ ಎಚ್‌ಎಂಟಿ ಲೇಔಟ್‌ನಲ್ಲಿ ಸೋಮವಾರ ಬೆಳಗಿನ ಜಾವ ದ್ವಿಚಕ್ರ ವಾಹನಕ್ಕೆ ಟೆಂಪೊ ಟ್ರಾವೆಲರ್ ಡಿಕ್ಕಿಯಾಗಿ ಗೌರಿಶಂಕರ್ (34) ಎಂಬುವವರು ಸಾವನ್ನಪ್ಪಿದ್ದಾರೆ. ಹೇರೋಹಳ್ಳಿ ನಿವಾಸಿಯಾಗಿದ್ದ ಗೌರಿಶಂಕರ್, ತುಮಕೂರು ರಸ್ತೆಯ ಫಾರ್ಮಾ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಮುಖ್ಯ ರಸ್ತೆಯಲ್ಲಿ ನಿರ್ಲಕ್ಷ್ಯದಿಂದ ಅತಿ ವೇಗವಾಗಿ ಟೆಂಪೊ ಟ್ರಾವೆಲರ್ ಚಾಲನೆ ಮಾಡಿಕೊಂಡು ಹೋಗುತ್ತಿದ್ದ ಚಾಲಕ, ಅಡ್ಡ ರಸ್ತೆಯಿಂದ ದ್ವಿಚಕ್ರ ವಾಹನದಲ್ಲಿ ಬಂದ ಗೌರಿಶಂಕರ್‌ಗೆ ವಾಹನ ಗುದ್ದಿಸಿದ್ದಾನೆ. ಡಿಕ್ಕಿಯ ತೀವ್ರತೆಗೆ ಸುಮಾರು 40 ಅಡಿ ದೂರ ಹೋಗಿ ಬಿದ್ದ ಗೌರಿಶಂಕರ್ ಸ್ಥಳದಲ್ಲೇ ಉಸಿರು ಚೆಲ್ಲಿದ್ದಾರೆ. ಟೆಂಪೊ ಟ್ರಾವೆಲರ್ ಚಾಲಕನನ್ನು ಬಂಧಿಸಿ, ವಾಹನ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸೆಕ್ಯೂರಿಟಿ ಗಾರ್ಡ್ ದುರ್ಮರಣ: ವರ್ತೂರು-ಗುಂಜೂರು ಮುಖ್ಯ ರಸ್ತೆಯಲ್ಲಿ ಭಾನುವಾರ ರಾತ್ರಿ ನೀರಿನ ಟ್ಯಾಂಕರ್ ಡಿಕ್ಕಿಯಾಗಿ ಮಹೇಂದ್ರ ಕಪೇಂದ್ರ ಮಾಜೆ (42) ಎಂಬುವವರು ಮೃತಪಟ್ಟಿದ್ದಾರೆ. ನೇಪಾಳ ಮೂಲದ ಮಹೇಂದ್ರ, ವರ್ತೂರಿನಲ್ಲಿ ವಾಸವಾಗಿದ್ದರು. ಸೆಕ್ಯೂರಿಟಿ ಗಾರ್ಡ್ ಆಗಿದ್ದ ಅವರು, ಕೆಲಸ ಮುಗಿಸಿಕೊಂಡು ಮನೆಗೆ ನಡೆದು ಹೋಗುತ್ತಿದ್ದಾಗ ಅಪಘಾತ ಸಂಭವಿಸಿದೆ.

ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಪ್ರಯುಕ್ತ ಯಶವಂತಪುರ ಫೋರ್ಟಿಸ್ ಆಸ್ಪತ್ರೆಯು ಜಿಎಸ್‌ಬಿ ಸ್ಪೋರ್ಟ್ಸ್ ಅಸೋಸಿಯೇಶನ್ ವತಿಯಿಂದ ಮಲ್ಲೇಶ್ವರದಲ್ಲಿ ಸ್ಯಾರಿ ಮತ್ತು ಧೋತಿ ವಾಕಥಾನ್ ನಡೆಸಿತು. 2.5 ಕಿ.ಮೀ.ನ ವಾಕಥಾನ್‌ನಲ್ಲಿ 1200ಕ್ಕೂ ಹೆಚ್ಚು ಮಂದಿ ಪಾಲ್ಗೊಂಡು ಯೋಗ, ಆರೋಗ್ಯಕರ ಜೀವನಶೈಲಿ, ಸಮುದಾಯ ಆರೋಗ್ಯದ ಕುರಿತು ಜಾಗೃತಿ ಮೂಡಿಸಿದರು.

ಈಸ್ಟ್ ವೆಸ್ಟ್ ತಾಂತ್ರಿಕ ಮಹಾವಿದ್ಯಾಲಯ ಹಾಗೂ ಪತಂಜಲಿ ಯೋಗ ಶಿಕ್ಷಣ ಸಮಿತಿ ಸಹಯೋಗದಲ್ಲಿ ಕಾಲೇಜು ಆಟದ ಮೈದಾನದಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ನಡೆಯಿತು. ಯೋಗ ತರಬೇತಿದಾರ ಶಾಂತರಾಜ್, ಕಾಲೇಜು ಪ್ರಾಂಶುಪಾಲ ಡಾ.ನಾಗರಾಜ್ ಜಿ. ಚೊಳ್ಳಿ, ಡೀನ್ ಡಾ.ಮುರಳಿಶಂಕರ್ ಆರ್, ನಿರ್ದೇಶಕ (ಪ್ರವೇಶಾತಿ) ಡಾ.ಪುರುಷೋತ್ತಮ, ಆಯುರ್‌ಆಶ್ರಮದ ಡಾ.ಸಂತೋಷ್ ಗುರೂಜಿ, ಕಾಲೇಜು ವಿದ್ಯಾರ್ಥಿಗಳು, ಸಾರ್ವಜನಿಕರು, ಸಿಬ್ಬಂದಿ ಪಾಲ್ಗೊಂಡಿದ್ದರು.

ಕಾಕೋಳು ಸರಕಾರಿ ಶಾಲೆ ನವೀಕರಣ

ಹೊಸ ರೂಪ ಪಡೆದ ಕಾಕೋಳು ಗ್ರಾಮದ ಪಿಎಂ ಶ್ರೀ ಸರಕಾರಿ ಸಂಯುಕ್ತ ಪ್ರೌಢಶಾಲೆ.

ಯಲಹಂಕ: ತಾಲೂಕಿನ ಕಾಕೋಳು ಗ್ರಾಮದ ಪಿಎಂಶ್ರೀ ಸರಕಾರಿ ಸಂಯುಕ್ತ ಪ್ರೌಢಶಾಲೆ ಸಿಎಸ್‌ಆರ್ ಅನುದಾನದ ನೆರವಿನಿಂದ ಹೊಸ ರೂಪ ಪಡೆದಿದೆ.

36 ಲಕ್ಷ ರೂ. ವೆಚ್ಚದಲ್ಲಿ ಹೊಸ ರೂಪ

ಐವ್ಯಾಲ್ಯೂ ಇನ್ಫೋ ಸೊಲ್ಯೂಷನ್ಸ್ ಲಿಮಿಟೆಡ್ 36 ಲಕ್ಷ ರೂ. ಸಿಎಸ್‌ಆರ್ ಅನುದಾನ ಒದಗಿಸಿತ್ತು. ಕಟ್ಟಡ ದುರಸ್ತಿ ಮಾಡುವ ಜತೆಗೆ ಹೊಸ ಪೇಂಟ್ ಬಳಿಯಲಾಗಿದೆ. ಕಲಿಕೆಗೆ ಅಗತ್ಯವಾದ ಶೈಕ್ಷಣಿಕ ಸಾಮಗ್ರಿಗಳನ್ನು ಒದಗಿಸಲಾಗಿದೆ. ಮೂಲಸೌಕರ್ಯ ಅಭಿವೃದ್ಧಿಪಡಿಸಲಾಗಿದೆ.

ನವೀಕೃತ ಕಟ್ಟಡವನ್ನು ಇತ್ತೀಚೆಗೆ ಉದ್ಘಾಟಿಸಲಾಯಿತು. ಈ ವೇಳೆ ಐವ್ಯಾಲ್ಯೂ ಇನ್ಫೋ ಸೊಲ್ಯೂಷನ್ಸ್ ಲಿಮಿಟೆಡ್‌ನ ನಿರ್ದೇಶಕ ಕೃಷ್ಣರಾಜ್ ಶರ್ಮಾ, ಕ್ಷೇತ್ರ ಶಿಕ್ಷಣಾಧಿಕಾರಿ ಶೈಲಾ, ಎಸ್‌ಡಿಎಂಸಿ ಅಧ್ಯಕ್ಷ ವಿಜೇತ್ ಆರ್., ಮುಖ್ಯೋಪಾಧ್ಯಾಯ ದೀಕ್ಷಿತ್ ಕುಮಾರ್ ಬಿ.ಆರ್., ಮುಖ್ಯ ಶಿಕ್ಷಕಿ ಅನುರಾಧಾದೇವಿ ಇದ್ದರು.

ಅನಕೃ ಕನ್ವೆನ್ಶನ್ ಸೆಂಟರ್ ಲೋಕಾರ್ಪಣೆ

■ **ವಿಕ ಸುದ್ದಿಲೋಕ** ಬೆಂಗಳೂರು

ಕಡಿಮೆ ವೆಚ್ಚದಲ್ಲಿ ಮಧ್ಯಮ ಮತ್ತು ಬಡ ಕುಟುಂಬಗಳು ಶುಭ ಸಮಾರಂಭಗಳನ್ನು ಹಮ್ಮಿಕೊಳ್ಳಲು ಅನುಕೂಲವಾಗುವಂತೆ ಪಾಲಿಕೆ ವತಿಯಿಂದ ಯಡಿಯೂರು ವಾರ್ಡ್‌ನಲ್ಲಿ ನಿರ್ಮಿಸಿರುವ 'ಅನಕೃ ಕನ್ವೆನ್ಶನ್ ಸೆಂಟರ್' ಮತ್ತು 'ಡಾ.ಪುನೀತ್ ರಾಜಕುಮಾರ್ ಸಭಾಂಗಣ'ವನ್ನು ಸೋಮವಾರ ಲೋಕಾರ್ಪಣೆಗೊಳಿಸಲಾಯಿತು.

ಮದುವೆ, ನಿಶ್ಚಿತಾರ್ಥ, ಆರತಕ್ಷತೆ ಇತ್ಯಾದಿ ಶುಭ ಸಮಾರಂಭಗಳನ್ನು ಹಮ್ಮಿಕೊಳ್ಳಲು ನಗರದ ಕಲ್ಯಾಣ ಮಂದಿರಗಳಿಗೆ ಬಾಡಿಗೆಯಾಗಿ ಕನಿಷ್ಠ ಐದಾರು ಲಕ್ಷ ರೂ. ನೀಡಬೇಕಿದೆ. ಇದು ಮಧ್ಯಮ, ಕೆಳ ಮಧ್ಯಮ ಮತ್ತು ಬಡ ಕುಟುಂಬಗಳಿಗೆ ಸಾಕಷ್ಟು ಹೊರೆಯಾಗಲಿದೆ. ಇಂತಹ ವರ್ಗದ ಜನರಿಗೆ ಅನುಕೂಲವಾಗಲೆಂದು, ಅತೀ ಕಡಿಮೆ ಬಾಡಿಗೆ ಶುಲ್ಕದಲ್ಲಿ ಅತ್ಯಾಧುನಿಕವಾದ ಭವ್ಯ ಅನಕೃ ಕನ್ವೆನ್ಶನ್ ಸೆಂಟರ್ ನಿರ್ಮಿಸಲಾಗಿದೆ. ಇದನ್ನು ಪ್ರತಿಪಕ್ಷ ನಾಯಕ



ಆರ್.ಅಶೋಕ್, ಸಂಸದ ತೇಜಸ್ವಿಸೂರ್ಯ ಮತ್ತು ನಿರ್ಮಾಪಕಿ ಅಶ್ವಿನಿ ಪುನೀತ್ ರಾಜ್‌ಕುಮಾರ್ ಲೋಕಾರ್ಪಣೆಗೊಳಿಸಿದರು.

ಅನಕೃ ಕನ್ವೆನ್ಶನ್ ಸೆಂಟರ್ 600-700 ಜನರು ಕುಳಿತುಕೊಳ್ಳಬಹುದಾದ ರಿಸೆಪ್ಷನ್ ಹಾಲ್, 300ಕ್ಕೂ ಅಧಿಕ ಜನರು ಒಂದೇ ಬಾರಿಗೆ ಊಟಕ್ಕೆ ಕೂರಬಹುದಾದ ಭೋಜನಾಲಯ ಹಾಗೂ 8 ಬೃಹತ್ ಕೊಠಡಿಗಳನ್ನು ಒಳಗೊಂಡ ಸಂಪೂರ್ಣ ಹವಾನಿಯಂತ್ರಿತ ಕಟ್ಟಡವಾಗಿದೆ. ಮದುವೆ ಕಾರ್ಯಕ್ರಮಕ್ಕೆ ಕೇವಲ 70,000 ರೂ.ಗೆ ಬಾಡಿಗೆಗೆ ಲಭ್ಯವಾಗಲಿದೆ.

ಇನ್ನು, ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ, ಸಿನಿಮಾ ಬಿಡುಗಡೆ ಪೂರ್ವ ಕಾರ್ಯಕ್ರಮ, ಸಾಂಸ್ಕೃತಿಕ/ರಂಗಭೂಮಿ ಕಾರ್ಯಕ್ರಮಗಳು, ಶಾಲಾ-ಕಾಲೇಜು ವಾರ್ಷಿಕೋತ್ಸವಗಳಿಗಾಗಿ ಅಂತಾರಾಷ್ಟ್ರೀಯ ದರ್ಜೆಯ, ಅತ್ಯಾಧುನಿಕ ತಂತ್ರಜ್ಞಾನಗಳಿಂದ ಕೂಡಿರುವ 'ಡಾ.ಪುನೀತ್ ರಾಜ್‌ಕುಮಾರ್ ಸಭಾಂಗಣ'ವನ್ನೂ ನಿರ್ಮಿಸಲಾಗಿದೆ. ಈ ಸಭಾಂಗಣವು 322 ಐಷಾರಾಮಿ ಆಸನಗಳನ್ನು ಹೊಂದಿದೆ. ಇದರ ಬಾಡಿಗೆ ದರ ಕೇವಲ 25,000 ರೂ.

ಬಳಿಕ ಮಾತನಾಡಿದ ಆರ್.ಅಶೋಕ್, ''ಸಾಮಾನ್ಯವಾಗಿ ದುಬಾರಿ ಬಾಡಿಗೆ ಹೊಂದಿರುವ ನಗರದ ಕಲ್ಯಾಣ ಮಂಟಪಗಳ ನಡುವೆ ಅನಕೃ ಕನ್ವೆನ್ಶನ್ ಸೆಂಟರ್ ಮತ್ತು ಪುನೀತ್ ಸಭಾಂಗಣ ಕೈಗೆಟಕುವ ದರದಲ್ಲಿ ಸಿಗಲಿದೆ. ಇದರಿಂದ ಬಡ ಮತ್ತು ಮಧ್ಯಮ ವರ್ಗದವರಿಗೆ ಅನುಕೂಲವಾಗಲಿದೆ,'' ಎಂದರು.

ಪಾಲಿಕೆ ಆಡಳಿತ ಪಕ್ಷದ ಮಾಜಿ ನಾಯಕ ಎನ್.ಆರ್.ರಮೇಶ್, ಪಾಲಿಕೆಯ ಮಾಜಿ ಸದಸ್ಯರಾದ ಪೂರ್ಣಿಮಾ ರಮೇಶ್, ಎ.ಎಚ್.ಬಸವರಾಜ್, ಎಲ್. ಗೋವಿಂದ ರಾಜು, ಗೋವಿಂದ ನಾಯ್ಡು ಹಾಗೂ ಯಡಿಯೂರು ವಾರ್ಡ್ ಸುತ್ತಲಿನ ನಾಗರಿಕರು ಭಾಗವಹಿಸಿದ್ದರು.

ಮತ್ತೆ 450 ಕಿ.ಮೀ. ವೈಟ್‌ಟಾಪಿಂಗ್

» ನಮ್ಮ ಮೊದಲ ಪುಟದಿಂದ

ಪ್ರಮುಖ ರಸ್ತೆಗಳ ಅಭಿವೃದ್ಧಿಗೆ ಸಮಗ್ರ ಯೋಜನೆ: ''ನಗರದ ಸಂಚಾರ ದಟ್ಟಣೆಯನ್ನು ಪರಿಣಾಮಕಾರಿಯಾಗಿ ಕಡಿಮೆಗೊಳಿಸಲು ಸಮಗ್ರ ಪರಿಹಾರ ಯೋಜನೆಗಳನ್ನು ಅನುಷ್ಠಾನಗೊಳಿಸಬೇಕಾಗಿದೆ. ಈ ನಿಟ್ಟಿನಲ್ಲಿ ವೈಟ್ ಟಾಪಿಂಗ್ ರಸ್ತೆಗಳು, ಸುರಂಗ ಮಾರ್ಗಗಳು ಹಾಗೂ ಎಲಿವೇಟೆಡ್ ಕಾರಿಡಾರ್‌ಗಳನ್ನು ನಿರ್ಮಿಸಲಾಗುತ್ತಿದೆ. ಎಲಿವೇಟೆಡ್ ಹಾಗೂ ಸುರಂಗ ಮಾರ್ಗಗಳು ನಿರ್ಮಾಣವಾದ ನಂತರ ಪ್ರವೇಶ ಮತ್ತು ನಿರ್ಗಮನ (ಎಂಟ್ರಿ-ಎಕ್ಸಿಟ್) ಪಾಯಿಂಟ್‌ಗಳಲ್ಲಿ ಸಂಚಾರ ದಟ್ಟಣೆ ಉಂಟಾಗದಂತೆ ರಸ್ತೆ ಜಾಲ ಅಭಿವೃದ್ಧಿಪಡಿಸಿ ಸೂಕ್ತ ಪರಿಹಾರ ಕ್ರಮಗಳನ್ನು ರೂಪಿಸಬೇಕು. ಈ ಸಂಬಂಧ ಅಧಿಕಾರಿಗಳಿಗೆ ಅಗತ್ಯ ನಿರ್ದೇಶನಗಳನ್ನು ನೀಡಲಾಗಿದೆ,'' ಎಂದರು.

ಹೊರ ವರ್ತುಲ ರಸ್ತೆ ಮರುವಿನ್ಯಾಸ: ''ಹೊರ ವರ್ತುಲ ರಸ್ತೆಯ ಮರುವಿನ್ಯಾಸಕ್ಕಾಗಿ 450 ಕೋಟಿ ರೂ. ವೆಚ್ಚದ ಸಮಗ್ರ ಯೋಜನೆ ರೂಪಿಸಲಾಗಿದೆ. ಮೆಟ್ರೊ ಕಾಮಗಾರಿಯೊಂದಿಗೆ ಈ ಯೋಜನೆಯನ್ನು ಏಕಕಾಲದಲ್ಲಿ ಆರಂಭಿಸಿದರೆ ಸಾರ್ವಜನಿಕರಿಗೆ ಹೆಚ್ಚಿನ ತೊಂದರೆ ಉಂಟಾಗುವ ಸಾಧ್ಯತೆ ಇದೆ. ಆದ್ದರಿಂದ ಸಂಚಾರ ಪೊಲೀಸರೊಂದಿಗೆ ಚರ್ಚಿಸಿ ಸೂಕ್ತ ಸಮಯದಲ್ಲಿ ಕಾಮಗಾರಿ ಆರಂಭಿಸಲಾಗುವುದು,'' ಎಂದರು.

ಬಿ-ಸ್ಮೈಲ್ ವ್ಯವಸ್ಥಾಪಕ ನಿರ್ದೇಶಕರೂ ಆಗಿರುವ ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್‌ರಾವ್, ಬಿ-ಸ್ಮೈಲ್ ನಿರ್ದೇಶಕ (ತಾಂತ್ರಿಕ) ಪ್ರಹ್ಲಾದ್, ಮುಖ್ಯ ಎಂಜಿನಿಯರ್‌ಗಳಾದ ಮಾಲತಿ, ಮಾದೇಶ್, ವಿಶ್ವನಾಥ್, ಕಾರ್ಯನಿರ್ವಾಹಕ ಎಂಜಿನಿಯರ್‌ಗಳು ಹಾಗೂ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಇಂದು ಹಲವೆಡೆ ಕರೆಂಟಿಲ್ಲ

■ **ವಿಕ ಸುದ್ದಿಲೋಕ** ಬೆಂಗಳೂರು

ಕರ್ನಾಟಕ ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ) ವತಿಯಿಂದ ಆರ್‌ಬಿಐ ಮತ್ತು ಆಡುಗೋಡಿ ವಿದ್ಯುತ್ ಉಪಕೇಂದ್ರ ವ್ಯಾಪ್ತಿಯಲ್ಲಿ ಜೂ. 23ರಂದು ತುರ್ತು ನಿರ್ವಹಣಾ ಕಾಮಗಾರಿ ಕೈಗೊಳ್ಳುತ್ತಿರುವುದರಿಂದ ಅಂದು ಬೆಳಗ್ಗೆ 10ರಿಂದ ಸಂಜೆ 4ರವರೆಗೆ ನಗರದ ವಿವಿಧ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

ಆರ್‌ಬಿಐ ಲೇಔಟ್, ಕೊತ್ತನೂರು, ಜೆ.ಪಿ. ನಗರ 5ನೇ ಹಂತ, ಶ್ರೇಯಸ್ ಕಾಲೋನಿ, ಗೌರವ್‌ನಗರ, ನಟರಾಜ ಲೇಔಟ್, ನೃಪತುಂಗ ನಗರ, ಜಂಬೂಸವಾರಿ ದಿಣ್ಣೆ, ಚುಂಚಘಟ್ಟ, ಬ್ರಿಗೇಡ್ ಮಿಲೇನಿಯಂ ಮತ್ತು ಬ್ರಿಗೇಡ್ ಗಾರ್ಡೇನಿಯಾ ಅಪಾರ್ಟ್ ಮೆಂಟ್, ಆಡುಗೋಡಿ, ಸಲಾರ್‌ಪುರಿಯಾ ಟವರ್, ಬಿಗ್ ಬಜಾರ್, ಆಕ್ಸೆಂಚರ್, ಕೆಎಂಎಫ್. ಗೋದಾಮು, ನಂಜಪ್ಪ ಲೇಔಟ್, ನ್ಯೂಮೈಕೋ ರಸ್ತೆ, ಚಿಕ್ಕಲಕ್ಷ್ಮೀ ಲೇಔಟ್, ಮಹಲಿಂಗೇಶ್ವರ ಬಡಾವಣೆ, ಬೆಂಗಳೂರು ಡೇರಿ, ಫೋರಂ, ರಂಗದಾಸಪ್ಪ ಲೇಔಟ್, ಲಕ್ಕಸಂದ್ರ, ವಿಲ್ಸನ್ ಗಾರ್ಡನ್, ಚಿನ್ನಯ್ಯನ ಪಾಳ್ಯ, ಚಂದ್ರಪ್ಪನಗರ, ನಿಮ್ಹಾನ್ಸ್ ಆಡಳಿತ ವಿಭಾಗ, ಬಂಡೆ ಸ್ಲಂ, ಸುಣ್ಣದಕಲ್ಲು, ಬೃಂದಾವನ ಸ್ಲಂ, ಲಾಲ್‌ಜಿ ನಗರ, ಶಾಮಣ್ಣ ಗಾರ್ಡನ್, ಎನ್‌ಡಿಆರ್‌ಐ, ಪೊಲೀಸ್ ವಸತಿ ಗೃಹಗಳು ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ಪೂರ್ವ ಭಾಗದ ಉಪಕೇಂದ್ರಗಳಲ್ಲೂ ವ್ಯತ್ಯಯ: ಮಂಡೂರು, ಕೊನದಾಸಪುರ ಮತ್ತು ಹೊಸಕೋಟೆ ವಿದ್ಯುತ್ ಉಪಕೇಂದ್ರ ವ್ಯಾಪ್ತಿಯ ಪ್ರದೇಶಗಳಲ್ಲಿ ಜೂ.23ರಂದು ಬೆಳಗ್ಗೆ 10 ರಿಂದ ಸಂಜೆ 4 ರ ವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಬೆಸ್ಕಾಂ ತಿಳಿಸಿದೆ.

ಮಂಡೂರು ಉಪ ಕೇಂದ್ರ ವ್ಯಾಪ್ತಿಯ ಮಂಡೂರು, ಬೊಮ್ಮೇನಹಳ್ಳಿ, ಬೆಂಡಗಾನಹಳ್ಳಿ, ಪ್ರೆಸ್ಟೀಜ್ ಟ್ಯಾಂಕ್ಯೂಲಿಟಿ, ಬ್ರಿಗೇಡ್ ಭುವನವಿಸ್ತಾ, ಗುಂಡೂರು, ಬೈಯಪ್ಪನಹಳ್ಳಿ, ಕಮ್ಮಸಂದ್ರ, ಚಿಕ್ಕಸಂದ್ರ, ಬಿದರಹಳ್ಳಿ, ಮಾರಸಂದ್ರ, ನಿಂಬೆಕಾಯಿಪುರ, ಕಾಡಅಗ್ರಹಾರ, ಯರಪ್ಪನಹಳ್ಳಿ, ಯರಪ್ಪನಹಳ್ಳಿ ಬಂಡೆ, ಅಣಗಲಾಪುರ.

ಕೊನದಾಸಪುರ ಉಪಕೇಂದ್ರ ವ್ಯಾಪ್ತಿಯ ಆವಲಹಳ್ಳಿ, ಚೀಮಸಂದ್ರ, ಬಿದರಹಳ್ಳಿ, ಹಿರಂಡಹಳ್ಳಿ, ಕಿತ್ತಗನೂರು, ಹಳೇಹಳ್ಳಿ, ಕನ್ನಮಂಗಲ, ಶೀಗೆಹಳ್ಳಿ, ಚಿಕ್ಕಬನಹಳ್ಳಿ, ಚಿನ್ನಾಗೇನಹಳ್ಳಿ, ಗೊರವಿಗೆರೆ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

ಹೊಸಕೋಟೆ ವಿದ್ಯುತ್ ವಿತರಣಾ ಕೇಂದ್ರ ವ್ಯಾಪ್ತಿಯ ಆವಲಹಳ್ಳಿ, ಚೀಮಸಂದ್ರ, ವೀರೇನಹಳ್ಳಿ, ಕಾಟಂನಲ್ಲೂರು, ಲಘುಮೇನಹಳ್ಳಿ, ಬೆಂಡಿಗಾನಹಳ್ಳಿ, ಹುಸ್ಕೂರು, ಕೊನದಾಸಪುರ ಬೂದಿಗೆರೆ ಕ್ರಾಸ್, ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಆಗಲಿದೆ.

15 ಲಕ್ಷ ಸಸಿ ನೆಡಲು ಜಾಗ ಗುರುತು

■ **ವಿಕ ಸುದ್ದಿಲೋಕ** ಬೆಂಗಳೂರು

ನಾಡಪ್ರಭು ಕೆಂಪೇಗೌಡ ಜಯಂತಿ ಅಂಗವಾಗಿ ಒಂದೇ ದಿನ 15 ಲಕ್ಷ ಸ್ಥಳೀಯ ಸಸಿ ನೆಡಲು ಗುರುತಿಸಿರುವ 243 ಎಕರೆ ಪ್ರದೇಶವನ್ನು 49 ವಲಯಗಳು ಹಾಗೂ 314 ಸಸಿ ನೆಡುವ ಸ್ಥಳಗಳಾಗಿ ವಿಭಜಿಸಿದ್ದು, ಪ್ರತಿ ವಲಯಕ್ಕೂ ಓರ್ವ ವಲಯ ಕಮಾಂಡರ್ ಉಪಸ್ಥಿತರಿರಲಿದ್ದಾರೆ ಎಂದು ಬಿಡಿಎ ಆಯುಕ್ತ ಪಿ. ಮಣಿವಣ್ಣನ್ ತಿಳಿಸಿದರು.

ಸಸಿ ನೆಡುವ ಅಭಿಯಾನ

ಜಿಬಿಎ ಮುಖ್ಯ ಕಚೇರಿಯಲ್ಲಿ ಸೋಮವಾರ ನಡೆದ ಸಭೆಯನ್ನುದ್ದೇಶಿಸಿ ಅವರು ಮಾತನಾಡಿದರು.

ಕಾರ್ಯಕ್ರಮದ ದಿನ ಸುಗಮ ಸಂಚಾರಕ್ಕಾಗಿ ಮೆಟ್ರೊ ರೈಲುಗಳ ಸಂಚಾರ ಹೆಚ್ಚಿಸಲಾಗುವುದು. ಜತೆಗೆ, ಮೆಟ್ರೊ ನಿಲ್ದಾಣಗಳಿಂದ ಸಸಿ ನೆಡುವ ಸ್ಥಳಗಳವರೆಗೆ ಉಚಿತ ಬಸ್ ವ್ಯವಸ್ಥೆ ಒದಗಿಸಲಾಗುತ್ತದೆ. ಅಲ್ಲದೆ, ಆಹಾರ, ಪೋರ್ಟಬಲ್ ಶೌಚಾಲಯಗಳೂ ಸೇರಿದಂತೆ ಎಲ್ಲಾ ಮೂಲಸೌಕರ್ಯಗಳನ್ನು ಒದಗಿಸಲಾಗುತ್ತದೆ. ಆರೋಗ್ಯ ತುರ್ತು ಪರಿಸ್ಥಿತಿಗಳಿಗಾಗಿ ವೈದ್ಯರು ಹಾಗೂ ನರ್ಸ್‌ಗಳು ಸ್ಥಳದಲ್ಲಿ ಹಾಜರಿರಲಿದ್ದಾರೆ. ಸಮರ್ಪಕ ಬೆಳಕು, ವಾಹನ ನಿಲುಗಡೆ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ ಎಂದು ತಿಳಿಸಿದರು.

ಮ್ಯಾರಥಾನ್ ಕಾರ್ಯಕ್ರಮಕ್ಕೆ ಆಹ್ವಾನ: ನಾಡಪ್ರಭು ಕೆಂಪೇಗೌಡರ ದಿನಾಚರಣೆ ಅಂಗವಾಗಿ ಜೂ. 27ರ ಬೆಳಗ್ಗೆ 6ಕ್ಕೆ 10ಕೆ ಹಾಗೂ 5ಕೆ ಮ್ಯಾರಥಾನ್ ಆಯೋಜಿಸಲಾಗಿದೆ. ಇದು ಎಂಎಆರ್‌ನಿಂದ ಚಲ್ಲಘಟ್ಟ ಮೆಟ್ರೊ ನಿಲ್ದಾಣದವರೆಗೆ ನಡೆಯಲಿದೆ. ಇದರಲ್ಲಿ ಭಾಗವಹಿಸುವವರು https://mysamay.in/e/kempegowdarun ಲಿಂಕ್ ಬಳಸಿಕೊಂಡು ನೋಂದಣಿ ಮಾಡಿಕೊಳ್ಳಬಹುದು.

ಸಸಿ ನೆಡುವ ಅಭಿಯಾನದಲ್ಲಿ ಭಾಗವಹಿಸಲಿಚ್ಛಿಸುವವರು https://greenbengalurubybda.in ಭೇಟಿ ನೀಡಬಹುದು. ಕಾರ್ಯಕ್ರಮಕ್ಕೆ ಸಂಬಂಧಿಸಿದ ಮಾಹಿತಿ ಮತ್ತು ಸಹಾಯಕ್ಕಾಗಿ ಸಹಾಯವಾಣಿ 9483166622 ಕ್ಕೆ ಕರೆ ಮಾಡಬಹುದು ಎಂದು ತಿಳಿಸಿದರು.

ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಮಾತನಾಡಿ, ''ಹಸಿರು ಬೆಂಗಳೂರಿನ ನಿರ್ಮಾಣಕ್ಕೆ ಪ್ರತಿಯೊಬ್ಬರ ಸಹಭಾಗಿತ್ವ ಅತ್ಯಗತ್ಯವಾಗಿದ್ದು, ಸಸಿ ನೆಡುವ ಈ ಬೃಹತ್ ಅಭಿಯಾನದಲ್ಲಿ ನಾಗರಿಕರು ಸಕ್ರಿಯವಾಗಿ ಭಾಗವಹಿಸಬೇಕು,'' ಎಂದು ಮನವಿ ಮಾಡಿದರು.

ಕಾರ್ಯಕ್ರಮಕ್ಕೆ ಅಗತ್ಯವಿರುವ ಸಸಿಗಳು, ಉಪಕರಣಗಳು, ಮಾರ್ಗಸೂಚಿ ಫಲಕಗಳು ಹಾಗೂ ಇತರೆ ಸಾಮಗ್ರಿಗಳ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಬೇಕು. ಪ್ರತಿ ಹಂತದಲ್ಲೂ ಸಮರ್ಪಕ ಮೇಲ್ವಿಚಾರಣೆ ಹಾಗೂ ಪರಿಣಾಮಕಾರಿ ಸಮನ್ವಯ ಇರಬೇಕು ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು.

ಭಾಗವಹಿಸುವವರಿಗೆ ಪ್ರಮಾಣಪತ್ರ ಮತ್ತು ಗೌರವ: ಕಾರ್ಯಕ್ರಮದಲ್ಲಿ ಭಾಗವಹಿಸುವ ಪ್ರತಿಯೊಬ್ಬರಿಗೂ ಅಧಿಕೃತ ಡಿಜಿಟಲ್ ಪ್ರಮಾಣಪತ್ರ ನೀಡಲಾಗುವುದು. ಜತೆಗೆ ಹಸಿರು ಬೆಂಗಳೂರು ರೂವಾರಿಗಳು ಎಂಬ ಗೌರವ ಸಿಗಲಿದೆ. ಅತ್ಯುತ್ತಮ ಕೊಡುಗೆ ನೀಡುವವರಿಗೆ ಚಿನ್ನ, ಬೆಳ್ಳಿ ಮತ್ತು ಕಂಚಿನ ಪದಕಗಳನ್ನು ನೀಡಿ ಗೌರವಿಸಲಾಗುವುದು ಎಂದು ತಿಳಿಸಿದರು.

ನಗರ ಪಾಲಿಕೆಗಳ ಆಯುಕ್ತ ರಮೇಶ್ ಡಿ.ಎಸ್., ಪೊಮ್ಮಲ ಸುನೀಲ್ ಕುಮಾರ್, ಕೆ.ಎನ್. ರಮೇಶ್, ಡಾ. ರಾಜೇಂದ್ರ ಕೆ.ಪಿ., ಬೆಂ.ಘ.ನಿ.ನಿ.ದ ಸಿಇಒ ಕರೀಗೌಡ, ವಿಶೇಷ ಆಯುಕ್ತ ವೆಂಕಟಾಚಲಪತಿ, ನಗರ ಪಾಲಿಕೆಗಳ ಜಂಟಿ ಆಯುಕ್ತರು, ಬಿಡಿಎ ಅಧಿಕಾರಿಗಳು ಹಾಗೂ ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಈಜಿಪ್ಟ್‌ಗೆ ಮೊದಲ ಜಯದ ಪುಳಕ

ನ್ಯೂಜಿಲೆಂಡ್ ವಿರುದ್ಧ 3–1 ಅಂತರದ ಭರ್ಜರಿ ಗೆಲುವು

ಈಜಿಪ್ಟ್ ಪರ ಗೋಲ್ ಗಳಿಸಿದ ಮೊಸ್ತಫಾ ಜಿಕೊ ಮತ್ತು ಮೊಹಮ್ಮದ್ ಸಲಾಹ್.

ವಾಂಕೋವರ್: ನ್ಯೂಜಿಲೆಂಡ್ ತಂಡವನ್ನು 3–1 ಗೋಲ್‌ಗಳ ಅಂತರದಿಂದ ಮಣಿಸಿದ ಈಜಿಪ್ಟ್ ತಂಡ ಫಿಫಾ ವಿಶ್ವಕಪ್ ಫುಟ್ಬಾಲ್ ಟೂರ್ನಿಯ ತನ್ನ 92 ವರ್ಷಗಳ ಇತಿಹಾಸದಲ್ಲಿ ಮೊದಲ ಬಾರಿ ಜಯದ ಸವಿ ಅನುಭವಿಸಿತು. ಈ ಫಲಿತಾಂಶವು ಆಟಗಾರರು ಮತ್ತು ಮೈದಾನದಲ್ಲಿ ಕಿಕ್ಕಿರಿದು ತುಂಬಿದ್ದ ಈಜಿಪ್ಟ್ ಅಭಿಮಾನಿಗಳ ಹರ್ಷೋದ್ಗಾರಕ್ಕೆ ಕಾರಣವಾಯಿತು.

ಬಿಸಿ ಪ್ಲೇಸ್ ವಾಂಕೋವರ್‌ನಲ್ಲಿ ಭಾನುವಾರ ತಡರಾತ್ರಿ ನಡೆದ 'ಜಿ' ಗುಂಪಿನ ಪಂದ್ಯದಲ್ಲಿ ಅಕ್ಷರಶಃ ರೆಡ್ ಆರ್ಮಿ ವಿಜಯದ ಕಹಳೆ ಮೊಳಗಿಸಿತು. ಪಂದ್ಯ ಗೆಲ್ಲುತ್ತಿದ್ದಂತೆಯೇ ಈಜಿಪ್ಟ್ ಆಟಗಾರರು ಮೈದಾನದಲ್ಲಿ ನೃತ್ಯದ ಮೂಲಕ ಸಂಭ್ರಮಿಸಿದರು. ಗ್ಯಾಲರಿಯಲ್ಲಿದ್ದ ಅಭಿಮಾನಿಗಳು ಇದಕ್ಕೆ ಸಾಥ್ ನೀಡಿದರು. ಈಜಿಪ್ಟ್ ತಂಡದ ಪರ ಮೊಸ್ತಫಾ ಜಿಕೊ (58ನೇ ನಿಮಿಷ), ಮೊಹಮ್ಮದ್ ಸಲಾಹ್ (67ನೇ ನಿ.) ಮತ್ತು ಟ್ರೆಜಿಗೆಟ್ (82ನೇ ನಿ.) ತಲಾ ಒಂದು ಗೋಲ್ ಗಳಿಸಿ ಐತಿಹಾಸಿಕ ಜಯದ ರೂವಾರಿಯೆನಿಸಿದರು. ಅತ್ತ ನ್ಯೂಜಿಲೆಂಡ್ ತಂಡದ ಪರ ಫಿನ್ ಸುರ್ಮನ್ (15ನೇ ನಿ.) ಒಂದು ಗೋಲ್ ದಾಖಲಿಸಿ ಸೋಲಿನ ಅಂತರ ತಗ್ಗಿಸಿದರು.

ಪಂದ್ಯ ಆರಂಭವಾದ ಕೆಲವೇ ನಿಮಿಷಗಳಲ್ಲಿ ಗೋಲ್ ಗಳಿಸಿದ ನ್ಯೂಜಿಲೆಂಡ್ ಪ್ರಥಮಾರ್ಧದಲ್ಲಿ ಹಿಡಿತ ಸಾಧಿಸಿತು. ಆದರೆ ದ್ವಿತೀಯಾರ್ಧ ಆರಂಭವಾದ ಕೆಲವೇ ನಿಮಿಷಗಳಲ್ಲಿ ಈಜಿಪ್ಟ್ ಆಕ್ರಮಣಕಾರಿ ಆಟಕ್ಕೆ ಆದ್ಯತೆ ನೀಡಿತು. ಇದರ ಫಲವಾಗಿ ಮೊಸ್ತಫಾ 58ನೇ ನಿಮಿಷದಲ್ಲಿ ಗೋಲ್ ಗಳಿಸಿ ತಂಡದ ಹೋರಾಟವನ್ನು 1–1ರಲ್ಲಿ ಸಮಬಲಗೊಳಿಸಿದರು. ನಂತರ ತಂಡದ ಸ್ಟಾರ್ ಆಟಗಾರ ಮೊಹಮ್ಮದ್ ಸಲಾಹ್ 67ನೇ ನಿಮಿಷದಲ್ಲಿ ಗೋಲ್ ಸಿಡಿಸಿ ತಂಡದ ಮುನ್ನಡೆಯನ್ನು 2–1ಕ್ಕೆ ವಿಸ್ತರಿಸಿದರು. ಇದು ಅವರ 68ನೇ ಅಂತಾರಾಷ್ಟ್ರೀಯ ಗೋಲು. ಈ ಮುನ್ನಡೆಯು ಈಜಿಪ್ಟ್ ತಂಡದ ಗೆಲುವನ್ನು ಬಹುತೇಕ ಖಚಿತಪಡಿಸಿತು. ಕೊನೆಯಲ್ಲಿ ಸುರ್ಮನ್ ಈಜಿಪ್ಟ್ ಪರ ಮತ್ತೊಂದು ಗೋಲ್ ದಾಖಲಿಸಿ ಗೆಲುವಿನ ಅಂತರವನ್ನು ವಿಸ್ತರಿಸಿದರು.

ಪಂದ್ಯ ಮುಗಿಯುತ್ತಿದ್ದಂತೆಯೇ ಈಜಿಪ್ಟ್ ಕೋಚ್ ಹೊಸ್ಸಾಮ್ ಹಸನ್, ರಾಷ್ಟ್ರೀಯ ಬಾವುಟವನ್ನು ಹಿಡಿದು ಮೈದಾನದ ಸುತ್ತ ಗೆಲುವಿನ ಸಂಭ್ರಮ ಆಚರಿಸಿದರು. ಪಂದ್ಯದ ನಂತರ ಪ್ರತಿಕ್ರಿಯಿಸಿದ ಸಲಾಹ್, ''ನಾನು ಯಾವಾಗಲೂ ರಾಷ್ಟ್ರೀಯ ತಂಡಕ್ಕೆ ಅತ್ಯುತ್ತಮ ಕೊಡುಗೆ ನೀಡುತ್ತೇನೆ, ವಿಶ್ವಕಪ್‌ನಲ್ಲಿ ನಮ್ಮ ಮೊದಲ ಗೆಲುವು ಇದಾಗಿರುವ ಕಾರಣ ಈ ದಿನವು ಬಹಳ ವಿಶೇಷ ಎಂದು ಭಾವಿಸುತ್ತೇನೆ,'' ಎಂದು ಹೇಳಿದರು. ಸದ್ಯ ನಾಲ್ಕು ಅಂಕಗಳನ್ನು ಹೊಂದಿರುವ ಈಜಿಪ್ಟ್ 'ಜಿ' ಗುಂಪಿನಲ್ಲಿ ಅಗ್ರಸ್ಥಾನದಲ್ಲಿದ್ದು, ನಾಕೌಟ್ ಹಂತಕ್ಕೆ ಸನಿಹದಲ್ಲಿದೆ.

ಮೆಸ್ಸಿ ದಾಖಲೆ ಗೋಲು

ಡಲ್ಲಾಸ್: ಅರ್ಜೆಂಟೀನಾ ತಂಡದ ತಾರಾ ಆಟಗಾರ ಲಯೊನೆಲ್ ಮೆಸ್ಸಿ ಫಿಫಾ ವಿಶ್ವಕಪ್ ಫುಟ್ಬಾಲ್ ಟೂರ್ನಿಯಲ್ಲಿ ಸಾರ್ವಕಾಲಿಕ ಅತ್ಯಧಿಕ ಗೋಲ್ ಗಳಿಸಿದ ಆಟಗಾರ ಎಂಬ ದಾಖಲೆ ಬರೆದಿದ್ದಾರೆ. ಡಲ್ಲಾಸ್ ಕ್ರೀಡಾಂಗಣದಲ್ಲಿ ಸೋಮವಾರ ರಾತ್ರಿ ನಡೆದ 'ಜೆ' ಗುಂಪಿನ ಪಂದ್ಯದ ಮೊದಲಾರ್ಧದಲ್ಲಿ ಆಸ್ಟ್ರಿಯಾ ವಿರುದ್ಧ ಗೋಲ್ ಗಳಿಸಿದ 38 ವರ್ಷದ ಮೆಸ್ಸಿ, ಹಾಲಿ ಟೂರ್ನಿಯಲ್ಲಿ ನಾಲ್ಕು ಗೋಲ್ ಸೇರಿದಂತೆ ವಿಶ್ವಕಪ್‌ನಲ್ಲಿ ಒಟ್ಟು 17 ಗೋಲ್ ಗಳಿಸಿದರು. ಇದರೊಂದಿಗೆ ಜರ್ಮನಿಯ ದಿಗ್ಗಜ ಆಟಗಾರ ಮಿರೊಸ್ಲಾವ್ ಕ್ಲೋಸ್ ಅವರ 16 ಗೋಲ್‌ಗಳ ದಾಖಲೆಯನ್ನು ಹಿಂದಿಕ್ಕಿದರು.

ಪ್ರೀತಮ್‌ಗೆ ಸ್ವರ್ಣ

ಸುಹ್ಲ್ (ಜರ್ಮನಿ): ಹದಿಹರೆಯದ ಪ್ರೀತಮ್ ಕೇಂದ್ರೆ ಇಲ್ಲಿ ನಡೆದ ಐಎಸ್‌ಎಸ್ಎಫ್ ಜೂನಿಯರ್ ವಿಶ್ವ ಚಾಂಪಿಯನ್‌ಷಿಪ್‌ನ ಪುರುಷರ 10 ಮೀಟರ್ ಏರ್ ರೈಫಲ್ ಸ್ಪರ್ಧೆಯಲ್ಲಿ ಚಿನ್ನದ ಸಾಧನೆ ತೋರಿದ್ದಾರೆ. ಇದೇ ವೇಳೆ ಭಾರತ ಮಹಿಳೆಯರ 25 ಮೀ. ಪಿಸ್ತೂಲ್ ತಂಡ ಸ್ಪರ್ಧೆಯಲ್ಲಿ ಕಂಚು ಗೆದ್ದಿದೆ. ಇದರೊಂದಿಗೆ ಟೂರ್ನಿಯಲ್ಲಿ ಭಾರತದ ಪದಕಗಳ ಸಂಖ್ಯೆ 5 ಸ್ವರ್ಣ ಸೇರಿ 11ಕ್ಕೆ ಏರಿಕೆಯಾಗಿದೆ. ಭಾನುವಾರ ತಡರಾತ್ರಿ ನಡೆದ ಸ್ಪರ್ಧೆಯಲ್ಲಿ ಕೇವಲ 2ನೇ ಅಂತಾರಾಷ್ಟ್ರೀಯ ಟೂರ್ನಿಯಲ್ಲಿ ಪಾಲ್ಗೊಂಡಿರುವ 16 ವರ್ಷದ ಪ್ರೀತಮ್, 8 ಸದಸ್ಯರ ಫೈನಲ್‌ನಲ್ಲಿ 251.3 ಅಂಕಗಳೊಂದಿಗೆ ಮೊದಲ ಸ್ಥಾನ ಗಳಿಸಿದರು. ಪುಣೆ ಮೂಲದ ಶೂಟರ್ ಇತ್ತೀಚೆಗಷ್ಟೇ 10ನೇ ತರಗತಿಯಲ್ಲಿ ಉತ್ತೀರ್ಣರಾಗಿದ್ದಾರೆ.

ಹುಬ್ಬಳ್ಳಿ ತಂಡದ ಆಲ್‌ರೌಂಡ್ ಆಟಕ್ಕೆ ಒಲಿದ ಗೆಲುವು

ಟೈಗರ್ಸ್‌ಗೆ ಸುಲಭ ತುತ್ತಾದ ವಾರಿಯರ್ಸ್

ಅನೀಶ್ವರ್ ಗೌತಮ್ ಬ್ಯಾಟಿಂಗ್ ವೈಖರಿ
ನಾಗೇಶ್ ಪಾಣತ್ತಲೆ

■ **ವಿಕ ಸುದ್ದಿಲೋಕ** ಮೈಸೂರು

ಆಲ್‌ರೌಂಡ್ ಪ್ರದರ್ಶನ ನೀಡಿದ ಹುಬ್ಬಳ್ಳಿ ಟೈಗರ್ಸ್ 7 ವಿಕೆಟ್‌ಗಳ ಅಂತರದಿಂದ ಮೈಸೂರು ವಾರಿಯರ್ಸ್ ತಂಡವನ್ನು ಪರಾಭವಗೊಳಿಸಿತು. ಇದರೊಂದಿಗೆ ಟೈಗರ್ಸ್ ತಂಡ ಮಹಾರಾಜ ಟ್ರೋಫಿ ಟಿ20 ಟೂರ್ನಿಯಲ್ಲಿ ಗೆಲುವಿನ ಖಾತೆ ತೆರೆದರೆ, ವಾರಿಯರ್ಸ್ ಸತತ 2ನೇ ಸೋಲಿಗೆ ಒಳಗಾಯಿತು.

ಶ್ರೀಕಂಠದತ್ತ ನರಸಿಂಹ ರಾಜ ಒಡೆಯರ್ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ತನ್ನ ಎರಡನೇ ಪಂದ್ಯದಲ್ಲಿ ಮೈಸೂರು ತಂಡ ನೀಡಿದ 162 ರನ್‌ಗಳ ಸ್ಪರ್ಧಾತ್ಮಕ ಗುರಿ ಬೆನ್ನಟ್ಟಿದ ಹುಬ್ಬಳ್ಳಿ, 17.3 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ ಗುರಿ ಭೇದಿಸಿತು. ಸ್ಫೋಟಕ ಬ್ಯಾಟಿಂಗ್ ನಡೆಸಿದ ಮೊಹಮ್ಮದ್ ತಹಾ (57; 38 ಎಸೆತ) ಮತ್ತು ಅನೀಶ್ವರ್ ಗೌತಮ್ (60; 41 ಎಸೆತ) ಅರ್ಧ ಶತಕ ಗಳಿಸಿ ತಂಡಕ್ಕೆ ಸುಲಭ ಗೆಲುವು ತಂದುಕೊಟ್ಟರು.

ಇದಕ್ಕೂ ಮುನ್ನ ಹಾರ್ದಿಕ್ ರಾಜ್ (25ಕ್ಕೆ 3) ಮತ್ತು ಎಲ್.ಆರ್. ಕುಮಾರ್ (14ಕ್ಕೆ 3) ಅವರ ಶಿಸ್ತಿನ ದಾಳಿಗೆ ತತ್ತರಿಸಿದ 2 ಬಾರಿಯ ಚಾಂಪಿಯನ್ ಮೈಸೂರು, ಬೃಹತ್ ಮೊತ್ತ ಪೇರಿಸಲು ವಿಫಲಗೊಂಡಿತು. ಅಗ್ರ ಕ್ರಮಾಂಕದ ಕಾರ್ತಿಕ್ (35), ರಿತೇಶ್ (46) ಮತ್ತು ಕಾರ್ತಿಕೇಯಾ (27) ಹೊರತುಪಡಿಸಿ ಉಳಿದವರು ನಿರಾಸೆ ಮೂಡಿಸಿದ್ದು, ವಾರಿಯರ್ಸ್‌ಗೆ ಹಿನ್ನಡೆ ತಂದಿತು. ತನ್ನ ಆರಂಭಿಕ ಪಂದ್ಯದಲ್ಲಿ ಶಿವಮೊಗ್ಗ ವಿರುದ್ಧ ಸೋತಿದ್ದ ಮೈಸೂರು ಮತ್ತೊಂದು ಸೋಲಿಗೆ ಒಳಗಾಯಿತು. ಹುಬ್ಬಳ್ಳಿ ತನ್ನ ಆರಂಭಿಕ ಪಂದ್ಯದಲ್ಲಿ ಮಳೆಯಿಂದಾಗಿ ಮಂಗಳೂರು ವಿರುದ್ಧ 1 ಅಂಕ ಹಂಚಿಕೊಂಡಿತ್ತು.

ಭಾನುವಾರ ಮಳೆಯಿಂದಾಗಿ 10 ಓವರ್‌ಗಳಿಗೆ ಕಡಿತಗೊಂಡ ಪಂದ್ಯದಲ್ಲಿ ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್ ತಂಡವು ವಿಜೆಡಿ ನಿಯಮದನ್ವಯ 16 ರನ್‌ಗಳಿಂದ ಶಿವಮೊಗ್ಗ ಯೋಧಾಸ್ ತಂಡವನ್ನು ಸೋಲಿಸಿತು. ಜುಲೈ 23ರಂದು ಗುಲ್ಬರ್ಗಾ–ಶಿವಮೊಗ್ಗ ಮತ್ತು ಮೈಸೂರು–ಬೆಂಗಳೂರು ತಂಡಗಳು ಸೆಣಸಲಿವೆ.

ಮಂಗಳೂರಿಗೆ 8 ವಿಕೆಟ್ ಜಯ: ದಿನದ 2ನೇ ಪಂದ್ಯದಲ್ಲಿ ನಿಕಿನ್ ಜೋಸ್ (100; 47 ಎಸೆತ*) ಅವರ ಶತಕ ಹಾಗೂ ಕರುಣ್ (56; 36 ಎಸೆತ) ಅವರ ಅರ್ಧ ಶತಕದ ಬಲದಿಂದ ಮಂಗಳೂರು ತಂಡ 8 ವಿಕೆಟ್‌ಗಳಿಂದ ಗುಲ್ಬರ್ಗಾ ತಂಡವನ್ನು ಮಣಿಸಿತು.

ಸಂಕ್ಷಿಪ್ತ ಸ್ಕೋರ್

ಮೈಸೂರು ವಾರಿಯರ್ಸ್: 19.2 ಓವರ್‌ಗಳಲ್ಲಿ 161 (ರಿತೇಶ್ 46, ಕಾರ್ತಿಕ್ 35, ಕಾರ್ತಿಕೇಯ 27; ಹಾರ್ದಿಕ್ ರಾಜ್ 25ಕ್ಕೆ 3, ಎಲ್.ಆರ್ ಕುಮಾರ್ 14ಕ್ಕೆ 3).
ಹುಬ್ಬಳ್ಳಿ ಟೈಗರ್ಸ್: 17.3 ಓವರ್‌ಗಳಲ್ಲಿ 3 ವಿಕೆಟ್‌ಗೆ 162 (ತಹಾ 57, ಅನೀಶ್ವರ್ ಗೌತಮ್ 60*; ಮಾಧವ್ 27ಕ್ಕೆ 2).

ಕೇಪ್ ವರ್ಡೆ ಅಚ್ಚರಿ ಆಟ

ಉರುಗ್ವೆ- ಕೇಪ್ ವರ್ಡೆ ಪಂದ್ಯ 2–2ರಲ್ಲಿ ಡ್ರಾ

ಕೇಪ್ ವರ್ಡೆ ಪರ ಮೊದಲ ಗೋಲು ಗಳಿಸಿದ ಕೇವಿನ್ ಪಿನಾ

ಮಯಾಮಿ: ಎರಡು ಬಾರಿಯ ಚಾಂಪಿಯನ್ ಉರುಗ್ವೆ ತಂಡದ ವಿರುದ್ಧ 2–2 ಗೋಲ್‌ಗಳಿಂದ ಡ್ರಾ ಸಾಧಿಸುವಲ್ಲಿ ಯಶಸ್ವಿಯಾದ ಪದಾರ್ಪಣೆ ತಂಡ ಕೇಪ್ ವರ್ಡೆ ತಂಡದ ಮಾಂತ್ರಿಕ ಆಟ ಪ್ರಸಕ್ತ ವಿಶ್ವಕಪ್‌ನಲ್ಲಿ ಮುಂದುವರಿದಿದೆ.

ತನ್ನ ಆರಂಭಿಕ ಪಂದ್ಯದಲ್ಲಿ ಸ್ಪೇನ್ ವಿರುದ್ಧ ಗೋಲ್ ರಹಿತ ಡ್ರಾ ಸಾಧಿಸಿ ಅಂಕ ಹಂಚಿಕೊಂಡಿದ್ದ ವರ್ಡೆ ತಂಡ, ಭಾನುವಾರ ತಡರಾತ್ರಿ ನಡೆದ ತನ್ನ ಎರಡನೇ ಪಂದ್ಯದಲ್ಲೂ ಪಾಯಿಂಟ್ಸ್ ಗಳಿಸಿ ಇತಿಹಾಸ ನಿರ್ಮಿಸಿತು. ಕೇವಿನ್ ಪಿನಾ ಫ್ರೀ ಕಿಕ್ ಮೂಲಕ ಕೇಪ್ ವರ್ಡೆಗೆ ಗೋಲ್ ದಾಖಲಿಸಿದರು. ಇದು ವಿಶ್ವಕಪ್‌ನಲ್ಲಿ ಕೇಪ್ ವರ್ಡೆ ತಂಡದ ಮೊದಲ ಗೋಲ್. ಟೂರ್ನಿಯ 48 ತಂಡಗಳ ಪೈಕಿ ಅಚ್ಚರಿ ತಂಡಗಳಲ್ಲಿ ಒಂದಾಗಿರುವ ಕೇಪ್ ವರ್ಡೆ ತಂಡವೂ ತನ್ನ ಅಂತಿಮ ಗುಂಪು ಪಂದ್ಯದಲ್ಲಿ ಗೆದ್ದು ನಾಕೌಟ್ ಹಂತಕ್ಕೆ ಪ್ರವೇಶ ಗಿಟ್ಟಿಸಿದರೆ ಅಚ್ಚರಿ ಇಲ್ಲ.

ಈ ಮಧ್ಯೆ, ಲಾಸ್ ಏಂಜಲೀಸ್‌ನಲ್ಲಿ ನಡೆದ 'ಜಿ' ಗುಂಪಿನ ಪಂದ್ಯದಲ್ಲಿ ಬೆಲ್ಜಿಯಂ ಮತ್ತು ಇರಾನ್ ತಂಡಗಳು ಗೋಲ್ ರಹಿತ ಡ್ರಾ ಸಾಧಿಸಿ ಅಂಕ ಹಂಚಿಕೊಂಡವು.

ಮೆಸ್ಸಿ ದಾಖಲೆ ಸರಿಗಟ್ಟಿದ ಯಮಾಲ್

ನ್ಯೂಯಾರ್ಕ್: ಸ್ಪೇನ್‌ನ ಸ್ಟಾರ್ ಫುಟ್‌ಬಾಲ್ ಆಟಗಾರ ಲಮಿನ್ ಯಮಾಲ್, ಫುಟ್‌ಬಾಲ್ ದಿಗ್ಗಜ ಅರ್ಜೆಂಟೀನಾದ ಲಯೊನೆಲ್ ಮೆಸ್ಸಿ ದಾಖಲೆಯನ್ನು ಸರಿಗಟ್ಟಿದ್ದಾರೆ. ಭಾನುವಾರ ಸೌದಿ ಅರೇಬಿಯಾ ವಿರುದ್ಧ ನಡೆದ ವಿಶ್ವಕಪ್ ಪಂದ್ಯದಲ್ಲಿ ಯಮಾಲ್ ತಮ್ಮ ಮೊದಲ ವಿಶ್ವಕಪ್ ಗೋಲ್ ಗಳಿಸಿದ ಸಾಧನೆಯ ಜತೆಗೆ ಈ ಸಾಧನೆ ಮಾಡಿದ ಕಿರಿಯ ಆಟಗಾರ ಎನ್ನುವ ಮೆಸ್ಸಿ ದಾಖಲೆಯನ್ನು ಸರಿಗಟ್ಟಿದರು. ಮೊದಲ ವಿಶ್ವಕಪ್ ಗೋಲು ದಾಖಲಿಸಿದಾಗ ಮೆಸ್ಸಿಗೆ 18 ವರ್ಷ 11 ತಿಂಗಳು ವಯಸ್ಸು, ಯಮಾಲ್ ಅವರಿಗೂ ಈಗ 18 ವರ್ಷ 11 ತಿಂಗಳು ವಯಸ್ಸು. ಭಾನುವಾರದ ಪಂದ್ಯವನ್ನು ಸ್ಪೇನ್ 4–0 ಗೋಲುಗಳಿಂದ ಗೆದ್ದುಕೊಂಡಿತು. ಸದ್ಯ 4 ಅಂಕಗಳನ್ನು ಹೊಂದಿರುವ ಸ್ಪೇನ್, 'ಎಚ್' ಗುಂಪಿನಲ್ಲಿ ಅಗ್ರಸ್ಥಾನದಲ್ಲಿದ್ದು, ನಾಕೌಟ್ ಹಂತಕ್ಕೆ ಸನಿಹಗೊಂಡಿದೆ.

ಪಂದ್ಯಗಳು

ಪೋರ್ಚುಗಲ್ vs ಉಜ್ಬೇಕಿಸ್ತಾನ
ರಾತ್ರಿ 10:30 (ಮಂಗಳವಾರ)
ಸ್ಥಳ: ಹ್ಯೂಸ್ಟನ್

ಇಂಗ್ಲೆಂಡ್ vs ಘಾನ
ನಸುಕಿನ 1:30 (ಬುಧವಾರ)
ಸ್ಥಳ: ಬೋಸ್ಟನ್

ಪನಾಮ vs ಕ್ರೊಯೇಷ್ಯಾ
ಬೆಳಗ್ಗಿನ ಜಾವ 4:30 (ಬುಧವಾರ)
ಸ್ಥಳ: ಟೊರಾಂಟೊ

ಕೊಲಂಬಿಯಾ vs ಡಿ.ಆರ್. ಕಾಂಗೊ
ಬೆಳಗ್ಗೆ 7:30 (ಬುಧವಾರ)
ಸ್ಥಳ: ಗ್ವಾಡಲಜರಾ

ನೇರ ಪ್ರಸಾರ: ಯುನೈಟ್ 8 ಸ್ಪೋರ್ಟ್ಸ್ ನೆಟ್‌ವರ್ಕ್

ಆಗಸ್ಟ್ 17ರಿಂದ ಬಿಡಬ್ಲ್ಯುಎಫ್ ಟೂರ್ನಿ

ಹೊಸದಿಲ್ಲಿ: ಆಗಸ್ಟ್ 17ರಿಂದ 23ರ ವರೆಗೆ ಇಂದಿರಾ ಗಾಂಧಿ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯಲಿರುವ ಬಿಡಬ್ಲ್ಯುಎಫ್ ವಿಶ್ವ ಚಾಂಪಿಯನ್‌ಷಿಪ್‌ಗೆ ಭಾರತ ಸಜ್ಜಾಗಿದೆ.

ಇದಕ್ಕಾಗಿ ಈಗಾಗಲೇ ಸುಮಾರು 6,000 ಆಸನಗಳ ಟಿಕೆಟ್ ದರವನ್ನು 499 ರಿಂದ 5,500 ರೂ.ಗಳ ನಡುವೆ ನಿಗದಿಪಡಿಸಲಾಗಿದೆ. ಭಾರತೀಯ ಬ್ಯಾಡ್ಮಿಂಟನ್ ಸಂಸ್ಥೆ ಸೋಮವಾರ ಪ್ರತಿಷ್ಠಿತ ಟೂರ್ನಿಯ ಅಧಿಕೃತ ಟಿಕೆಟಿಂಗ್ ಪಾಲುದಾರನಾಗಿ ಬುಕ್ ಮೈ ಶೋ ಅನ್ನು ಘೋಷಿಸಿದೆ. ಟಿಕೆಟ್ ಬೆಲೆ 499 ರೂ.ಗಳಿಂದ ಪ್ರಾರಂಭವಾಗುತ್ತದೆ. ಒಟ್ಟು ಆರು ಆಸನ ವಿಭಾಗಗಳು ಲಭ್ಯವಿವೆ.

ಪಾಕಿಸ್ತಾನ ವಿರುದ್ಧವೂ ಭಾರತಕ್ಕೆ ಜಯದ ಧ್ಯಾನ

ಎಫ್‌ಐಎಚ್ ಪ್ರೊ ಲೀಗ್

ಲಂಡನ್: ಒಲಿಂಪಿಕ್ ಚಾಂಪಿಯನ್ಸ್ ನೆದರ್ಲೆಂಡ್ಸ್ ವಿರುದ್ಧ ರೋಚಕ ಗೆಲುವು ಸಾಧಿಸಿ ಆತ್ಮವಿಶ್ವಾಸ ವೃದ್ಧಿಸಿಕೊಂಡಿರುವ ಭಾರತ ಪುರುಷರ ಹಾಕಿ ತಂಡ, ಎಫ್‌ಐಎಚ್ ಪ್ರೊ ಲೀಗ್‌ನ ಲಂಡನ್ ಚರಣದ ತನ್ನ ಆರಂಭಿಕ ಪಂದ್ಯದಲ್ಲಿ ಮಂಗಳವಾರ ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನ ತಂಡದ ಸವಾಲು ಎದುರಿಸಲಿದ್ದು, ಗೆಲುವಿನ ಲಯ ಕಾಯ್ದುಕೊಳ್ಳುವ ಧ್ಯಾನದಲ್ಲಿದೆ.

2024ರಲ್ಲಿ ಚೀನಾದ ಹುಲುನ್ ಬುಯಿರ್‌ನಲ್ಲಿ ನಡೆದ ಏಷ್ಯನ್ ಚಾಂಪಿಯನ್ಸ್ ಟ್ರೋಫಿಯಲ್ಲಿ ಪರಸ್ಪರ ಮುಖಾಮುಖಿಯಾದ ನಂತರ ಭಾರತ ಮತ್ತು ಪಾಕಿಸ್ತಾನ ತಂಡಗಳು ಇದೇ ಮೊದಲ ಸಲ ಎದುರಾಗುತ್ತಿವೆ. ಆ ಪಂದ್ಯದಲ್ಲಿ ಭಾರತ 2–1ರಲ್ಲಿ ಜಯ ಗಳಿಸಿತ್ತು. ನಾಯಕ ಹರ್ಮನ್‌ಪ್ರೀತ್ ಸಿಂಗ್ ಅವಳಿ ಗೋಲ್ ಗಳಿಸಿದ್ದರು.

ಕಳೆದ ಹತ್ತು ವರ್ಷಗಳಲ್ಲಿ ಇತ್ತಂಡಗಳ ಜಯಾಪಜಯ ದಾಖಲೆಯಲ್ಲಿ ಭಾರತ ಸಂಪೂರ್ಣ ಪ್ರಭುತ್ವ ಸಾಧಿಸಿದೆ. ಆಡಿದ 17 ಪಂದ್ಯಗಳಲ್ಲಿ ಭಾರತೀಯರು 15 ಜಯ ಮತ್ತು 2 ಡ್ರಾದೊಂದಿಗೆ ಅಜೇಯ ದಾಖಲೆ ಕಾಯ್ದುಕೊಂಡಿದ್ದಾರೆ. ರೋಟರ್‌ಡ್ಯಾಮ್‌ನಲ್ಲಿ ನಡೆದ ನಾಲ್ಕು ಪಂದ್ಯಗಳಲ್ಲಿ ಭಾರತ, ತಲಾ ಎರಡು ಜಯ ಮತ್ತು ಸೋಲು ಕಂಡಿದೆ. ನೆದರ್ಲೆಂಡ್ಸ್ ಮತ್ತು ಜರ್ಮನಿ ಎದುರು ತಲಾ ಒಂದು ಜಯ ಮತ್ತು ಸೋಲು ಕಂಡಿದೆ.

ಹೆರಿಗೆ ಬಳಿಕ ಆಟಕ್ಕೆ ಮರಳಲು ಮಾರ್ಗಸೂಚಿ

ದುಬೈ: ಹೆರಿಗೆ ಬಳಿಕ ಮಹಿಳಾ ಆಟಗಾರ್ತಿಯರು ಕ್ರಿಕೆಟ್‌ಗೆ ಸುರಕ್ಷಿತ ಮತ್ತು ಸುಸ್ಥಿರ ಮರಳುವಿಕೆಯನ್ನು ಖಚಿತಪಡಿಸಿಕೊಳ್ಳಲು ಐಸಿಸಿ ಸೋಮವಾರ ಪುನರಾಗಮನಕ್ಕೆ ಮುನ್ನ 16 ವಾರಗಳ ಅವಧಿಯಲ್ಲಿ ಹೆರಿಗೆ ನಂತರ ಅವರ ಬೇಗನೆ ಚೇತರಿಸಿಕೊಳ್ಳಲು, ರಚನಾತ್ಮಕ ತರಬೇತಿ ಮತ್ತು ಕಂಡೀಷನಿಂಗ್ ಅನ್ನು ಒಳಗೊಳ್ಳಲು ಮಾರ್ಗಸೂಚಿಗಳನ್ನು ಪ್ರಕಟಿಸಿದೆ.

ಮಹಿಳಾ ಕ್ರಿಕೆಟಿಗರಿಗೆ ಹೆರಿಗೆ ನಂತರ ಆಟಕ್ಕೆ ಮರಳಲು 6 ಸೂತ್ರಗಳನ್ನು ವಿವರಿಸಲಾಗಿದೆ. ಹೆರಿಗೆ ಬಳಿಕ ತ್ವರಿತವಾಗಿ ಚೇತರಿಸಿಕೊಳ್ಳುವುದು, ವೈದ್ಯಕೀಯ ಮತ್ತು ಯೋಗಕ್ಷೇಮ ವಿಮರ್ಶೆಗಳು, ಕ್ರಮೇಣ ರಚನಾತ್ಮಕ ತರಬೇತಿಗೆ ಮರಳುವುದು, ಕ್ರಿಕೆಟ್–ನಿರ್ದಿಷ್ಟ ಕಂಡೀಷನಿಂಗ್, ಆಟಕ್ಕೆ ಮರಳುವುದು ಮತ್ತು ಆಟಗಾರ್ತಿಯರು ಕ್ರಿಕೆಟ್ ವಾತಾವರಣಕ್ಕೆ ಮರಳಿದ ನಂತರ ನಿರಂತರ ಮೇಲ್ವಿಚಾರಣೆಯನ್ನು ಈ ವಿಧಾನವು ಒಳಗೊಂಡಿದೆ.

ಮಧ್ಯರಾತ್ರಿ ಆಹಾರದ ಅಪಾಯ

ಮಧ್ಯರಾತ್ರಿಯ ಹಸಿವನ್ನು ನೀಗಿಸುವ ಅಭ್ಯಾಸದಿಂದ ದೇಹದಲ್ಲಿ ಆಗುವ ಬದಲಾವಣೆ ಕುರಿತು ಇತ್ತೀಚಿನ ಸಂಶೋಧನೆಯೊಂದು ಬೆಳಕು ಚೆಲ್ಲಿದೆ.

ಲವಲvk ಸುದ್ದಿಲೋಕ
feedbacklvk@vijaykarnataka.com

ನಾವು ಏನನ್ನು ತಿನ್ನುತ್ತೇವೆ ಎಂಬುದರಷ್ಟೇ ಮುಖ್ಯ, ಯಾವ ಸಮಯದಲ್ಲಿ ತಿನ್ನುತ್ತೇವೆ ಎಂಬುದು. ಹಗಲಿನಲ್ಲಿ ತಿನ್ನುವ ಆಹಾರವನ್ನು ಮಧ್ಯರಾತ್ರಿಯಲ್ಲಿ ತಿಂದರೆ ಜೀರ್ಣಾಂಗ ವ್ಯೂಹಕ್ಕೆ ಅಪಾಯ ಎಂದಿದೆ ಸಂಶೋಧನೆ.

ಸಾಮಾನ್ಯವಾಗಿ ಹೊತ್ತಲ್ಲದ ಹೊತ್ತಲ್ಲಿ ಆಹಾರ ಸೇವಿಸುವ ಅಭ್ಯಾಸದಿಂದ ಹೊಟ್ಟೆ ಉಬ್ಬರ, ಮಲಬದ್ಧತೆ, ಗ್ಯಾಸ್ಟ್ರಿಕ್ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ. ಇದಕ್ಕೆ ನಿಖರ ಕಾರಣವೇನು ಎಂಬುದನ್ನು ಅಮೆರಿಕದ ಯುಟಿ ಸೌತ್‌ವೆಸ್ಟರ್ನ್ ಮೆಡಿಕಲ್ ಸೆಂಟರ್ ನಡೆಸಿದ ಇತ್ತೀಚಿನ ಸಂಶೋಧನೆಯೊಂದು ಬಹಿರಂಗಪಡಿಸಿದೆ.

ಜೈವಿಕ ಗಡಿಯಾರದ ಸಂಘರ್ಷ: ನಮ್ಮ ಮಿದುಳಿನಲ್ಲಿ ಮುಖ್ಯ ಜೈವಿಕ ಗಡಿಯಾರ ಇರುತ್ತದೆ. ಇದು ಹಗಲು ಹಾಗೂ ರಾತ್ರಿಯ ಬೆಳಕಿಗೆ ಅನುಗುಣವಾಗಿ ನಮ್ಮ ನಿದ್ದೆ ಮತ್ತು ಎಚ್ಚರದ ಸ್ಥಿತಿಯನ್ನು ನಿಯಂತ್ರಿಸುತ್ತದೆ. ಸಂಶೋಧನೆಯ ಪ್ರಕಾರ, ನಮ್ಮ ಕರುಳಿನಲ್ಲಿರುವ ವಿಭಿನ್ನ ಜೀವಕೋಶಗಳು ಸ್ವತಂತ್ರ ಜೈವಿಕ ಗಡಿಯಾರಗಳನ್ನು ಹೊಂದಿರುತ್ತವೆ. ನಿದ್ದೆ ಮಾಡಬೇಕಾದ ಸಮಯದಲ್ಲಿ ಆಹಾರ ಸೇವಿಸಿದಾಗ, ಕರುಳಿನ ಜೈವಿಕ ಗಡಿಯಾರಗಳ ನಡುವೆ ಪರಸ್ಪರ ಹೊಂದಾಣಿಕೆ ತಪ್ಪುತ್ತದೆ. ಇದು ಜೀರ್ಣಕ್ರಿಯೆಯ ಏರುಪೇರಿಗೆ ನೇರ ಕಾರಣವಾಗುತ್ತದೆ.

ಜೀರ್ಣಾಂಗವ್ಯೂಹದ ಕಾಯಿಲೆ: ಕರುಳಿನ ಜೀವಕೋಶಗಳ ನಡವಳಿಕೆಯಲ್ಲಿ ಸಾಮರಸ್ಯ ತಪ್ಪಿದಾಗ ಕರುಳಿನ ಉರಿಯೂತ, ತೀವ್ರ ಮಲಬದ್ಧತೆ ಮತ್ತು ಗ್ಯಾಸ್ಟ್ರಿಕ್ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ. ಆಹಾರ ಸರಿಯಾಗಿ ಜೀರ್ಣವಾಗದೆ ದೇಹದಲ್ಲಿ ಕೊಬ್ಬು ಶೇಖರಣೆಯಾಗುವುದು ಮತ್ತು ಮಧುಮೇಹದಂತಹ ಅಪಾಯಗಳು ಹೆಚ್ಚಾಗುತ್ತವೆ. ಜೀರ್ಣಾಂಗ ವ್ಯವಸ್ಥೆಯು ಕೇವಲ ಆಹಾರ ಜೀರ್ಣ ಮಾಡುವ ಅಂಗವಲ್ಲ, ನಿಯಮಿತ ಸಮಯವನ್ನು ಪಾಲಿಸುವ ಸೂಕ್ಷ್ಮ ವ್ಯವಸ್ಥೆ. ಹೀಗಾಗಿ ಯಾವ ಸಮಯಕ್ಕೆ ಎಂತಹ ಆಹಾರ ಸೇವಿಸಬೇಕು ಎಂಬುದು ಮುಖ್ಯ.

ಸೂಕ್ತ ಸಮಯ: ಕರುಳಿನ ಜೈವಿಕ ಗಡಿಯಾರ ಹದಗೆಡದಂತೆ ಕಾಯ್ದುಕೊಳ್ಳಲು ನಾವು ಏನನ್ನು ತಿನ್ನುತ್ತೇವೆ ಮತ್ತು ಯಾವಾಗ ತಿನ್ನುತ್ತೇವೆ ಎಂಬ ಎರಡು ಅಂಶಗಳ ನಡುವೆ ಸಮತೋಲನ ಇರಬೇಕಾದದ್ದು ಅತ್ಯಗತ್ಯ. ಹಾರ್ಮೋನ್‌ಗಳು ಮತ್ತು ಜೀರ್ಣಕಾರಿ ರಸಗಳು ಸೂರ್ಯನ ಬೆಳಕಿಗೆ ಅನುಗುಣವಾಗಿ ಸ್ರವಿಸುತ್ತವೆ. ಆದ್ದರಿಂದ ಆಹಾರ ಸೇವಿಸುವ ಸಮಯ ಮುಖ್ಯ. ಬೆಳಗಿನ ಉಪಾಹಾರವನ್ನು 7–8.30ರೊಳಗೆ ಮುಗಿಸುವುದು ಉತ್ತಮ. ಚಯಾಪಚಯ ಕ್ರಿಯೆ ಚುರುಕಾಗಿರುವುದರಿಂದ ಈ ಸಮಯದಲ್ಲಿ ಪೌಷ್ಟಿಕ ಆಹಾರ ಸೇವಿಸಬೇಕು. ಮಧ್ಯಾಹ್ನದ ಊಟ 1ರಿಂದ 2 ಗಂಟೆಯ ಮಧ್ಯದಲ್ಲಿ ಸೂಕ್ತ. ಸೂರ್ಯ ನೆತ್ತಿಗೆ ಬಂದಾಗ ಜಠರಾಗ್ನಿ ತೀವ್ರವಾಗಿರುತ್ತದೆ. ಹಾಗಾಗಿ ಈ ಸಮಯದಲ್ಲಿ ಬೇಳೆ, ಅನ್ನ, ತರಕಾರಿ ಒಳಗೊಂಡ ಪೂರ್ಣ ಪ್ರಮಾಣದ ಊಟ ಮಾಡಬಹುದು. ರಾತ್ರಿಯ ಊಟ 7ರಿಂದ 8 ಗಂಟೆ ಉತ್ತಮ. ಸೂರ್ಯಾಸ್ತದ ನಂತರ ಜೀರ್ಣಕ್ರಿಯೆ ನಿಧಾನವಾಗುತ್ತದೆ. ಮಲಗುವುದಕ್ಕೆ ಕನಿಷ್ಠ 2ರಿಂದ 3 ಗಂಟೆ ಮುಂಚಿತವಾಗಿ ಊಟ ಮುಗಿಸಬೇಕು. ■

ರಾತ್ರಿ ಏನನ್ನು ಸೇವಿಸಬೇಕು?

ಕರುಳಿನ ಆರೋಗ್ಯವನ್ನು ವೃದ್ಧಿಸುವ ಮತ್ತು ರಾತ್ರಿ ವೇಳೆಯ ಜೀರ್ಣಕ್ರಿಯೆಯ ಭಾರವನ್ನು ತಗ್ಗಿಸುವ ಆಹಾರಗಳ ಆಯ್ಕೆ ಉತ್ತಮ ಎನ್ನುವ ಆಹಾರ ತಜ್ಞರು, ಕರುಳಿನ ಬ್ಯಾಕ್ಟೀರಿಯಾಗಳಿಗೆ ಪೂರಕ ಆಹಾರ ಅಂದರೆ ಮಜ್ಜಿಗೆ ನಿಮ್ಮ ಆಯ್ಕೆಯಾಗಬಹುದು ಎಂದಿದ್ದಾರೆ. ನಾರಿನಂಶವಿರುವ ಹಸಿರು ತರಕಾರಿಗಳು, ಹಣ್ಣುಗಳು, ನವಣೆ, ಸಾಮೆ ಮುಂತಾದ ಸಿರಿಧಾನ್ಯಗಳು ಕರುಳಿನ ಚಲನೆಯನ್ನು ಸುಗಮಗೊಳಿಸುತ್ತವೆ. ರಾತ್ರಿಯ ಊಟಕ್ಕೆ ಲಘು ಆಹಾರಗಳಾದ ತರಕಾರಿ ಸೂಪ್, ರಾಗಿ ಗಂಜಿ, ಹೆಸರುಬೇಳೆ ಕಿಚಡಿ ಅಥವಾ ಮೃದುವಾದ ಇಡ್ಲಿ ಸೇವಿಸಿ. ತಡರಾತ್ರಿ ಬಿರಿಯಾನಿ, ಕರಿದ ಪದಾರ್ಥಗಳು, ಮೈದಾ ಪದಾರ್ಥಗಳು ಮತ್ತು ಸಂಸ್ಕರಿಸಿದ ಆಹಾರಗಳನ್ನು ತಿನ್ನುವುದನ್ನು ಸಂಪೂರ್ಣವಾಗಿ ನಿಲ್ಲಿಸಬೇಕು. ಇವುಗಳು ಕರುಳಿನಲ್ಲಿ ದೀರ್ಘಕಾಲ ಉಳಿದು ಗ್ಯಾಸ್ಟ್ರಿಕ್ ಮತ್ತು ಉರಿಯೂತವನ್ನು ಉಂಟುಮಾಡುತ್ತವೆ. ರಾತ್ರಿ ತಡವಾಗಿ ಸಿಹಿ ತಿನ್ನುವುದರಿಂದ ರಕ್ತದಲ್ಲಿ ಸಕ್ಕರೆ ಪ್ರಮಾಣ ಹೆಚ್ಚಾಗಿ, ಇನ್ಸುಲಿನ್ ಮಟ್ಟ ಏರುಪೇರಾಗುತ್ತದೆ ಮತ್ತು ಇದು ಲಿವರ್‌ನಲ್ಲಿ ಕೊಬ್ಬು ಶೇಖರಣೆಯಾಗಲು ಕಾರಣ ಎಂಬುದು ತಜ್ಞರು ನೀಡುವ ಮಾಹಿತಿ.

ಲವಲVK CELEBRITY ಸ್ಟೈಲ್

ಅನನ್ಯಾ ಹೊಸ ಅವತಾರ

ನಟಿ ಅನನ್ಯಾ ಪಾಂಡೆ ಅವರು ಇತ್ತೀಚೆಗೆ ಧರಿಸಿದ್ದ ದಿರಿಸು ಗಮನ ಸೆಳೆದಿದೆ.

ಅನನ್ಯಾ ಧರಿಸಿದ್ದ ಈ ಅಪರೂಪದ ಗೌನ್ ಅನ್ನು ವಿಭಿನ್ನ ಕಲ್ಪನೆಯಿಂದ ಪ್ರೇರಿತಗೊಂಡು ವಿನ್ಯಾಸಗೊಳಿಸಲಾಗಿದೆ ಎನ್ನಲಾಗಿದೆ. ಹೊಳಪಿನ ಸ್ಯಾಟಿನ್ ಬಟ್ಟೆಯಿಂದ ಸಿದ್ಧಪಡಿಸಲಾದ ಈ ಒನ್ ಶೋಲ್ಡರ್ ಗೌನ್‌ನಲ್ಲಿ ಬೆನ್ನಿನ ಭಾಗಕ್ಕೆ ಇಳಿಬಿಟ್ಟ ಸೆರಗಿನಂತಹ ವಿನ್ಯಾಸದಲ್ಲೇ ದಿರಸಿನ ಆಕರ್ಷಣೆ ಇದೆ. ಇದರ ನೆಕ್ ಲೈನ್ ಹಾಗೂ ಹೆಗಲಿನ ಭಾಗದಲ್ಲಿ ಜೋಡಿಸಲಾಗಿದ್ದ ಕ್ರಿಸ್ಟಲ್ ಟಾಸೆಲ್‌ಗಳು ಉಡುಪಿಗೆ ಆಭರಣದಂತಹ ಮೆರುಗನ್ನು ನೀಡಿವೆ.

ಉಡುಪಿನ ವಿನ್ಯಾಸವೇ ಪ್ರಮುಖ ಆಕರ್ಷಣೆಯಾಗಿರಬೇಕೆಂಬ ಕಾರಣಕ್ಕೆ ಕೂದಲನ್ನು ಮುಡಿ ಕಟ್ಟಲಾಗಿದೆ. ಕಂದು ಬಣ್ಣದ ಸ್ಮೋಕಿ ಕಣ್ಣುಗಳು ಮತ್ತು ನ್ಯೂಡ್ ಲಿಪ್‌ಸ್ಟಿಕ್‌ನೊಂದಿಗೆ ಮೇಕಪ್ ಅನ್ನು ಮಿನಿಮಲ್ ಆಗಿ ಇಡಲಾಗಿತ್ತು. ಅದೇ ರೀತಿ ಕನಿಷ್ಠ ಆಭರಣ ಅವರ ಸ್ಟೈಲ್ ಸ್ಟೇಟ್‌ಮೆಂಟ್ ಆಗಿ ಸೆಳೆಯಿತು. ■

ಸ್ಟೀಲ್ ಪಾತ್ರೆಯ ಗ್ರೇಡ್ ಪರೀಕ್ಷಿಸಿ

ಲವಲVK ಕಿಚನ್ TIPS

ಬಹುತೇಕರ ಅಡುಗೆ ಮನೆಯಲ್ಲಿ ಸಾಮಾನ್ಯವಾಗಿರುವ ಸ್ಟೈನ್‌ಲೆಸ್ ಸ್ಟೀಲ್ ಪಾತ್ರೆಗಳು ತಮ್ಮ ದೀರ್ಘ ಬಾಳಿಕೆ ಮತ್ತು ಆಹಾರಗಳೊಂದಿಗೆ ರಾಸಾಯನಿಕವಾಗಿ ಪ್ರತಿಕ್ರಿಯಿಸದ ಗುಣಗಳಿಂದಾಗಿ ಜನಪ್ರಿಯವಾಗಿವೆ. ಆದರೂ ಈ ಪಾತ್ರೆಗಳನ್ನು ಖರೀದಿಸುವ ಮೊದಲು ಅವುಗಳ ಗುಣಮಟ್ಟ ಪರೀಕ್ಷಿಸುವುದು ಒಳ್ಳೆಯದು. ಮುಖ್ಯವಾಗಿ ಆ ಸ್ಟೀಲ್ ಯಾವ ಗ್ರೇಡ್‌ನದು ಎಂದು ತಿಳಿದುಕೊಳ್ಳುವುದು ಮುಖ್ಯ.

ಎಸ್‌ಎಸ್ 316: ಪ್ರತಿದಿನದ ಅಡುಗೆಗೆ ಹೆಚ್ಚಾಗಿ ಎಸ್ ಎಸ್ 316 ಗ್ರೇಡ್‌ನ ಸ್ಟೀಲ್ ಪಾತ್ರೆಗಳನ್ನು ಬಳಸಲಾಗುತ್ತದೆ. ಸಣ್ಣ ಕುಟುಂಬಗಳಿಗೆ ಈ ಗ್ರೇಡ್‌ನ ಸ್ಟೀಲ್ ಪಾತ್ರೆ ಉತ್ತಮ. ಉಪ್ಪು, ನಿಂಬೆ ರಸ, ಟೊಮೆಟೊ ರಸದಂಥ ತೀಕ್ಷ್ಣ ಆಮ್ಲೀಯ ವಸ್ತುಗಳ ಬಳಕೆ ಹೆಚ್ಚಿರುವ ಖಾದ್ಯಗಳಿಗೆ 316 ಗ್ರೇಡ್‌ನ ಸ್ಟೀಲ್ ಪಾತ್ರೆ ಸೂಕ್ತವಾಗುತ್ತದೆ.

ಯಾಕೆಂದರೆ ಇದರಲ್ಲಿ ರಾಸಾಯನಿಕ ಪ್ರತಿರೋಧಕ ಗುಣ ಹೆಚ್ಚಿದೆ. ಶೇ.18ರಷ್ಟು ಕ್ರೋಮಿಯಂ ಮತ್ತು ಶೇ. 10ರಷ್ಟು ನಿಕ್ಕಲ್ ಬೆರೆಸಿರುವ ಈ ಗ್ರೇಡ್‌ನ ಸ್ಟೀಲ್‌ಗೆ ಬೇಗ ತುಕ್ಕು ಹಿಡಿಯುವುದಿಲ್ಲ. ಕರಾವಳಿ ಪ್ರದೇಶ ಮತ್ತು ತೇವಾಂಶ ಹೆಚ್ಚಿರುವ ವಾತಾವರಣವಿರುವ ಕಡೆ ಈ ಗ್ರೇಡ್‌ನ ಸ್ಟೀಲ್ ಪಾತ್ರೆಗಳು ಉತ್ತಮ.

ಎಸ್‌ಎಸ್ 304: ಈ ಗ್ರೇಡ್‌ನ ಸ್ಟೀಲ್ ಕೈಗಾರಿಕೆ ಘಟಕ, ಆಸ್ಪತ್ರೆ ಮತ್ತು ಅಡುಗೆ ಪರಿಕರಗಳ ತಯಾರಿಕೆ ಉದ್ಯಮದಲ್ಲಿ ಹೆಚ್ಚು ಬಳಕೆಯಲ್ಲಿದೆ. ಇದರಲ್ಲಿ ಕ್ರೋಮಿಯಂ ಮತ್ತು ನಿಕ್ಕಲ್ ಕ್ರಮವಾಗಿ ಶೇ. 18, ಶೇ.8ರಷ್ಟಿದ್ದು, ಇದು ಅತ್ಯುತ್ತಮ ತುಕ್ಕು ನಿರೋಧಕ. ನೀರಿನ ಬಾಟಲಿ, ಲಂಚ್ ಬಾಕ್ಸ್, ಟೀ ಇನ್‌ಫ್ಯೂಸರ್, ಕುಕ್‌ವೇರ್‌ಗಳಿಗೆ ಈ ಗ್ರೇಡ್‌ನ ಸ್ಟೀಲ್ ಉತ್ತಮ.

ಎಸ್‌ಎಸ್ 430: ಹೊಳಪು ಹೆಚ್ಚಿರುವ 430 ಗ್ರೇಡ್‌ನ ಸ್ಟೀಲ್ ಪಾತ್ರೆಗಳನ್ನು ಬೃಹತ್ ಸಮಾರಂಭಗಳಿಗೆ ತಯಾರಿಸುವ ಅಡುಗೆಗೆ ಬಳಸಲಾಗುತ್ತದೆ. ಕೇಟರಿಂಗ್ ಉದ್ಯಮದಲ್ಲಿ ಇದರ ಬಳಕೆ ಹೆಚ್ಚು. ಇದರಲ್ಲಿ ಕ್ರೋಮಿಯಂ ಶೇ. 18ರಷ್ಟಿದ್ದೆ ನಿಕ್ಕಲ್ ಬಳಕೆ ಇಲ್ಲ. ಆದ್ದರಿಂದ ಇದರ ಬೆಲೆಯೂ ಕಡಿಮೆ.

ಎಸ್‌ಎಸ್ 202/204: ಹಿಟ್ಟು, ಅಕ್ಕಿ, ಬೇಳೆಯಂಥ ಒಣ ಪದಾರ್ಥಗಳನ್ನು ಸಂಗ್ರಹಿಸಿ ಇಡಲು ಈ ಗ್ರೇಡ್‌ನ ಸ್ಟೀಲ್ ಪಾತ್ರೆಗಳು ಉತ್ತಮ. ■

ದಿನ ಭವಿಷ್ಯ

ಶ್ರೀಪತಿ ಭಟ್ ಆಚಾರ್ಯ, ಬೆಂಗಳೂರು

ನಿಮ್ಮ ರಾಶಿಚಕ್ರಕ್ಕೆ ಅನುಗುಣವಾಗಿ ಸೂಕ್ತವಾದ ರತ್ನಗಳು, ಶಿಕ್ಷಣ, ವೃತ್ತಿಜೀವನ, ವಿವಾಹ, ಸಂತಾನ, ಆರೋಗ್ಯ, ಆರ್ಥಿಕ ಸ್ಥಿತಿ ಮತ್ತು ಇನ್ನಿತರ ವಿಷಯಗಳ ಬಗ್ಗೆ ವಿವರಗಳಿಗಾಗಿ ಹಾಗೆಯೇ ಸಮಸ್ಯೆಗಳಿಗೆ ಪರಿಹಾರ ರೂಪದ ಪೂಜೆಗಳು, ವಿವಾಹ ಹೊಂದಾಣಿಕೆ, ಮಕ್ಕಳ ಜಾತಕ ಮತ್ತು ಶೈಕ್ಷಣಿಕ ಪ್ರಗತಿಯ ಬಗ್ಗೆ ಮಾಹಿತಿಗಾಗಿ ದಯವಿಟ್ಟು ಖುದ್ದಾಗಿ ಭೇಟಿ ನೀಡಿ. ದೂ: 9513747474

ವೃಷಭ, ಸಿಂಹ, ಮಕರ –ಈ ರಾಶಿಯವರಿಗೆ ಚತುರ್ಗ್ರಹಿ ಯೋಗ

ಮೇಷ: ಸಮಾಜ ಸೇವೆಯನ್ನು ಹವ್ಯಾಸವನ್ನಾಗಿ ಮಾಡಿಕೊಂಡಿರುವ ನಿಮಗೆ ಆದರಿಂದ ಪ್ರಚಾರದ ಜೊತೆಗೆ ರಾಜಕೀಯ ಸೇರಲು ಆಹ್ವಾನ ದೊರೆಯಲಿದೆ. ವಿದ್ಯುತ್ ವಲಯದ ಕಾರ್ಮಿಕರು ಜಾಗ್ರತೆಯನ್ನು ವಹಿಸಿ. **ಶುಭ ಸಂಖ್ಯೆ:** 9, **ಬಣ್ಣ:** ಕೆಂಪು
(**ನಾಮಾಕ್ಷರ:** ಚು, ಚೆ, ಚೊ, ಲ, ಲಿ, ಲು, ಲೆ, ಲೊ, ಅ) ಅಶ್ವಿನಿ, ಭರಣಿ, ಕೃತ್ತಿಕಾ 1ನೇ ಪಾದ

ವೃಷಭ: ಬಾಕಿ ಉಳಿದಂತಹ ಕೆಲಸಗಳೆಲ್ಲವೂ ಅಂತಿಮ ಹಂತಕ್ಕೆ ಬಂದು ತಲುಪುವವು. ಹತ್ತಿರದವರೊಂದಿಗೆ ಮುಕ್ತವಾದ ಮಾತುಕತೆಯು ಭೂ ವ್ಯವಹಾರದಲ್ಲಿ ಲಾಭವನ್ನು ತಂದುಕೊಡಲಿದೆ. **ಶುಭ ಸಂಖ್ಯೆ:** 7, **ಬಣ್ಣ:** ನೀಲಿ
(ಇ, ಉ, ಎ, ಒ, ವ, ವಿ, ವು, ವೆ, ವೊ) ಕೃತ್ತಿಕಾ 2, 3, 4ನೇ ಪಾದ, ರೋಹಿಣಿ, ಮೃಗಶಿರ 1, 2ನೇ ಪಾದ

ಮಿಥುನ: ಕೈ ಬಿಟ್ಟಿರುವ ಯೋಜನೆಗಳನ್ನು ಮತ್ತೆ ಮುಂದುವರಿಸಲು ಒತ್ತಡ ಬರಬಹುದು. ಇನ್ನೊಬ್ಬರ ನಯವಾದ ಮಾತುಗಳಿಗೆ ಮರುಳಾಗಬೇಡಿ. ಅನಿವಾರ್ಯವಿದ್ದರೂ ಸಂಬಂಧಿಕರಲ್ಲಿ ಹಣದ ವ್ಯವಹಾರ ನಡೆಸಬೇಡಿ. **ಶುಭ ಸಂಖ್ಯೆ:** 5, **ಬಣ್ಣ:** ಗುಲಾಬಿ
(ಕ, ಕಿ, ಕು, ಘ, ಙ, ಛ, ಕೆ, ಕೊ, ಹ) ಮೃಗಶಿರ 3, 4, ಆರ್ದ್ರೆ, ಪುನರ್ವಸು 1, 2, 3

ಕಟಕ: ಕೆಲಸದ ಒತ್ತಡ ಕಡಿಮೆಯಾಗುವುದಲ್ಲದೇ ಲಾಭಕರವಾಗಿ ಮುಗಿಯುವುದು. ಆಪ್ತರು ನಿಮ್ಮ ನೆರವಿಗಾಗಿ ಕಾದು ಕುಳಿತುಕೊಳ್ಳಬಹುದು. ಹೂಡಿಕೆ ವಿಚಾರದಲ್ಲಿ ದೀರ್ಘಾಲೋಚನೆ ನಡೆಸುವುದು ಉತ್ತಮ. **ಶುಭ ಸಂಖ್ಯೆ:** 1, **ಬಣ್ಣ:** ಹಸಿರು
(ಹಿ, ಹು, ಹೆ, ಹೊ, ಡ, ಡಿ, ಡು, ಡೆ, ಡೊ) ಪುನರ್ವಸು 4ನೇ ಪಾದ, ಪುಷ್ಯ, ಆಶ್ಲೇಷ

ಸಿಂಹ: ತಪ್ಪು ತಿಳಿವಳಿಕೆಯಿಂದಾಗಿ ಅಥವಾ ಅತಿಯಾದ ಆಸೆಯಿಂದಾಗಿ ಹಣವನ್ನು ಕಳೆದುಕೊಳ್ಳುವ ಸನ್ನಿವೇಶಗಳು ಎದುರಾಗಬಹುದು. ಬಾಲ್ಯದಲ್ಲಿ ನಿಮ್ಮ ಯೋಗಕ್ಷೇಮವನ್ನು ನೋಡಿದವರನ್ನು ಭೇಟಿಯಾಗುವಿರಿ. **ಶುಭ ಸಂಖ್ಯೆ:** 4, **ಬಣ್ಣ:** ಸಿಂಧೂರ ಕೆಂಪು
(ಮ, ಮಿ, ಮು, ಮೊ, ಮೆ, ಟ, ಟಿ, ಟು, ಟೆ) ಮಖೆ, ಪುಬ್ಬೆ, ಉತ್ತರ ಫಲ್ಗುಣಿ 1ನೇ ಪಾದ

ಕನ್ಯಾ: ಭವಿಷ್ಯದ ಭದ್ರತೆ ಕುರಿತು ನಿಮ್ಮ ಕಾಳಜಿ ಕುಟುಂಬದವರಿಗೆ ಸಂತೃಪ್ತಿಯನ್ನು ತಂದುಕೊಡುವುದು. ನಿಮ್ಮ ಆಸೆ–ಆಕಾಂಕ್ಷೆಗಳಿಗೆ ಅಥವಾ ಯೋಚನೆಗಳಿಗೆ ನಿಮ್ಮವರಿಂದಲೇ ಅಡ್ಡಿ ಎದುರಾಗಬಹುದು. **ಶುಭ ಸಂಖ್ಯೆ:** 2, **ಬಣ್ಣ:** ಪಾಚಿ ಹಸಿರು
(ಟೊ, ಪ, ಪಿ, ಪು, ಷ, ಣ, ಠ, ಪೆ, ಪೊ) ಉತ್ತರ ಫಲ್ಗುಣಿ 2, 3, 4ನೇ ಪಾದ, ಹಸ್ತ, ಚಿತ್ತಾ 1, 2ನೇ ಪಾದ

ತುಲಾ: ಮನುಷ್ಯ ಪ್ರಯತ್ನದ ಜೊತೆ ಗಣಪತಿಯ ಮೊರೆ ಹೋಗುವುದರಿಂದ ಕಾರ್ಯಸಿದ್ಧಿಯಾಗಲಿದೆ. ನಿತ್ಯದ ದಿನಚರಿಯಲ್ಲಿ ಬದಲಾವಣೆ ಇರುವುದಿಲ್ಲ. ಆರ್ಥಿಕತೆಗಿಂತ ಸಂಬಂಧ ಮುಖ್ಯ ಎಂಬುದನ್ನು ಮರೆಯದಿರಿ. **ಶುಭ ಸಂಖ್ಯೆ:** 8, **ಬಣ್ಣ:** ಕೇಸರಿ
(ರ, ರಿ, ರು, ರೆ, ರೊ, ತ, ತಿ, ತು, ತೆ) ಚಿತ್ತಾ 3, 4ನೇ ಪಾದ, ಸ್ವಾತಿ, ವಿಶಾಖ 1, 2, 3ನೇ ಪಾದ

ವೃಶ್ಚಿಕ: ಕುಟುಂಬ ನಿರ್ವಹಣೆಯಲ್ಲಿ ವಿಪರೀತ ಖರ್ಚು ಕಾಣಿಸಲಿದೆ. ಆದರೆ ಆದಾಯಕ್ಕೆ ಕೊರತೆ ಇಲ್ಲ. ವಿದ್ಯಾಭ್ಯಾಸದಲ್ಲಿ ಹೆಚ್ಚು ಶ್ರಮ ವಹಿಸಬೇಕು. ಕೆಲಸದಲ್ಲಿ ಬಡ್ತಿ ಅಥವಾ ಬದಲಾವಣೆಯ ಯೋಚನೆ ಬರಲಿದೆ. **ಶುಭ ಸಂಖ್ಯೆ:** 6, **ಬಣ್ಣ:** ಕಪ್ಪು
(ತೊ, ನ, ನಿ, ನು, ನೆ, ನೊ, ಯ, ಯಿ, ಯು) ವಿಶಾಖ 4ನೇ ಪಾದ, ಅನುರಾಧ, ಜ್ಯೇಷ್ಠ

ಧನುಸ್ಸು: ಇಂದು ಜರುಗಲಿರುವ ಸಂಗತಿಯೊಂದು ಗಾಢ ಪರಿಣಾಮ ಬೀರಿ ನಿಮ್ಮ ವೃತ್ತಿಗೆ ಸಂಬಂಧಿಸಿದಂತೆ ಉತ್ತಮ ನಿರ್ಧಾರ ಕೈಗೊಳ್ಳಲು ಸಹಾಯವಾಗಲಿದೆ. ಅನಿರೀಕ್ಷಿತ ಪ್ರಯಾಣವು ಬದುಕಿನ ಹೊಸ ದಾರಿಗೆ ಕಾರಣವಾಗಲಿದೆ. **ಶುಭ ಸಂಖ್ಯೆ** 3, **ಬಣ್ಣ:** ಬಿಳಿ
(ಯೆ, ಯೊ, ಬ, ಬಿ, ಬು, ಧ, ಭ, ಫ, ಬೆ) ಮೂಲ, ಪೂರ್ವಾಷಾಢ, ಉತ್ತರಾಷಾಢ 1ನೇ ಪಾದ

ಮಕರ: ವಿದ್ಯಾರ್ಥಿ ಜೀವನ ನಡೆಸುತ್ತಿರುವವರು ಮನರಂಜನೆಗಿಂತ ಓದಿನ ಮೇಲೆ ಆದಷ್ಟು ಗಮನಹರಿಸುವುದು ಒಳ್ಳೆಯದು. ವೈದ್ಯರಾಗಿದ್ದಲ್ಲಿ ನಿಮ್ಮ ಕೈ ಗುಣದ ಬಗ್ಗೆ ಮೆಚ್ಚುಗೆಯ ಮಾತುಗಳನ್ನು ಕೇಳಲಿದ್ದೀರಿ. **ಶುಭ ಸಂಖ್ಯೆ:** 7, **ಬಣ್ಣ:** ಕಂದು
(ಬೊ,ಜ,ಜೆ,ಶಿ,ಶು,ಶೆ,ಶೊ,ಗ,ಗಿ) ಉತ್ತರಾಷಾಢ 2, 3, 4 ನೇ ಪಾದ, ಶ್ರವಣ, ಧನಿಷ್ಠ 1, 2ನೇ ಪಾದ

ಕುಂಭ: ಮಾತಿನ ಚತುರತೆಯಿಂದ ಇತರರನ್ನು ಗೆಲ್ಲುವ ಸಾಮರ್ಥ್ಯವಿದೆ. ಆದರೆ ಬೇರೆಯವರ ದುಃಖಕ್ಕೆ ಕಾರಣವಾಗದಂತೆ ಎಚ್ಚರವಹಿಸಿ. ಭೋಜನದ ಕ್ರಮ ಅಥವಾ ಸಮಯದಲ್ಲಿ ವ್ಯತ್ಯಾಸಗಳಾಗಬಹುದು. **ಶುಭ ಸಂಖ್ಯೆ:** 9, **ಬಣ್ಣ:** ಬೂದು
(ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ) ಧನಿಷ್ಠ 3, 4ನೇ ಪಾದ, ಶತಭಿಷ, ಪೂರ್ವಾಭಾದ್ರ 1, 2, 3ನೇ ಪಾದ

ಮೀನ: ಕಥೆ, ಕವನಗಳ ಬರವಣಿಗೆಯಲ್ಲಿ ಹೆಚ್ಚಿನ ಸಮಯ ಕಳೆಯುವಿರಿ. ಈ ದಿನ ನಿಮ್ಮ ಪ್ರತಿಭೆಯು ಸಂಬಂಧಪಟ್ಟವರ ಗಮನ ಸೆಳೆಯಲಿದೆ. ಮಕ್ಕಳು ನಿಮಗೆ ಸಂತಸ ತರಲಿದ್ದಾರೆ. **ಶುಭ ಸಂಖ್ಯೆ** 1, **ಬಣ್ಣ:** ಸುವರ್ಣ
(ದಿ,ದು,ಖ,ಝ,ಥ,ದೆ,ದೊ,ಚ,ಚಿ) ಪೂರ್ವಾಭಾದ್ರ 4ನೇ ಪಾದ, ಉತ್ತರಾಭಾದ್ರ, ರೇವತಿ

ವಿಜಯಬಂಧ – 7985



ಎಡದಿಂದ ಬಲಕ್ಕೆ
1 ವೈಷ್ಣವ ಪಂಥದ ಭಕ್ತ ತೊತ್ತಿ ಆಳು ಜೊತೆಯಾದ 2
3 ಬಾರದಂತೆ ತಡೆದದ್ದು ಕಾನೂನಿನಲ್ಲಿ ನಿಷೇಧವಾಗಿರುವುದು 3
5 ರಾವಣನ ಮುಂದೆ ಪ್ರಾಣಿಗಳು ಬಂದು ಮಾಡಿದ ಅರಚಾಟ 2
6 ವಿಮಾನವನ್ನೇ ಅಪಹರಿಸಿದ ಮಾಂತ್ರಿಕ 3
7 ಮಾತೆಯ ಆಣತಿಯಂತೆ ತಂಗಲು ಬಂದ ಆನೆ 3
8 ಸುದಾಮನಿಗೆ ಸಿಕ್ಕ ದೇವತೆಗಳ ಪೇಯ 2
9 ಆತುರ ಪಡದೆ ತಾಳಿಕೊಂಡು ಕಟ್ಟಿದ ಮಾಂಗಲ್ಯ 2
10 ಬಾನಲ್ಲಿ ಮುಗಿಲನ್ನು ಕಂಡು ನರ್ತಿಸಿದ ಮೋಹಕ ಪಕ್ಷಿ 3
12 ಕರವನ್ನು ಆಳದಲ್ಲಿ ತೋರಿದಾಗ ಕಠೋರವಾದದ್ದು ಕಂಡಿತು 3
14 ನಕ್ಷೆಯಲ್ಲಿ ತೋರಿಸಿರುವಂತಹ ತಾರೆ 3
15 ಪತಾಕೆ ಏರಿಸಲು ಹೋದವನು ಕೆಳಗೆ ಬಿದ್ದ ಬಗೆ 3
17 ಕಾದಾಟದ ನಂತರವೂ ನೀಡಿದ ತೊಂದರೆ 2
18 ಅವಶ್ಯವಾಗಿ ಅಧೀನ ಮಾಡಿಕೊಳ್ಳುವಿಕೆ 2
19 ರಾಯರು ಸಮಯಕ್ಕೆ ಸರಿಯಾಗಿ ತಂದ ನಿರೂಪ 3
21 ಅಗ್ರ ಸ್ಥಾನದಲ್ಲಿರುವ ಕಡೆ ಎಲ್ಲವೂ ಸಂಪೂರ್ಣವಾಗಿದೆ 3
22 ಪರಾಕ್ರಮ ತೋರಲು ತೋಳಿನ ಬದಿಯ ಅಂಗ 2
23 ಶಾಂತಿಗೆ ಸಿಕ್ಕಿದ ಬಿಡುವು 3
24 ಹತ್ತಿರ ಹೋಗಿ ಕುಯ್ದು ತಂದ ಅರಳೆ 2

ಮೇಲಿನಿಂದ ಕೆಳಕ್ಕೆ
2 ಸಂಧಾನದ ಸಮಯದಲ್ಲಿ ಮಾಡಿದ ಸಂತೈಕೆ 4
3 ನೀರಿಗಾಗಿ ಅಗೆದ ಕೂಪ 2
4 ವಿರಾಜಮಾನಳಾದ ಲಕ್ಷ್ಮಿ 2
5 ಸಂಗೀತದ ಸ್ವರಶುದ್ಧತೆಗೆ ಪೂರಕವಾದದ್ದು 4
11 ಆಡಳಿತ ನಡೆಸುವವರ ಎದುರು ಕುಳಿತ ರಾಜಕೀಯ ಪಾರ್ಟಿ 3
13 ರಾವು ಬಡಿದರೂ ಛಲದಿಂದ ಕುದುರೆ ಓಡಿಸಿದಾತ 3
14 ನೃತ್ಯದಲ್ಲಿ ಪರಿಣತನಾದ ಶಿವ 4
16 ಮಾನವನನ್ನು ನಿಯಂತ್ರಿಸುವ ಒಂಬತ್ತು ಕಾಯ 4
20 ರಸವಿದ್ಯೆಯಲ್ಲೂ ಅಡಗಿರುವ ಸಿಹಿ 2
21 ಸರಸ್ವತಿಯ ಧ್ಯಾನದಲ್ಲಿ ತೊಡಗಿದ ಹೆಂಡತಿ 2

ವಿಜಯಬಂಧ | 7984

ಎಡದಿಂದ ಬಲಕ್ಕೆ: 1.ಸಹಸ್ರಾರು 3.ಕಟ್ಟೋಲಗ 5.ಚಿತ್ತಾರ 6.ಮಾಲೀಕ 7.ಗಣತಿ 9.ಊನ 10.ರಜತ 12.ಲಯ 14.ಶಿರ 16.ಸಿತಾರ 18.ಗೋಣಿ 19.ವಾರ್ವಾಡಿ 20.ವಿಹ್ವಲ 22.ಮಿರಾಸು 24.ನರನಾಡಿ 25.ತಲೆಕಟ್ಟು
ಮೇಲಿನಿಂದ ಕೆಳಕ್ಕೆ: 1.ಸಪ್ಪೆ 2.ರುಚಿಕರ 3.ಕರಗತ 4.ಗಸ್ತು 6.ಮಾನ 8.ತಿಲ 9.ಊರ್ವಶಿ 11.ಜನತಾ 13.ಯಕ್ಷಿಣಿ 15.ರಮಾ 16.ಸಿಡಿಮಿಡಿ 17.ರವಿಸುತ 18.ಗೋಲ 21.ಘನ 23.ರಟ್ಟು

ಅ.ನಾ. ಪ್ರಹ್ಲಾದರಾವ್

ಲವಲVK

ಬಾಲಿವುಡ್ ನಟಿ ಪ್ರಿಯಾಂಕಾ ಚೋಪ್ರಾ ಶೀಘ್ರದಲ್ಲಿ ಹಾಲಿವುಡ್ ತಾರೆ ಏಂಜಲಿನಾ ಜೋಲಿ ಜತೆಗೂಡಿ ಹೊಸ ಪ್ರಾಜೆಕ್ಟ್ ಆರಂಭಿಸಲಿದ್ದಾರೆ ಎನ್ನಲಾಗುತ್ತಿದೆ.

ಬಾಲಿವುಡ್ ನಟಿ ಕರಿಷ್ಮಾ ಕಪೂರ್ ತಮ್ಮ 16ನೇ ವಯಸ್ಸಿನಲ್ಲಿ ನಟಿಸಿದ ಚೊಚ್ಚಲ ಸಿನಿಮಾ 'ಪ್ರೇಮ್ ಕೈದಿ'ಯ 35ನೇ ವರ್ಷದ ಸಂಭ್ರಮವನ್ನು ಆಚರಿಸಿದ್ದಾರೆ.

ಅಕ್ಷಯ್ ಕುಮಾರ್, ದಿಶಾ ಪಟಾನಿ ನಟನೆಯ 'ವೆಲ್‌ಕಮ್ ಟು ದ ಜಂಗಲ್' ಸಿನಿಮಾ ಸೆನ್ಸಾರ್ ಮಂಡಳಿ ಸೂಚಿಸಿದ 18 ಬದಲಾವಣೆಗಳನ್ನು ಮಾಡಿಕೊಂಡ ಬಳಿಕ 'ಯುಎ' ಪ್ರಮಾಣಪತ್ರ ಪಡೆದಿದೆ.

ನಂಟು ಬೆಸೆಯುವ ಗಂಧದ ಗಂಟು

ಭಾರತೀಯ ಮದುವೆಯಲ್ಲಿ ಸೆಂಟ್ ಸ್ಕೇಪಿಂಗ್ | ಐಷಾರಾಮಿ ಮದುವೆಯ ಹೊಸ ಆಯಾಮ | ಪ್ರೀತಿಯ ಬಂಧಕ್ಕೆ ಸುಗಂಧದ ಸಾಕ್ಷಿ

ಮದುವೆಯ ಅಲಂಕಾರದಲ್ಲಿ ಈಗ ಸುಗಂಧ ದ್ರವ್ಯ ಪ್ರಮುಖ ಪಾತ್ರ ವಹಿಸುತ್ತಿದ್ದು, ಭಾವನಾತ್ಮಕ ಬೆಸುಗೆಯಾಗಿ ಗಮನ ಸೆಳೆಯುತ್ತಿದೆ.

ಶುಭಾ ವಿಕಾಸ್
shubha.hegde@timesofindia.com

ಮದುವೆ ಅಂದರೆ ಅಲ್ಲಿ ಮುಗಿಯದ ಮಾತು, ನಿಲ್ಲದ ನಗು, ಆಭರಣಗಳ ಸಡಗರ, ಉಡುಪುಗಳ ವೈಭೋಗ. ಈಗ ಮದುವೆ ಸಂಭ್ರಮ ಕೇವಲ ಕಣ್ಣಿಗೆ ಕಟ್ಟುವ, ಕಿವಿಗೆ ಕೇಳುವ ಸಡಗರವಲ್ಲ, ಗಾಳಿಯಲ್ಲಿ ತೇಲಿ ಬರುವ ಗಂಧದೊಂದಿಗೆ ಮದುವೆ ದಿಬ್ಬಣ ಹೊರಡುತ್ತದೆ. ಸಪ್ತಪದಿಗೆ ಸುಗಂಧವೇ ಸಾಕ್ಷಿ. ವಧು-ವರರನ್ನು ಹರಸಿ ಹೊರಡುವ ಅತಿಥಿಗಳ ನೆನಪಲ್ಲೂ ಇದೇ ಪರಿಮಳ ಪಯಣ ಬೆಳೆಸುತ್ತದೆ.

ಅದ್ಧೂರಿ ಮದುವೆ ಈಗ ದೃಶ್ಯ ವೈಭವಕ್ಕೆ ಸೀಮಿತವಾಗಿಲ್ಲ, ನೆನಪುಗಳನ್ನು ಸೃಷ್ಟಿಸುವ ವೇದಿಕೆಯಾಗುತ್ತಿದ್ದು, ಇದೇ ಲಕ್ಷುರಿ ವೆಡ್ಡಿಂಗ್ ಜಗತ್ತಿನಲ್ಲಿ ಸೆಂಟ್ ಸ್ಕೇಪಿಂಗ್ ಹೆಸರಿನಲ್ಲಿ ಸುಗಂಧ ವಿವಾಹ ಸದ್ದು ಮಾಡುತ್ತಿದೆ. ಈ ನಿಟ್ಟಿನಲ್ಲಿ ಮದುವೆಯ ಪ್ರತಿ ಹಂತಕ್ಕೂ ಪ್ರತ್ಯೇಕ ಸುಗಂಧದ ಪರಿಸರವನ್ನು ನಿರ್ಮಿಸುವುದೇ ಈ ಮದುವೆಯ ಪರಿಕಲ್ಪನೆ. ಮದುವೆ ಮುಗಿದು ಮಂಟಪದ ಹೂವುಗಳು ಒಣಗಬಹುದು, ಶಾಮಿಯಾನ ಕಳಚಬಹುದು. ಆದರೆ ಆ ದಿನ ಮನಸ್ಸಿಗೆ ಮುಟ್ಟಿದ ಸುಗಂಧದ ನೆನಪು ಮಾಸುವುದಿಲ್ಲ, ವರ್ಷಗಳ ನಂತರವೂ ಆ ನಿರ್ದಿಷ್ಟ ಸುಗಂಧವನ್ನು ಎಲ್ಲಾದರೂ ಆಘ್ರಾಣಿಸಿದರೂ ನಿಗದಿತ ಮದುವೆಯ ಸುಂದರ ಕ್ಷಣಗಳು ಕಣ್ಣಮುಂದೆ ತೇಲಿಬರುತ್ತವೆ. ಇದೇ ಕಾರಣಕ್ಕೆ ಯುವ ಪೀಳಿಗೆ ಈ ಪರಿಕಲ್ಪನೆಗೆ ಮನಸೋತಿದೆ.

ಹಳೆ ಕಲ್ಪನೆಗೆ ಆಧುನಿಕ ಟಚ್: ಮದುವೆಯಲ್ಲಿ ಪರಿಮಳ ಸೂಚಿಸುವ ಹೂಗಳ ಅಲಂಕಾರ ಸಹಜ. ಮದುವೆ ದಿಬ್ಬಣ ಬಂದಾಗ ಅತಿಥಿಗಳ ಮೇಲೆ ಲಘುವಾಗಿ ಅತ್ತರ್ ಸಿಂಪಡಿಸಿ ಬರಮಾಡಿಕೊಳ್ಳುವುದು, ತುಂಬಿದ ಸಭಾ ಮಂಟಪದ ಬಳಿ ಊದುಬತ್ತಿಯ ಕಂತೆ ಹಚ್ಚಿಡುವುದು ಸಂಪ್ರದಾಯ. ಈಗ ಇದಕ್ಕೆ ಆಧುನಿಕ ಟಚ್ ಸಿಕ್ಕಿದೆ. ಪರಿಮಳ ಸೂಚಿಸುವ ತಾಜಾ ಹೂಗಳ ಅಲಂಕಾರ, ಸುಗಂಧ ಕ್ಯಾಂಡಲ್, ಡಿಸೈನರ್ ಡಿಫ್ಯೂಸರ್‌ಗಳನ್ನು ಅಲಂಕಾರಿಕವಾಗಿ ಬಳಸಲಾಗುತ್ತದೆ. ತಾಂಬೂಲದ ಚೀಲದಲ್ಲಿ ಸಾಂಪ್ರದಾಯಿಕ ಸಿಹಿತಿಂಡಿಗಳ ಜೊತೆಗೆ ಮದುವೆಯ ಸಿಗ್ನೇಚರ್ ಸುಗಂಧ ಹೊಂದಿರುವ ಮಿನಿ ಕ್ಯಾಂಡಲ್‌ಗಳು, ಎಸೆನ್ಷಿಯಲ್ ಆಯಿಲ್‌ಗಳನ್ನು ರಿಟರ್ನ್ ಗಿಫ್ಟ್ ಆಗಿ ನೀಡಲಾಗುತ್ತದೆ. ಇಂತಹ ಮದುವೆಗೆ ಬರುವ ಅತಿಥಿಗಳು ತಮ್ಮಿಷ್ಟದ ಸುವಾಸನೆಯ ಸುಗಂಧವನ್ನು ಸ್ಥಳದಲ್ಲೇ ತಯಾರಿಸಿಕೊಳ್ಳಬಹುದಾದ ಪರ್‌ಫ್ಯೂಮ್ ಬಾರ್‌ಗಳು ಪ್ರಮುಖ ಆಕರ್ಷಣೆ.

ಸುಗಂಧ ಸಪ್ತಪದಿ

ಪರ್‌ಫ್ಯೂಮ್ ಬಾರ್: ಡೆಸ್ಟಿನೇಷನ್ ವೆಡ್ಡಿಂಗ್‌ಗಳಲ್ಲಿ ಪರ್‌ಫ್ಯೂಮ್ ಬಾರ್‌ಗಳು ಹೆಚ್ಚಾಗಿ ಕಾಣಿಸುತ್ತವೆ. ಸ್ಥಳೀಯ ಮದುವೆಗಳಿಗೆ ಹೋಲಿಸಿದರೆ ಗೋವಾ, ಕೋಲ್ಕೊತಾ, ಉದಯಪುರ ಮತ್ತು ಜೈಪುರದಂತಹ ತಾಣಗಳಲ್ಲಿ ನಡೆಯುವ ಡೆಸ್ಟಿನೇಷನ್ ಮದುವೆಗಳಲ್ಲಿ ಇಂತಹ ಸುಗಂಧ ಬಾರ್‌ಗಳ ಬುಕಿಂಗ್ ಇತ್ತೀಚೆಗೆ ಹೆಚ್ಚಳವಾಗಿದೆ ಎಂದಿದೆ ವರದಿ. ಇದರ ವೆಚ್ಚ ಅಂದಾಜು 35,000ದಿಂದ 2,00,000 ರೂಗಳವರೆಗೆ ಇರುತ್ತದೆ. ಮೆಹಂದಿ ಮತ್ತು ಹಳದಿ ಶಾಸ್ತ್ರಕ್ಕೆ ಹಿತವಾದ ಮಲ್ಲಿಗೆ ಅಥವಾ ಲಿಂಬೆಯ ಉಲ್ಲಾಸಭರಿತ ಪರಿಮಳವಿದ್ದರೆ, ಮುಹೂರ್ತದ ಹೊತ್ತಿಗೆ ಸಾಂಪ್ರದಾಯಿಕ ಚಂದನ ಅಥವಾ ರಜನಿಗಂಧದ ದೈವಿಕ ಸುಗಂಧವಿರುತ್ತದೆ. ಅದೇ ಸಂಜೆಯ ಪಾರ್ಟಿಗೆ ವಾರ್ಮ್ ವೆನಿಲಾ ಇಡೀ ವಾತಾವರಣವನ್ನು ಆವರಿಸಿಕೊಳ್ಳುತ್ತದೆ.

ಪ್ರೀತಿಯ ಗಂಧ: ವೈವಾಹಿಕ ಬಂಧದ ಗುರುತಿಗೆ ವಧುವರರು ತಮ್ಮಿಷ್ಟದ ಸುಗಂಧವನ್ನು ಮದುವೆ ದಿನ ಯಾವುದೇ ರೂಪದಲ್ಲಿ ಬಳಸಬಹುದು. ಇದರಿಂದ ಸಮಾರಂಭ ಮುಗಿದ ಮೇಲೂ ಅದು ಆಗಾಗ ಮೂಗಿನತ್ತ ಸುಳಿದು ಮದುವೆ ದಿನ ನೆನಪಿಸಿ ಪುಳಕಿತಗೊಳಿಸುತ್ತದೆ. ದಾಂಪತ್ಯಕ್ಕೆ ವರ್ಷವೂ ತುಂಬುತ್ತದೆ. ಈ ಹೊತ್ತಲ್ಲಿ ಸಮಸ್ಯೆಗಳ ನಡುವೆ ನಲುಗುವ ದಾಂಪತ್ಯ ಬೇರೆಯಾಗಲು ಹವಣಿಸಬಹುದು. ಜೊತೆಯಾಗಿ ಸಪ್ತಪದಿ ತುಳಿದು ಈಗ ಹಳೆಯ ನೆನಪು ಬಿಟ್ಟು ಪರಸ್ಪರ ಬೇರೆ ದಾರಿಯಲ್ಲಿ ಹೊರಡುವ ವೇಳೆ ಮತ್ತೆ ತೇಲಿ ಬರುವ ಮದುವೆ ದಿನದ ಗಂಧ ಇಬ್ಬರನ್ನು ಮತ್ತೆ ಬಂದಿಯಾಗಿಸುತ್ತದೆ. ಹೊಸದೊಂದು ರೋಮಾಂಚನದ ಗಾಳಿ ಬೀಸಿದಂತಾಗಿ ಹಳಸಿದ ಸಂಬಂಧ ಹಸನಾಗುತ್ತದೆ. ಈ ನಿಟ್ಟಿನಲ್ಲಿ ಈ ಸುಗಂಧಭರಿತ ವಿವಾಹ ಸಂಬಂಧವನ್ನು ಬಿಗಿಗೊಳಿಸುವ ಆಪ್ತ ಸಲಹೆಗಾರನ ಪಾತ್ರ ವಹಿಸುತ್ತದೆ. ■

> ಸಾಂಪ್ರದಾಯಿಕವಾಗಿ ಸುಗಂಧರಾಜ, ಮಲ್ಲಿಗೆ ಹೂಗಳ ಘಮದ ಮೂಲಕ ಮದುವೆಗೆ ಆಹ್ಲಾದ ವಾತಾವರಣ ಮೂಡಿಸಲಾಗುತ್ತದೆ. ಈಗ ಅದನ್ನೂ ಮೀರಿ ಸುಗಂಧ ಬಾರ್‌ಗಳು, ಸುಗಂಧ ಪ್ರೇರಿತ ಅಲಂಕಾರ ಈ ಮದುವೆಯ ಮುಖ್ಯ ಆಕರ್ಷಣೆ. ಇದು ಮದುವೆ ಮಾರುಕಟ್ಟೆಗೆ ಹೊಸ ಆಯಾಮ ನೀಡಿದ್ದು, ಇದಕ್ಕಾಗಿಯೇ ಸುಗಂಧ ತಜ್ಞರು ಕಾರ್ಯ ನಿರ್ವಹಿಸುತ್ತಾರೆ.
>
> -ಧ್ರುವ ಕುಮಾರ್ | ಸೆಲೆಬ್ರಿಟಿ ವೆಡ್ಡಿಂಗ್ ಪ್ಲಾನರ್

ಯೋಜನೆಯೇ ಮುಖ್ಯ

ಸುಗಂಧ ಅಂದಾಕ್ಷಣ ಇಡೀ ಸಭಾಂಗಣದುದ್ದಕ್ಕೂ ಪರಿಮಳ ಮೂಡಿಸುವುದು ಉದ್ದೇಶವಲ್ಲ. ಏಕೆಂದರೆ ಇದಕ್ಕೆ ಕಿರಿಕಿರಿ ಉಂಟು ಮಾಡುವ ಗುಣವೂ ಇದೆ. ಹೀಗಾಗಿ ಇಲ್ಲಿ ಹಲವು ಸಂಗತಿಗಳನ್ನು ಗಮನದಲ್ಲಿಟ್ಟುಕೊಂಡು ಯೋಜನೆ ರೂಪಿಸಲಾಗುತ್ತದೆ. ಇದಕ್ಕಾಗಿಯೇ ಸುಗಂಧ ತಜ್ಞರನ್ನು ನೇಮಿಸಿಕೊಳ್ಳಲಾಗುತ್ತಿದೆ. ಇವರು ಮದುವೆಯ ಸಭಾಂಗಣದ ವಿಸ್ತೀರ್ಣ, ಆಯ್ದುಕೊಂಡ ಹೂವುಗಳು, ಋತುಕಾಲ, ಒಳಾಂಗಣ ಹಾಗೂ ಹೊರಾಂಗಣ ಮದುವೆ, ಹವಾಮಾನ ಮತ್ತು ವಧು-ವರರ ವೈಯಕ್ತಿಕ ಇಷ್ಟಗಳನ್ನು ಗಮನದಲ್ಲಿಟ್ಟುಕೊಂಡು ಅರೋಮಾ ಡಿಫ್ಯೂಸರ್‌ಗಳು ಹಾಗೂ ವೆಡ್ಡಿಂಗ್ ಕ್ಯಾಂಡಲ್‌ಗಳನ್ನು ಎಲ್ಲಿ, ಹೇಗೆ ಬಳಸಬೇಕು ಎಂದು ತೀರ್ಮಾನಿಸುತ್ತಾರೆ. ವೆಡ್ಡಿಂಗ್ ಪ್ಲಾನರ್‌ಗಳ ಪ್ರಕಾರ, ಇಂತಹ ವಿವಾಹ ಆಯೋಜನೆಗೆ ದುಬಾರಿ ಬಜೆಟ್ ನಿಗದಿಯಾಗುತ್ತದೆ. ಆದರೆ ಉಳ್ಳವರ ಪಾಲಿಗೆ ಇದು ಕೇವಲ ಖರ್ಚಲ್ಲ, ಬದಲಿಗೆ ಅತಿಥಿಗಳ ಮನಸ್ಸಿನಲ್ಲಿ ಮದುವೆಯ ನೆನಪನ್ನು ಶಾಶ್ವತವಾಗಿ ಉಳಿಸಲು ಮಾಡುವ ಒಂದು ಭಾವನಾತ್ಮಕ ಹೂಡಿಕೆ.

ಚುರುಮುರಿ

ಶ್ರೀಲೀಲಾಗೆ ಅವಮಾನ

ಮುಂಬಯಿಯಲ್ಲಿ ನಡೆದ ಯೋಗ ಕಾರ್ಯಕ್ರಮದ ವೇದಿಕೆಯಲ್ಲಿ ಮಹಾರಾಷ್ಟ್ರ ಸಿಎಂ ಪತ್ನಿ ಅಮೃತಾ ಫಡ್ನವಿಸ್ ಫೋಟೊಗೆ ಅಡ್ಡಿಯಾಗುತ್ತಿದೆ ಎಂದು ಬಹುಭಾಷಾ ನಟಿ ಶ್ರೀಲೀಲಾರನ್ನು ಪಕ್ಕಕ್ಕೆ ಸರಿದು ಹೋಗುವಂತೆ ಹೇಳಿರುವ ವಿಡಿಯೊ ವೈರಲ್ ಆಗಿದೆ. ಈ ದೃಶ್ಯದಲ್ಲಿ ಶ್ರೀಲೀಲಾರನ್ನು ತೀರಾ ಅವಮಾನಿಸುವ ರೀತಿಯಲ್ಲಿ ಅಮೃತಾ ಕೈ ಸನ್ನೆ ಮಾಡಿದ್ದಾರೆ ಎಂದು ಅಭಿಮಾನಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಜಾಕ್ವೆಲಿನ್‌ಗೆ ಬಾಡಿಗಾರ್ಡ್ ಕಿರಿಕಿರಿ

ಇತ್ತೀಚೆಗೆ ನಟಿ ಜಾಕ್ವೆಲಿನ್ ಫರ್ನಾಂಡಿಸ್‌ಗೆ ಅವರ ಬಾಡಿಗಾರ್ಡ್‌ನ ವರ್ತನೆ ಕಿರಿಕಿರಿ ಉಂಟು ಮಾಡಿರುವ ಘಟನೆ ನಡೆದಿದೆ. ಖಾಸಗಿ ಕಾರ್ಯಕ್ರಮಕ್ಕೆ ಹೋಗುತ್ತಿದ್ದ ಅವರನ್ನು ಅಭಿಮಾನಿಗಳು ಮುತ್ತಿಕೊಂಡಾಗ ಬಾಡಿಗಾರ್ಡ್ ನಟಿಯನ್ನು ಬಲವಂತವಾಗಿ ವೇದಿಕೆಗೆ ಎಳೆದೊಯ್ಯುವ ಪ್ರಯತ್ನ ಮಾಡಿದ್ದಾರೆ. ಇದರಿಂದ ಕೋಪಗೊಂಡ ಜಾಕ್ವೆಲಿನ್ ಕೈಬಿಡಿಸಿಕೊಂಡು ಫ್ಯಾನ್ಸ್ ಜತೆಗೆ ಸೆಲ್ಫಿಗೆ ಪೋಸ್ ನೀಡಿದ್ದಾರೆ.

ಸ್ಟಾರ್ ಮಕ್ಕಳ ಲಾಂಚ್ ಇಯರ್

2026 ಸ್ಟಾರ್ ಮಕ್ಕಳ ಲಾಂಚ್ ಪ್ಯಾಡ್ ಆಗಿದೆ. ಭಾರತೀಯ ಚಿತ್ರರಂಗದ ಖ್ಯಾತ ಸ್ಟಾರ್‌ಗಳ ಮಕ್ಕಳು ಈ ವರ್ಷ ಚಿತ್ರರಂಗಕ್ಕೆ ಪದಾರ್ಪಣೆ ಮಾಡುತ್ತಿದ್ದಾರೆ. ಇದರ ವಿವರ ಇಲ್ಲಿದೆ.

ಕಿರಣ್ ಚಂದ್ರ
kiran.b@timesofindia.com

ಚಿತ್ರರಂಗದಲ್ಲಿ ನೆಪೋಟಿಸಂ ಚರ್ಚೆ ಬಿರುಸುಗೊಂಡಿದ್ದರೂ ಸ್ಟಾರ್ ನಟರು ತಮ್ಮ ಮಕ್ಕಳನ್ನು ಸಿನಿಮಾಗೆ ಕರೆತರುವ ಪ್ರಯತ್ನ ನಿಲ್ಲಿಸಿಲ್ಲ. ಆದರೆ ಈ ಕ್ಷೇತ್ರಕ್ಕೆ ಅಧಿಕೃತವಾಗಿ ಎಂಟ್ರಿಯಾಗುವ ಸ್ಟಾರ್ ಕಿಡ್‌ಗಳು ಸಕಲ ರೀತಿಯಲ್ಲಿ ಸಿದ್ಧರಾಗಿ ಬರುತ್ತಿರುವುದು ವಿಶೇಷ.

ಕನ್ನಡದಲ್ಲಿ ಲಾಂಚ್ ಪರ್ವ

ಸ್ಯಾಂಡಲ್‌ವುಡ್‌ನಲ್ಲಿ ಈ ವರ್ಷ ಕೆಲವು ಸ್ಟಾರ್‌ಗಳ ಮಕ್ಕಳು ಲಾಂಚ್ ಆಗಲಿದ್ದಾರೆ. ಈ ಪೈಕಿ ನಟ ಸುದೀಪ್ ತಮ್ಮ ಸಹೋದರಿಯ ಪುತ್ರ ಸಂಚಿತ್ ಸಂಜೀವ್‌ರನ್ನು 'ಮ್ಯಾಂಗೊ ಪಚ್ಚ' ಸಿನಿಮಾ ಮೂಲಕ ಅಖಾಡಕ್ಕೆ ಇಳಿಸಿದ್ದಾರೆ. ನಟ ದುನಿಯಾ ವಿಜಯ್ ತಮ್ಮ ಇಬ್ಬರು ಹೆಣ್ಣುಮಕ್ಕಳ ಪೈಕಿ ರಿತನ್ಯಾರನ್ನು 'ಲ್ಯಾಂಡ್‌ಲಾರ್ಡ್' ಚಿತ್ರದ ಮೂಲಕ ಪರಿಚಯಿಸಿದ್ದಾರೆ. ಮತ್ತೊಬ್ಬ ಪುತ್ರಿ ಮೋನಿಷಾರನ್ನು ತಮ್ಮದೇ ನಿರ್ದೇಶನದ 'ಸಿಟಿ ಲೈಟ್ಸ್' ಸಿನಿಮಾ ಮೂಲಕ ಲಾಂಚ್ ಮಾಡುತ್ತಿದ್ದಾರೆ. ಈ ಚಿತ್ರ ಕೂಡ ಇದೇ ವರ್ಷ ರಿಲೀಸ್ ಆಗಲಿದೆ. ಇನ್ನು ನಟ ಉಪೇಂದ್ರ ಮಗ ಆಯುಷ್ ಸಹ ಈ ವರ್ಷವೇ ಲಾಂಚ್ ಆಗಲಿದ್ದಾರೆ. ಈಗಾಗಲೇ ಅವರ ನಟನೆಯ ಸಿನಿಮಾ ಶೂಟಿಂಗ್‌ನ ಮೊದಲ ಹಂತ ಕಾಶ್ಮೀರದಲ್ಲಿ ನಡೆದಿದ್ದು, ಮುಂದಿನ ಹಂತ ಮೈಸೂರಿನಲ್ಲಿ ಆರಂಭವಾಗಲಿದೆ.

ಕಾಲಿವುಡ್‌ನಲ್ಲಿ ಹೊಸ ಸಂಚಲನ

ಸೂಪರ್‌ಸ್ಟಾರ್ ರಜನಿಕಾಂತ್ ಮೊಮ್ಮಗ, ನಟ ಧನುಷ್ ಪುತ್ರ 'ಯಾತ್ರ' ಈ ವರ್ಷ ಚಿತ್ರರಂಗಕ್ಕೆ ಎಂಟ್ರಿ ಕೊಡಲಿದ್ದಾರೆ. ನಟನೆ ಜತೆಗೆ ನಿರ್ದೇಶನದಲ್ಲೂ ಸೈ ಎನಿಸಿಕೊಂಡಿರುವ ಧನುಷ್ ತಮ್ಮ ಮಗನ ಸಿನಿಮಾ ನಿರ್ದೇಶನಕ್ಕೆ ತಯಾರಿ ನಡೆಸಿದ್ದು, ಸ್ವಂತ ಬ್ಯಾನರ್‌ನಲ್ಲಿಯೇ ಮಗನನ್ನು ಲಾಂಚ್ ಮಾಡಲಿದ್ದಾರೆ ಎನ್ನಲಾಗಿದೆ. 'ಯಾತ್ರ' ಈ ವರ್ಷಾಂತ್ಯಕ್ಕೆ ಸಿನಿಮಾ ಕೆಲಸ ಆರಂಭಿಸುವ ಸಾಧ್ಯತೆ ಇದೆ. ಇದೇ ರೀತಿ ಸೂಪರ್ ಸ್ಟಾರ್ ಸಿಎಂ ವಿಜಯ್ ದಳಪತಿ ಪುತ್ರ ಜೇಸನ್ ವಿಜಯ್ ಕೂಡ ಈ ವರ್ಷ ತಮ್ಮ ಚೊಚ್ಚಲ ನಿರ್ದೇಶನದ ಸಿನಿಮಾ ಮೂಲಕ ಚಿತ್ರರಂಗಕ್ಕೆ ಎಂಟ್ರಿ ಕೊಡಲಿದ್ದಾರೆ. ಸಂದೀಪ್ ಕಿಶನ್ ಅಭಿನಯದ 'ಸಿಗ್ಮಾ' ಸಿನಿಮಾಗೆ ಅವರು ಆ್ಯಕ್ಷನ್ ಕಟ್ ಹೇಳಲಿದ್ದಾರೆ.

ಬಾಲಿವುಡ್‌ನಲ್ಲೂ ಸ್ಟಾರ್ ಕಿಡ್ಸ್ ಭರಾಟೆ

ಈ ವರ್ಷ ಬಾಲಿವುಡ್‌ನಲ್ಲಿ ನಟ ಗೋವಿಂದ ಪುತ್ರ ಯಶವರ್ಧನ್ ಅಹುಜಾ ಹೀರೊ ಆಗಿ ಲಾಂಚ್ ಆಗಲಿದ್ದಾರೆ. ಇದರಲ್ಲಿ ಕನ್ನಡತಿ ಶ್ರೀಲೀಲಾ ನಟಿಸಲಿದ್ದಾರೆ ಎನ್ನಲಾಗಿತ್ತು. ನಟ ಸೈಫ್ ಅಲಿ ಖಾನ್ ಪುತ್ರ ಇಬ್ರಾಹಿಂ ಅಲಿ ಖಾನ್ ಈಗಾಗಲೇ ವೆಬ್ ಸಿರೀಸ್ ಮೂಲಕ ಗಮನ ಸೆಳೆದಿದ್ದು, ಈ ವರ್ಷ 'ದಿಲಾರ್' ಸಿನಿಮಾ ಮೂಲಕ ಬೆಳ್ಳಿತೆರೆಗೆ ಬರಲು ಸಜ್ಜಾಗಿದ್ದಾರೆ. ಮೇರುನಟ ಅಮಿತಾಭ್ ಬಚ್ಚನ್ ಮೊಮ್ಮಗ ಅಂದರೆ ಮಗಳು ಶ್ವೇತಾ ಅವರ ಮಗ ಅಗಸ್ತ್ಯ ನಂದ ಕೂಡ 2026ರ ಆರಂಭದಲ್ಲಿ 'ಇಕ್ಕಿಸ್' ಚಿತ್ರದ ಮೂಲಕ ಲಾಂಚ್ ಆಗಿದ್ದಾರೆ. ತಾರಾದಂಪತಿ ರಾಜೇಶ್ ಖನ್ನಾ ಹಾಗೂ ಡಿಂಪಲ್ ಕಪಾಡಿಯಾ ಮೊಮ್ಮಗಳು, ಪುತ್ರಿ ರಿಂಕಿ ಖನ್ನಾ ಮಗಳು ನೌಮಿಕಾ ಸರನ್ ಈ ವರ್ಷ ಬೆಳ್ಳಿತೆರೆಗೆ ಬರಲು ಸಜ್ಜಾಗಿದ್ದಾರೆ. ಶಾರುಖ್ ಖಾನ್ ಪುತ್ರಿ ಸುಹಾನಾ ಖಾನ್ 'ಕಿಂಗ್' ಸಿನಿಮಾಗೆ ಬಣ್ಣ ಹಚ್ಚುವ ಮೂಲಕ ಚಿತ್ರರಂಗಕ್ಕೆ ಅಧಿಕೃತವಾಗಿ ಸೇರ್ಪಡೆಯಾಗಿದ್ದಾರೆ. ■

ಬಿಪ್ಲಬ್ ಕುಮಾರ್ ದೇವ್, ತ್ರಿವೇಣಿ ರಾವ್

ಟಗರು ಸರೋಜಾ ವೆಡ್ಸ್ ಮಾಜಿ ಸಿಎಂ

ತ್ರಿವೇಣಿಗೆ ಒಲಿದ ತ್ರಿಪುರ ಸುಂದರ

ಸ್ಯಾಂಡಲ್‌ವುಡ್ ಹಾಗೂ ಟಾಲಿವುಡ್‌ನ ಅನೇಕ ಸಿನಿಮಾಗಳಲ್ಲಿ ಅಭಿನಯಿಸಿರುವ ಕನ್ನಡತಿ ತ್ರಿವೇಣಿ ರಾವ್ ಈಗ ಸದ್ದಿಲ್ಲದೆ ತ್ರಿಪುರ ರಾಜ್ಯದ ಮಾಜಿ ಸಿಎಂ ಹಾಗೂ ಹಾಲಿ ಎಂಪಿ ಬಿಪ್ಲಬ್ ಕುಮಾರ್ ದೇವ್ ಅವರನ್ನು ಜೂನ್ 19ರಂದು ದಿಲ್ಲಿಯಲ್ಲಿ ಮದುವೆಯಾಗಿದ್ದಾರೆ. ಜೂನ್ 24ರಂದು ಅಗರ್ತಾಲದಲ್ಲಿ ಅವರ ವೆಡ್ಡಿಂಗ್ ರಿಸೆಪ್ಷನ್ ಅದ್ಧೂರಿಯಾಗಿ ನಡೆಯಲಿದೆ.

ಲವಲvk ಸುದ್ದಿಲೋಕ
feedbacklvk@vijaykarnataka.com

ಕನ್ನಡ ಸಿನಿಮಾಗಳಲ್ಲಿ ಅನೇಕ ಪೋಷಕ ಪಾತ್ರಗಳಲ್ಲಿ ನಟಿಸಿರುವ ತ್ರಿವೇಣಿ ರಾವ್ ಅವರು ಶಿವರಾಜ್‌ಕುಮಾರ್ ಅಭಿನಯದ 'ಟಗರು' ಸಿನಿಮಾದಲ್ಲಿ ಮಾಡಿದ ಸರೋಜಾ ಪಾತ್ರದ ಮೂಲಕ ಸಾಕಷ್ಟು ಜನಪ್ರಿಯರಾಗಿದ್ದರು. ಅದರಲ್ಲಿ ಡಾಲಿ ಧನಂಜಯ್ ಮೇಲೆ ಪ್ರೀತಿಯಿರುವ ಪೊಲೀಸ್ ಕಾನ್ಸ್‌ಟೆಬಲ್ ಸರೋಜಾ ಪಾತ್ರ ಮಾಡಿದ್ದ ಅವರೀಗ ತ್ರಿಪುರದ ಮಾಜಿ ಸಿಎಂ ಹಾಗೂ ಹಾಲಿ ಸಂಸದ ಬಿಪ್ಲಬ್ ಕುಮಾರ್ ದೇವ್‌ರನ್ನು ಮದುವೆಯಾಗಿದ್ದಾರೆ.

2001ರಲ್ಲಿ ಬ್ಯಾಂಕ್ ಅಧಿಕಾರಿ ನೀತಿ ದೇವ್‌ರನ್ನು ಮದುವೆಯಾಗಿದ್ದ 55 ವರ್ಷದ ಬಿಪ್ಲಬ್ ಕುಮಾರ್ ದೇವ್‌ರಿಗೆ ಒಬ್ಬ ಮಗ ಮತ್ತು ಮಗಳಿದ್ದಾಳೆ. ಆದರೆ ದಾಂಪತ್ಯದಲ್ಲಿ ಕಾಣಿಸಿಕೊಂಡ ಭಿನ್ನಾಭಿಪ್ರಾಯಗಳಿಂದಾಗಿ ಅವರು 2022ರಿಂದ ಪ್ರತ್ಯೇಕವಾಗಿ ವಾಸಿಸುತ್ತಿದ್ದರು ಎನ್ನಲಾಗಿದೆ. ಅವರಿಬ್ಬರ ಮಧ್ಯೆ ರಾಜಿಯ ಎಲ್ಲಾ ಪ್ರಯತ್ನಗಳು ವಿಫಲವಾದ ಕಾರಣ ಕಳೆದ ವರ್ಷ ಇಬ್ಬರೂ ಪರಸ್ಪರ ಒಪ್ಪಿಗೆಯಿಂದ ವಿಚ್ಛೇದನ ಪಡೆದಿದ್ದಾರೆ. ಇದಾದ ಕೆಲವೇ ತಿಂಗಳಲ್ಲಿ ಬಿಪ್ಲಬ್ ಎರಡನೇ ಮದುವೆಯಾಗಿದ್ದಾರೆ. ದಿಲ್ಲಿಯಲ್ಲಿ ಜೂನ್ 19ರಂದು ನಡೆದ ಖಾಸಗಿ ಸಮಾರಂಭದಲ್ಲಿ ಅವರು ನಟಿ ತ್ರಿವೇಣಿ ರಾವ್ ಅವರನ್ನು ವರಿಸುವ ಮೂಲಕ ಹೊಸ ಜೀವನಕ್ಕೆ ಕಾಲಿಟ್ಟಿದ್ದಾರೆ.

ಈ ಮದುವೆ ಸಮಾರಂಭದ ಚಿತ್ರಗಳು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದ್ದು, ತ್ರಿಪುರ ರಾಜಕೀಯ ಮತ್ತು ಸಾಮಾಜಿಕ ವಲಯಗಳಲ್ಲಿ ಭಾರಿ ಚರ್ಚೆಗೆ ಗ್ರಾಸವಾಗಿದೆ. ತ್ರಿವೇಣಿ ರಾವ್ ಮತ್ತು ಬಿಪ್ಲಬ್ ದಂಪತಿಯ ಅದ್ಧೂರಿ ಆರತಕ್ಷತೆ ಜೂನ್ 24ರಂದು ಅಗರ್ತಲಾದಲ್ಲಿ ನಡೆಯಲಿದೆ. ಇದರಲ್ಲಿ ದೇಶದ ಅನೇಕ ರಾಜಕಾರಣಿಗಳು ಭಾಗಿಯಾಗಲಿದ್ದಾರೆ ಎಂದು ತಿಳಿದುಬಂದಿದೆ. ■

ಹೊಸ ಬಂಧಕ್ಕೆ ಜೂನ್ ಥಿಯರಿ ನಂಟು

ಮುಂಗಾರಿನ ಮಳೆ ಬಿದ್ದ ತಕ್ಷಣ ಚಿಗುರುವ ಭೂಮಿಯಂತಹ ಹುಡುಗಿಗೆ ಹರೆಯದ ಸಡಗರ. ದಿನಪೂರ್ತಿಯ ಮೋಡಕ್ಕೆ ಮುಖವೊಡ್ಡುವ ಅವಳಿಗೂ ಮಂಕು ಕವಿದ ಭಾವ. ಮರುಕ್ಷಣ ಬೀಸುವ ಶೀತ ಗಾಳಿಗೆ ಬೆಚ್ಚಗಾಗುವ ಬಯಕೆಯೊಂದಿಗೆ ಹುಟ್ಟುವ ಕನಸಿಗೆ ಸಂಗಾತಿಯ ಕನವರಿಕೆ. ಮೊದಲ ಬಾರಿಗೆ ಹೊಸ ಭಾವ ಹುಟ್ಟಿಸಿದ ಹುಡುಗ, ಜೊತೆಗಿರುವ ಭರವಸೆ ನೀಡಿದ ಸಖನೊಂದಿಗೆ ಸುಖಿಯಾದ ಭಾವವೊಂದು ಹೊರಹೊಮ್ಮುವ ಸಮಯಕ್ಕೆ ಮಳೆಯ ನಂಟು. ತಿಂಗಳ ಸೆಳೆತ. ಹೀಗೆ ಪ್ರೀತಿಗೂ ಜೂನ್ ಮಾಸಕ್ಕೂ ಬಂಧ ಕಲ್ಪಿಸುವ ಜೂನ್ ಥಿಯರಿ ಸದ್ಯಕ್ಕೆ ಹರೆಯದ ವಲಯದಲ್ಲಿ ಗಮನ ಸೆಳೆಯುತ್ತಿದ್ದು, ಸೋಶಿಯಲ್ ಮೀಡಿಯಾದಲ್ಲಿ ಸದ್ದು ಮಾಡುತ್ತಿದೆ.

ಸಂಬಂಧದ ಆರಂಭ

ಜೂನ್ ಥಿಯರಿ ಸಂಬಂಧದ ಪರಿಕಲ್ಪನೆಯು ಜೂನ್ ತಿಂಗಳು ಪ್ರೀತಿಯಲ್ಲಿ ಹೊಸ, ಶಕ್ತಿಯುತ ಬದಲಾವಣೆಗಳನ್ನು ಉಂಟುಮಾಡುತ್ತದೆ ಎಂದು ಸೂಚಿಸುತ್ತದೆ. ಈ ತಿಂಗಳು ಹೊಸ ಪ್ರೀತಿ, ಆಕರ್ಷಣೆ ಮತ್ತು ಸಂಬಂಧಗಳ ಆರಂಭಕ್ಕೆ ಸೂಕ್ತ ಸಮಯ ಎಂಬುದು ಈ ಥಿಯರಿಯ ನಂಬಿಕೆ. ಅವಕಾಶಗಳಿಗೆ ಮುಕ್ತ ಮನಸ್ಸಿನಿಂದ ತೆರೆದುಕೊಂಡು ಹೊಸದನ್ನು ಸ್ವಾಗತಿಸುವುದೇ ಈ ಟ್ರೆಂಡ್‌ನ ಮೂಲ ಉದ್ದೇಶ.

ಬದಲಾಗುವ ವಾತಾವರಣ

ಹವಾಮಾನದ ಬದಲಾವಣೆ ಹೊಸ ಬಂಧವನ್ನು ಉತ್ತೇಜಿಸುತ್ತದೆ ಎನ್ನಲಾಗಿದೆ. ಪಾಶ್ಚಾತ್ಯ ದೇಶಗಳಲ್ಲಿ ಜೂನ್ ಅಂದರೆ ಬೇಸಿಗೆಯಾದ ಕಾರಣ ಅಲ್ಲಿನ ಬೇಸಿಗೆ ವಾತಾವರಣ ಹೆಚ್ಚು ಜನರು ಒಂದೆಡೆ ಸೇರಲು, ಪ್ರವಾಸ ಮಾಡಲು ಅವಕಾಶ ಕಲ್ಪಿಸುತ್ತದೆ. ಈ ವಾತಾವರಣದಲ್ಲಿ ಹೊಸ ಸ್ನೇಹ ಬೆಳೆಯುತ್ತದೆ ಎಂಬುದು ಈ ಜೂನ್‌ನ ವಿಶೇಷ. ಭಾರತದ ಮಟ್ಟಿಗೆ ಹೊಸ ಬಂಧ ಅರಳುವ ವಾತಾವರಣವೇ ಬೇರೆ. ಮಳೆಗಾಲದ ಆರಂಭ, ಒಳಾಂಗಣದಲ್ಲೇ ಇರಬೇಕಾದ ಅನಿವಾರ್ಯ, ಆಗ ಕಾಡುವ ಬಯಕೆ, ಎದುರಾಗುವ ಹೊಸ ಪರಿಚಯ, ಬೆಳೆಯುವ ಸ್ನೇಹ ಈ ಎಲ್ಲ ಸಂಗತಿಗಳು ಜೂನ್‌ನೊಂದಿಗೆ ಸೇರಿವೆ. ಜೂನ್ ತಿಂಗಳು ಭಾರತದಲ್ಲಿ ಶೈಕ್ಷಣಿಕ ವರ್ಷದ ಆರಂಭ ಮತ್ತು ಕಾರ್ಪೊರೇಟ್ ವಲಯದಲ್ಲಿ ಪುನರ್ ರಚನೆಯ ಅವಧಿ ಎಂದು ಗುರುತಿಸಲ್ಪಟ್ಟಿದೆ. ಯುವ ವೃತ್ತಿಪರರು ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ಇದು ಹೊಸ ಜನರ ಭೇಟಿ ಅಥವಾ ಹೊಸ ಸಾಮಾಜಿಕ ವಲಯಗಳನ್ನು ತರುತ್ತದೆ. ಸ್ನೇಹಶೀಲ ವಾತಾವರಣ, ಹವಾಮಾನವು ಒಳಾಂಗಣದಲ್ಲಿ ಜೊತೆಗೆ ಹೆಚ್ಚು ಸಮಯ ಕಳೆಯಲು ಪೂರಕ ವಾತಾವರಣ ಸೃಷ್ಟಿಸುತ್ತದೆ. ಹೀಗಾಗಿ ಸ್ವಾಭಾವಿಕವಾಗಿ ಭಾವನಾತ್ಮಕ ಲಭ್ಯತೆಯನ್ನು ಹೆಚ್ಚಿಸುತ್ತದೆ. ■

ಲವಲVK ಪಾಸಿಟಿವ್ ಬಂಧ

ಟ್ರಾಮಾ ಬಾಂಡಿಂಗ್ ಎಂಬ ಭಾವನೆಗಳ ಸುಳಿ

ಭಾವನಾತ್ಮಕ ಬಂಧಗಳ ಸ್ವರೂಪ ಬಹು ಸಂಕೀರ್ಣವಾದದ್ದು. ನಿರಂತರ ನಿಯಂತ್ರಣ, ಮ್ಯಾನಿಪುಲೇಷನ್ ಅಥವಾ ಹಾನಿಯ ನಡುವೆಯೇ ದಕ್ಕುವ ಅಷ್ಟಿಷ್ಟು ಪ್ರೀತಿ, ಕಾಳಜಿಗಳು ತನ್ನನ್ನು ನೋಯಿಸುವ ವ್ಯಕ್ತಿಯೊಂದಿಗೇ ಭಾವನಾತ್ಮಕವಾಗಿ ಬೆಸೆಯುವಂತೆ ಪ್ರೇರೇಪಿಸುತ್ತದೆ. ಇದುವೇ ಟ್ರಾಮಾ ಬಾಂಡಿಂಗ್.

ಸುಷ್ಮಾ ಸಿಂಧು
feedbacklvk@vijaykarnataka.com

ಆ ಸಂಬಂಧ ತೀವ್ರ ನೋವು, ಕಿರಿಕಿರಿಯುಂಟು ಮಾಡುತ್ತಿದ್ದರೂ ಆಕೆ ಅದರಿಂದ ಕಳಚಿಕೊಳ್ಳಲೊಲ್ಲಳು, ಅವನು ಮಾನಸಿಕವಾಗಿ ಜರ್ಜರಿತನಾಗಿದ್ದರೂ ಅದೇ ವ್ಯಕ್ತಿಯ ನಂಟು ಬಿಡನು. ಹೊರಗಿನಿಂದ ನೋಡಿದವರಿಗೆ 'ಇವರೇಕೆ ಈ ವ್ಯರ್ಥ ಸಂಬಂಧದಿಂದ ಹೊರಬರಲಾರರು?' ಎನ್ನುವ ಗೊಂದಲವೂ ಅದಕ್ಕೆ ಸುಲಭ ಪರಿಹಾರ ಗೋಚರಿಸಿದರೂ ಅವರು ಮಾತ್ರ ಹಿಂಸಾತ್ಮಕ ಬಂಧಗಳ ಬೆನ್ನು ಬಿಡರು. ಸಿಲುಕಿದವರ ಪಾಲಿಗೆ ಸಂಬಂಧಗಳ ಲೆಕ್ಕಾಚಾರ ಅಷ್ಟು ಸರಳವಾಗಿರದು. ಈ ಭಾವನಾತ್ಮಕ ಬಂಧಗಳ ಸುಳಿಯೇ ಟ್ರಾಮಾ ಬಾಂಡ್ರಿಂಗ್. ಈ ರೀತಿಯ ಸಂಬಂಧದಲ್ಲಿ ಪ್ರೀತಿ ಮತ್ತು ನೋವುಗಳೆರಡೂ ಏಕಕಾಲದಲ್ಲಿ ಇರುತ್ತವೆ. ಹಾಗೂ ಇದು ಶೋಷಿತ ವ್ಯಕ್ತಿ ಬಂಧದ ಅಂಟಿನಿಂದ ಆಚೆ ಸರಿಯದಂತೆ ತಡೆಯೊಡ್ಡುತ್ತದೆ.

ಅನುಬಂಧ

ಶೋಷಣೆಯ ನಂತರದ ಪ್ರೀತಿ: ಟ್ರಾಮಾ ಬಾಂಡಿಂಗ್ ಉಂಟಾಗುವುದು ದೌರ್ಜನ್ಯ ಮತ್ತು ಅದರ ನಂತರ ಬರುವ ಪ್ರೀತಿ, ಕ್ಷಮೆ ಅಥವಾ ಒಳ್ಳೆಯ ವರ್ತನೆಗಳ ಪುನರಾವರ್ತಿತ ವರ್ತುಲದಿಂದ. ಉದಾಹರಣೆಗೆ ಪೀಡಕ ಪತಿ ತನ್ನ ಸಂಗಾತಿಗೆ ನೋವುಂಟು ಮಾಡಿದ ಮರುಕ್ಷಣವೇ 'ನಾನು ನಿನ್ನನ್ನು ತುಂಬಾ ಪ್ರೀತಿಸುತ್ತೇನೆ, ಕ್ಷಮಿಸು. ಈ ರೀತಿ ಮತ್ತೆ ಆಗುವುದಿಲ್ಲ' ಎನ್ನುತ್ತಾ ಪ್ರೇಮದೊಡನೆ ಸುರಕ್ಷಿತ ಭಾವವನ್ನು ಪುನಃ ನೀಡಬಹುದು. ಆದರೆ ಇದು ಇಷ್ಟಕ್ಕೇ ನಿಲ್ಲದೇ ನೋವು, ಕ್ಷಮೆ, ಪ್ರೀತಿಗಳ ವರ್ತುಲ ಪುನರಾರಂಭವಾಗುತ್ತದೆ. ಕೆಲವೊಮ್ಮೆ ತುಂಬಾ ಲಕ್ಷ್ಯ, ಮತ್ತೊಮ್ಮೆ ತೀವ್ರ ನಿರ್ಲಕ್ಷ್ಯ! ಮನೋವಿಜ್ಞಾನದ ಪ್ರಕಾರ ಸಂಬಂಧಗಳಲ್ಲಿ ನಿರಂತರ ಸಿಗುವ ಗಮನ, ಕಾಳಜಿಗಿಂತ ಆಗೀಗ ಮಾತ್ರ ಲಭ್ಯವಾಗುವ ವಿಪರೀತ ಅಕ್ಕರಾಸ್ಥೆ ಕೆಲವರಲ್ಲಿ ಹೆಚ್ಚು ಬಲವಾದ ಆಕರ್ಷಣೆ ಉಂಟುಮಾಡುತ್ತದೆ. ಆದರೆ ಹೀಗೆ ತಿರಸ್ಕಾರದ ಮರುಗಳಿಗೆ ಸುರಿಮಳೆಯಾಗುವ ಅತಿ ಪ್ರೀತಿ ಮೋಡಿ ಮಾಡಿ ಮನ ಸೆಳೆಯುವ ಜೊತೆಗೆ ವ್ಯಸನಕಾರಿಯೂ ಆಗಬಹುದು. ಅನಿಶ್ಚಿತತೆಯೇ ಬಾಂಧವ್ಯವನ್ನು ಬಲಪಡಿಸಬಹುದು. ಸಾಮಾನ್ಯವಾಗಿ ದಾಂಪತ್ಯ/ಪ್ರೇಮ ಸಂಬಂಧಗಳಲ್ಲಿ ಚರ್ಚೆಯಾಗುವ ಟ್ರಾಮಾ ಬಾಂಡಿಂಗ್ ಸ್ನೇಹಿತರು, ಪೋಷಕರು-ಮಕ್ಕಳು, ವೃತ್ತಿವಲಯಗಳಲ್ಲಿಯೂ ಉಂಟಾಗಬಹುದು.

ಟ್ರಾಮಾ ಬಾಂಡಿಂಗ್ ಬೆಳೆಯಲು ಕಾರಣ

- **ಕಳೆದುಕೊಳ್ಳುವ ಭಯ:** ಬಿಟ್ಟು ಹೋದರೆ ತಾವೊಬ್ಬರೇ ಇರಲಾಗದೆನ್ನುವ ಭಯ ಅಲ್ಲೇ ಉಳಿಯುವಂತೆ ಮಾಡಬಹುದು.
- **ಅತಿ ಆತ್ಮೀಯತೆ:** ಹಿಂಸೆ ಮಾಡುವ ವ್ಯಕ್ತಿ ನಂತರದಲ್ಲಿ ತೋರುವ ಅಪಾರ ಕಾಳಜಿ, ಶೋಷಿತರೊಳಗಿರುವ ಸುರಕ್ಷಿತ ಭಾವವನ್ನು ದುರ್ಬಲಗೊಳಿಸುವುದರಿಂದ ಪುನಃ ಹಿಂಸೆ ಆರಂಭವಾದರೂ ಸಂಬಂಧದಿಂದ ಹೊರಬರಲು ಕಷ್ಟವಾಗಬಹುದು.
- **ಪ್ರತ್ಯೇಕತೆ:** ಶೋಷಕರು ನಿಧಾನವಾಗಿ ಶೋಷಿತರನ್ನು ಸ್ನೇಹಿತರು, ಕುಟುಂಬದವರು, ಸಹೋದ್ಯೋಗಿಗಳಿಂದ ದೂರಮಾಡಿ ಭಾವನಾತ್ಮಕ ಮತ್ತು ಸಾಮಾಜಿಕ ಅಗತ್ಯಗಳಿಗೆ ಸಂಪೂರ್ಣ ತನ್ನ ಮೇಲೆ ಅವಲಂಬಿತವಾಗುವಂತೆ ನಿಯಂತ್ರಿಸುವುದರಿಂದ ಅವರ ದೃಷ್ಟಿಕೋನ ಸೀಮಿತವಾಗುತ್ತಾ ಹಿಂಸೆ ಸಹಿಸುವ ಅಭ್ಯಾಸ ಬೆಳೆಯಬಹುದು.
- **ಆತ್ಮವಿಶ್ವಾಸದ ಕೊರತೆ:** ಬಾಲ್ಯದಲ್ಲಿ ಬೆಳೆದ ಅಭದ್ರ ಭಾವನೆ, ಆತ್ಮವಿಶ್ವಾಸದ ಕೊರತೆ, ಕುಟುಂಬ-ಸಮಾಜದ ಅಭಿಪ್ರಾಯ, ಆರ್ಥಿಕ ಕಾರಣಗಳಿಂದ ಕೆಲವರು ಸಂಬಂಧದಲ್ಲೇ ಇರುತ್ತಾರೆ.

ಸೂಚನೆ ಅರಿಯಿರಿ: ನೋವು ಉಂಟುಮಾಡುವ ಸಂಬಂಧಕ್ಕೆ ಮತ್ತೆ ಮತ್ತೆ ಮರಳುವುದು, ಸಂಬಂಧ ಆರೋಗ್ಯಕರವಾಗಿಲ್ಲ ಎಂಬುದು ಗೊತ್ತಿದ್ದರೂ ಹೊರಬರಲು ಕಷ್ಟವಾಗುವುದು, ಪೀಡಿತ ವ್ಯಕ್ತಿ ಇತರರ ಮುಂದೆ ದೌರ್ಜನ್ಯ ಮಾಡುವ ವ್ಯಕ್ತಿಯ ವರ್ತನೆಯನ್ನು ಸಮರ್ಥಿಸಿಕೊಳ್ಳುವುದು, ಕುಟುಂಬ/ಸ್ನೇಹಿತರ ಬಳಿ ನಿಜವನ್ನು ಮರೆಮಾಡುವುದು ಅಥವಾ ಅವರಿಂದ ದೂರಾಗುವುದು, ಪೀಡಿಸುವ ವ್ಯಕ್ತಿ ಬದಲಾಗುತ್ತಾರೆ ಎಂಬ ನಿರಂತರ ನಿರೀಕ್ಷೆ, ನೋವಿನ ಅನುಭವಗಳ ನಂತರವೂ ಅವರನ್ನು ಬಹಳ ಮಿಸ್ ಮಾಡಿಕೊಳ್ಳುವುದು ಇತ್ಯಾದಿ ಟ್ರಾಮಾ ಬಾಂಡಿಂಗ್‌ನ ಸೂಚನೆಗಳಾಗಿವೆ. ■

(ಲೇಖಕಿ ಮನಃಶಾಸ್ತ್ರಜ್ಞೆ)

RNI No. KARKAN/2016/71628
Vol. 11 Issue no. 173
This newspaper/periodical is published by Lokesh K V from No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru-560011. (Ph: 080-40877666) on behalf of Metropolitan Media Company Limited, edited by Sudarshan Channangihalli and printed by (a) Sekar S at Bennett Coleman & Co Ltd., The Times of India Press, No. 9/10/11-A, 4th Main, KIADB Bommasandra Industrial Area, Anekal Taluk, Bangalore - 560 099 (Ph: 080-42200500). (b) Murthy D from Metropolitan Media Company Limited, Plot No.34/B, Hootagalli Industrial Area, Belavadi post, Mysuru - 570 018. (c) Narappa G from Metropolitan Media Company Limited., Sy. No.45/2, Savalanga Road, Navule, Kasaba Hobli, Shivamogga- 577 204. (d) Siddappa Kashibadiger from Metropolitan Media Company Limited, Plot No 33 R.S. No. 536, Honaga Industrial Estate, Honaga , Belagavi Taluk, Belagavi 591156. (e) Sanjay Kanekal from Metropolitan Media Company Limited Plot No. 15 & 16, KIADB Rayapur Industrial Area, Hubballi - 580 009. (f) R Gururaj from Metropolitan Media Co. Ltd., Plot No. 9, KSSIDC, Industrial Area, Kaladagi Road, Vidyagiri, Bagalakote- 587102 (g)Raghavendra Rao from Metropolitan Media Company Limited., Plot No. 224, in Sy. No. 41/2, 41/B & 42, Kapnoor II Stage Industrial Area, Kalaburagi- 585 104.(h) Shivakumar V Hiremath from Metropolitan Media Company Limited., Plot No. 124 (part) and Plot No. 125 (part) of Sy. No. 132/1, Oddarahatti village, Gangavathi (i) Girish K from Metropolitan Media Company Limited No. 284 (Part), 285, 286 & 287, Baikampady Industrial Area, Mangaluru – 575 011. " © All Rights Reserved. Reproduction in whole or part without permission is prohibited.